*Pandit Teaches the Bible Series*

# Role Models

## from the books of Ruth, Daniel and Esther

**Kannada Edition**

**Author: T. Pandit**

**Translator: P. Prakash**

This is the Kannada version of a college level textbook prepared a few years ago for a Bible college in South India. It was written it with the South Indian Christian context in mind. With minor adaptions it should, however, be useful also in other cultural contexts.

T. Pandit has many years of experience as an educationist, a Bible teacher and a college principal, in India as well as internationally. He is now retired.

P. Prakash is pastoring a church in central Karnataka. He is also an experienced Bible teacher and a translator of textbooks for Kannada Satyaveda College and in charge of its Resource Centre.

October 2021

## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, however, object to to any republishing of this work for the purposes of financial gain.

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕ ಸರಣಿ

# *ಮಾದರಿ ವ್ಯಕ್ತಿಗಳು*

## *(ರೂತಳು, ದಾನಿಯೇಲನು ಮತ್ತು ಎಸ್ತೇರಳು ಪುಸ್ತಕಗಳಿಂದ)*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

# ಮುನ್ನುಡಿ

ಇದು ದಕ್ಷಿಣ ಭಾರತದಲ್ಲಿನ ಸತ್ಯವೇದ ಮಹಾವಿದ್ಯಾಲಯಗಳಿಗಾಗಿ ಸಿದ್ಧಪಡಿಸಲಾದ, ಇಂಗ್ಲೀಷ್ ಆವೃತ್ತಿಯ ಒಂದು ಮಹಾವಿದ್ಯಾಲಯ ಮಟ್ಟದ ಪಠ್ಯಪುಸ್ತಕವಾಗಿದೆ. ಇದು ಕನ್ನಡ ಆವೃತ್ತಿಯಲ್ಲಿ ಸಹ ಲಭ್ಯವಿದ್ದು, ಮಧ್ಯ ಕರ್ನಾಟಕ ಭಾಗದ ದಾವಣಗೆರೆಯಲ್ಲಿನ ಕನ್ನಡ ಸತ್ಯವೇದ ಮಹಾವಿದ್ಯಾಲಯಕ್ಕಾಗಿ ಇದನ್ನು ಸಿದ್ಧಪಡಿಸಲಾಗಿದೆ.

ಅಲ್ಲದೆ ಈ ಪುಸ್ತಕವು ಸ್ಥಳೀಯ ಸಭೆಯಲ್ಲಿನ ಸತ್ಯವೇದ ಅಧ್ಯಯನ ಗುಂಪು ಮತ್ತು ವ್ಯಕ್ತಿಗತ ಸತ್ಯವೇದ ವಿದ್ಯಾರ್ಥಿಗಳಿಗೆ ಸಹ ಉಪಯುಕ್ತವಾಗಿದೆ. ದಕ್ಷಿಣ ಭಾರತದ ಹಿನ್ನಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾನಿದನ್ನು ಬರೆದಿದ್ದೇನೆ.

ಕೆಳಕಂಡ ಮೂರು ಸಂಪನ್ಮೂಲಗಳನ್ನು ನಾನು ಉಪಯೋಗಿಸಿದ್ದೇನೆ:

1. ದಾನಿಯೇಲ, ಡಗ್ಲಾಸ್ ಕೊನ್ನೆಲ್ಲಿಯವರ "ಲೌಖಿಕ ಜಗತ್ತಿನಲ್ಲಿ ಆತ್ಮೀಕವಾಗಿ ಜೀವಿಸುವುದು" (ಸ್ಕ್ರಿಪ್ಚರ್ ಯೂನಿಯಾನ್ ಲೈಫ್ ಬಿಲ್ಡರ್ ಸೀರಿಸ್)
2. ಎಸ್ತೇರ್, ಪ್ಯಾಟ್ಟಿ ಪೆಲ್ ರವರ "ಒತ್ತಡದೊಳಗಿನ ವ್ಯಕ್ತಿತ್ವ" (ಸ್ಕ್ರಿಪ್ಚರ್ ಯೂನಿಯಾನ್ ಲೈಫ್ ಬಿಲ್ಡರ್ ಸೀರಿಸ್)
3. ಎನ್ ಐ ವಿ ಅಧ್ಯಯನ ಸತ್ಯವೇದ

ಅಲ್ಲದೆ ಆಂಡ್ರಿವ್ ಕೀಡ್ ಮತ್ತು ಕೆರೆನ್ ಮೋರಿಸ್ (ಮತ್ತಾಯಸ್ ಮೀಡಿಯ)ರವರ ಕನಸುಗಳ ಸಾಮ್ರಾಜ್ಯಗಳು ಪುಸ್ತಕ ಸಹ ಉಪಯೋಗಿಸಿದ್ದೇನೆ.

ಹೆಚ್ಚಿನ ಸತ್ಯವೇದ ಪ್ರಶ್ನೆಗಳೆಲ್ಲವೂ ನ್ಯೂ ಇಂಟರ್ ನ್ಯಾಶನಲ್ ವರ್ಷನ್‌ನಿಂದ ಆಯ್ದುವುಗಳಾಗಿವೆ. ಸಾಂದರ್ಭಿಕವಾಗಿ ಕನ್ನಡದ ಈ ಎರಡೂ ಸತ್ಯವೇದ ಭಾಷಾಂತರಗಳನ್ನು ಉಲ್ಲೇಖಿಸಿದ್ದೇನೆ: ಸತ್ಯವೇದವು (ಭಾರತೀಯ ಸತ್ಯವೇದ ಸಂಸ್ಥೆಯ ಜೆ.ವಿ ಆವೃತ್ತಿ) ಮತ್ತು ಪವಿತ್ರ ಗ್ರಂಥ (ಭಾರತದ ಅಂತರಾಷ್ಟ್ರೀಯ ಸತ್ಯವೇದ ಸಂಸ್ಥೆಯ ನ್ಯೂ ಇಂಡಿಯಾ ವರ್ಷನ್).

ಕೆಲವು ವಿವರಣೆಗಳನ್ನು ನಾನು ಅಂತರ್ಜಾಲದಿಂದ ತೆಗೆದುಕೊಂಡಿದ್ದೇನೆ.

ಈ ಪುಸ್ತಕದ ಕೆಲವು ಪ್ರತಿಗಳನ್ನು ಮಾತ್ರ ಖಾಸಗಿ ಉಪಯೋಗಕ್ಕಾಗಿ ಮುದ್ರಿಸಲಾಗಿದೆ.

ಇದು ಮಾರಾಟಕ್ಕಲ್ಲ.

ಟಿ. ಪಂಡಿತ್

ಫೆಬ್ರುವರಿ 2014

# ವಿಷಯಾಂಶಗಳು

## ರೂತಳು – ಅಧ್ಯಯನಗಳು


ರೂತಳ ಪರಿಚಯ 8

ಅಧ್ಯಯನ 1: ನೊವೊಮಿ ಮತ್ತು ರೂತಳು, ಅಧ್ಯಾಯ 1 9

ಅಧ್ಯಯನ 2: ರೂತಳು ಬೋವಜನನ್ನು ಸಂಧಿಸುವುದು, ಅಧ್ಯಾಯ 2 10

ಅಧ್ಯಯನ 3: ದಾನ್ಯ ಒಕ್ಕುವ ಕಣದಲ್ಲಿ ರೂತಳು ಮತ್ತು ಬೋವಜ, ಅಧ್ಯಾಯ 3 12

ಅಧ್ಯಯನ 4: ರೂತಳೊಂದಿಗೆ ಬೋವಜನ ವಿವಾಹ, ಅಧ್ಯಾಯ 4 13

ಅಧ್ಯಯನ 5: ರೂತಳ ಪುಸ್ತಕದಲ್ಲಿನ ಮೂವರು ಮಾದರಿ ವ್ಯಕ್ತಿಗಳು 16


## ದಾನಿಯೇಲನು – ಅಧ್ಯಯನಗಳು


ದಾನಿಯೇಲ ಪುಸ್ತಕದ ಪರಿಚಯ 18

ಅಧ್ಯಯನ 1: ಬಾಬೆಲಿನಲ್ಲಿ ದಾನೀಯೇಲನ ತರಬೇತಿ, ಅಧ್ಯಾಯ 1 19

ಅಧ್ಯಯನ 2: ನೆಬೂಕದ್ನೆಚ್ಚರನ ಅದ್ಭುತ ಪ್ರತಿಮೆಯ ಕನಸು, ಅಧ್ಯಾಯ 2 21

ಅಧ್ಯಯನ 3: ಬಂಗಾರದ ಪ್ರತಿಮೆ ಮತ್ತು ಧಗಧಗನೆ ಉರಿಯುವ ಆವಿಗೆ, ಅಧ್ಯಾಯ 3 23

ಅಧ್ಯಯನ 4: ನೆಬೂಕದ್ನೆಚ್ಚರನ ಒಂದು ಮರದ ಕನಸು, ಅಧ್ಯಾಯ 4 24

ಅಧ್ಯಯನ 5: ಗೋಡೆಯ ಮೇಲಿನ ಬರಹ, ಅಧ್ಯಾಯ 5 26

ಅಧ್ಯಯನ 6; ಸಿಂಹದ ಗವಿಯೊಳಗೆ ದಾನಿಯೇಲನು, ಅಧ್ಯಾಯ 6 28

ಅಧ್ಯಯನ 7: ದಾನಿಯೇಲ ಒಬ್ಬ ಮಾದರಿ ವ್ಯಕ್ತಿ 30


## ಎಸ್ತೇರಳು – ಅಧ್ಯಯನಗಳು


ಎಸ್ತೇರಳು ಪುಸ್ತಕದ ಪರಿಚಯ 32

ಅಧ್ಯಯನ 1: ವಸ್ಥಿರಾಣಿಯ ಪದಚ್ಯುತಿ, ಅಧ್ಯಾಯ 1 33

ಅಧ್ಯಯನ 2: ಎಸ್ತೇರಳು ರಾಣಿಯಾಗಿ ಮಾಡಲ್ಪಟ್ಟದ್ದು, ಅಧ್ಯಾಯ 2 34

ಅಧ್ಯಯನ 3: ಯೆಹೂದ್ಯರನ್ನು ಸಂಹರಿಸಲು ಹಾಮನನ ಪಿತೂರಿ, ಅಧ್ಯಾಯ 3 36

ಅಧ್ಯಯನ 4: ಸಹಾಯಕ್ಕಾಗಿ ಮೊರ್ದೆಕೈ ಎಸ್ತೇರಳ ಮನವೊಲಿಸುವುದು, ಅಧ್ಯಾಯ 4 38

ಅಧ್ಯಯನ 5: ಅರಸನ ಬಳಿ ಎಸ್ತೇರಳ ಮನವಿ, ಅಧ್ಯಾಯ 5 39

ಅಧ್ಯಯನ 6: ಮೊರ್ದೆಕೈ ಸನ್ಮಾನಿಸಲ್ಪಟ್ಟದ್ದು, ಅಧ್ಯಾಯ 6 40

ಅಧ್ಯಯನ 7: ಹಾಮನನು ಗಲ್ಲಿಗೇರಿಸಲ್ಪಟ್ಟದ್ದು, ಅಧ್ಯಾಯ 7 41

ಅಧ್ಯಯನ 8: ಅರಸನ ಆಜ್ಞೆ, ಅಧ್ಯಾಯ 8 43

ಅಧ್ಯಯನ 9: ಯೆಹೂದ್ಯರ ವಿಜಯೋತ್ಸವ, ಅಧ್ಯಾಯ 9–10 45

ಅಧ್ಯಯನ 10: ಎಸ್ತೇರಳು ಪುಸ್ತಕದಲ್ಲಿನ ಇಬ್ಬರು ಮಾದರಿ ವ್ಯಕ್ತಿಗಳು 47


## ರೂತಳು – ಉತ್ತರಗಳು


ಉತ್ತರಗಳು 1: ನೊವೊಮಿ ಮತ್ತು ರೂತಳು, ಅಧ್ಯಾಯ 1 49

ಉತ್ತರಗಳು 2: ರೂತಳು ಬೋವಜನನ್ನು ಸಂಧಿಸುವುದು, ಅಧ್ಯಾಯ 2 51

ಉತ್ತರಗಳು 3: ದಾನ್ಯ ಒಕ್ಕುವ ಕಣದಲ್ಲಿ ರೂತಳು ಮತ್ತು ಬೋವಜ, ಅಧ್ಯಾಯ 3 53
ಉತ್ತರಗಳು 4: ರೂತಳೊಂದಿಗೆ ಬೋವಜನ ವಿವಾಹ, ಅಧ್ಯಾಯ 4 55

## ದಾನಿಯೇಲನು – ಉತ್ತರಗಳು

ಉತ್ತರಗಳು 1: ಬಾಬೆಲಿನಲ್ಲಿ ದಾನೀಯೇಲನ ತರಬೇತಿ, ಅಧ್ಯಾಯ 1 58
ಉತ್ತರಗಳು 2: ನೆಬೂಕದ್ನೆಚ್ಚರನ ಅದ್ಭುತ ಪ್ರತಿಮೆಯ ಕನಸು, ಅಧ್ಯಾಯ 2 61
ಉತ್ತರಗಳು 3: ಬಂಗಾರದ ಪ್ರತಿಮೆ ಮತ್ತು ಧಗಧಗನೆ ಉರಿಯುವ ಆವಿಗೆ, ಅಧ್ಯಾಯ 3 63
ಉತ್ತರಗಳು 4: ನೆಬೂಕದ್ನೆಚ್ಚರನ ಒಂದು ಮರದ ಕನಸು, ಅಧ್ಯಾಯ 4 65
ಉತ್ತರಗಳು 5: ಗೋಡೆಯ ಮೇಲಿನ ಬರಹ, ಅಧ್ಯಾಯ 5 67
ಉತ್ತರಗಳು 6: ಸಿಂಹದ ಗವಿಯೊಳಗೆ ದಾನಿಯೇಲನು, ಅಧ್ಯಾಯ 6 69

## ಎಸ್ತೇರಳು – ಉತ್ತರಗಳು

ಉತ್ತರಗಳು 1: ವಸ್ತಿರಾಣಿಯ ಪದಚ್ಯುತಿ, ಅಧ್ಯಾಯ 1 72
ಉತ್ತರಗಳು 2: ಎಸ್ತೇರಳು ರಾಣಿಯಾಗಿ ಮಾಡಲ್ಪಟ್ಟದ್ದು, ಅಧ್ಯಾಯ 2 74
ಉತ್ತರಗಳು 3: ಯೆಹೂದ್ಯರನ್ನು ಸಂಹರಿಸಲು ಹಾಮನನ ಪಿತೂರಿ, ಅಧ್ಯಾಯ 3 76
ಉತ್ತರಗಳು 4: ಸಹಾಯಕ್ಕಾಗಿ ಮೊರ್ದೆಕೈ ಎಸ್ತೇರಳ ಮನವೊಲಿಸುವುದು, ಅಧ್ಯಾಯ 4 78
ಉತ್ತರಗಳು 5: ಅರಸನ ಬಳಿ ಎಸ್ತೇರಳ ಮನವಿ, ಅಧ್ಯಾಯ 5 81
ಉತ್ತರಗಳು 6: ಮೊರ್ದೆಕೈ ಸನ್ಮಾನಿಸಲ್ಪಟ್ಟದ್ದು, ಅಧ್ಯಾಯ 6 84
ಉತ್ತರಗಳು 7: ಹಾಮನನು ಗಲ್ಲಿಗೇರಿಸಲ್ಪಟ್ಟದ್ದು, ಅಧ್ಯಾಯ 7 87
ಉತ್ತರಗಳು 8: ಅರಸನ ಆಜ್ಞೆ, ಅಧ್ಯಾಯ 8 90
ಉತ್ತರಗಳು 9: ಯೆಹೂದ್ಯರ ವಿಜಯೋತ್ಸವ, ಅಧ್ಯಾಯ 9–10 92

# ಮಾದರಿ ವ್ಯಕ್ತಿಗಳು

ಹುಟ್ಟಿನಿಂದಲೂ ನಮ್ಮೆಲ್ಲರಿಗೂ ಮಾದರಿ ವ್ಯಕ್ತಿಗಳುಂಟು. ನಮ್ಮಲ್ಲಿ ಅನೇಕರು ನಾವು ನಮ್ಮ ತಂದೆ ತಾಯಿಗಳನ್ನು ಅಥವಾ ನಮ್ಮ ಹತ್ತಿರದ ಸಂಬಂಧಿಗಳನ್ನು ನಮ್ಮ ಮೊದಲ ಮಾದರಿ ವ್ಯಕ್ತಿಗಳನ್ನಾಗಿಟ್ಟುಕೊಳ್ಳುತ್ತೇವೆ. ನಾವು ಅವರನ್ನು ಗಮನಿಸುತ್ತೇವೆ, ಅವರಿಗೆ ಕಿವಿಗೊಡುತ್ತೇವೆ, ಅವರು ಹೇಗೆ ವರ್ತಿಸುತ್ತಾರೆಂಬುದನ್ನು ನಾವು ನೋಡುತ್ತೇವೆ ಮತ್ತು ಅವರನ್ನು ಅನುಕರಿಸುತ್ತೇವೆ ಹಾಗೂ ನಾವು ಅವರಂತೆ ವರ್ತಿಸುತ್ತೇವೆ.

ನಾವು ಬೆಳೆದಂತೆಲ್ಲ ನಮ್ಮ ಮಾದರಿ ವ್ಯಕ್ತಿಗಳ ಪಟ್ಟಿಯಲ್ಲಿ ಇನ್ನೂ ಹೆಚ್ಚು ಜನರನ್ನು ಸೇರಿಸುತ್ತೇವೆ. ಅವರುಗಳೆಂದರೆ – ನಮ್ಮ ಸಹಪಾಟಿಗಳು, ನಮ್ಮ ಬೀದಿಯಲ್ಲಿನ ಹಿರಿಯ ಮಕ್ಕಳು, ಶಿಕ್ಷಕರುಗಳು, ಸ್ನೇಹಿತರು, ಸಭಾಪಾಲಕರುಗಳು ಮತು ನಮ್ಮ ಸಭೆಯ ನಾಯಕರುಗಳು. ನಾವು ಇವರನ್ನು ಮೆಚ್ಚಿಕೊಳ್ಳುತ್ತೇವೆ, ಹಿಂಬಾಲಿಸುತ್ತೇವೆ, ಅವರಿಂದ ಕಲಿಯುತ್ತೇವೆ ಮತ್ತು ಅವರನ್ನು ಅನುಕರಿಸುತ್ತೇವೆ. ನಾವು ಅವರಂತೆ ಮಾತನಾಡುತ್ತೇವೆ, ಅವರಂತೆ ನಟನೆ ಮಾಡುತ್ತೇವೆ, ಅವರಂತೆ ಬಟ್ಟೆ ಧರಿಸುತ್ತೇವೆ ಮತ್ತು ಅವರನ್ನು ಮೆಚ್ಚುತ್ತೇವೆ. ಅವರು ನಮ್ಮ ನಾಯಕರಾಗಿಬಿಡುತ್ತಾರೆ.

ಅನಂತರ ವೈಯಕ್ತಿಕವಾಗಿ ನಮಗೆ ಗೊತ್ತಿಲ್ಲದ ವ್ಯಕ್ತಿಗಳನ್ನೂ ಸಹ ನಮ್ಮ ಮಾದರಿ ವ್ಯಕ್ತಿಗಳ ಪಟ್ಟಿಯಲ್ಲಿ ಸೇರಿಸಿಬಿಡುತ್ತೇವೆ. ಅವರುಗಳೆಂದರೆ, ಪುಸ್ತಕಗಳಲ್ಲಿ ಮತ್ತು ದಿನ ಪತ್ರಿಕೆಗಳಲ್ಲಿ ಓದಿ ತಿಳಿಯುವ ವ್ಯಕ್ತಿಗಳು, ದೂರದರ್ಶನ ಅಥವಾ ಸಿನಿಮಾಗಳಲ್ಲಿ ನಾವು ನೋಡುವ ವ್ಯಕ್ತಿಗಳು, ನಮ್ಮ ಸ್ನೇಹಿತರು ಮತ್ತು ಸಭಾಪಾಲಕರಿಂದ ಕೇಳಿ ತಿಳಿದ ವ್ಯಕ್ತಿಗಳು. ಅವರಲ್ಲಿ ಕೆಲವರನ್ನು ನಾವು ಅನುಕರಿಸಲು ಪ್ರಯತ್ನಿಸುತ್ತೇವೆ. ನಾವು ಒಬ್ಬ ಸಿನಿಮಾ ತಾರೆಯನಂತೆ ಅಥವಾ ಪ್ರಖ್ಯಾತ ಕ್ರಿಕೆಟ್ ಆಟಗಾರನಂತೆ ಅಥವಾ ಪ್ರಖ್ಯಾತ ಟಿವಿ ಸುವಾರ್ತಿಕನಂತೆ ಬಟ್ಟೆ ಧರಿಸಬಹುದು, ನಡೆಯಬಹುದು ಮತ್ತು ಮಾತನಾಡಬಹುದು. ಅವರು ಸಹ ನಮ್ಮ ನಾಯಕರಾಗಿಬಿಡುತ್ತಾರೆ.

ಆದರೆ ಮಾದರಿ ವ್ಯಕ್ತಿಗಳಲ್ಲಿ ಒಂದು ದೊಡ್ಡ ಸಮಸ್ಯೆಯಿದೆ. ಅವರು ವಿಭಿನ್ನವಾದ ಮಾದರಿ (ಅಧಿಕಾರ)ಗಳಲ್ಲಿ ಬರುತ್ತಾರೆ. ನಾವು ಅವರನ್ನು ಎರಡು ಮುಖ್ಯ ವರ್ಗಗಳಾಗಿ ವಿಂಗಡಿಸಬಹುದು: ಒಳ್ಳೆಯವರು ಮತ್ತು ಕೆಟ್ಟವರು. ನಾವು ಅನುಕರಿಸಲು ಅಥವಾ ಅವರಂತೆ ವರ್ತಿಸಲು ಬಯಸುವಂತಹ ಕೆಲವು ಜನರು ಅಂದರೆ ತಂದೆತಾಯಿ, ಸಂಭಂದಿಕರು, ಸ್ನೇಹಿತರು, ಶಿಕ್ಷಕರುಗಳು, ರಾಜಕಾರಣಿಗಳು, ಕ್ರೀಡಾಪಟುಗಳು, ಸಿನಿಮಾ ತಾರೆಯರು ಅವರು ಒಳ್ಳೆಯವರಾಗಿರುತ್ತಾರಾ? ಇತರರು ಅಂದರೆ ತಂದೆತಾಯಿಗಳು ಮತ್ತು ಸ್ನೇಹಿತರಾಗಿರಬಹುದು ಅಥವಾ ಸಿನಿಮಾ ತಾರೆಯರು ಮತ್ತು ಟಿವಿ ಸುವಾರ್ತಿಕರಾಗಿರಬಹುದು ಅಥವಾ ಕ್ರೀಡಾಪಟುಗಳು ಮತ್ತು ಸಭಾ ಪಾಲಕರಾಗಿರಬಹುದು ಇವರು ಕೆಟ್ಟವರಾಗಿರುತ್ತಾರಾ?

ನಾನು ಈಗ ಹೇಳಿದ್ದು ಸ್ವಲ್ಪಮಟ್ಟಿಗೆ ಸರಿಯಿಲ್ಲದೆ ಇರಬಹುದು. ಪೂರ್ಣವಾಗಿ ಕೆಟ್ಟವರಾಗಿರುವ ಜನರಂತೆ ಒಳ್ಳೆಯ ಜನರು ಸಹ ಕೆಲವರಿದ್ದಾರೆ. ಹೆಚ್ಚಿನವರು ನನ್ನಂತೆ ಮತ್ತು ನಿನ್ನಂತೆ ಒಳ್ಳೆಯ ಮತ್ತು ಕೆಟ್ಟ ಈ ಎರಡೂ ಗುಣಗಳನ್ನು ಹೊಂದಿದವರಾಗಿರುತ್ತಾರೆ. ನಮ್ಮೆಲ್ಲರಲ್ಲಿಯೂ ಸಹ ಸ್ವಲ್ಪ ಒಳ್ಳೆಯದು ಮತ್ತು ಕೆಟ್ಟದ್ದೆರಡು ಗುಣಗಳು ಸಹ ಇರುತ್ತವೆ.

ಹಾಗಾಗಿ ನಾವು ಜನರನ್ನು ಮೌಲ್ಯಮಾಪನ ಮಾಡುವುದನ್ನು ಕಲಿಯಬೇಕಿದೆ. ಅವರ ವ್ಯಕ್ತಿತ್ವ ಮತ್ತು ಅವರು ಜೀವಿಸುವ ರೀತಿಯನ್ನು ನಾವು ಅಭ್ಯಾಸಿಸಬೇಕು. ಅವರ ಒಳ್ಳೆಯ ಗುಣಲಕ್ಷಣ, ಒಳ್ಳೆಯ ಸ್ವಭಾವ, ಅವರ ದೈವಭಕ್ತಿಯನ್ನು ನಾವು ಪಾಲಿಸಬೇಕಿದೆ. ಆದರೆ ಅವರ ಕೆಟ್ಟ ಗುಣಲಕ್ಷಣಗಳನ್ನು, ಕೆಟ್ಟ ನಡವಳಿಕೆ ಮತ್ತು ಅವರ ಭಕ್ತಿಹೀನತೆಯನ್ನು ದೂರವಿರಿಸಬೇಕಿದೆ.

ಅಲ್ಲದೆ ಒಳ್ಳೆಯ ಗುಣಲಕ್ಷಣ ಹೊಂದಿರುವ ಮತ್ತು ಹೆಚ್ಚಿನ ಸಮಯ ಉತ್ತಮವಾಗಿ ವರ್ತಿಸುವ ಮತ್ತು ನಿಸ್ವಾರ್ಥವಾಗಿ ಮತ್ತು ದೈವಭಕ್ತಿಯುಳ್ಳವರಾಗಿ ಜೀವಿಸುವವರನ್ನು ಸಹ ಉತ್ತಮ ಮಾದರಿಯ ವ್ಯಕ್ತಿಗಳೆಂದು ಹೇಳಬಹುದು. ಅವರ ಮಾದರಿಯನ್ನು ಮೆಚ್ಚಬೇಕು ಮತ್ತು ಅನುಸರಿಸಬೇಕು. ಕೆಟ್ಟ ಗುಣಲಕ್ಷಣ ಹೊಂದಿರುವ ಮತ್ತು ಹೆಚ್ಚಿನ ಸಮಯ ಸೊಕ್ಕಿನಿಂದ, ಸ್ವಾರ್ಥದಿಂದ ಮತ್ತು ಭಕ್ತಿಹೀನರಾಗಿ ವರ್ತಿಸುವವರು ಕೆಟ್ಟ ಮಾದರಿಗಳಾಗಿದ್ದಾರೆ. ಅಂತಹವರ ಮಾದರಿಯನ್ನು ಅನುಸರಿಸಲೇಬಾರದು. ಬದಲಾಗಿ ಇಂತಹ ಜನರು ನಮಗೆ ಒಂದು ರೀತಿಯ ಎಚ್ಚರಿಕೆಯಾಗಿದೆ.

ಸತ್ಯವೇದದ ಪುಟಗಳಲ್ಲಿ ನಾವು ಇಂತಹ ನೂರಾರು ಜನರನ್ನು ಕಾಣುತ್ತೇವೆ. ಆದರೆ ಅವರಿಗೆ ಉತ್ತಮ ಪುಸ್ತಕವಾಗಿರುವ ಸತ್ಯವೇದದಲ್ಲಿ ಸ್ಥಾನ ಸಿಕ್ಕಿರುವ ನಿಮಿತ್ತ ಅವರೆಲ್ಲರು ಒಳ್ಳೆಯವರೆಂದು ತಿಳಿದುಕೊಳ್ಳಬಾರದೆಂಬುದನ್ನು ಅರಿಯುವುದು ಅತೀ ಪ್ರಾಮುಖ್ಯವಾದದ್ದು. ಅವರಲ್ಲಿ ಕೆಲವರು ಮಾತ್ರ ಒಳ್ಳೆಯವರಾಗಿದ್ದಾರೆ. ಅವರಲ್ಲಿ ಅನೇಕರು ಕೆಟ್ಟವರಾಗಿದ್ದಾರೆ ಮತ್ತು ಬಹುಶಃ ಹೆಚ್ಚಿನವರೆಲ್ಲರು ಒಳ್ಳೆಯವರು ಮತ್ತು ಕೆಟ್ಟವರು ಆಗಿದ್ದಾರೆ. ಮೋಶೆ ದಾವಿದರಂತಹ ಮಹಾನ್ ವ್ಯಕ್ತಿಗಳು ಸಹ ಬಲಹೀನತೆ ಮತ್ತು ನ್ಯೂನತೆ ಉಳ್ಳವರಾಗಿದ್ದಾರೆ. ಸ್ಪಷ್ಟವಾಗಿ ಅವರು ದೇವರಿಂದ ಬಲವಾಗಿ ಉಪಯೋಗಿಸಲ್ಪಡುವವರು ಆದರೆ ಅವರು ಎಲ್ಲದರಲ್ಲೂ ಸಮರ್ಪಕವಾಗಿರಲಿಲ್ಲ. ಮೋಶೆಯು ಕೋಪಗೊಂಡನು, ನಿರಾಸೆಗೊಂಡನು ಮತ್ತು ಅವಿಧೇಯನಾದನು. ಇದರಿಂದ ದೇವರು ಈತನನ್ನು ವಾಗ್ದಾನ ದೇಶಕ್ಕೆ ಸೇರಿಸಲಿಲ್ಲ. ದಾವೀದನು ಒಬ್ಬ ವ್ಯಭಿಚಾರಿ ಮತ್ತು ಕೊಲೆಗಾರನಾಗಿದ್ದನು. ದೇವರು ಈತನಿಗೆ ಯೆರೂಸಲೇಮಿನ ದೇವಾಲಯವನ್ನು ಕಟ್ಟಲು ಅನುಮತಿಸಲಿಲ್ಲ. ಇವರಂತಹ ಮಹಾನ್ ವ್ಯಕ್ತಿಗಳಿಂದ ನಾವು ಅನೇಕ ಒಳ್ಳೆಯ ಸಂಗತಿಗಳನ್ನು ಕಲಿಯಬಹುದು. ಆದರೆ ಅವರು ತಪ್ಪು ಮಾಡಿದ ರೀತಿಯಲ್ಲಿ ನಾವು ಅವರ ಮಾದರಿಯನ್ನು ಅನುಸರಿಸಲೇಬಾರದು.

ರೂತಳು, ದಾನಿಯೇಲನು ಮತ್ತು ಎಸ್ತೆರಳು ಎಂಬ ಹೆಸರನ್ನು ಹೊಂದಿರುವ ಹಳೇ ಒಡಂಬಡಿಕೆಯ ಮೂರು ಪುಸ್ತಕಗಳಲ್ಲಿ ಕೆಲವು ಅಸಧಾರಣವಾದ ಸಕಾರಾತ್ಮಕ ಮಾದರಿಯ ವ್ಯಕ್ತಿಗಳನ್ನು ನಾವು ಕಾಣುತ್ತೇವೆ. ರೂತಳು ಮತ್ತು ಬೋವಜ, ದಾನಿಯೇಲನು ಮತ್ತು ಆತನ ಮೂವರು ಸ್ನೇಹಿತರಾದ ಶದ್ರಕ್, ಮೇಶಕ್, ಅಬೇದ್‌ನೆಗೋ ಮತ್ತು ಎಸ್ತೇರಳಲ್ಲಿ ಯಾವುದೇ ತಪ್ಪನ್ನು ಕಂಡುಹಿಡಿಯುವುದು ನಿಜವಾಗಲು ಕಷ್ಟವಾಗಿರುತ್ತದೆ. ಅಲ್ಲದೇ ರೂತಳ ಅತ್ತೆಯಾದ ನೊವೊಮಿಯು ಮತ್ತು ಎಸ್ತೇರಳ ಚಿಕ್ಕಪ್ಪನಾದ ಮೊರ್ದೆಕೈ ಮೂಲತಃ ಅತೀ ಒಳ್ಳೆಯ ವ್ಯಕ್ತಿಗಳು. ಈ ಪಠ್ಯ ಪುಸ್ತಕದ ಉದ್ದೇಶವು ಈ ಸಕರಾತ್ಮಕ ಮಾದರಿಗಳನ್ನು ಅವರದೆ ಐತಿಹಾಸಿಕ ಹಿನ್ನಲೆಯಲ್ಲಿ ಅಭ್ಯಾಸಿಸುವುದು ಮತ್ತು ಅವರಿಂದ ನಾವು ಏನನ್ನು ಕಲಿಯಬಹುದೆಂದು ನೋಡುವುದಾಗಿದೆ. ಅವರ ವ್ಯಕ್ತಿತ್ವಗಳು, ಅವರ ನಡುವಳಿಕೆ, ಅವರ ಸಾಧನೆಗಳು ಮತ್ತು ಆ ದಿನಗಳಲ್ಲಿ ದೇವರಿಂದ ಅವರು ಉಪಯೋಗಿಸಲ್ಪಟ್ಟ ಕುರಿತು ಇಂದು ದಕ್ಷಿಣ ಭಾರತದಲ್ಲಿ ಸ್ವತಃ ನಮ್ಮ ಜೀವಿತ ಮತ್ತು ಸನ್ನಿವೇಶಗಳೊಂದಿಗೆ ಉತ್ತಮವಾಗಿ ವ್ಯವಹರಿಸಲು ಮತ್ತು ದೇವರಿಂದ ನಾವು ಇನ್ನೂ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡಲು ನಮಗೆ ಸಹಾಯ ಮಾಡಬಲ್ಲದು ಮತ್ತು ನಮ್ಮನ್ನು ಪ್ರೇರೇಪಿಸುತ್ತವೆ.

ಕ್ರೈಸ್ತ ವಿಶ್ವಾಸಿಗಳಾದ ನಾವು ಇಂದು ಹೊಸ ಒಡಂಬಡಿಕೆಯ ಜನರಾಗಿದ್ದೇವೆ. ಹೊಸ ಒಡಂಬಡಿಕೆಯ ಪಠ್ಯ (ವಾಕ್ಯ)ಗಳೊಂದಿಗೆ ನಮಗೆ ಸಂಪರ್ಕವಿದೆ. ಯೇಸು ಕ್ರಿಸ್ತನು, ಆತನ ಜೀವನ, ಸೇವೆ ಮತ್ತು ಬೋಧನೆಯ ಕುರಿತಾದ ಸುವಾರ್ತಾ ಕಥೆಗಳು ನಮಗಿವೆ. ಅಪೊಸ್ತಲರು ಮತ್ತು ಆದಿಸಭೆಯಲ್ಲಿನ ವಿಶ್ವಾಸಿಗಳ ಮೂಲಕ ಪವಿತ್ರಾತ್ಮನು ಹೇಗೆ ಕಾರ್ಯ ಮಾಡಿದನು ಎಂಬುದರ ಕುರಿತಾದ ಅಪೊಸ್ತಲರ ಕೃತ್ಯಗಳ ಪುಸ್ತಕ ನಮಗಿದೆ. ಸತ್ಯವೇದವನ್ನು ವ್ಯಾಖ್ಯಾನಿಸುವ ಮತ್ತು ದೇವರನ್ನು ಮೆಚ್ಚಿಸುವ ಜೀವಿತವನ್ನು ಹೇಗೆ ಜೀವಿಸಬೇಕೆಂದು ಭೋದಿಸುವ ಪತ್ರಿಕೆಗಳಿವೆ. ಯೇಸು ಕ್ರಿಸ್ತನು ಸಭೆಗಳ ನಡುವೆ ತಿರುಗಾಡುತ್ತಾ ಅವರ ಆತ್ಮೀಕ ಜೀವಿತಗಳನ್ನು ಮೌಲ್ಯಮಾಪನ ಮಾಡುತ್ತಾ ತನ್ನ ಎರಡನೇ ಬರೋಣ ಮತ್ತು ನೂತನ ಭೂಮ್ಯಾಕಾಶ, ನೀತಿಯ ನಿವಾಸ (2 ಪೇತ್ರ 3:13)ದೊಂದಿಗಿನ ದೇವರ ರಾಜ್ಯದ ಸಂಪೂರ್ಣವಾದ ನೆರವೇರಿಕೆಯನ್ನು ಮುನ್ನೋಡಬೇಕೆಂದು ಪ್ರೇರೇಪಿಸುವ ಪ್ರಕಟಣೆ ಪುಸ್ತಕ ನಮಗಿದೆ. ಆ ದಿನದವರೆಗೂ ದಕ್ಷಿಣ ಭಾರತದಲ್ಲಿನ ದೇವ ಜನರಾದ ನಾವು ದೇವರ ರಾಜ್ಯದ ನಿಯಮಗಳನ್ನು ಪ್ರತಿಬಿಂಬಿಸುವಂತಹ ಜೀವಿತಗಳನ್ನು ಜೀವಿಸಬೇಕು, ಆಗ ಜನರು ನಮ್ಮ ಮೂಲಕ ಯೇಸು ಕ್ರಿಸ್ತನನ್ನು ಕಾಣುವರು ಮತ್ತು ಆತನೆಡೆಗೆ ಸೆಳೆಯಲ್ಪಡುವರು. ನಾವೆಲ್ಲರೂ ಪ್ರವೀಣತೆಗೆ ಬಂದು ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವುದೆ ನಮ್ಮ ವೈಯಕ್ತಿಕ, ಸಾಮೂಹಿಕ ಮತ್ತು ಆತ್ಮೀಕ ಜೀವಿತಕ್ಕಾಗಿನ ನಮ್ಮ ಗುರಿಯಾಗಿರಬೇಕು (ಎಫೆಸ. 4:13). ಯೇಸು ಕ್ರಿಸ್ತನು ನಮ್ಮ ಅತ್ಯುತ್ತಮ ಮಾದರಿಯಾಗಿದ್ದಾನೆ.

# ರೂತಳು – ಅಧ್ಯಯನಗಳು

## ರೂತಳ ಪರಿಚಯ

ರೂತಳ ಕಥೆಯು ನ್ಯಾಯಸ್ಥಾಪಕರುಗಳ ಕಾಲದಲ್ಲಿ ನಡೆಯಿತು. ಈ ಅವಧಿಯು ಯೆಹೋಶುವನ ಮರಣದಿಂದ ಪ್ರಾರಂಭವಾಗಿ (ಸುಮಾರು ಕ್ರಿ.ಪೂ. 1375) ಮೊದಲ ಅರಸನಾದ ಸೌಲನ ರಾಜಪ್ರಭುತ್ವದ (ಕ್ರಿ.ಪೂ. 1050) ಪ್ರಾರಂಭದಲ್ಲಿ ಕೊನೆಗೊಳ್ಳುತ್ತದೆ. ರೂತಳು ಮತ್ತು ಆಕೆಯ ಅತ್ತೆಯಾದ ನೊವೊಮಿಯು ಈ ಅವಧಿಯ ನಂತರದಲ್ಲಿ ಜೀವಿಸಿದರು. ನ್ಯಾಯಸ್ಥಾಪಕರುಗಳ ಅವಧಿಯು ಇಸ್ರಾಯೇಲ್ಯರ ಇತಿಹಾಸದಲ್ಲಿ ಒಂದು ಅಂಧಕಾರದ ಅವಧಿಯಾಗಿದೆ. ಈ ಒಂದು ಸಮಯದಲ್ಲಿ ತಪ್ಪಾದ ಆತ್ಮೀಕತೆ ಕೆಳಮಟ್ಟದ ನೈತಿಕತೆ ಮತ್ತು ಹಿಂಜಾರುವಿಕೆಯು ಇತ್ತು. ಈ ಒಂದು ಸಮಯದಲ್ಲಿ ಇಸ್ರಾಯೇಲ್ಯರು ವಿದೇಶಿ ರಾಷ್ಟ್ರಗಳಿಂದ ದಬ್ಬಾಳಿಕೆ ಮತ್ತು ಅಶಾಂತಿಯ ರಾಜಕೀಯ ಸ್ಥಿತಿಯನ್ನು ನಿಯತಕಾಲಿಕವಾಗಿ ಅನುಭವಿಸಿದರು.

ಪದೇ ಪದೇ ಇಸ್ರಾಯೇಲ್ಯರು ದೇವರು ಮತ್ತು ಆತನ ಒಡಂಬಡಿಕೆಗೆ ಅವಿಧೇಯರಾದರು. ಯೆಹೋವನಿಗೆ ಬದಲಾಗಿ ಅವರು ಕಾನಾನ್ಯರ ದೇವರುಗಳನ್ನು ಆರಾಧಿಸಿದರು. ಅಲ್ಲದೆ ಅವರು ವಾಸಿಸಿದ ವಾಗ್ದಾನ ದೇಶದ ಮಧ್ಯದಲ್ಲಿನ ಅನ್ಯರಾಷ್ಟ್ರಗಳ ಜೀವನ ಶೈಲಿಯನ್ನು ಅನುಸರಿಸಿದರು. ಅವರು ತೋರ್ಪಡುವಿಕೆಯ ಆತ್ಮೀಕತೆಯನ್ನು ಮತ್ತು ಧಾರ್ಮಿಕತೆಯನ್ನು ಹೊಂದಿದ್ದರು, ಆದರೆ ಅವೆಲ್ಲವೂ ಸುಳ್ಳಾಗಿತ್ತು.

ಅವರ ಧರ್ಮಭ್ರಷ್ಟತೆಯು ವಿದೇಶಿ ದಬ್ಬಾಳಿಕೆದಾರರ ರೂಪದಲ್ಲಿ ಅವರ ಮೇಲೆ ದೇವರ ದಂಡನೆಯನ್ನು ತಂದಿತು. ತಮ್ಮ ಬಾಧೆಗಳಲ್ಲಿ ಅವರು ಬಿಡುಗಡೆಗಾಗಿ ದೇವರಿಗೆ ಮೊರೆಯಿಟ್ಟರು. ದೇವರು ಇಸ್ರಾಯೇಲ್ಯರ ಮೇಲೆ ಕನಿಕರಪಟ್ಟು ಅವರನ್ನು ದಬ್ಬಾಳಿಕೆಗಾರರಿಂದ ರಕ್ಷಿಸುವುದಕ್ಕಾಗಿ ವಿಮೋಚಕರನ್ನು ಕಳುಹಿಸಿದನು (ಅವರನ್ನು ನ್ಯಾಯಸ್ಥಾಪಕರೆಂದು ಕರೆಯಲಾಗುತ್ತದೆ). ಆದ್ದರಿಂದ "ನ್ಯಾಯಸ್ಥಾಪಕರುಗಳು", ಮೋಶೆಯಂತೆಯೂ, ಯೆಹೋಶುವನಂತೆಯೂ ಮತ್ತು ಸಮುವೇಲನಂತೆಯೂ (ಕೊನೆಯ ನ್ಯಾಯಸ್ಥಾಪಕನು ಮತ್ತು ಇಸ್ರಾಯೇಲ್ಯರ ಇಬ್ಬರು ಅರಸರನ್ನು ಅಭಿಷೇಕಿಸಲು ದೇವರು ಉಪಯೋಗಿಸಿದ ಪ್ರವಾದಿ) ಹಾಗೂ ದಾವೀದನಂತೆಯೂ (ದೇವರ ಹೃದಯಕ್ಕೆ ಹತ್ತಿರದಲ್ಲಿರುವ ವ್ಯಕ್ತಿ ಹಾಗೂ ಇಸ್ರಾಯೇಲ್ಯರ ಭವಿಷ್ಯದ ಅರಸರುಗಳಿಗೆ ಮಾದರಿಯಾದ ಅರಸನು) ನಾಯಕರುಗಳಲ್ಲ ಬದಲಾಗಿ ಅವರು ಯುದ್ಧವೀರರಾಗಿದ್ದಾರೆ. ನ್ಯಾಯಸ್ಥಾಪಕರುಗಳ ಪುಸ್ತಕವು "ಆ ಕಾಲದಲ್ಲಿ ಇಸ್ರಾಯೇಲ್ಯರೊಳಗೆ ಅರಸನಿರಲಿಲ್ಲ; ಪ್ರತಿಯೊಬ್ಬನೂ ತನ್ನ ಮನಸ್ಸಿಗೆ ಬಂದಂತೆ ನಡೆಯುತ್ತಿದ್ದನು (ನ್ಯಾಯ. 21:25)" ಎಂಬ ನಿರಾಶದಾಯಕ ಹೇಳಿಕೆಯೊಂದಿಗೆ ಕೊನೆಗೊಳ್ಳುತ್ತದೆ.

ನೊವೊಮಿ ಮತ್ತು ರೂತಳ ಸುಂದರವಾದ ಸಣ್ಣಕಥೆಯು ಈ ಅಂಧಕಾರದ ಐತಿಹಾಸಿಕ ಹಿನ್ನೆಲೆಗೆ ವಿರುದ್ಧವಾಗಿ ಸಂಭವಿಸಿತು. ಸಮಸ್ಯೆಗಳಿಂದ ಕೂಡಲ್ಪಟ್ಟ ನ್ಯಾಯಸ್ಥಾಪಕರುಗಳ ಅವಧಿಯ ಹಿನ್ನಲೆಯಿಂದ ಇದನ್ನು ಓದುವಾಗ ನಾವು ಸರಿಯಾಗಿ ಅರ್ಥಮಾಡಿಕೊಳ್ಳಲು ನಮಗೆ ಇದು ಸಹಾಯಮಾಡುತ್ತದೆ.

ಇದು ಮಹಾಶೂರರು ಮತ್ತು ದೇಶದ ರಕ್ಷಕರುಗಳ ಕುರಿತ ಕಥೆಯಲ್ಲ. ಇದು ಯೂದಾಯದ ಬೇತ್ಲೆಹೇಮಿನಲ್ಲಿನ ಒಂದು ಇಸ್ರಾಯೇಲ್ ಕುಟುಂಬದ ಮತ್ತು ಈ ಒಂದು ಸಾಮಾನ್ಯ ಕುಟುಂಬಕ್ಕೆ ಮದುವೆಮಾಡಿಕೊಡಲ್ಪಟ್ಟ ಅನ್ಯದೇಶಿಯ ಹೆಣ್ಣಾದ ರೂತಳ ಕುರಿತಾದ ಕಥೆಯಾಗಿದೆ. ಹಾಗಾಗಿ ಇದು ಸಾಮಾನ್ಯ ಜನರ ಜೀವಿತಗಳಲ್ಲಿ ದೇವರು ಮಾಡುತ್ತಿರುವ ಕಾರ್ಯಗಳ ಕುರಿತಾದ ಕಥೆಯಾಗಿದೆ. ಆದರೆ ಒಬ್ಬ ದೀನ ಮತ್ತು ನಂಬಿಗಸ್ತ ಮೋವಾಬ್ಯ ಸ್ತ್ರೀಯಾದ ರೂತಳ ಸಂತತಿಯಲ್ಲಿ ಅರಸನಾದ ದಾವೀದನು ಹಾಗೂ ಕರ್ತನಾದ ಯೇಸು ಕ್ರಿಸ್ತನು ಜನಿಸಿದರು ಎಂಬ ದೇವರ ವಿಶಾಲವಾದ ಉದ್ದೇಶಗಳ ಮೇಲೆ ಬೆಳಕನ್ನು ಚೆಲ್ಲುವ ಕಥೆಯೂ ಸಹ ಇದಾಗಿದೆ.

ರೂತಳ ಪುಸ್ತಕವು ಅನಾಮದೇಯ ವ್ಯಕ್ತಿಯಿಂದ ವಾಸ್ತವವಾಗಿ ಸಾಧಿಸಲ್ಪಟ್ಟು ಬರೆಯಲ್ಪಟ್ಟ ಸಾಹಿತ್ಯ ರತ್ನವಾಗಿದೆ. ಈ ಕಥೆಯು ಕ್ಷಾಮದಿಂದ ಸುಗ್ಗಿಯೆಡೆಗೆ, ಮರಣದಿಂದ ಜೀವದೆಡೆಗೆ, ಶೂನ್ಯದಿಂದ ಪೂರ್ಣತೆಯೆಡೆಗೆ, ಹತಾಶೆಯಿಂದ ನೆಮ್ಮದಿಯೆಡೆಗೆ, ಹತಾಶ ಪರಿಸ್ಥಿತಿಯಿಂದ ನಿರೀಕ್ಷೆಯೆಡೆಗೆ ಸಾಗುತ್ತದೆ.

ನಮ್ಮ ಸತ್ಯವೇದದಲ್ಲಿನ ಕೇವಲ ನಾಲ್ಕು ಅಧ್ಯಾಯಗಳ, ಕೆಲವೇ ಪುಟಗಳಲ್ಲಿ ಮೂರು ಪ್ರಸಿದ್ಧ ಮಾದರಿ ವ್ಯಕ್ತಿಗಳ ಕುರಿತು ನಾವು ತಿಳಿದುಕೊಳ್ಳುತ್ತೇವೆ.

ಯೆಹೂದದ ಬೇತ್ಲೆಹೇಮಿನ ನೊವೊಮಿಯು ದೇವರಿಗೆ ಭಯಪಡುವ ಸ್ತ್ರೀ, ಆಕೆಯ ಜೀವಿತವು ಶೂನ್ಯದಿಂದ ಪೂರ್ಣತೆಯೆಡೆಗೆ ಮತ್ತು ಕಹಿತನದಿಂದ ನೆಮ್ಮದಿಯಕಡೆಗೆ ಸಾಗುವುದರ ಮೂಲಕ ಆಕೆಯ ಜೀವಿತದಲ್ಲಿಯೂ ಮತ್ತು ಕುಟುಂಬದಲ್ಲಿಯೂ ದೇವರ ಯೋಜನೆಯು ನೆರವೇರಿತು.

ರೂತಳು ಒಬ್ಬ ಯೌವನಸ್ಥ ಮೋವಾಬ್ಯ ವಿಧವೆಯಾಗಿದ್ದಳು. ಈಕೆಯು ಸಂಪೂರ್ಣವಾಗಿ ತನ್ನ ಅತ್ತೆಯಾದ ನೊವೊಮಿಗೂ ಮತ್ತು ಇಸ್ರಾಯೇಲ್ಯಳಾಗಿ ಮಾರ್ಪಡಲು, ಇಸ್ರಾಯೇಲ್ ಜನರ ನಂಬಿಕೆಯನ್ನು ಹಿಂಬಾಲಿಸಲು ಸಿದ್ಧಳಾಗುವಷ್ಟರ ಮಟ್ಟಿಗೆ ಬದ್ಧಳಾಗಿದ್ದಳು. ಈಕೆಯು ದೇವರಿಗೆ ಭಯಪಡುವವಳು, ದೀನಳು, ವಿಧೇಯಳು ಮತ್ತು ನಂಬಿಗಸ್ತಳಾಗಿದ್ದಳು. ಇಸ್ರಾಯೇಲ್ ಜನರಿಗಾಗಿ ಮತ್ತು ಎಲ್ಲಾ ಮನುಕುಲದ ರಕ್ಷಣೆಗಾಗಿ ತನ್ನ ಯೋಜನೆಯನ್ನು ನೆರವೇರಿಸಲು ದೇವರಿಂದ ಬಲವಾಗಿ ಉಪಯೋಗಿಸಲ್ಪಟ್ಟಳು.

ಬೋವಜನು ದೇವರಿಗೆ ಭಯಪಡುವವನು, ನೀತಿವಂತನು ಮತ್ತು ಗೌರವಾನ್ವಿತ ಪುರುಷನಾಗಿದ್ದು, ಇಸ್ರಾಯೇಲ್ಯರ ಇತಿಹಾಸದ ಕತ್ತಲೆಯ ಅವಧಿಯಲ್ಲಿ ನ್ಯಾಯವಾದದ್ದನ್ನು ಮಾಡಲು ಸಿದ್ಧವಿದ್ದ ವ್ಯಕ್ತಿಯಾಗಿದ್ದನು. ಇಂದು ದಕ್ಷಿಣಭಾರತದಲ್ಲಿ ಜೀವಿಸುತ್ತಿರುವ ನಮಗೆ ಇವರಿಂದ ಕಲಿಯಬೇಕಾದದ್ದು ಬಹಳಷ್ಟು ಇದೆ.

# ಅಧ್ಯಯನ 1: ನೊವೊಮಿ ಮತ್ತು ರೂತಳು, ಅಧ್ಯಾಯ 1

## ವಿವರಣೆಗಳು

ರೂತಳ ಪುಸ್ತಕದಲ್ಲಿನ ಘಟನೆಗಳು ನ್ಯಾಯಸ್ಥಾಪಕರು ಆಳುತಿದ್ದ ಸಮಯಗಳಲ್ಲಿ ನಡೆದವು (ವ. 1). ಇದು ಸುಮಾರು ಕ್ರಿ.ಪೂ. 1375 ರಿಂದ 1050 ರವರೆಗೆ ನಡೆಯಿತು. ರೂತಳು ಸುಮಾರು ಕ್ರಿ.ಪೂ. 1040 ರಲ್ಲಿ ಹುಟ್ಟಿದ ಅರಸನಾದ ದಾವೀದ (5:17)ನ ಮುತ್ತಜ್ಜಿಯಾಗಿದ್ದು, ಇದರಿಂದ ಯೆಹೂದದ ಬೇತ್ಲೆಹೇಮಿನಲ್ಲಿ ಸುಮಾರು ಕ್ರಿ.ಪೂ. 1130 ರಲ್ಲಿ ಕ್ಷಾಮ ಬಂದಿರಬಹುದೆಂದು ನಾವು ಊಹಿಸಬಹುದು. ನೊವೊಮಿ

ಮೋವಾಬು ಮೃತಸಮುದ್ರದ ಪೂರ್ವಭಾಗದಲ್ಲಿರುವ ದೇಶವಾಗಿದೆ. ಯೆಹೋಶುವನ ನಾಯಕತ್ವದಡಿಯಲ್ಲಿ ವಾಗ್ದಾನ ದೇಶಕ್ಕೆ ಸಾಗುತ್ತಿರುವಾಗ ಯೊರ್ದನ್ ಹೊಳೆಯನ್ನು ದಾಟುವುದಕ್ಕಿಂತ ಮುನ್ನ ಮೋಶೆಯ ಕಾಲದಲ್ಲಿ ಇಸ್ರಾಯೆಲ್ಯರು ಇದೇ ಮೋವಾಬ್ ಬಯಲುಗಳಲ್ಲಿ ಬೀಡುಬಿಟ್ಟಿದ್ದರು. ಅಂದಿನಿಂದ ಮೋವಾಬ್ಯರಿಗೂ ಮತ್ತು ಇಸ್ರಾಯೇಲ್ಯರಿಗೂ ಹಗೆತನವಿತ್ತು ಮತ್ತು ಹೆಚ್ಚಿನ ಹಳೇ ಒಡಂಬಡಿಕೆಯ ವಾಕ್ಯಗಳಲ್ಲಿ ವಿಗ್ರಹಾರಕರಾಗಿದ್ದ ಮೋವಾಬ್ಯರನ್ನು ಹೆಚ್ಚಿನ ಹಳೇ ಒಡಂಬಡಿಕೆ ನಕರಾತ್ಮಕವಾಗಿ ಚಿತ್ರಿಸಲಾಗಿದೆ. ಆದರೆ ರೂತಳ ಪುಸ್ತಕದಲ್ಲಿ ಅಂತಹ ಹಗೆತನವನ್ನು ನಾವು ಕಾಣಲಾಗುವುದಿಲ್ಲ. ತದ್ವಿರುದ್ಧವಾಗಿ ಇಸ್ರಾಯೆಲ್ ದಂಪತಿಗಳಾದ ಎಲೀಮೆಲೆಕ ಮತ್ತು ನೊವೊಮಿ ಮೋವಾಬಿನಲ್ಲಿ ಸಮಾಧಾನದಿಂದ ಜೀವಿಸಿದಂತೆ ತೋರುತ್ತದೆ. ತಮ್ಮ ತಂದೆಯ ಮರಣದ ನಂತರ ಇಬ್ಬರು ಮಕ್ಕಳಾದ ಮಹ್ಲೋನ್ ಮತ್ತು ಕಿಲ್ಯೋನ್‌ರಿಬ್ಬರು ಒರ್ಫಾ ಮತ್ತು ರೂತ್ ಎಂಬ ಹೆಸರುಳ್ಳ ಮೋವಾಬ್ಯ ಸ್ತ್ರೀಯರನ್ನು ಮದುವೆಯಾಗುತ್ತಾರೆ (ನೋಡಿ, ವ. 4, ಮತ್ತು 4:10)

ಪ್ರಾಚೀನ ಇಸ್ರಾಯೇಲಿನಲ್ಲಿ ವಿಧವೆಯರನ್ನು ರಕ್ಷಿಸಲು ಮತ್ತು ವಂಶವನ್ನು ಮುಂದುವರಿಸಲು ಹೊಣೆಯಾಗುವ ಶಾಸನವಿತ್ತು (ಧರ್ಮೋ. 25:5–10). "ನಿಮಗೆ ಗಂಡಂದಿರನ್ನು ಕೊಡುವುದಕ್ಕೆ ನನಗೆ ಬೇರೆ ಮಕ್ಕಳಿಲ್ಲವಲ್ಲ" (ವ 11) ಎನ್ನುವಲ್ಲಿ ನೊವೊಮಿಯು ಈ ಶಾಸನವನ್ನು ಸೂಚಿಸುತ್ತಾಳೆ. ಆಕೆಯು ಮಕ್ಕಳನ್ನು ಪಡೆಯಲು ಪ್ರಾಯಮೀರಿದವಳಾಗಿದ್ದಳು. ಒಂದುವೇಳೆ ಆಕೆ ಮದುವೆಯಾಗಿ ಮಕ್ಕಳನ್ನು ಪಡೆದರು ಅವರು ದೊಡ್ಡವರಾಗುವವರೆಗೂ ಕಾಯುವುದಾದರೆ ಒರ್ಫಾ ಮತ್ತು ರೂತಳಿಬ್ಬರೂ ಪ್ರಾಯ ಮೀರಿಹೊಗುತ್ತಿದ್ದರು.

ಅಧ್ಯಯನ 4ರಲ್ಲಿ "ನಿಯೋಗ ವಿವಾಹ" ಪದ್ಧತಿಯ ಬಗ್ಗೆ ನಾವು ಹೆಚ್ಚಾಗಿ ಕಲಿಯಲಿದ್ದೇವೆ.

ಗ್ರಂಥಕರ್ತನು ಇಬ್ರಿಯ ಹೆಸರುಗಳ ಅರ್ಥವನ್ನು ಬಳಸುವುದನ್ನು ಗಮನಿಸುವುದು ಆಸಕ್ತಿದಾಯಕವಾಗಿದೆ. "ಬೇತ್ಲೆಹೇಮ್" ಎಂದರೆ "ರೊಟ್ಟಿಯ ಮನೆ" ಮತ್ತು ಸಿರಿಯಾ ಮೊವಾಬ್ ದೇಶದಲ್ಲಿ ಆಹಾರವು ಲಭ್ಯವಿರುವಾಗ ಬೇತ್ಲೆಹೇಮಿನಲ್ಲಿ ಮಾತ್ರ ರೊಟ್ಟಿಯೇ ಇರಲಿಲ್ಲವೆಂಬುದನ್ನು ಓದುಗರು ತಿಳಿದುಕೊಳ್ಳಬೇಕೆಂಬುದರೊಂದಿಗೆ ಕಥೆಯು ಪ್ರಾರಂಭವಾಗುತ್ತದೆ. "ಎಲೀಮೆಲೆಕ" ಎಂದರೆ "ಕರ್ತನು ರಾಜನಾಗಿದ್ದಾನೆ" ಎಂದರ್ಥ ಮತ್ತು ದೇವರು ಎಲ್ಲಾ ಘಟನೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆಂದು ರೂತಳ ಪುಸ್ತಕವು ತಿಳಿಸುತ್ತದೆ. "ನೊವೊಮಿ" ಎಂದರೆ "ಹಿತಕರ" ಎಂದರ್ಥ. ಆದರೆ ತಾನು ಬೇತ್ಲೆಹೇಮಿಗೆ ಹಿಂದಿರುಗಿದಾಗ ತನ್ನನ್ನು "ಮಾರ" ಎಂಬುದಾಗಿ ಕರೆಯಬೇಕೆಂದು ನೊವೊಮಿಯು ಹೇಳುತ್ತಾಳೆ. ಇದರರ್ಥ "ಕಹಿತನ" (ವ. 20) ರೂತ್ ಮತ್ತು ಓರ್ಫಾ ಎರಡೂ ಮೋವಾಬ್ಯ ಹೆಸರುಗಳು.

ಪ್ರಾಚೀನ ಇಸ್ರಾಯೇಲಿನಲ್ಲಿ ಜವೆಗೋದಿಯು ಎಪ್ರಿಲ್‌ನಲ್ಲಿ (ವ. 22) ಮತ್ತು ಗೋದಿಯು ಮೇ (ವ. 2:23)ನಲ್ಲಿ ಕೊಯ್ಲಿಗೆ ಬರುತ್ತಿತ್ತು. ಆಗ ಯೆಹೂದ್ಯದಲ್ಲಿ ಮುಂದೆ ಯಾವುದೇ ಕ್ಷಾಮವಿರಲಿಲ್ಲ (ಹೋಲಿಸಿ ವ. 6).

## ಪ್ರಶ್ನೆಗಳು

1. ಎಲೀಮೆಲೆಕನು ಮತ್ತು ಆತನ ಕುಟುಂಬವು ಯಾಕೆ ಮೋವಾಬಿಗೆ ಹೋದರು?
2. ನೊವೊಮಿಯು ಯೆಹೂದಕ್ಕೆ ಹಿಂತಿರುಗಲು ಯಾಕೆ ತೀರ್ಮಾನಿಸಿದಳು?
3. ನೊವೊಮಿಯು ತನ್ನ ಸೊಸೆಯಂದಿರಿಗೆ ಮೋವಾಬಿನಲ್ಲೆ ಇರಬೇಕೆಂದು ಯಾವ ಕಾರಣಕ್ಕಾಗಿ ಹೇಳುತ್ತಾಳೆ?
4. ಓರ್ಫಾಳ ಕುರಿತು ಓದುಗರು ಏನನ್ನು ಕಾಣುತ್ತಾರೆ?
5. ತಾನು ಮೋವಾಬಿನಲ್ಲಿಯೇ ಇರಲು ಇಷ್ಟಪಡದೆ ರೂತಳು ಕೊಡುವ ಕಾರಣವೇನು?
6. ನೊವೊಮಿ ಮತ್ತು ರೂತಳು ಬೇತ್ಲೆಹೇಮಿಗೆ ಆಗಮಿಸಿದಾಗ ಅವರು ಯಾವ ರೀತಿಯ ಸ್ವಾಗತವನ್ನು ಹೊಂದುತ್ತಾರೆ?
7. ಕಳೆದ ಹತ್ತು ವರ್ಷಗಳ ಅವಧಿಯಲ್ಲಿನ ತನ್ನ ಜೀವಿತವನ್ನು ನೊವೊಮಿಯು ಹೇಗೆ ವರ್ಣಿಸುತ್ತಾಳೆ?
8. ಈ ಅಧ್ಯಾಯದಲ್ಲಿನ ಮೂವರು ಸ್ತ್ರೀಯರನ್ನು ನೀವು ಹೇಗೆ ವರ್ಗೀಕರಿಸುವಿರಿ?

# ಅಧ್ಯಯನ 2: ರೂತಳು ಬೋವಜನನ್ನು ಸಂಧಿಸುವುದು, ಅಧ್ಯಾಯ 2

## ವಿವರಣೆಗಳು

ಅಗತ್ಯತೆಯಲ್ಲಿರುವವರಿಗಾಗಿ ವಿವಿಧ ಒದಗಿಸುವಿಕೆಗಳನ್ನು ಪೂರೈಸುವುದಕ್ಕಾಗಿ ಮೋಶೆಯ ಧರ್ಮಶಾಸ್ತ್ರವು ಅವಕಾಶ ಮಾಡಿಕೊಟ್ಟಿತ್ತು ( ಬಡವರು, ಅನಾಥರು, ವಿಧವೆಯರು ಮತ್ತು ಪರದೇಶಿಯವರು). ಅಂತಹ ಶಾಸ್ತ್ರಗಳಲ್ಲಿ "ಹಕ್ಕಲಾಯುವ ಶಾಸ್ತ್ರ" ಸಹ ಒಂದಾಗಿದೆ (ನೋಡಿ ಯಾಜಕ. 19:9–10, 23:22, ಧರ್ಮೋ. 24:21). ರೂತಳ ಕುರಿತಾದ ಕಥೆಯಲ್ಲಿ ಈ ಶಾಸ್ತ್ರವು ಕಾರ್ಯರೂಪದಲ್ಲಿರುವುದನ್ನು ನಾವು ಕಾಣಬಹುದು. ಇಲ್ಲಿ ರೂತಳು (ಒಬ್ಬ ಬಡ ಮತ್ತು ವಿದೇಶಿಯ ವಿಧವೆ) ಬೋವಜನ ಹೊಲದಲ್ಲಿ ಜವೆಗೋದಿ ಮತ್ತು ಗೋದಿಯನ್ನು ಹಕ್ಕಲಾಯಲು ಅನುಮತಿಸಲ್ಪಡುತ್ತಾಳೆ (2:2, 7, 9, 23).

ಪ್ರಾಚೀನ ಇಸ್ರಾಯೇಲಿನಲ್ಲಿ ಸುಗ್ಗಿಯಲ್ಲಿ ಸ್ತ್ರೀಯರು & ಪುರುಷರು ಒಟ್ಟಾಗಿ ಕೆಲಸ ಮಾಡುತ್ತಿದ್ದರು. ಗಂಡಸರು ಬೆಳೆದುನಿಂತ ಧಾನ್ಯವನ್ನು ಕತ್ತಿಯಿಂದ ಕೊಯ್ದರೆ, ಹೆಂಗಸರು ಕೆಲವು ಪುರುಷರ ಸಹಾಯದಿಂದ ಅದನ್ನು ಹೊರೆಯಾಗಿ ಕಟ್ಟುತ್ತಿದ್ದರು (ಹೋಲಿಸಿ ವ. 9).

ಕೊಯ್ಲುಗಾರರಿಗೆ ಬೋವಜನು ಕೊಟ್ಟ ಉದಾರವಾದ ಸೂಚನೆಯಂತೆ (ವ. 15–16) ಮೊದಲ ದಿನದಲ್ಲಿ ರೂತಳು ಒಳ್ಳೆಯ ಹಕ್ಕಲನ್ನು ಆದುಕೊಂಡಳು. ಸಂಜೆವೇಳೆಯಲ್ಲಿ ಆಕೆಯು ಸುಮಾರು ಮೂವತ್ತು ಸೇರು ಜವೆಗೋದಿಯನ್ನು ತನ್ನ ಅತ್ತೆಯ ಬಳಿಗೆ ಹೊತ್ತು ತಂದಳು (ವ. 17–18).

ಒಬ್ಬ "ಸಮೀಪಬಂಧು–ಸಂರಕ್ಷಕನು" (ವ. 20) ಅಗತ್ಯದಲ್ಲಿರುವ ಕುಟುಂಬದ ಸದಸ್ಯರುಗಳ ಹಿತಾಸಕ್ತಿಯನ್ನು ನೋಡಿಕೊಳ್ಳುವ ಜವಾಬ್ದಾರಿಯುತನಾಗಿರುವನು. ಉದಾ: ಕುಟುಂಬದ ಹೊರಗಿನ ವ್ಯಕ್ತಿಗಳಿಗೆ ಮಾರಿದ ಹೊಲವನ್ನು ಬಿಡಿಸುವುದು (ಯಾಜಕ. 25:25–27) ಅಥವಾ ದಾಸತ್ವಕ್ಕೆ ಮಾರಲ್ಪಟ್ಟ ಸಂಬಂಧಿಯನ್ನು ಬಿಡಿಸುವುದು (ಯಾಜಕ. 25:47–49). ಒಬ್ಬ ಸಮೀಪಬಂಧು–ಸಂರಕ್ಷಕನು ಸತ್ತಂತ ತನ್ನ ಅಣ್ಣನಿಗಾಗಿ ಬಾಧ್ಯಸ್ಥನನ್ನು (ಸಂತಾನ)ಸಹ ಒದಗಿಸಬೇಕಾಗಿತ್ತು (ಧರ್ಮೋ. 25:5–10, ಮಾರ್ಕ 12:18–19ರೊಂದಿಗೆ ಹೋಲಿಸಿ). ರೂತಳ ಪುಸ್ತಕದಲ್ಲಿ "ಸಮೀಪಬಂಧು ವಿಮೋಚಕನು" ಎಂಬ ಪದವನ್ನು ಎರಡು ವ್ಯಕ್ತಿಗಳ ಬಗ್ಗೆ ಉಪಯೋಗಿಸಲಾಗಿದೆ. ಮೊದಲನೇಯದಾಗಿ 2:20ರಲ್ಲಿ ನೊವೊಮಿಯು ಬೋವಜನನ್ನು ತನ್ನ ಸಮೀಪಬಂಧು, ಸಂರಕ್ಷಕನೆಂಬುದಾಗಿ ಕಾಣುತ್ತಾಳೆ (ಎಲೀಮೆಲೆಕನ ಕುಲಕ್ಕೆ ಸೇರಿದವನು 2:1).

ಎರಡನೇಯದಾಗಿ ಕಥೆಯ ಕೊನೆಯಲ್ಲಿ ಬೇತ್ಲೆಹೇಮಿನ ಹೆಂಗಸರು ಬೋವಜ ಮತ್ತು ರೂತಳ ಮಗನಾದ ಓಬೇದನನ್ನು ಸಮೀಪಬಂಧು, ಸಂರಕ್ಷಕನೆಂಬುದಾಗಿ ಕರೆಯುತ್ತಾರೆ (4:15).

ರೂತಳ ದುರ್ಬಲ ಪರಿಸ್ಥಿತಿಯ ಬಗ್ಗೆ ಓದುಗರು ಪುನಃ ಪುನಃ ನೆನಪಿಸಿಕೊಳ್ಳುತ್ತಾರೆ. ಆಕೆಯು ಮೋವಾಬಿನಿಂದ ಬಂದ ಅನ್ಯಳಾಗಿದ್ದಳು (ವ. 2, 6, 11, 21), ರೂತಳು ಮತ್ತು ಆಕೆಯ ಅತ್ತೆಯಾದ ನೊವೊಮಿ ಇಬ್ಬರೂ ವಿಧವೆಯರಾಗಿದ್ದು ಅವರ ಅಗತ್ಯತೆಗಳನ್ನು ಪೂರೈಸಲು ಅವರ ಮನೆಯಲ್ಲಿ ಯಾವುದೇ ಪುರುಷನಿರಲಿಲ್ಲ (ವ. 11). ಆದದರಿಂದ ಹಸಿವೆಯಿಂದ ಪಾರಾಗಲು ರೂತಳು ಹಕ್ಕಲಾಯಬೇಕಿತ್ತು. ಎಲ್ಲಾ ಭೂಮಾಲಿಕರು ಹಕ್ಕಲಾಯಲು ಬಿಡುತ್ತಿರಲಿಲ್ಲ, ಹಾಗಾಗಿ ತನ್ನನ್ನು ಕಟಾಕ್ಷಿಸಿ, ತನಗೆ ದಯೆ ತೋರಿಸುವಂತಹ ಉದಾರಿ ಮನುಷ್ಯನಿಗೆ ಸೇರಿದ ಹೊಲವನ್ನೇ ರೂತಳು ಹುಡುಕಬೇಕಾಗಿತ್ತು (ವ. 2, 19). ಅಲ್ಲದೇ ಸುಂದರವಾಗಿರುವ ಒಬ್ಬ ಯೌವನಸ್ಥ ಹೆಣ್ಣು ಪರಿಚಯವಿಲ್ಲದವರ ಹೊಲದಲ್ಲಿ ಹಕ್ಕಲಾಯುವುದು ಅಪಾಯಕಾರಿಯಾಗಿತ್ತು (ವ. 9, 22).

## ಪ್ರಶ್ನೆಗಳು

1. ಬೋವಜನು ಯಾರು?
2. ರೂತಳು ಹೊಲಕ್ಕೆ ಹೋಗಲು ಬಯಸಿದ್ದು ಯಾಕೆ?
3. ರೂತಳು ಹೊಲದಲ್ಲಿ ಎದುರಿಸಬಹುದಾದ ತೊಂದರೆ (ಅಪಾಯ)ಗಳೇನು?
4. ಬೋವಜನು ರೂತಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡಿದನು?
5. ಮೊದಲ ದಿನದ ಸಾಯಾಂಕಾಲದಂದು ರೂತಳು ಮನೆಗೆ ಹಿಂತಿರುಗಿದಾಗ ನೊವೊಮಿಯು ಆಶ್ಚರ್ಯಗೊಂಡಿದ್ದು ಯಾಕೆ?
6. ಬೋವಜನ ಹೊಲದಲ್ಲಿ ರೂತಳು ಎಷ್ಟು ಹೊತ್ತಿನ ತನಕ ಹಕ್ಕಲು ಆಯ್ದಳು?
7. ಈ ಅಧ್ಯಾಯದಲ್ಲಿ ಬೋವಜನ ಗುಣಸ್ವಭಾವ ಎಂಥದೆಂಬುದಾಗಿ ನಾವು ಗುರುತಿಸಬಹುದು?
8. ಈ ಅಧ್ಯಾಯದಲ್ಲಿ ನೊವೊಮಿಯ ಗುಣಸ್ವಭಾವ ಎಂಥದೆಂಬುದಾಗಿ ನಾವು ಗುರುತಿಸಬಹುದು?

9. ಈ ಅಧ್ಯಾಯದಲ್ಲಿ ರೂತಳ ಗುಣಸ್ವಭಾವ ಎಂಥದೆಂಬುದಾಗಿ ನಾವು ಗುರುತಿಸಬಹುದು?

10. ವಚನ 13ರಲ್ಲಿ "ವಿಧಿಯಂತೆಯೆ" ಎಂದು ಅರ್ಥಕೊಡುವ ಹೇಳಿಕೆಯನ್ನು ಇಬ್ರಿಯಪದ ಒಳಗೊಂಡಿದೆ (ಕನ್ನಡದ NIBV ನಲ್ಲಿ ಬಾಷಾಂತರಿಸಿಲ್ಲ, ಕನ್ನಡದ JV ನಲ್ಲಿ "ದೈವಯೋಗದಿಂದ" ಎಂಬುದಾಗಿ ವ್ಯಾಖ್ಯಾನಿಸಲಾಗಿದೆ). ಗ್ರಂಥಕರ್ತನು ಯಾಕೆ "ವಿಧಿಯಂತೆಯೆ" ಎಂಬ ಹೇಳಿಕೆಯನ್ನು ಬಳಸಿರಬಹುದು?

# ಅಧ್ಯಯನ 3: ಧಾನ್ಯ ಒಕ್ಕುವ ಕಣದಲ್ಲಿ ರೂತಳು ಮತ್ತು ಬೋವಜ, ಅಧ್ಯಾಯ 3

## ವಿವರಣೆಗಳು

ಸುಗ್ಗಿಕಾಲದಲ್ಲಿ ಭೂಮಾಲೀಕನು ತನ್ನ ಧಾನ್ಯವನ್ನು ಕಾಯುವ ಸಲುವಾಗಿ ಕಣದಲ್ಲಿಯೇ ಹೆಚ್ಚಿನ ರಾತ್ರಿಗಳನ್ನು ಕಳೆಯುತ್ತಿದ್ದನು. ಆದರೆ ಸುಗ್ಗಿಕಾಲವು ಹಬ್ಬ ಮತ್ತು ಸಂಭ್ರಮದ ಸಮಯ ಸಹ ಆಗಿತ್ತು ("ನೀನು ಪ್ರಜೆಗಳನ್ನು ವೃದ್ಧಿಗೊಳಿಸಿದ್ದಿ, ಅವರಿಗೆ ಸಂತೋಷವನ್ನು ಹೆಚ್ಚಿಸಿದ್ದೀ, ಸುಗ್ಗಿಕಾಲದಲ್ಲಿ ಜನರು ಹರ್ಷಿಸುವ ಹಾಗೂ ..." ಯೇಶಾಯ 9:3). ಆ ಸಮಯದಲ್ಲಿ ಶ್ರಮಪಟ್ಟು ಹಗಲೆಲ್ಲ ದುಡಿದ ನಂತರ ಸಾಯಂಕಾಲದಲ್ಲಿ ಭೂಮಾಲೀಕ ಮತ್ತು ಆತನ ಕೆಲಸಗಾರರೆಲ್ಲರು ಒಟ್ಟಾಗಿ ಸೇರಿ ಕಣದಲ್ಲಿ ಹಬ್ಬದೂಟ ಮಾಡುತ್ತಿದ್ದರು.

ಬೇತ್ಲೆಹೇಮಿನ ಹೊರಬಾಗದಲ್ಲಿ, ಆ ರಾತ್ರಿಯಲ್ಲಿ ರೂತಳು ಮತ್ತು ಬೋವಜನ ನಡುವೆ ಏನಾಯಿತೆಂಬುದನ್ನು ಇದರಲ್ಲಿ ಭಾಗಿಯಾದ ಮೂವರು ವ್ಯಕ್ತಿಗಳ (ನೊವೊಮಿ, ರೂತಳು ಮತ್ತು ಬೋವಜ) ಗುಣಸ್ವಭಾವ ಹಿನ್ನೆಲೆಯಲ್ಲಿ ಮತ್ತು ಪ್ರಾಚೀನ ಇಸ್ರಾಯೆಲ್ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕಿದೆ. ರೂತಳು ಮತ್ತು ಬೋವಜರ ನಡುವೆ ಅಸಹ್ಯ ಮತ್ತು ತಪ್ಪಾದದ್ದೇನು ನಡೆಯಲಿಲ್ಲ. ನೊವೊಮಿಯು ತನ್ನ ಮತ್ತು ತನ್ನ ಸೊಸೆಯಾದ ರೂತಳ ಕಷ್ಟವನ್ನು ನೋಡಿ, ಮೋಶೆಯ ಧರ್ಮಶಾಸ್ತ್ರನುಸಾರವಾಗಿ (2:20, 3:2) ಸಮೀಪಬಂಧುವಿನ ಸಹಾಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದಳು. ಇದಕ್ಕಿರುವ ಒಂದು ಮಾರ್ಗವೆಂದರೆ ರೂತಳು ಗೃಹಿಣಿಯಾಗಿ ಸುಖದಿಂದಿರಲು ಆಕೆಗೊಂದು ಮನೆಯನ್ನು ಹುಡುಕುವುದಾಗಿತ್ತು (3:1)

ರೂತಳೊಬ್ಬ ಗುಣವತಿಯಾದ ಸ್ತ್ರೀ ಮತ್ತು ನೊವೊಮಿಯ ಸಲಹೆಯನ್ನು ಪಾಲಿಸುವುದರಿಂದ ಅವಳ ಗುಣ ನಡೆತೆಗೆ ದೋಷ ಹತ್ತುವುದಿಲ್ಲವೆಂದು ಇಡೀ ಬೆತ್ಲೆಹೆಮಿಗೆ ತಿಳಿದಿತ್ತು. ರೂತಳ ಹೆಸರು ನಿಷ್ಕಳಂಕವಾಗಿತ್ತು.

ಬೋವಜನು ಧನವಂತ (ದಯಾಳು)ನಾದ ವ್ಯಕ್ತಿಯಾಗಿದ್ದ (2:1), ಅಲ್ಲದೆ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದು ರೂತಳ ಪುಸ್ತಕದುದ್ದಕ್ಕೂ ಆತನು ಪ್ರಾಮಾಣಿಕನಾಗಿ ನಡೆದುಕೊಳ್ಳುವುದನ್ನು ಕಾಣಬಹುದು. ಹಾಗಾಗಿ ಈ ಅಧ್ಯಾಯದಲ್ಲಿ ನಡೆದ ಘಟನೆಗಳನ್ನು ನಮ್ಮ ದಕ್ಷಿಣ ಭಾರತದ ಸಂಸ್ಕೃತಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಬಾರದು, ಆದರೆ ಇದನ್ನು ಪ್ರಾಚೀನ ಇಸ್ರಾಯೆಲ್ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು.

ಆದರೆ ಬೋವಜನು ಚಾಡಿ (ಹರಟೆ) ಮತ್ತು ಕೆಟ್ಟಮಾತುಗಳಿಂದ ಜಾಗೂರಕನಾಗಿರುವುದನ್ನು ನಾವು ಕಾಣಬಹುದು. ಹಾಗಾಗಿ ರೂತಳನ್ನು ಯಾರೂ ನೋಡುವುದಕ್ಕಿಂತ ಮೊದಲು ಇನ್ನೂ ಕತ್ತಲೆಯಿರುವಾಗಲೇ ಹೋಗಬೇಕೆಂದು ಆಕೆಗೆ ಹೇಳಿದನು (ವ. 14).

ಆ ರಾತ್ರಿ ಧಾನ್ಯ ಒಕ್ಕುವ ಕಣದಲ್ಲಿ ರೂತಳು ಮತ್ತು ಬೋವಜರ ನಡುವೆ ಎರಡು ಸಾಂಕೇತಿಕ ಕ್ರಿಯೆಗಳು ನಡೆದವು. ಮೊದಲನೇಯದಾಗಿ, ರೂತಳು ಬೋವಜನ ಕಾಲುಗಳ ಮೇಲಿನ ಹೊದಿಕೆಯನ್ನು ತೆಗೆದುಬಿಟ್ಟು ಅಲ್ಲೆ ಮಲಗಿದಳು (ವ. 4, 7). ಈ ರೀತಿ ಮಾಡುವುದರಿಂದ ಒಬ್ಬ ಸಮೀಪಬಂಧುವಾಗಿ ಬೋವಜನು ಮಾಡಬೇಕಾದ ಕಾರ್ಯವೇನೆಂಬುದನ್ನು ರೂತಳು ಜ್ಞಾಪಿಸುವುದಾಗಿತ್ತು. ಎರಡನೇಯದಾಗಿ ಬೋವಜನ ಬಳಿಯಲ್ಲಿ ಆತನ ಹೊದಿಕೆಯ ಅಂಚನ್ನು ತನ್ನ ಮೇಲೆ ಹಾಕು ಎಂದಳು (ವ. 9). ಈ ರೀತಿ ಮಾಡುವುದರಿಂದ ಒಬ್ಬ ಸಮೀಪಬಂಧುವಾಗಿ ಬೋವಜನ ಸಂರಕ್ಷಣೆಯನ್ನು (ಭಾದ್ಯತೆ) ರೂತಳು ಕೇಳಿಕೊಳ್ಳುತ್ತಾಳೆ.

ಕೆಲವು ಸತ್ಯವೇದ ಪಂಡಿತರು ಈ ವಾಕ್ಯಭಾಗವನ್ನು ಒಂದು ಮದುವೆಯ ಬೇಡಿಕೆಯೆಂಬುದಾಗಿ ಓದುತ್ತಾರೆ (ಹೋಲಿಸಿ. ಯೆಹೆಜ್ಕೇಲ 16:8 ರಲ್ಲಿ ದೇವರು ಇಸ್ರಾಯೇಲಿಗೆ ಈ ರೀತಿ ಹೇಳುತ್ತಾನೆ "ನಾನು ಹಾದು ಹೋಗುತ್ತ ನಿನ್ನನ್ನು ನೋಡಲು ಇಗೋ, ನೀನು ಮದುವೆಗೆ ಸಿದ್ದಳಾಗಿದ್ದಿ, ಆಗ ನಾನು ನನ್ನ ಹೊದಿಕೆಯ ನೆರಿಗೆಯನ್ನು ನಿನ್ನ ಮೇಲೆ ಹಾಕಿ ನಿನ್ನ ಮಾನವನ್ನು ಕಾಪಾಡಿದೆನು, ಇದಲ್ಲದೆ ನಾನು ನಿನಗೆ ಮಾತು ಕೊಟ್ಟು ಒಡಂಬಡಿಕೆ ಮಾಡಿಕೊಂಡದ್ದರಿಂದ ನೀನು ನನ್ನವಳಾದಿ ಇದು ಕರ್ತನಾದ ಯಹೋವನ ನುಡಿ).

## ಪ್ರಶ್ನೆಗಳು

1. ಆ ರಾತ್ರಿಗಾಗಿ ರೂತಳು ಹೇಗೆ ಸಿದ್ಧಳಾಗಬೇಕೆಂದು ನೊವೊಮಿಯು ಆಕೆಗೆ ಹೇಳಿದಳು? ಈ ಸಿದ್ಧತೆಗೆ ಕಾರಣವೇನಿರಬಹುದು?
2. ರಾತ್ರಿಯಲ್ಲಿ ತನ್ನ ನಿದ್ದೆಯ ಸಮಯದಲ್ಲಿ ಬೋವಜನು ಹೇಗೆ ಗಲಿಬಿಲಿಗೊಂಡನು?
3. ಆತನ ಹೊದಿಕೆಯ ಅಂಚನ್ನು ತನ್ನ ಮೇಲೆ ಹಾಕಬೇಕೆಂದು ರೂತಳ ಬೇಡಿಕೆಗೆ ಬೋವಜನು ಹೇಗೆ ಪ್ರತಿಕ್ರಯಿಸಿದನು? ''ಈಗ ನಿನ್ನ ಪತಿ ಭಕ್ತಿಯು ಮುಂಚೆಗಿಂತ ವಿಶೇಷವಾಗಿ ಪ್ರತ್ಯಕ್ಷವಾಯಿತು (ವ. 10) ಎಂಬ ಆತನ ಹೇಳಿಕೆಯು ಏನನ್ನು ಸೂಚಿಸುತ್ತದೆಂದು ನೀವು ಯೋಚಿಸುವಿರಿ?
4. ತಮ್ಮ ಸಂಬಂಧದ ಬಗ್ಗೆ ಬೋವಜನು ರೂತಳಿಗೆ ಏನೆಂದು ಹೇಳಿದನು?
5. ಬೋವಜನೊಂದಿಗಿನ ಆಕೆಯ ಆ ರಾತ್ರಿಯ ಬಗ್ಗೆ ರೂತಳೊಂದಿಗೆ ನೊವೊಮಿಯು ಹೇಗೆ ಪ್ರತಿಕ್ರಿಯಿಸಿದಳು?

6. ಈ ಅಧ್ಯಾಯದಲ್ಲಿ ಬೋವಜನು ಎಂಥವನೆಂಬುದಾಗಿ ಗುರುತಿಸಿಬಹುದು?
7. ಈ ಅಧ್ಯಾಯದಲ್ಲಿ ನೊವೊಮಿಯು ಎಂಥವಳೆಂಬುದಾಗಿ ಗುರುತಿಸಿಬಹುದು?
8. ಈ ಅಧ್ಯಾಯದಲ್ಲಿ ರೂತಳು ಎಂಥವಳೆಂಬುದಾಗಿ ಗುರುತಿಸಬಹುದು?

# ಅಧ್ಯಯನ 4: ಬೋವಜನು ರೂತಳನ್ನು ವಿವಾಹವಾಗುವುದು, ಅಧ್ಯಾಯ 4

## ವಿವರಣೆಗಳು

ಪ್ರಾಚೀನ ಇಸ್ರಾಯೇಲಿನಲ್ಲಿ ಊರಬಾಗಿಲು ಶಾಂತಿಯ ಸಮಯಗಳಲ್ಲಿ ಪಟ್ಟಣ ಜೀವಿತಕ್ಕೆ ಕೇಂದ್ರವಾಗಿತ್ತು (ವ. 1). ಅಲ್ಲಿಯೇ ಹಿರಿಯರು ನ್ಯಾಯವನ್ನು ತೀರಿಸುತ್ತಿದ್ದರು, ಅಲ್ಲಿಯೇ ವ್ಯಾಪಾರ ವಹಿವಾಟು ನಡೆಯುತ್ತಿತ್ತು ಮತ್ತು ವ್ಯಾಪಾರಿಗಳು ತಮ್ಮ ಉದ್ದಿಮೆಯನ್ನು ಅಲ್ಲಿಯೆ ನಡೆಸುತ್ತಿದ್ದರು. ಹಗಲಿನ ವೇಳೆಯಲ್ಲಿ ಹೆಚ್ಚಿನ ಜನರೆಲ್ಲರು ಆ ಊರಭಾಗಲಿನ ಮೂಲಕವೆ ಹಾದುಹೋಗುತ್ತಿದ್ದರು ಮತ್ತು ಸಾಕ್ಷಿಗಳು ಅಲ್ಲಿ ಸುಲಭವಾಗಿ ಸಿಗುತ್ತಿದ್ದರು (ವ. 11). ಬೋವಜನು ತನ್ನ ಸ್ಪರ್ಧಿಯು ಊರಬಾಗಲಿನ ಬಳಿಗೆ ಬರುತ್ತಿರುವುದನ್ನು ಕಂಡಕೂಡಲೇ, ಎಲ್ಲರ ಹೇಳಿಕೆಯನ್ನು ಪಡೆದು, ಎಲೀಮೆಲೆಕನ ಕುಟುಂಬದಲ್ಲಿರುವ ಸ್ತ್ರೀಯರಿಗೆ ಸಂರಕ್ಷಕರಾಗಿ ಅಥವಾ ಬಾಧ್ಯಸ್ಥರಾಗಿ ಯಾವ ಸಮೀಪಬಂಧು ಇರಬೇಕೆಂಬುದನ್ನು ತೀರ್ಮಾನಿಸಲು ಹತ್ತುಮಂದಿ ಹಿರಿಯನ್ನು ಕೂಡಿಸುತ್ತಾನೆ (ವ. 23).

ನೊವೊಮಿಯು ತನ್ನ ಸತ್ತುಹೋದ ಗಂಡನಿಗೆ ಸೇರಿದ ಆಸ್ತಿಯನ್ನು ಮಾರುತ್ತಾಳೆಂಬುದರ ಬಗ್ಗೆ ಬೋವಜನು ಹೇಳುವುದನ್ನು ಎರಡು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು (ವ. 3). ಮೊದಲನೇಯದಾಗಿ ನೊವೊಮಿಗೆ ಆ ಆಸ್ತಿಯು ಬಾಧ್ಯತೆಯಾಗಿ ಬಂದಿತ್ತು ಮತ್ತು ಈಗ ಆಕೆಯು ಅದರ ಮಾಲೀಕಳಾಗಿದ್ದಳು, ಆದರೆ ಆಕೆಯು ಬಡವಳಾಗಿದ್ದಳು ಮತ್ತು ಹೊಲಕ್ಕಿಂತಲೂ ಹೆಚ್ಚಾಗಿ ಹಣದ ಅಗತ್ಯತೆಯಲ್ಲಿದ್ದಳು. ಹಾಗಾಗಿ ಜೀವನ ಸಾಗಿಸುವುದಕ್ಕಾಗಿ ತನ್ನ ಹೊಲವನ್ನು ಮಾರಲು ಬಯಸಿದಳು ಕುಟುಂಬದ ಹೊರಗಿನವರಿಗೆ ಮಾರುವುದಕ್ಕಿಂತ ಈ ಹೊಲವನ್ನು ಕೊಂಡುಕೊಳ್ಳುವುದು ಸಮೀಪಬಂಧುವಿನ ಕರ್ತವ್ಯವಾಗಿತ್ತು. ಎರಡನೇಯದಾಗಿ ನೊವೊಮಿಗೆ ಸ್ವಂತ ಆಸ್ತಿ ಇರಲಿಲ್ಲ ಇದು ಬೇತ್ಲೆಹೇಮಿನಿಂದ ಮೊವಾಬಿಗೆ ಕುಟುಂಬ ಸಮೇತ ಹೋಗುವುದಕ್ಕಿಂತ ಮೊದಲೇ ಆಕೆಯ ಗಂಡನಾದ ಎಲೀಮೆಲೆಕನಿಗೆ ಸೇರಿದ್ದಾಗಿತ್ತು. ನೊವೊಮಿಗೆ ಆ ಹೊಲವನ್ನು ಬಿಡಿಸಿಕೊಳ್ಳುವ ಮತ್ತು ತಿರುಗಿ ಕೊಂಡುಕೊಳ್ಳುವ ಹಕ್ಕಿತ್ತು, ಆದರೆ ಅದಕ್ಕಾಗಿ ನೊವೊಮಿಯಲ್ಲಿ ಹಣವಿರಲಿಲ್ಲ. ಹಾಗಾಗಿ ಅದನ್ನು ಸಮೀಪಬಂಧುವಿಗೆ ಮಾರಲು ಬಯಸಿದಳು (ವ. 3).

ಈ ಅಧ್ಯಾಯದಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ನಿಯೊಗ ವಿವಾಹ ಪದ್ಧತಿಯ ಬಗ್ಗೆ ನಾವು ತಿಳಿದುಕೊಳ್ಳಲೇಬೇಕು. ಇದೊಂದು ಪ್ರಾಚೀನ ಇಸ್ರಾಯೇಲ್ ಪದ್ಧತಿಯಾಗಿತ್ತು (ಇದನ್ನು ಉಳಿದ ರಾಷ್ಟ್ರಗಳಲ್ಲಿಯೂ ಸಹ ಕಾಣಬಹುದಾಗಿದೆ ಮತ್ತು ಈಗಲೂ ಸಹ ಇದು ಸಾಂಪ್ರದಾಯಿಕ ಯೆಹೂದ್ಯರಿಂದ ಆಚರಿಸಲ್ಪಡುತ್ತದೆ), ಇದು ಸತ್ತಂತ ತನ್ನ ಸಹೋದರನಿಗೆ ಬಾಧ್ಯಸ್ಥಿಕೆಯನ್ನು ಸಲ್ಲಿಸುವ ಸಲುವಾಗಿ ಆತನ ವಿಧವೆ ಪತ್ನಿಯನ್ನು ಒಬ್ಬ ಪುರುಷನು ಮದುವೆಯಾಗುವುದಾಗಿತ್ತು. ಈ ಪದ್ಧತಿಯು ಆದಿಕಾಂಡ 38ರಲ್ಲಿ ಯೆಹೂದನ ಮಗನಾದ ಓನಾನನು ಮತ್ತು ಆತನ ಅತ್ತಿಗೆಯಾದ ತಾಮರ(ಏರನ ಪತ್ನಿ)ಳ ಕುರಿತಾದ ಕಥೆಯಲ್ಲಿ ಕಂಡುಬರುತ್ತದೆ. *"ಯೆಹೂದನು ಓನಾನನಿಗೆ – ನೀನು ನಿನ್ನ ಅತ್ತಿಗೆಯನ್ನು ಮದುವೆ ಮಾಡಿಕೊಂಡು ಮೈದುನಧರ್ಮಕ್ಕೆ ಸರಿಯಾಗಿ ನಡೆದು ನಿನ್ನ ಅಣ್ಣನಿಗೆ ಸಂತತಿಯನ್ನು ಹುಟ್ಟಿಸು ಅಂದನು"* (ಆದಿ. 38:8). ಓನಾನನು ಈ ಕರ್ತವ್ಯವನ್ನು ನೆರವೇರಿಸಲಿಲ್ಲ, ಹಾಗಾಗಿ ತಾಮಾರಳು ಉಪಾಯಮಾಡಿ ತನ್ನ ಮಾವನಿಂದಲೇ ಗರ್ಭಿಣಿಯಾದಳು. ಅವರಿಗೆ ಹುಟ್ಟಿದ ಮಗನೇ ಪೆರಚ್. ಈ ಕಥೆಯು ರೂತಳ ಪುಸ್ತಕದಲ್ಲಿ ಸೂಚಿಸಲ್ಪಡುತ್ತದೆ (4:13). ನಿಯೊಗ ವಿವಾಹ ಪದ್ಧತಿಯು ಮೋಶೆಯ ಧರ್ಮಶಾಸ್ತ್ರದಲ್ಲಿ ಒಂದು ನಿಯಮವಾಗಿದೆ. *"ಅಣ್ಣ ತಮ್ಮಂದಿರು ಒಂದೇ ಕುಟುಂಬದಲ್ಲಿರುವಾಗ ಅಣ್ಣನು ಮಗನಿಲ್ಲದೆ ಸತ್ತರೆ ಅವನ ಹೆಂಡತಿ ಬೇರೆ ಪುರುಷನನ್ನು ಮದುವೆಯಾಗಬಾರದು. ಅವಳ ಮೈದುನ ಅವಳನ್ನು ಹೆಂಡತಿಯಾಗಿ ತೆಗೆದುಕೊಂಡು ಮೈಧುನ ಧರ್ಮವನ್ನು ನೆರವೇರಿಸಬೇಕು. ಅವಳಲ್ಲಿ ಹುಟ್ಟುವ ಚೊಚ್ಚಲುಮಗನು ಸತ್ತವನ ಮಗನೆಂದು ಎಣಿಸಲ್ಪಡಬೇಕು; ಹೀಗೆ ಆಗುವುದರಿಂದ ಸತ್ತವನ ಹೆಸರು ಇಸ್ರಾಯೆಲ್ಯರೊಳಗಿಂದ ನಾಶವಾಗಿ ಹೋಗುವುದಿಲ್ಲ"* (ಧರ್ಮೋ. 25:5–6). ರೂತಳ ವಿಷಯದಲ್ಲಿ – ಆಕೆಯನ್ನು ಮದುವೆಯಾಗುವುದು ಮತ್ತು ಆ ಮೂಲಕ ಸತ್ತುಹೋದ ಆಕೆಯ ಮಾವನಾದ ಎಲೀಮೆಲೆಕನ (ಬದುಕುಳಿದ ಆತನ ಹೆಂಡತಿಯಾದ ನೊವೊಮಿಯು ಮಕ್ಕಳನ್ನು ಹಡೆಯಲು ತೀರಾ ವಯಸ್ಸಾದವಳಾಗಿದ್ದಳು) ಮತ್ತು ಸತ್ತುಹೋದ ತನ್ನ ಗಂಡನಾದ ಮಹ್ಲೋನನ ಹೆಸರನ್ನು ಉಲಿಸಿಕೊಂಡು ಹೋಗುವ ಕರ್ತವ್ಯವು ಎಲೀಮೆಲೆಕನ ಸಮೀಪಬಂಧುವೊಬ್ಬನ ಮೇಲಿತ್ತು. ಬೋವಜನು ಎಲೀಮೆಲೆಕನ ಎರಡನೇ ರೀತಿ ಸಮೀಪಬಂಧುವಾಗಿದ್ದನು.

ಎಫ್ರಾತವು ಬೇತ್ಲೆಹೇಮಿನ ಸುತ್ತಣ ಇರುವ ಪ್ರದೇಶದ ಹೆಸರಾಗಿತ್ತು (ವ. 11). ಇಬ್ರಿಯದಲ್ಲಿ ಇದರರ್ಥ "ಫಲಭರಿತ ನೆಲ" ಎಂಬುದಾಗಿದೆ.

ಮೀಕನು ಮೆಸ್ಸೀಯನ ಉಗಮದ ಬಗೆಗಿನ ತನ್ನ ಪ್ರವಾದನೆಯಲ್ಲಿ ಈ ಹೆಸರನ್ನು ಉಪಯೋಗಿಸುತ್ತಾನೆ (ಮೀಕ 5:2). ಇದು ಅರಸನಾದ ಹೆರೋದನ ದಿನಗಳಲ್ಲಿ ಯೆರೂಸಲೇಮಿಗೆ ಯೇಸುವನ್ನು ನೋಡಲು ಮೂಡಣದಿಂದ ಜೋಯಿಸರು ಬಂದಾಗ ಹೆರೋದನ ಅಸ್ಥಾನದಲ್ಲಿನ ಶಾಸ್ತ್ರಿಗಳಿಂದ ಉಪಯೋಗಿಸಲ್ಪಟ್ಟಿದೆ (ಮತ್ತಾಯ 2:1–6).

## ಪ್ರಶ್ನೆಗಳು

1. ವಚನ 3ರಲ್ಲಿನ ಬೋವಜನ ಹೇಳಿಕೆಯನ್ನು (ನೊವೊಮಿಯು ಎಲೀಮೆಲೆಕನ ಪಾಲಿಗೆ ಬಂದ ಹೊಲವನ್ನು ಮಾರಿಬಿಡಬೇಕೆಂದಿರುತ್ತಾಳೆ) ಹೇಗೆ ಎರಡು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದೆಂದು ವಿವರಿಸಿರಿ, ನಿಮ್ಮದೇ ಪದಗಳನ್ನು ಉಪಯೋಗಿಸಿರಿ ಮತ್ತು ಕೇವಲ ಮೇಲಿನ ಟಿಪ್ಪಣಿಯನ್ನಷ್ಟೇ ಓದಬೇಡಿರಿ, ಇವೆರಡರಲ್ಲಿನ ಯಾವ ಸಾಧ್ಯತೆಗೆ ನೀವು ಪ್ರಾಶಸ್ತ್ಯ ಕೊಡುವಿರಿ, ಯಾಕೆ?
2. ಯಾಕೆ ಮೊದಲನೇಯ ಸಮೀಪಬಂಧುವು ತನ್ನ ಮನಸ್ಸನ್ನು ಬದಲಿಸಿಕೊಂಡನು? ಈತನ ಮನಸ್ಸಿನ ಬದಲಾವಣೆಯು ಬೋವಜನ ಕುರಿತು ನಮಗೆ ಏನನ್ನು ಹೇಳುತ್ತದೆ?
3. ಸಮೀಪಬಂಧುವಿನ ವ್ಯವಹಾರವು ವ್ಯವಸ್ಥಿತ(ಧೃಡಗೊಂಡಾಗ)ವಾಗುವಾಗ ಯಾರ್‍ಯಾರಿದ್ದರು?
4. ಆಸ್ತಿಯು ಕಾನೂನಾತ್ಮಕವಾಗಿ ಹೇಗೆ ವರ್ಗಾವಣೆಗೊಂಡಿತು?
5. ಊರು ಬಾಗಿಲ ಬಳಿಯಲ್ಲಿ ಹಿರಿಯರು ಮತ್ತು ಸಾಕ್ಷಿಗಳು ಬೋವಜನ ಮೇಲೆ ಮಾಡಿದ ಆಶೀರ್ವಾದವು ಸತ್ಯವೇದದಲ್ಲಿನ ಈ ಹಿಂದಿನ ವ್ಯಕ್ತಿಗಳ ಉಲ್ಲೇಖಗಳನ್ನು ಒಳಗೊಂಡಿದೆ, ಅವರು ಯಾರು?
6. ರೂತಳು ಮತ್ತು ಬೋವಜನ ಮಗನ ಜನನವನ್ನು ಗ್ರಂಥಕರ್ತನು ಹೇಗೆ ವ್ಯಕ್ತಪಡಿಸಿದ್ದಾನೆ?
7. ಸ್ತ್ರೀಯರು ನೊವೊಮಿಯನ್ನು ಆಶೀರ್ವದಿಸಿದರ ಮೂಲಕ ಓಬೇದ ಮತ್ತು ರೂತಳ ಬಗ್ಗೆ ನಾವೇನನ್ನು ಕಲಿಯುತ್ತೇವೆ? ಮತ್ತು ನೊವೊಮಿ ಮತ್ತು ಓಬೇದನ ನಡುವಿನ ಸಂಬಂಧವನ್ನು ಸ್ತ್ರೀಯರು ಹೇಗೆ ವ್ಯಕ್ತಪಡಿಸುತ್ತಾರೆ? ಈ ಸಂಬಂಧವನ್ನು ಹೇಗೆ ಅರ್ಥೈಸಿಕೊಳ್ಳಬೇಕು?
8. ಅರಸನಾದ ದಾವೀದನು ರೂತಳೊಂದಿಗೆ ಹೇಗೆ ಸಂಬಂಧ ಹೊಂದಿದ್ದಾನೆ?
9. ಹೊಸ ಒಡಂಬಡಿಕೆಯಲ್ಲಿ, ಮತ್ತಾಯ 1ರಲ್ಲಿ ಮತ್ತು ಲೂಕ 3ರಲ್ಲಿ ಇನ್ನೊಂದು ಯೇಸು ಕ್ರಿಸ್ತನ ವಂಶಾವಳಿಯನ್ನು ನಾವು ಕಾಣುತ್ತೇವೆ. ಇವುಗಳಲ್ಲಿನ ಯಾವ ವಂಶಾವಳಿ ರೂತಳ ಬಗ್ಗೆ ತಿಳಿಸುತ್ತದೆ?
10. ಈ ಅಧ್ಯಾಯದಲ್ಲಿ ಬೋವಜನ ಗುಣಸ್ವಭಾವವು ಹೇಗಿದೆಯೆಂದು ನಾವು ತಿಳಿಯಬಹುದು?

# ಅಧ್ಯಯನ 5: ರೂತಳ ಪುಸ್ತಕದಲ್ಲಿನ ಮೂರು ಮಾದರಿ ವ್ಯಕ್ತಿಗಳು

## ಪೀಠಿಕೆ

ರೂತಳ ಪುಸ್ತಕದ ಅಧ್ಯಯನದ ಅವಧಿಯಲ್ಲಿ ಇದರಲ್ಲಿನ ಮೂರು ವ್ಯಕ್ತಿಗಳಾದ ನೊವೊಮಿ, ರೂತಳು ಮತ್ತು ಬೋವಜನ ಬಗ್ಗೆ ಸುಮಾರು ತಿಳಿದಿದ್ದೇವೆ. ಅವರ ಲಿಂಗ, ವಯಸ್ಸು, ಸಾಂಸ್ಕೃತಿಕ ಹಿನ್ನೆಲೆ ಮತ್ತು ಸಾಮಾಜಿಕ ಸ್ಥಾನಮಾನಗಳಲ್ಲಿ ಭಿನ್ನತೆಯ ಹೊರತಾಗಿಯೂ ಒಂದು ಅಂಶ ಅವರಲ್ಲಿ ಸಾಮಾನ್ಯವಾಗಿತ್ತು. ಹಳೇ ಒಡಂಬಡಿಕೆಯ ಸಮಯದಲ್ಲಿ ಅವರು ದೇವಜನರ ಅತ್ಯುತ್ತಮವಾದ ಪ್ರತಿನಿಧಿಗಳಾಗಿದ್ದರು. ಇಸ್ರಾಯೇಲ್ ಇತಿಹಾಸದ ಕಷ್ಟಕರ ಮತ್ತು ಕಾರ್ಗತ್ತಲೆಯ ಅವಧಿಯಲ್ಲಿ ನೊವೊಮಿ, ರೂತಳು ಮತ್ತು ಬೋವಜರು ಪ್ರಾಮಾಣಿಕತೆ ಮತ್ತು ದೇವ ಭಯಭಕ್ತಿಯುಳ್ಳ ಜನರಾಗಿದ್ದರು. ನಾವು ಸಹ ಪ್ರಾಮಾಣಿಕ ಮತ್ತು ದೇವರಲ್ಲಿ ಭಯಭಕ್ತಿಯುಳ್ಳ ಜನರಾಗಬೇಕಾಗಿದೆ. ನಾವು ಸಹ ಮನುಕುಲದ ಕಷ್ಟಕರ ಮತ್ತು ಕಾರ್ಗತ್ತಲೆಯ ಅವಧಿಯಲ್ಲಿ ಜೀವಿಸುತ್ತಿದ್ದೇವೆ. ನಾವು ಸಹ ದೇವರ ರಾಜ್ಯದ ಒಳ್ಳೆಯ ಪ್ರತಿನಿಧಿಗಳಾಗಿರಬೇಕು.

ಹಾಗಾದರೆ ನೊವೊಮಿ, ರೂತಳ ಮತ್ತು ಬೋವಜರಿಂದ ನಾವು ಏನನ್ನು ಕಲಿಯಬಹುದು?

## ಗೃಹಕೆಲಸ

ನೊವೊಮಿ, ರೂತಳು ಅಥವಾ ಬೋವಜರ ಮೇಲೆ ಒಂದು ಪ್ರಬಂಧ ಬರೆಯಿರಿ. ಇದಕ್ಕೆ ಬೋವಜ (ನೊವೊಮಿ ಅಥವಾ ರೂತಳು) ನನಗೊಂದು ಮಾದರಿ ಎಂದು ಕರೆಯಿರಿ. ಈ ಹಿಂದಿನ ನಾಲ್ಕು ವಿಷಯಗಳನ್ನು ಉಪಯೋಗಿಸಿರಿ. ನಿಮ್ಮ ಈ ಪ್ರಬಂಧವು ಕೆಳಕಂಡ ಎರಡು ಭಾಗಗಳನ್ನು ಒಳಗೊಂಡಿರಬೇಕು:

ಭಾಗ 1: ನೀವು ಆರಿಸಿಕೊಂಡ ವ್ಯಕ್ತಿಯ ವರ್ಣನೆ/ ಚಿತ್ರಣ

ಭಾಗ 2: ಯಾವ ವಿಧದಲ್ಲಿ ಆ ವ್ಯಕ್ತಿಯು ನಿಮಗೆ ಮಾದರಿಯಾಗಿದ್ದಾರೆಂದು ವಿವರಣೆಯನ್ನು ನೀಡಿರಿ. ನಿಮ್ಮ ವಿವರಣೆಯು ಇಂದು ದಕ್ಷಿಣ ಭಾರತದಲ್ಲಿನ ವಿಶ್ವಾಸಿಯಾದ ನೀನು ಎದುರಿಸುತ್ತಿರುವ ಸಮಸ್ಯೆ ಮತ್ತು ವಿಷಯಗಳ ಮೇಲಿನ ಪ್ರಬಂಧವನ್ನು ಒಳಗೊಂಡಿರಬೇಕು.

ನಿಮ್ಮ ಪ್ರಬಂಧವನ್ನು ನಿಮ್ಮ ಸಹಪಾಠಿಗಳಿಗೆ ಕೊಡಿರಿ. ಇದನ್ನು ಈ ಕೋರ್ಸಿನ ಒಂದು ಭಾಗವಾಗಿ ಮಾಡಬಹುದು, ಅಥವಾ ಇದನ್ನು ಕಾಲೇಜಿನ ಧ್ಯಾನಸಂಬಂಧದೊಂದಿಗಾದರೂ ಮಾಡಬಹುದು.

# ದಾನಿಯೇಲನು – ಅಧ್ಯಯನಗಳು

# ದಾನಿಯೇಲ ಪುಸ್ತಕದ ಪರಿಚಯ

ನಿಸ್ಸಂಶಯವಾಗಿ ದಾನಿಯೇಲನು ಕ್ರೈಸ್ತ ಸಭೆಯ ಇತಿಹಾಸದಲ್ಲೆ ಒಬ್ಬ ಪ್ರಸಿದ್ದ ಸತ್ಯವೇದಿಯ ಮಾಧರಿಯಾಗಿದ್ದಾನೆ. ಈತನು ಬಹಳಷ್ಟು ವರ್ಷಗಳ ಹಿಂದೆ ನಮಗಿಂತ ಬಹಳ ವಿಭಿನ್ನವಾಗಿರುವ ಸಾಮಾಗಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ಜೀವಿಸಿದ್ದನು. ಇದರ ಹೊರತಾಗಿ ಇಂದು ದಕ್ಷಿಣಭಾರತದಲ್ಲಿ ಕ್ರಿಸ್ತೀಯ ನಂಬಿಕೆಯನ್ನು ತೋರಿಸಿಕೊಳ್ಳವ ನಾವು ಈತನ ಮಾದರಿಯಿಂದ ಕಲಿಯಲು ಬೇಕಾದಷ್ಟಿದೆ.

ಈ ಪುಸ್ತಕವು ಒಂದು ಜೀವನಚರಿತ್ರೆಯ ಭಾಗ (ಅಧ್ಯಾಯ 1–6) ಮತ್ತು ಒಂದು ದಾರ್ಶನಿಕ(ಪ್ರವಾದನ) ಭಾಗ(ಅಧ್ಯಾಯ 7–12) ಎಂಬ ಎರಡು ವಿಶಿಷ್ಟವಾದ ಭಾಗಗಳನ್ನೊಳಗೊಂಡಿದ್ದು ಈ ಅಧ್ಯಯನಗಳು ಕೇವಲ ದಾನಿಯೇಲ ಪುಸ್ತಕದ ಮೊದಲ ಆರು ಅಧ್ಯಾಯಗಳ ಬಗ್ಗೆ ತಿಳಿಸುತ್ತದೆ. ಪುಸ್ತಕದ ಮೂರನೇ ಅಧ್ಯಾಯವು ಹೆಚ್ಚಾಗಿ ದಾನಿಯೇಲನ ಕುರಿತದ್ದಲ್ಲ, ಆದರೆ ಇದು ಆತನ ನಿಖರ ಯಹೂದಿ ಸ್ನೇಹಿತರಾದ ಶದ್ರಕ್, ಮೆಶೆಕ್ ಮತ್ತು ಅಬೆದ್ನೆಗೊ ಕುರಿತಾದುದ್ದಾಗಿದೆ. ಇವರು ಅರಸನಾದ ನೆಬುಕದ್ನೆಚರನು ನಿಲ್ಲಿಸಿದ ಬಂಗಾರದ ಪ್ರತಿಮೆಗೆ ಅಡ್ಡಬೀಳಲು ನಿರಾಕರಿಸಿದ್ದರಿಂದ ಮರಣದಂಡನೆಗೆ ಗುರಿಯಾದವರು.

ದಾನಿಯೇಲನು ತನ್ನ ಜೀವಿತ ಕಾಲವನ್ನು ಹೆಚ್ಚಾಗಿ ಬಾಬೆಲಿನಲ್ಲೆ ಕಳೆದನು. ಈತನನ್ನು ಮತ್ತು ಇತರ ರಾಜವಂಶೀಯರನ್ನು ಯರುಸಲೇಮಿನಿಂದ ಬಾಬಿಲೋನಿಗೆ ಸೆರೆಯಾಳುಗಳಗಿ ತಂದಾಗ ದಾನಿಯೇಲನು ಹೆಚ್ಚು ಕಡಿಮೆ ಹದಿಹರೆಯವಾನಾಗಿದ್ದನು. ಇದು ಕ್ರಿ. ಪೂ. 605 ರಲ್ಲಿ ಸ್ವಲ್ಪ ಕಾಲ ಬಾಬಿಲೋನ್ ಸಾಮ್ರಾಜ್ಯವನ್ನಾಳಿದ ಸುಪ್ರಸಿದ್ದ ಅರಸನಾದ ನೆಬುಕದ್ನೆಚರನ ಆಳ್ವಿಕೆಯ ಆರಂಭದಲ್ಲಿ ಸಂಭವಿಸಿತು. ಹಾಗಾಗಿ ದಾನಿಯೇಲನು ಬಾಬಿಲೋನಿಗೆ ಸೆರೆಯಾಗಿ ಹೋದ ಮೊದಲ ಗುಂಪಿಗೆ ಸೇರಿದವನಾಗಿದ್ದಾನೆ.

ಮೊದಲ ಎರಡು ಅಥವಾ ಮೂರು ಕಥೆಗಳು ಯೌವ್ವನಸ್ಥನಾದ ದಾನಿಯೆಲನು ಮತ್ತು ಆತನ ಸ್ನೇಹಿತರು ಬಾಬೆಲಿನಲ್ಲಿನ ರಾಜಾಲಯದಲ್ಲಿ ತರಬೇತಿಯಲ್ಲಿದ್ದಾಗ ಸಂಭವಿಸುತ್ತವೆ. ರಾಜನು ಇದನ್ನು ಭವಿಷ್ಯದಲ್ಲಿ ಸಾಮ್ರಾಜ್ಯದಲ್ಲಿನ ಆಡಳಿತ ಸೇವೆಗಾಗಿ ಸಿದ್ದಪಡಿಸಲು ಬಯಸಿದನು.

ಒಬ್ಬ ಜ್ಞಾನಿಯಾಗಿ ಕನಸುಗಳ ಅರ್ಥವನ್ನು ತಿಳಿಸುವವನಾಗಿ ಮತ್ತು ಅರಸರುಗಳಿಗೆ ಸಲಹೆಗಾರನಾಗಿ ದಾನಿಯೇಲನು ಒಂದು ಅದ್ಭುತ ವೃತ್ತಿಯನ್ನು ಮಾಡಿದ್ದಾನೆ. ಬಾಬೆಲಿನ ಕಡೆಯ ಅರಸನೂ ಮತ್ತು ಚಕ್ರವರ್ತಿಯ ಮಗನೂ ಆದ ಬೆಲ್ಶೆಚ್ಚರನು ದಾನಿಯೇಲನನ್ನು ಇಡೀ ರಾಜ್ಯದ ಮೂವರು ಮಖ್ಯ ಅಧಿಕಾರಿಗಳ್ಳಿ ಒಬ್ಬನನ್ನಾಗಿ ಮಾಡಿದನು.

ಅನೇಕ ವರುಷಗಳ ನಂತರ ಪರ್ಷಿಯಾದ ಅರಸನಾದ ಕೋರೆಷನು ಬಾಬಿಲೋನನ್ನು ಆಕ್ರಮಿಸಿದಾಗ ದಾನಿಯೇಲನು ಇನ್ನೂ ಜೀವಂತವಾಗಿ–ಕ್ರಿಯಾಶೀಲನಾಗಿದ್ದನು. ಇದು ಕ್ರಿ. ಪೂ. 539ರಲ್ಲಿ ಸಂಭವಿಸಿತು. ಮತ್ತು ಅದಾದ ಕೆಲವು ವರ್ಷಗಳ ನಂತರ ಸಹ ಆತನು ದೇವರಿಂದ ಉಪಯೋಗಿಸಲ್ಪಟ್ಟನು(10;1). ಹಾಗಾಗಿ ತನ್ನ ಮರಣದ ಸಮಯದಲ್ಲಿ ಆತನು ಸರಿಸುಮಾರು ಎಂಬತ್ತರ ಅಸುಪಾಸಿನಲ್ಲಿದ್ದನು.

ದಾನಿಯೇಲನು ಯೆರುಸಲೇಮಿನಲ್ಲಿನ ತನ್ನ ಜೀವನದ ಪ್ರಾರಂಭದಿಂದಲೆ ಶ್ರೀಮಂತನಾಗಿದ್ದನು ಮತ್ತು ಬಾಬೆಲಿನ ರಾಜಾಲಯದಲ್ಲಿ ಒಂದು ವಿಶೇಷವಾದ ಜೀವಿತವನ್ನು ಜೀವಿಸಿದನು. ಅದಾಗ್ಯೂ ಆತನು ನಮ್ಮಂತೆ ವೈರಿಗಳ ಬೆದರಿಕೆ, ಶೋಧನೆಗಳು ಮತ್ತು ಇನ್ನಿತರ ಸವಾಲುಗಳನ್ನು ಎದುರಿಸಿದನು. ಇವೆಲ್ಲವುಗಳ ಮದ್ಯೆ ದಾನಿಯೇಲನು ಪರಲೋಕದಲ್ಲಿರುವ ತನ್ನ ದೇವರಿಗೆ ಮತ್ತು ಭೂಮಿಯ ಮೇಲೆ ಸೇವೆ ಮಾಡಲು ಕರೆಯಲ್ಪಟ್ಟ ಅರಸರಿಗೆ ನಂಬಿಗಸ್ತನಾಗಿದ್ದನು.

ಇಂದು ನಮಗೆ ದಾನಿಯೇಲನು ಒಬ್ಬ ಮಹಾನ್ ಮಾದರಿಯಾಗಿದ್ದಾನೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ.

# ಅಧ್ಯಯನ 1: ಬಾಬೆಲಿನಲ್ಲಿ ದಾನಿಯೇಲನ ತರಬೇತಿ, ಅಧ್ಯಾಯ 1

## ಟಿಪ್ಪಣಿಗಳು

ಐಗುಪ್ತ ಮತ್ತು ಅದರ ಮಿತ್ರರಾಷ್ಟ್ರಗಳೊಂದಿಗೆ ಹೋರಾಡಲು ತನ್ನ ಸೈನ್ಯದೊಂದಿಗೆ ಪಶ್ಚಿಮಕ್ಕೆ ಹೋದಾಗ ನೆಬೂಕದ್ನೆಚ್ಚರನು ಇನ್ನೂ ಬಾಬೆಲಿನ ಅರಸನಾಗಿರಲಿಲ್ಲ. ಇಂದಿನ ಸಿರಿಯಾ ದೇಶದಲ್ಲಿರುವ ಯೂಫ್ರೇಟೀಸ್ ನದಿಯ ಪೂರ್ವತೀರದ ಮೇಲಣ ಕಾರ್ಕೇಮಿಶ್ ಎಂಬ ಸ್ಥಳದಲ್ಲಿ ಒಂದು ನಿರ್ಣಾಯಿಕ ಯುದ್ಧ ನಡೆಯಿತು. ಐಗುಪ್ತದ ಫರೋಹ ನೆಕೋ ಈ ಯುದ್ಧದಲ್ಲಿ ಸೋಲನ್ನು ಅನುಭವಿಸಿದನು ಮತ್ತು ಯೆಹೂದವನ್ನು ಒಳಗೊಂಡು ಬಾಬೆಲ್ ವಿಸ್ತಾರವಾದಂತಹ ಸ್ಥಳದ ಮೇಲೆ ತನ್ನ ಹಿಡಿತವನ್ನು ಸಾಧಿಸಿತು. ಇದು ಕ್ರಿ.ಪೂ. 605ರಲ್ಲಿ ಸಂಭವಿಸಿತು. ಆ ಸಮಯದಲ್ಲಿ ಯೆಹೂದದ ಅರಸನಾಗಿದ್ದ ಯೆಹೋಯಾಕೀಮನು ಮೂರು ವರ್ಷಗಳ ಕಾಲ ನೆಬೂಕದ್ನೆಚ್ಚರನ ಅಧೀನನಾಗಿದ್ದನು (2 ಅರಸು 24:1). ಈ ಸಮಯದಲ್ಲಿ ಯೆರೂಸಲೇಮಿನಿಂದ ಬಾಬೆಲಿಗೆ ಸೆರೆಯಾಳಾಗಿ ಒಯ್ಯಲ್ಪಟ್ಟ ಮೊದಲ ಗುಂಪಿನಲ್ಲಿ ದಾನಿಯೇಲನಿದ್ದನು.

ನೆಬೂಕದ್ನೆಚ್ಚರನು ಕ್ರಿ.ಪೂ. 605–562ರವರೆಗೆ ಬಾಬೆಲಿನ ಅರಸನಾಗಿದ್ದನು. ಈತನು ಪುನಃ ಕ್ರಿ.ಪೂ. 597ರಲ್ಲಿ ಯೆರೂಸಲೇಮಿಗೆ ಮುತ್ತಿಗೆ ಹಾಕಿದನು. ಹಾಗೂ ಅರಸನಾದ ಯೆಹೋಯಾಕೀಮನನ್ನು ಮತ್ತು ಪ್ರವಾದಿಯಾದ ಯೆಹೆಜ್ಕೇಲರನ್ನು ಒಳಗೊಂಡು ಅನೇಕರನ್ನು ಬಾಬೆಲಿಗೆ ಸೆರೆಯಾಳಾಗಿ ತೆಗೆದುಕೊಂಡುಹೋದನು. ಕಡೆಯದಾಗಿ ಈತನು ಇಡೀ ಯೆರೂಸಲೇಮ್ ಪಟ್ಟಣವನ್ನು ಮತ್ತು ದೇವಾಲಯವನ್ನು ಕ್ರಿ.ಪೂ. 586ರಲ್ಲಿ ನಾಶಗೊಳಿಸಿದನು. ಈ ಸಮಯದಲ್ಲಿ ಮೂರನೇ ಗುಂಪು ಅಷ್ಟೇ ಅಲ್ಲದೆ ಯೆರೂಸಲೇಮಿನ ದೇವಾಲಯದಲ್ಲಿನ ಎಲ್ಲಾ ಸಂಪತ್ತನ್ನು ಬಾಬೆಲಿಗೆ ಒಯ್ಯಲಾಯಿತು.

ದಾನಿಯೇಲನು ಮತ್ತು ಆತನ ಮೂರು ಯೌವನಸ್ಥ ಇಸ್ರಾಯೇಲ್ ಸ್ನೇಹಿತರಾದ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ ಅವರು ನೆಬೂಕದ್ನೆಚ್ಚರನ ರಾಜಾಲಯದಲ್ಲಿ ಆಹಾರ ಮತ್ತು ಪಾನಗಳ ಎರಡು ಸಮಸ್ಯೆಗಳನ್ನು ಎದುರಿಸಿದರು. ಮೊದಲನೇಯದು – ಆಹಾರ ಮತ್ತು ದ್ರಾಕ್ಷಾರಸವನ್ನು ರಾಜನ ಆಸ್ಥಾನದ ಮೇಜಿನ ಮೇಲೆ ಇಡುವುದಕ್ಕಿಂತ ಮೊದಲು ಆಹಾರ ಮತ್ತು ಪಾನದ ಒಂದು ಭಾಗವನ್ನು ಅವರ ದೇವರುಗಳಿಗೆ ಯಜ್ಞವಾಗಿ ಅರ್ಪಿಸುವುದು ಆ ಕಾಲದಲ್ಲಿನ ಅರಸರ ಒಂದು ಪದ್ಧತಿಯಾಗಿತ್ತು. ಭಕ್ತಿಯುಳ್ಳ ಒಬ್ಬ ಇಸ್ರಾಯೇಲನು ಈ ಪದ್ಧತಿಯನ್ನು ವಿಗ್ರಹಾರಾಧನೆ ಮತ್ತು ಆತ್ಮೀಕ ಹೊಂದಾಣಿಕೆಯೆಡೆಗಿನ ಮೊದಲ ಹೆಜ್ಜೆ ಎಂಬುದಾಗಿ ಪರಿಗಣಿಸುತ್ತಿದ್ದನು. ಹಾಗಾಗಿ ದಾನಿಯೇಲನು ಇಸ್ರಾಯೆಲ್ಯರಿಗೆ ದ್ರಾಕ್ಷಾರಸವು ಒಂದು ಕುಡಿಯಲು ಯೋಗ್ಯವಾದ ಪಾನವಾಗಿದ್ದರೂ ರಾಜನ ದ್ರಾಕ್ಷಾರಸದ ಬದಲಾಗಿ ಬರಿ ನೀರನ್ನು ಕೇಳಿದನು.

ಎರಡನೇಯದಾಗಿ – ಅರಸನ ಆಹಾರ ಮತ್ತು ಭೋಜನ ಪದಾರ್ಥಗಳೆಲ್ಲವು ಮೋಶೆಯ ಧರ್ಮಶಾಸ್ತ್ರದಲ್ಲಿ ನಿಷೇಧಿಸಲಾದ ಹಂದಿಯ ಮಾಂಸ ಒಂಟೆಯ ಮಾಂಸವನ್ನು ಒಳಗೊಂಡಿರುತಿತ್ತು (ಯಾಜಕ. 11:2–8 ರಲ್ಲಿ ಹಂದಿ ಮಾಂಸವನ್ನು ಮತ್ತು ಒಂಟೆಯ ಕಾಲು ಗೊರಸು ಸೀಳಿಲ್ಲದ ಕಾರಣ ಇವುಗಳನ್ನು ಅಶುದ್ಧವೆಂದು ಪರಿಗಣಿ ನಿಷೇಧಿಸಲಾಗಿತ್ತು).

ದಾನಿಯೇಲನು ಕೇಳಿದ ಕಾಯಿಪಲ್ಯದ ಆಹಾರವನ್ನು ಅರಸರುಗಳು ಊಟಮಾಡುತ್ತಿರಲಿಲ್ಲ, ಹಾಗಾಗಿ ಇದನ್ನು ವಿಗ್ರಹಗಳ ಮುಂದೆ ಇಡುತ್ತಿರಲಿಲ್ಲ.

ಗ್ರಂಥಕರ್ತನು ತನ್ನ ಓದುಗರಿಗೆ ಬಾಬೆಲ್ ರಾಜಾಲಯದ ಒಂದು ಅತ್ಯಾಕರ್ಷಕ ಚಿತ್ರಣವನ್ನು ಮುಂದಿಡುತ್ತಿದ್ದಾನೆ. ನೆಬೂಕದ್ನೆಚ್ಚರನ ಯಶಸ್ಸಿನ ಸೇನಾಕಾರ್ಯಚಾರಣೆಯು ಮುಗಿದಿತ್ತು. ಇನ್ನು ಮುಂದೆ ಆಂತರಿಕ ವಿಷಯಗಳ ಮೇಲೆ ಗಮನಹರಿಸುವುದಾಗಿತ್ತು, ಹಾಗಾಗಿ ಈತನು ತನ್ನ ಅಗಾಧವಾದ ಸಾಮ್ರಾಜ್ಯದ ಆಡಳಿತದಲ್ಲಿ ತಾನು ಜಯಿಸಿಕೊಂಡು ಬಂದ ದೇಶದ ರಾಜಕುಮಾರನ್ನು ಮತ್ತು ಪ್ರಧಾನರಾದ ಯುವಕರೆಲ್ಲರನ್ನು ಭವಿಷ್ಯದ ಆಸ್ಥಾನಿಕರನ್ನಾಗಿ ತರಬೇತಿಗೊಳಿಸಲು ಒಂದು ವಿದ್ಯಾಲಯವನ್ನು ಸ್ಥಾಪಿಸಿದನು. ಈ ಒಂದು ವಿಶೇಷವಾದ ತರಬೇತಿಯ ಕಾರ್ಯದಲ್ಲಿ ದಾನಿಯೇಲನು ಮತ್ತು ಆತನ ಮೂರು ಜನ ಸ್ನೇಹಿತರು ಆಯ್ಕೆಯಾಗಿದ್ದರು.

## ಪ್ರಶ್ನೆಗಳು

1. ಯೆಹೋಯಾಕೀಮನಿಗೆ ಏನಾಯಿತೆಂಬುದನ್ನು ಗ್ರಂಥಕರ್ತನು ಹೇಗೆ ವಿವರಿಸುತ್ತಿದ್ದಾನೆ?
2. ನೆಬೂಕದ್ನೆಚ್ಚರನು ಯೆರೂಸಲೇಮಿನ ದೇವಾಲಯದಿಂದ ತಂದ ಪಾತ್ರೆಗಳನ್ನು ಏನು ಮಾಡಿದನು?
3. ಅರಸನಾದ ನೆಬೂಕದ್ನೆಚ್ಚರನು ತನ್ನಲ್ಲಿ ತರಬೇತಿ ಪಡೆಯುವವರಲ್ಲಿ ಅಪೇಕ್ಷಿಸಿದ ಅರ್ಹತೆಗಳಾವುವು?
4. ಅಶ್ಪೆನಜನು ಯಾರು? ಮತ್ತು ಇಸ್ರಾಯೇಲಿನ ಯೌವ್ವನಸ್ಥರೊಂದಿಗೆ ಈತನು ಏನು ಮಾಡಬೇಕೆಂದು ನೆಬೂಕದ್ನೆಚ್ಚರನು ಅಪೇಕ್ಷಿಸಿದನು ಮತ್ತು ಯಾವ ಉದ್ದೇಶಕ್ಕಾಗಿ?

5. ದಾನಿಯೇಲನು ಮತ್ತು ಆತನ ಸ್ನೇಹಿತರು ವಿಭಿನ್ನವಾದ ಆಹಾರವನ್ನು ಯಾಕೆ ಕೇಳಿಕೊಂಡರು?

6. ಈ ಬೇಡಿಕೆಗೆ ಅಶ್ಪೆನಜನ ಪ್ರತಿಕ್ರಿಯೆಯನ್ನು ಗ್ರಂಥಕರ್ತನು ಹೇಗೆ ವಿವರಿಸುತ್ತಾನೆ?

7. ದಾನಿಯೇಲ ಮತ್ತು ಬಾಬೆಲಿನ ವಿಚಾರಕನ ನಡುವೆ ಯಾವ ಹೊಂದಾಣಿಕೆಯಾಯಿತು?

8. ಆಹಾರದ ವಿಚಾರದೊಂದಿಗೆ ದಾನಿಯೇಲನು ವ್ಯವಹರಿಸಿದ ರೀತಿಯನ್ನು ವಿಶ್ಲೇಷಿಸಿರಿ.

9. ದಾನಿಯೇಲನು ಮತ್ತು ಆತನ ಸ್ನೇಹಿತರು ತಮ್ಮ ವಿದ್ಯಾಭ್ಯಾಸದಲ್ಲಿ ತೋರಿದ ಪ್ರಗತಿಯನ್ನು ಗ್ರಂಥಕರ್ತನು ಹೇಗೆ ವಿವರಿಸುತ್ತಾನೆ?

10. ದಾನಿಯೇಲನುಬಾಬೆಲಿನ ಆಸ್ಥಾನದಲ್ಲಿ ಎಷ್ಟುಕಾಲ ಸೇವೆಸಲ್ಲಿಸಿದನು?

11. ಈ ಅಧ್ಯಯದಲ್ಲಿ ದಾನಿಯೇಲನ ಸ್ಥಾನದಲ್ಲಿ ನಿಮ್ಮನ್ನಿಟ್ಟುಕೊಳ್ಳಿರಿ. ವಚನ 3, ವಚನ 8, ವಚನ 15 ಮತ್ತು 20ರಲ್ಲಿ ಈ ಹದಿಹರೆಯದ ಇಸ್ರಾಯೇಲನಿಗೆ ಏನು ಅನ್ನಿಸಿರಬಹುದೆಂದು ವಿವರಿಸಿರಿ.

12. ದಾನಿಯೇಲನು ಮತ್ತು ಆತನ ಸ್ನೇಹಿತರು ಅವರ ತರಬೇತಿ ಕಾರ್ಯಕ್ರಮವನ್ನಾಗಲಿ ಅದರ ಸಾಂಸ್ಕೃತಿಕ ವಿಷಯ ಅಥವಾ ಅದರ ಗುರಿ (ಉದ್ದೇಶ)ವನ್ನಾಗಲಿ ಪ್ರಶ್ನಿಸಲಿಲ್ಲ. ಆದರೆ ಅವರು ರಾಜನ ಆಹಾರ ಮತ್ತು ಪಾನದಲ್ಲಿ ಪಾಲುಗಾರರಾಗಲಿಲ್ಲ. ಇಂದು ದಕ್ಷಿಣ ಭಾರತದಲ್ಲಿನ ಕ್ರೈಸ್ತೀಯ ವಿಶ್ವಾಸಿಗಳಾದ ನಾವು ಯಾವ ಚಟುವಟಿಕೆಯಲ್ಲಿ ಭಾಗವಹಿಸಬೇಕು ಮತ್ತು ಯಾವ ಚಟುವಟಿಕೆಗೆ ಬೇಡ (ಇಲ್ಲ) ಎನ್ನಬೇಕೆಂಬುದನ್ನು ನಿರ್ಧರಿಸುವುದು ಹೇಗೆ?

13. ನಮ್ಮ ಜೀವಿತಗಳಲ್ಲಿ ಸತ್ಯವೇದದ ಮೌಲ್ಯಗಳಿಗೆ ಸವಾಲನ್ನು ಒಡ್ಡುವ ಪರಿಸ್ಥಿತಿಗಳು ಎದುರಾದಾಗ ಅವುಗಳನ್ನು ಹೇಗೆ ಪ್ರತಿಕ್ರಯಿಸಬೇಕೆಂಬುದರ ಕುರಿತು ದಾನಿಯೇಲನ ಮನೋವೃತ್ತಿ ಮತ್ತು ಕ್ರಿಯೆಯಿಂದ ನಾವು ಏನನ್ನು ಕಲಿಯಬಹುದಾಗಿದೆ?

14. ಈ ಅಧ್ಯಾಯದಲ್ಲಿ ದಾನಿಯೇಲನ ಗುಣಸ್ವಭಾವ ಮತ್ತು ನಡುವಳಿಕೆಯಿಂದ ಯಾವ ಅಂಶವು ನಿಮ್ಮ ಮೇಲೆ ಹೆಚ್ಚಾಗಿ ಪ್ರಭಾವ ಬೀರುತ್ತದೆ? ಯಾಕೆ? ನಿಮ್ಮ ಸ್ವಂತ ಜೀವನದಲ್ಲಿ ಈ ರೀತಿಯ ಗುಣವನ್ನು ಬೆಳೆಸಲು ನೀವೇನನ್ನು ಮಾಡಬಲ್ಲಿರಿ?

# ಅಧ್ಯಯನ 2: ಅರಸನಾದ ನೆಬೂಕದ್ನೆಚ್ಚರನ ಪ್ರತಿಮೆಯ ಕನಸು, ಅಧ್ಯಾಯ 2

## ಟಿಪ್ಪಣಿಗಳು

ತನ್ನ ತರಬೇತಿಯ ಎರಡನೇ ವರ್ಷದಲ್ಲಿರುವಾಗಲೆ (ಸುಮಾರು ಕ್ರಿ. ಪೂ. 604 ರಲ್ಲಿ ಅಲ್ಲದೆ ಇದು ನೆಬುಕದ್ನೇಚರನ ಆಳ್ವಿಕೆಯ ಎರಡನೇ ವರ್ಷವಾಗಿತ್ತು) ದಾನಿಯೇಲನು ವಿಶೇಷವಾದ ರೀತಿಯಲ್ಲಿ ರಾಜ್ಯದ ವ್ಯವಹಾರಗಳಲ್ಲಿ ತೊಡಗಿಸಿಕೊಂಡನು. ಇದು ಅರಸನ ಕೆಟ್ಟ ಕನಸಿನ ಪರಿಣಾಮದಿಂದ ಇದು ಉಂಟಾಯಿತು.

ಆ ಸಮಯದಲ್ಲಿ ಅರಸನಾದ ನೆಬೂಕದ್ನೆಚ್ಚರನು ಜಗತ್ತಿನ ಪ್ರಸಿದ್ಧ ರಾಜನಾಗಿದ್ದನು. ತನ್ನ ಸೇನಾ ದಂಡೆಯಾತ್ರೆಯ ಅವಧಿಯಲ್ಲಿ ಆತನು ಜಯಿಸಿದ ರಾಷ್ಟ್ರಗಳಿಂದ ಅಪಾರ ಪ್ರಮಾಣದ ಕಪ್ಪಗಳನ್ನು & ಸಾಕಷ್ಟು ಸಂಖ್ಯೆಯ ಸೆರೆಯಾಳುಗಳನ್ನು ಸಂಗ್ರಹಿಸಿದನು. ಇವೆಲ್ಲವನ್ನು ಬಾಬೆಲಿಗೆ ತರಲಾಗಿತ್ತು . ಈತನು ಆಳಿದ ಮತ್ತು ವಿಶಾಲ ಸಾಮ್ರಾಜ್ಯದಲ್ಲಿ ಆಡಳಿತ ನಡೆಸಿದ ಬಗ್ಗೆ ಇತಿಹಾಸಿಕ ದಾಖಲೆಗಳು ಒಂದು ರೀತಿಯ ಸಕಾರಾತ್ಮಕ ಚಿತ್ರಣವನ್ನು ಕೊಡುತ್ತವೆ.

ಈತನು ತನ್ನ ದೇಶವನ್ನು ಮರು ಐಕ್ಯಗೊಳಿಸಿ ತನ್ನ ಜನರಿಗೆ ನ್ಯಾಯವನ್ನು ಒದಗಿಸಿಕೊಟ್ಟನು. ಈತನು ಗೋಡೆಗಳು ಮತ್ತು ಯೂಫ್ರೇಟೀಸ್ ನದಿ ಬಳಿ ಬಂದರು, ಪಟ್ಟಣದ ಗೋಡೆಗಳು (ಉತ್ತರದಲ್ಲಿನ ಪ್ರಸಿದ್ಧ ಇಶ್ಥಾರ್ ಬಾಗಿಲು) ಮತ್ತು ಭವ್ಯವಾದ ಅರಮನೆಯನ್ನೊಳಗೊಂಡು ಬೃಹತ್ತಾದ ಕಟ್ಟಡಗಳ ಯೋಜನೆಯನ್ನು ಹಮ್ಮಿಕೊಂಡನು. ಅರಸನಾದ ನೆಬೂಕದ್ನೆಚ್ಚರನ ಆಸ್ಥಾನದಲ್ಲಿನ ವಿದ್ವಾಂಸರನ್ನು ಅಥವಾ ಪಂಡಿತ (ವ. 12, 12, 14, 18, 24, 27, 48) ರನ್ನು ಆತನ ಸಂಪುಟದವರೆಂಬುದಾಗಿ ಕಾಣಬಹುದು. ರಾಜ್ಯದ ವಿಷಯದಲ್ಲಿ ಅವರು ಸಲಹೆಗಾರರಾಗಿದ್ದರು. ಅಲ್ಲದೆ ಅವರು ಬಾಬೆಲಿನ ಧಾರ್ಮಿಕ ಪದ್ಧತಿಯೊಂದಿಗೆ ಸಂಬಂಧ ಹೊಂದಿದವರಾಗಿದ್ದರು. ಭವಿಷ್ಯವನ್ನು ಹೇಳುವ ಸಾಮಾರ್ಥ್ಯವುಳ್ಳವರೆಂಬುದಾಗಿ ಹೇಳಿಕೊಳ್ಳುತ್ತಿದ್ದರು. ತಾಂತ್ರಿಕವಾಗಿ ಅವರು ನಾಲ್ಕು ಗುಂಪುಗಳಾಗಿ ವಿಂಗಡಿಸಲ್ಪಟ್ಟಿದ್ದರು (ವ. 2). ಜೋಯಿಸರು, ಮಂತ್ರವಾದಿಗಳು, ಮಾಟಗಾರರು, ಮತ್ತು ಪಂಡಿತರು. ಅವರ ಕಾರ್ಯಗಳ ಬಗ್ಗೆ ನಮಗೇನು ಸ್ಪಷ್ಟವಾಗಿ ಗೊತ್ತಿಲ್ಲ, ಆದರೆ ಅವರೆಲ್ಲರೂ ಮಾಂತ್ರಿಕತೆಯಲ್ಲಿ ಆಳವಾಗಿ ಭಾಗಿಯಾಗಿದ್ದರು. ಈ ಅಧ್ಯಾಯದಲ್ಲಿ ದಾನಿಯೇಲನು ಈ ಮಂತ್ರ ವಿದ್ಯೆಯ ಪಂಡಿತರು ಉಪಯೋಗಿಸುವ ವಿಧಾನಗಳು ಮತ್ತು ತನಗೆ ನಿಜದೇವರಿಂದ ಪ್ರಕಟಿಸಲ್ಪಟ್ಟ ಸತ್ಯದ ಮೇಲಿನ ತನ್ನ ಸ್ವಂತ ನಂಬಿಕೆಯ ನಡುವೆ ಒಂದು ಸ್ಪಷ್ಟವಾದ ವ್ಯತ್ಯಾಸ ತೋರಿಸುವುದನ್ನು ನಾವು ಕಾಣಬಹುದು.

ಪ್ರಾಚೀನ ಮೆಸೊಪೊಟಾಮಿಯದಲ್ಲಿ ಕನಸುಗಳು ಮತ್ತು ಅದರ ವಿವರಣೆಯು ವಿಶಾಲವಾದ ಶಕುನದವರಿಗೆ ಮತ್ತು ಶಕುನಗಳ ಅರ್ಥವಿವರಣೆಗಾರರಿಗೆ ಸೇರಿದ್ದವು (ಬಲಿಕೊಟ್ಟ ಪ್ರಾಣಿಗಳಯ ಕೃತುಗಳಲ್ಲಿ ವಿಕಾರತೆಯನ್ನು ಓದುವುದು ಮತ್ತು ಹೊಗೆ, ನೀರಿನಲ್ಲಿನ ಎಣ್ಣೆ ಮತ್ತು ಪಕ್ಷಿಗಳ ಹಾರಾಟಗಳಲ್ಲಿನ ಆಕಾರ ಮತ್ತು ಮಾದರಿಗಳ ಅರ್ಥ ವಿವರಣೆ ಮಾಡುವುದು). ಕನಸುಗಳು ದೇವರುಗಳ ಲೋಕಕ್ಕೆ ಒಂದು ಬಾಗಿಲನ್ನು ತೆರೆಯುತ್ತವೆಂಬುದಾಗಿ ಯೋಚಿಸಲಾಗುತ್ತಿತ್ತು.

ಅರಸುಗಳ ಆಸ್ಥಾನದಲ್ಲಿನ ಪಂಡಿತರುಗಳಿಂದ ಬರೆಯಲ್ಪಟ್ಟ, ಬಾಬೆಲಿನ ಬಹಳಷ್ಟು ಸಂಖ್ಯೆಯ ಕನಸಿನ ಕೈಪಿಡಿಗಳನ್ನು ಪುರಾತತ್ವಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಅವುಗಳು ಕನಸುಗಳ ಮತ್ತು ಅವುಗಳ ಅರ್ಥಗಳ ಉದ್ದವಾದ ಪಟ್ಟಿಗಳನ್ನು ಒಳಗೊಂಡಿವೆ. ಹಾಗಾಗಿ ಕನಸುಗಳ ಅರ್ಥವನ್ನು ವಿವರಿಸುವುದು ಭವಿಷ್ಯದ ಬಗ್ಗೆ ತಿಳಿದುಕೊಳ್ಳುವ ಒಂದು ಪ್ರಾಮುಖ್ಯವಾದ ವಿಧಾನವಾಗಿತ್ತು. ದಾನಿಯೇಲನ ಪುಸ್ತಕದಲ್ಲಿ ಕನಸುಗಳು ಮತ್ತು ಅವುಗಳ ಅರ್ಥವಿವರಣೆಯು ಬಹು ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಗ್ರಂಥಕರ್ತನು (ಮತ್ತು ದಾನಿಯೇಲನು) ಕನಸುಗಳನ್ನು ದೇವರ ಗುಪ್ತವಾದ ಉದ್ದೇಶಗನ್ನೊಳಗೊಂಡಿರುವ ಮರ್ಮಗಳೆಂಬುದಾಗಿ ನೋಡುತ್ತಾನೆ, ಈ ಮರ್ಮಗಳನ್ನು ತನ್ನ ಸೇವಕನಾದ ದಾನಿಯೇಲನಿಗೆ ದೇವರು ಮಾತ್ರ ಪ್ರಕಟಿಸಬಲ್ಲನು (ವ. 18–19, 23).

ಪ್ರತಿಮೆಯು ನಾಲ್ಕು ಸಾಮ್ರಾಜ್ಯಗಳನ್ನು ಸೂಚಿಸುತ್ತದೆ. ಇದು ಬಾಬೆಲ್ ಸಾಮ್ರಾಜ್ಯದಿಂದ ಪ್ರಾರಂಭವಾಗಿ (ಬಂಗಾರದ ತಲೆ), ಅನಂತರ ಕ್ರಿ.ಪೂ. 539ರಲ್ಲಿ ಕೋರೆಷನಿಂದ ಸ್ಥಾಪನೆಗೊಂಡ ಪರ್ಷಿಯನ್ ಸಾಮ್ರಾಜ್ಯ (ಬೆಳ್ಳಿಯ ಎದೆ ಮತ್ತು ತೋಳುಗಳು), ಕ್ರಿ. ಪೂ. 330ರಲ್ಲಿ ಅಲೆಕ್ಸಾಂಡರ್ ಮಹಾಶಯನಿಂದ ಸ್ಥಾಪಿಸಲ್ಪಟ್ಟ ಗ್ರೀಕ್ ಸಾಮ್ರಾಜ್ಯ (ತಾಮ್ರದ ಹೊಟ್ಟೆ ಮತ್ತು ಸೊಂಟ), ಕ್ರಿ.ಪೂ. 27ರಲ್ಲಿ ಕೈಸರ ಔಗುಸ್ತನಿಂದ (ಅಗಸ್ಟಸ್ ಸೀಸರ್) ಸ್ಥಾಪನೆಗೊಂಡ ರೋಮನ್ ಸಾಮ್ರಾಜ್ಯ (ಕಬ್ಬಿಣದ ಕಾಲು, ಕಬ್ಬಿಣ ಮತ್ತು ಮಣ್ಣಿನ ಹೆಜ್ಜೆಗಳು, ಯೆರೂಸಲೇಮ್ ಮತ್ತು ಪ್ಯಾಲೆಸ್ತೇನಿನ ಮೇಲೆ ರೋಮನ್ನರ ಹಿಡಿತವು ಕ್ರಿ.ಪೂ. 63ರ ಹಿಂದಿನಿಂದಲೇ ಇರುತ್ತದೆ).

ಬಂಗಾರದಿಂದ ಬೆಳ್ಳಿಗೆ, ತಾಮ್ರದಿಂದ ಕಬ್ಬಿಣಕ್ಕೆ ಇಳಿಕೆಯಾಗಿರುವ ಲೋಹಗಳ ಮೌಲ್ಯವು ಪ್ರಭಲ ಸಾಮ್ರಾಜ್ಯಗಳ ದೊರೆಗಳ ಕಡಿಮೆಯಾಗುತ್ತಿರುವ ಬಲ ಮತ್ತು ಭವ್ಯತೆಯನ್ನು ಪ್ರತಿನಿಧಿಸುತ್ತದೆ (ವ. 39). ಲೋಹಗಳು ಪ್ರತಿ ಸಾಮ್ರಾಜ್ಯದೊಂದಿಗಿನ ಬಿರುಸು ಮತ್ತು ಸಹಿಷ್ಣುತೆಯ ಅಂಶವನ್ನು ಸೂಚಿಸುತ್ತವೆ.

ಆ ಪ್ರತಿಮೆಗೆ ಬಂದು ಬಡಿಯುವ ಬಂಡೆಯು ಎಂದಿಗೂ ಅಳಿಯದ ದೇವರ ರಾಜ್ಯವನ್ನು ಸೂಚಿಸುತ್ತದೆ. ಇದು ಈ ಹಿಂದಿನ ಎಲ್ಲಾ ರಾಜ್ಯಗಳನ್ನು ಜಜ್ಜಿ ಅವುಗಳಿಗೆ ಒಂದು ಅಂತ್ಯವನ್ನು ಕಾಣಿಸುವುದು ಮತ್ತು ಇದರ ಅಧಿಕಾರವು ಇಡೀ ಲೋಕದುದ್ದಕ್ಕೂ ವಿಸ್ತರಿಸಿಕೊಳ್ಳುವುದು. ಇದು ಎಂದೆಂದಿಗೂ ಇರುವುದು.

## ಪ್ರಶ್ನೆಗಳು

1. ನೆಬೂಕದ್ನೆಚ್ಚರನಿಗೆ ಯಾಕೆ ನಿದ್ರಿಸಲಾಗಲಿಲ್ಲ?
2. ಅರಸನು ತನ್ನ ಸಮಸ್ಯೆಯನ್ನು ಪರಿಹರಿಸಲು ಯಾರನ್ನು ಕರೆದನು?
3. ಬಾಬೆಲಿನ ಪಂಡಿತರಿಗೆ ನೆಬೂಕದ್ನೆಚ್ಚರನ ಕನಸಿನ ಅರ್ಥವನ್ನು ಯಾಕೆ ಹೇಳಲಾಗಲಿಲ್ಲ?
4. ತನ್ನ ವಿದ್ವಾಂಸರನ್ನು ಹೇಗೆ ಶಿಕ್ಷಿಸಬೇಕೆಂದು ರಾಜನು ತೀರ್ಮಾನಿಸಿದನು? ಅರ್ಯೋಕನು ಯಾರು?
5. ದಾನಿಯೇಲನಿಗೆ ಶಿಕ್ಷೆಯ ಬಗ್ಗೆ ಹೇಗೆ ತಿಳಿಯಿತು?
6. ದಾನಿಯೇಲನ ಪರಿಸ್ಥಿತಿಯಲ್ಲಿ ನಿಮ್ಮನ್ನು ಕಲ್ಪಿಸಿಕೊಳ್ಳಿರಿ. ನಿಮಗೆ ಇದುವರೆಗೂ ಏನೂ ತಿಳಿಯದಿರುವ ಕನಸಿನ ಅರ್ಥವನ್ನು ಹೇಳದೆ ಹೋದರೆ ನೀವು ಮರಣ ದಂಡನೆಯನ್ನು ಹೊಂದುವಿರೆಂದು ತಿಳಿದು ಬಂದಾಗ ಇಂಥ ಪರಿಸ್ಥಿತಿಯಲ್ಲಿ ನೀವು ಮತ್ತು ನಿಮ್ಮ ಹತ್ತಿರದ ಸ್ನೇಹಿತರು ಹೇಗೆ ಪ್ರತಿಕ್ರಿಯಿಸುವಿರಿ?
7. ಒಂದು ವೈಯಕ್ತಿಕ ಇಕ್ಕಟ್ಟಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದರ ಬಗ್ಗೆ ದಾನಿಯೇಲನ ಉದಾಹರಣೆಯಿಂದ (ಮಾದರಿ) ನಾವು ಏನನ್ನು ಕಲಿಯಬಹುದು (ವ, 14–18)?
8. ದಾನಿಯೇಲನ ಪ್ರಾರ್ಥನೆಯಲ್ಲಿ ದೇವರ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
9. ಅರ್ಯೋಕನು ದಾನಿಯೇಲನನ್ನು ಯಾಕೆ ರಾಜನ ಸನ್ನಿಧಿಗೆ ಕರೆದೊಯ್ದನು?
10. ಆತನ ಕನಸು ಯಾವುದರ ಕುರಿತಾಗಿದೆಯೆಂದು ದಾನಿಯೇಲನು ರಾಜನಿಗೆ ಹೇಳಿದನು?
11. ನಿಜವಾದ (ಸತ್ಯ) ದೇವರ ಬಗ್ಗೆ ಅರಸನಾದ ನೆಬೂಕದ್ನೆಚ್ಚರನು ಏನನ್ನು ತಿಳಿಯಬೇಕೆಂದು ದಾನಿಯೇಲನು ಅಪೇಕ್ಷಿಸಿದನು (ವ. 27–30)?
12. ರಾಜನು ತನ್ನ ಕನಸಿನಲ್ಲಿ ಕಂಡ ಪ್ರತಿಮೆಯನ್ನು ವರ್ಣಿಸಿರಿ. ಅದಕ್ಕೆ ಏನಾಯಿತು?
13. ರಾಜನು ತನ್ನ ಕನಸಿನಲ್ಲಿ ಕಂಡ ಬಂಡೆಯನ್ನು ವರ್ಣಿಸಿರಿ.
14. ಆ ಪ್ರತಿಮೆಯ ಅರ್ಥವೇನಾಗಿತ್ತು.
15. ಬಂಡೆ ಅರ್ಥವೇನಾಗಿತ್ತು.
16. ತನ್ನ ಕನಸಿನ ಕುರಿತಾದ ದಾನಿಯೇಲನ ಅರ್ಥವಿವರಣೆಗೆ ರಾಜನಾದ ನೆಬೂಕದ್ನೆಚ್ಚರನು ಹೇಗೆ ಪ್ರತಿಕ್ರಯಿಸಿದನು?
17. ನಿಮ್ಮ ವೈಯಕ್ತಿಕ ಬಿಕ್ಕಟ್ಟಿನೊಂದಿಗೆ ವ್ಯವಹರಿಸುವಾಗ ದೇವರ ಜ್ಞಾನ, ಅಧಿಕಾರ ಮತ್ತು ಶಕ್ತಿ(ಬಲ)ಯ ಬಗೆಗಿನ ತಿಳುವಳಿಕೆಯು ಹೇಗೆ ಬದಲಾಗುತ್ತದೆ?
18. ಈ ಅಧ್ಯಾಯದಲ್ಲಿ ದಾನಿಯೇಲನ ಆತ್ಮೀಕ ಬೆಳವಣಿಗೆ (ಪರಿಪಕ್ವತೆ)ಯ ನಾಲ್ಕು ಅಂಶಗಳನ್ನು ಕಾಣಬಹುದು;

    ಅ. ಇಕ್ಕಟ್ಟಿಗೆ ಪ್ರತಿಯಾಗಿ ಆತನ ಜ್ಞಾನ

    ಆ. ಸಮಸ್ಯೆಗೆ ಪ್ರತಿಯಾಗಿ ಆತನ ಪ್ರಾರ್ಥನೆ

    ಇ. ತನ್ನ ಜೀವನದಲ್ಲಿನ ದೇವರ ಕಾರ್ಯಕ್ಕೆ ಪ್ರತಿಯಾಗಿ ಆತನ ಸ್ತುತಿ–ಸ್ತೋತ್ರ

ನಿಮ್ಮ ಜೀವಿತದಲ್ಲಿ ಪರಿಪಕ್ವತೆಯ ಈ ಗುರುತುಗಳಲ್ಲಿ ಯಾವುದು ಅತಿಯಾಗಿ ಬೆಳವಣಿಗೆಯಾಗಿದೆ?

ತೀರಾ ಬಲಹೀನವಾದದ್ದು ಯಾವುದು? ನಿಮ್ಮ ಆತ್ಮೀಕ ಜೀವನದ ಈ ಬಲಹೀನ ಕ್ಷೇತ್ರವನ್ನು ಬಲಪಡಿಸಲು ನೀವು ಯಾವ ಸಮರ್ಪಕವಾದ ಹೆಜ್ಜೆಯನ್ನು ತೆಗೆದುಕೊಳ್ಳುವಿರಿ?

# ಅಧ್ಯಯನ 3: ಬಂಗಾರದ ಪ್ರತಿಮೆ ಮತ್ತು ಧಗಧಗನೆ ಉರಿಯುವ ಅವಿಗೆಯ ಚಿತ್ರಣ, ಅಧ್ಯಾಯ 3

## ಟಿಪ್ಪಣಿಗಳು

ನೆಬೂಕದ್ನೆಚ್ಚರನು ನಿಲ್ಲಿಸಿದ ಬಂಗಾರದಿಂದ ಪ್ರತಿಮೆಯು ಅಚ್ಚ ಬಂಗಾರದಿಂದ ಮಾಡಲ್ಪಟ್ಟಿದೆಂದರ್ಥವಲ್ಲ. ಬಂಗಾರದ ಲೇಪನದಿಂದ ಹೊದಿಸಲಾಗಿದ್ದ ಪ್ರತಿಮೆಯಾಗಿತ್ತು. ಈ ಪ್ರತಿಮೆಯು ಬಹುಶಃ ಮಾರ್ದುಕ್ (ಬಾಬೆಲಿನ ಮುಖ್ಯ ದೇವತೆ)ನ ಮಗನಾದ ನಾಬು ದೇವರನ್ನು ಪ್ರತಿಬಿಂಬಿಸುತ್ತದೆ. ಈ ದೇವರ ಹೆಸರನ್ನು ಅರಸನ ಹೆಸರಿನ ಮೊದಲ ಭಾಗದಲ್ಲೆ ಕಾಣಬಹುದು, "ನೆಬೂಕದ್ನೆಚ್ಚರ್ ಎಂದರೆ –"ನಾಬು, ನನ್ನ ಮಗನನ್ನು ರಕ್ಷಿಸು" (ಅಥವಾ "ನನ್ನ ಗಡಿ") ಎಂದರ್ಥವಾಗಿದೆ.

ದೂರಾ ಎಂಬುದು ಬಾಬೆಲಿನ ದಕ್ಷಿಣಕ್ಕೆ ಕೆಲವೆ ಕಿಲೋಮೀಟರ್ ದೂರವಿರುವ ಒಂದು ಸ್ಥಳವಾಗಿತ್ತು, ಈ ದಿನನಗಳಲ್ಲಿ ನಾವು ಇಲ್ಲಿ ದಿಬ್ಬಗಳ ಒಂದು ಸರಣಿಯನ್ನು ಕಾಣಬಹುದು (ಅಥವಾ ಗೋಡೆಗಳ ಆವರಣವನ್ನು ಸೂಚಿಸುವಂತಹದ್ದಾಗಿತ್ತು. ಇದನ್ನೇ ಬಾಬೆಲಿನಲ್ಲಿ ದೂರಾ ಎಂದರೆ ಏನು ಎಂಬುದನ್ನು ಹೇಳುವುದು). ಈ ಸ್ಥಳದಲ್ಲಿಯೇ ಪ್ರತಿಮೆಯನ್ನು ಇಡಲಾಗಿತ್ತು.

## ಪ್ರಶ್ನೆಗಳು

1. ರಾಜನಾದ ನೆಬೂಕದ್ನೆಚ್ಚರನು ತನ್ನ ಇಡೀ ಸಾಮ್ರಾಜ್ಯದ ಆಡಳಿತ ವರ್ಗವನ್ನೆಲ್ಲ ಯಾಕೆ ದೂರಾ ಬೈಲಿನಲ್ಲಿ ಸೇರಿಸಿದನು?
2. ಸಾರುವವರು ಸಕಲ ವಾದ್ಯಗಳ ಧ್ವನಿಯನ್ನು ಕೇಳಿದ ಕೂಡಲೆಏನನ್ನು ಮಾಡಬೇಕೆಂದು ಆಡಳಿತಗಾರರಿಗೆ ಹೇಳಿದರು?
3. ಇದಕ್ಕೆ ವಿಧೇಯರಾಗಲು ಒಪ್ಪದವರಿಗೆ ಏನಾಗುತ್ತದೆಂದು ಸಾರುವವರು ಹೇಳಿದರು?
4. ನೆಬೂಕದ್ನೆಚ್ಚರನ ಬಳಿಗೆ ಬಂದ ಪಂಡಿತರು ಶದ್ರಕ್, ಮೇಶಕ್, ಅಬೇದ್‌ನೆಗೋರ ವಿರುದ್ಧವಾಗಿ ಮಾಡಿದ ಆರೋಪವೇನು?
5. ಅರಸನು ಶದ್ರಕ್, ಮೇಶಕ್, ಅಬೇದ್‌ನೆಗೋರ ಮುಂದಿಟ್ಟ ಷರತ್ತೇನು?
6. ಅರಸನ ಷರತ್ತಿಗೆ ಶದ್ರಕ್, ಮೇಶಕ್, ಅಬೇದ್‌ನೆಗೋರವರು ಏನೆಂದು ಪ್ರತ್ಯುತ್ತರ ನೀಡಿದರು?
7. ಶದ್ರಕ್, ಮೇಶಕ್, ಅಬೇದ್‌ನೆಗೋರನ್ನು ಉರಿಯುವ ಆವಿಗೆಗೆ ಎತ್ತಿಹಾಕಿದಾಗ ಸೈನ್ಯದ ಶೂರರು ಸತ್ತದ್ದು ಯಾಕೆ?
8. ಉರಿಯುವ ಅವಿಗೆಯೊಳಗಿನ ನಾಲ್ಕನೇ ವ್ಯಕ್ತಿಯ ರೂಪವು ಹೇಗಿತ್ತು? ಈ ವ್ಯಕ್ತಿಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
9. ರಾಜನಾದ ನೆಬೂಕದ್ನೆಚ್ಚರನು ದೇವರಿಗೆ ಯಾಕೆ ಸ್ತೋತ್ರ ಮಾಡಿದನು?
10. ಶದ್ರಕ್, ಮೇಶಕ್, ಅಬೇದ್‌ನೆಗೋರ ದೇವರ ಬಗ್ಗೆ ರಾಜನು ಏನೆಂದು ಆಜ್ಞೆಯನ್ನು ಮಾಡಿದನು?
11. ಶದ್ರಕ್, ಮೇಶಕ್, ಅಬೇದ್‌ನೆಗೋರನ್ನು ರಾಜನು ಹೇಗೆ ಸನ್ಮಾನಿಸಿದನು?
12. ಶದ್ರಕ್, ಮೇಶಕ್, ಅಬೇದ್‌ನೆಗೋರರು ದೇವರ ಬಗ್ಗೆ ಹೊಂದಿದ್ದ ತಿಳುವಳಿಕೆ ಎಂತಹದ್ದಾಗಿತ್ತು? ಅವರ ತಿಳುವಳಿಕೆಯನ್ನು ನೀವು ಒಪ್ಪುತ್ತೀರಾ?
13. ಅನಾರೋಗ್ಯ ಅಥವಾ ಕಷ್ಟವು ಪಾಪ ಅಥವಾ ನಂಬಿಕೆಯ ಕೊರತೆಯಿಂದ ಬರುತ್ತದೆಂದು ಕೆಲವು ಕ್ರೈಸ್ತ ವಿಶ್ವಾಸಿಗಳು ಹೇಳುತ್ತಾರೆ ವಚನ 16–18ರ ಬೆಳಕಿನಡಿಯಲ್ಲಿ ಈ ಹೇಳಿಕೆಗೆ ನೀವು ಹೇಗೆ ಪ್ರತಿಕ್ರಿಯಿಸುವಿರಿ?
14. ಯಾವ ವಿಧದಲ್ಲಿ ಶದ್ರಕ್, ಮೇಶಕ್, ಅಬೇದ್‌ನೆಗೋರನ್ನು ನಿಮಗೆ ಮಾದರಿಗಳಾಗಿ ಕಾಣುವಿರಿ? ಯಾಕೆ?
15. ನಿಮ್ಮ ಸುತ್ತಲಿನ ಹಿಂದೂ ಸಂಸ್ಕೃತಿಯ ಒತ್ತಡವನ್ನು ಎದುರಿಸಲು ಇಂದು ನೀವು ದೇವರೊಂದಿಗೆ ಯಾವ ರೀತಿಯ ಸಂಕಲ್ಪವನ್ನು ಮಾಡಬಲ್ಲಿರಿ?

# ಅಧ್ಯಯನ 4: ನೆಬೂಕದ್ನೆಚ್ಚರನ ಒಂದು ಮರದ ಕನಸು, ಅಧ್ಯಾಯ 4

## ಟಿಪ್ಪಣಿಗಳು

ಈ ಅಧ್ಯಾಯವು ಇಬ್ಬರು ಅರಸರ ಕುರಿತಾಗಿದೆ. ಆ ದಿನಗಳಲ್ಲಿ ಮನುಷ್ಯರೊಳಗೆ ಮಹಾಬಲಿಷ್ಠ ರಾಜನಾದ ನೆಬೂಕದ್ನೆಚ್ಚರನು ಇಡೀ ಭೂಮಂಡಲದ ಒಡೆಯನು, ಮಾನವ ಸಾಮ್ರಾಜ್ಯಗಳ ಮೇಲೆ ಸಾರ್ವಭೌಮನು ಮತ್ತು ಉನ್ನತನು, ಪರಾತ್ಪರನು ಆದ ದೇವರಿಂದ ಶಿಸ್ತಿಗೆ ಒಳಗಾಗುತ್ತಾನೆ. ಅವರ ಮುಖಾಮುಖಿಯು ಸ್ವತಃ ನೆಬೂಕದ್ನೆಚ್ಚರನನ್ನು ಮತ್ತು ಆತನಿಗೆ ಇದ್ದ ದೇವರ ಕುರಿತಾದ ತಿಳುವಳಿಕೆಯನ್ನೇ ಬದಲಾಯಿಸಿತು.

ನೆಬೂಕದ್ನೆಚ್ಚರನ ದೀರ್ಘವಾದ ಏಳು ವರ್ಷಗಳ ಅವಮಾನಕರ ಅನುಭವವು ಆತನ ಜೀವನವನ್ನೇ ಬದಲಿಸಿತು. ಹಾಗಾಗಿ ಆತನು ಸಕರಾತ್ಮವಾಗಿ ನಮಗೊಂದು ಮಾದರಿಯಾಗಿದ್ದಾನೆ.

ನೆಬೂಕದ್ನೆಚ್ಚರನಿಗೆ ಪುನಃ ಬುದ್ಧಿ ಸ್ವಾಧೀನವಾದ ಮೇಲೆ ಆತನು ಕ್ರಿ.ಪೂ. 562ರಲ್ಲಿ ಮರಣಹೊಂದಿದನು.

## ಪ್ರಶ್ನೆಗಳು

1. ಈ ಅಧ್ಯಾಯವು ಎರಡು ರೀತಿಯ ಪಠ್ಯಗಳನ್ನು ಒಳಗೊಂಡಿದೆ. ಇದರಲ್ಲಿ ನೆಬೂಕದ್ನೆಚ್ಚರನು ತನ್ನ ಸಾಕ್ಷಿಯನ್ನು ಹೇಳುವ ಎರಡು ವಾಕ್ಯಭಾಗಗಳು ಮತ್ತು ನಿರೂಪಕನು ತನ್ನ ವಿವರಣೆಯನ್ನು ಕೊಡುವ ಒಂದು ವಾಕ್ಯಭಾಗಗಳಿವೆ, ಅವುಗಳು ಯಾವುವು ತೋರಿಸಿ.
2. ಕಾಲಾನುಕ್ರಮದ ಪ್ರಕಾರ ಅಧ್ಯಾಯದಲ್ಲಿ 1–3 ವಚನಗಳು ಕೊನೆಬಾಗದಲ್ಲಿ ಬರುತ್ತವೆ, ಅದು ಹೇಗೆಂದು ವಿವರಿಸಿರಿ.
3. ವಚನ 1–3ರಲ್ಲಿ ನೆಬೂಕದ್ನೆಚ್ಚರನ ಹೇಳಿಕೆಯು 3:28–29ರಲ್ಲಿ ಆತನು ದೇವರ ಬಗ್ಗೆ ಹೇಳಿದ ಹೇಳಿಕೆಗಿಂತ ಹೇಗೆ ವಿಭಿನ್ನವಾಗಿದೆ?
4. ಈ ಅಧ್ಯಾಯದ ಪ್ರಾರಂಭದಲ್ಲಿ ನೆಬೂಕದ್ನೆಚ್ಚರನು ಯಾರನ್ನು ಸಂಬೋಧಿಸುತ್ತಾನೆ?
5. ರಾಜನು ಯಾಕೆ ತನ್ನೆಲ್ಲಾ ವಿದ್ವಾಂಸರನ್ನು ಕರೆಯಿಸುತ್ತಾನೆ?
6. ಈ ಅಧ್ಯಾಯದ ಪ್ರಾರಂಭದಲ್ಲಿ ನೆಬೂಕದ್ನೆಚ್ಚರನು ದಾನಿಯೇಲನನ್ನು ಹೇಗೆ ವರ್ಣಿಸುತ್ತಾನೆ?
7. ನೆಬೂಕದ್ನೆಚ್ಚರನು ಕನಸಿನಲ್ಲಿ ಕಂಡದ್ದೇನು? ಮತ್ತು ಆತನು ಕಂಡ ಮರಕ್ಕೆ ಏನಾಯಿತು?
8. ನೆಬೂಕದ್ನೆಚ್ಚರನು ಕನಸಿನ ಬಗ್ಗೆ ಹೇಳಿದಾಗ ದಾನಿಯೇಲನು ಅದಕ್ಕೆ ಹೇಗೆ ಪ್ರತಿಕ್ರಯಿಸಿದನು? ಆತನು ಯಾಕೆ ಆ ರೀತಿ ಪ್ರತಿಕ್ರಯಿಸಿದನೆಂದು ನೀವು ತಿಳಿಯುವಿರಿ?
9. ದಾನಿಯೇಲನು ಕನಸಿನ ಅರ್ಥವನ್ನು ಹೇಗೆ ವಿವರಿಸಿದನು (ಒಂದು ಮರ, ಒಂದು ಮರವನ್ನು ಕಡಿಯುವುದು ಒಂದು ಮರದ ತುಂಡು)?
10. ತಾನು ಕನಸಿನ ಅರ್ಥವನ್ನು ತಿಳಿಸಿದ ನಂತರ ದಾನಿಯೇಲನು ನೆಬೂಕದ್ನೆಚ್ಚರನಿಗೆ ಕೊಟ್ಟ ಸಲಹೆಯೇನು?
11. ಕನಸು ನೆರವೇರಲಿಕ್ಕೆ ಯಾವಾಗ ಪ್ರಾರಂಭವಾಯಿತು? ಅದು ಯಾವ ಸಂದರ್ಭದಲ್ಲಾಯಿತು?
12. ಕನಸಿನ ನೆರವೇರುವಿಕೆಯು ಹೇಗೆ ಮುಕ್ತಾಯವಾಯಿತು?
13. ನೆಬೂಕದ್ನೆಚ್ಚರನಿಗೆ ಈ ಕನಸನ್ನು ಕೊಡುವುದರಲ್ಲಿ ದೇವರ ಉದ್ದೇಶವೇನಾಗಿತ್ತು?
14. ಈ ಅಧ್ಯಾಯದಲ್ಲಿ (ನೋಡಿ ವ. 2–3, 34–35, 37) ನೆಬೂಕದ್ನೆಚ್ಚರನು ದೇವರ ಬಗ್ಗೆ ಏನೆಂದು ಹೇಳುತ್ತಾನೆ?
15. ವ. 17ರ ಬೆಳಕಿನಡಿಯಲ್ಲಿ ದೇವರ ಆದೇಶದಿಂದ ದುಷ್ಟನಾಯಕರುಗಳು ಸಹ ಅಧಿಕಾರಕ್ಕೆ ಬರುತ್ತಾರೆ. ಈ ವಾಸ್ತಾವಾಂಶವು ದೇವರು ಯಾರಾಗಿದ್ದಾನೆ ಮತ್ತು ಆತನು ಹೇಗೆ ಕಾರ್ಯಮಾಡುತ್ತಾನೆಂಬ ನಮ್ಮ ತಿಳುವಳಿಕೆಗೆ ಹೇಗೆ ಸವಾಲನ್ನು ಒಡ್ಡುತ್ತದೆ?
16. ತನ್ನ ಅನುಭವದ ಮೂಲಕ ಒಬ್ಬ ಹೊಸ ನೆಬೂಕದ್ನೆಚ್ಚರನು ಹೊರಬರುವನು (ವ. 29–30ನ್ನು ವ. 34–37 ರೊಂದಿಗೆ ಹೋಲಿಸಿ). ಇದಕ್ಕೆ ನೀವೇನೆಂದು ಯೋಚಿಸುವಿರಿ? ಆತನು ದೇವರಿಂದ ಬಲವಂತವಾಗಿ ದೀನತೆಗೆ ತಳ್ಳಲ್ಪಟ್ಟನಾ ಅಥವಾ ಆತನ ನಡುವಳಿಕೆಯಲ್ಲಿ ನಿಜವಾದ ಬದಲಾವಣೆಯುಂಟಾಯಿತೆಂದು ನೀವು ಆಲೋಚಿಸುವಿರಿ? ವಿವರಿಸಿರಿ
17. ನಮ್ಮಲ್ಲಿ ಆತ್ಮೀಕ ಪರಿಪಕ್ವತೆ ಮತ್ತು ಕ್ರಿಸ್ತನ ಸ್ವಾರೂಪ್ಯವನ್ನು ತರುವುದಕ್ಕಾಗಿ ದೇವರು ನಮ್ಮ ಜೀವಿತಗಳಲ್ಲಿ ಹೇಗೆ ಕಾರ್ಯಮಾಡುತ್ತಾನೆ ಎನ್ನುವುದರ ಬಗ್ಗೆ ನೆಬೂಕದ್ನೆಚ್ಚರನ ಅನುಭವವು ನಮಗೆ ಏನನ್ನು ಕಲಿಸುತ್ತದೆ?

18. ಈ ಅಧ್ಯಾಯವು ದಾನಿಯೇಲನಿಗಿಂತ ಹೆಚ್ಚಾಗಿ ಅರಸನಾದ ನೆಬೂಕದ್ನೆಚ್ಚರನ ಕುರಿತಾಗಿದೆ. ಯಾವ ವಿಧದಲ್ಲಿ ನೆಬೂಕದ್ನೆಚ್ಚರನು ನಮಗೆ ಒಂದು ಎಚ್ಚರಿಕೆ ಮತ್ತು ಒಂದು ಉದಾಹರಣೆಯಾಗಿದ್ದಾನೆ/ ಮಾದರಿಯಾಗಿದ್ದಾನೆ.

# ಅಧ್ಯಯನ 5: ಗೋಡೆಯ ಮೇಲಿನ ಬರಹ, ಅಧ್ಯಾಯ 5

## ಟಿಪ್ಪಣಿಗಳು

ಅಧ್ಯಾಯ 4 ಮತ್ತು 5ರ ನಡುವೆ ಸುಮಾರು 23 ವರ್ಷಗಳ ಅಂತರವಿದೆ. ರಾಜನಾದ ನೆಬೂಕದ್ನೆಚ್ಚರನು ಕ್ರಿ. ಪೂ. 562ರಲ್ಲಿ ಮರಣವನ್ನು ಹೊಂದುತ್ತಾನೆ. ನಂತರ ಇವನ ಉತ್ತರಾಧಿಕಾರಿಯಾಗಿ ಈತನ ಮಗನಾದ ಇವಿಲ್–ಮೆರೊಡಕ್ (ಕ್ರಿ.ಪೂ. 562ರಿಂದ 560ರವರೆಗೂ ಅರಸನಾಗಿದ್ದನು) ಈತನು ತನ್ನ ಸ್ವಂತ ಭಾವನಾದ ನೆರ್ಗಲ್–ಶಾರ್ಜರ್ (ಕ್ರಿ.ಪೂ. 560–556ರವರೆಗೂ ಅರಸನಾಗಿರುತ್ತಾನೆ)ನಿಂದ ಕೊಲ್ಲಲ್ಪಡುತ್ತಾನೆ. ನಂತರ ಬಾಬೆಲ್ ಸಾಮ್ರಾಜ್ಯದ ಕೊನೆಯ ಅರಸನಾದ ನೆಬೊನಿಸ್‌ನು (ಕ್ರಿ.ಪೂ. 556–539) ಸಿಂಹಾಸನವನ್ನು ಏರಿದನು. ಈತನು ಅರಸುಮನೆತನದವನಾಗಿರದೆ ಯಾಜಕ ಕೌಟುಂಬಿಕ ಹಿನ್ನಲೆಯುಳ್ಳವನಾಗಿದ್ದನು. ನೆಬೊನಿಡಸ್‌ನು ಬಹು ಬೇಗ ತನ್ನ ಅಧಿಕಾರವನ್ನು ಮಗನಾದ ಬೇಲ್ಶಚ್ಚರನಿಗೆ ವಹಿಸಿಕೊಡುತ್ತಾನೆ. ಈತನೇ ಈ ಕಥೆಯಲ್ಲಿನ ರಾಜನಾಗಿದ್ದಾನೆ. ವಚನ 1ರಲ್ಲಿ ಕಂಡುಬರುವ **"ತಂದೆ"** ಎನ್ನುವ ಪದದ ಅರ್ಥವು ಪೂರ್ವಧಿಕಾರಿಯಾಗಿದೆ. ನೆಬೂಕದ್ನೆಚ್ಚರನು ಬೇಲ್ಶಚ್ಚರನ ತಂದೆಯಾಗಿರಲಿಲ್ಲ. ಅವರಿಬ್ಬರದು ಒಂದೇ ವಂಶಾವಳಿಯಿಂದ ಬಂದವರು ಸಹ ಆಗಿರಲಿಲ್ಲ.

ಈ ಅಧ್ಯಾಯದಲ್ಲಿನ ಘಟನೆಗಳೆಲ್ಲವೂ ಕ್ರಿ.ಪೂ. 539ರಲ್ಲಿ ಬಾಬೆಲಿನ ಅರಸನಾದ ಕೋರೆಷ ಮಹಾಶಯನ ನೇತೃತ್ವದ ಪಾರಸೀಯ ಸೈನ್ಯಕ್ಕೆ ಕೈವಶವಾದ ರಾತ್ರಿಯಲ್ಲಿ ಸಂಭವಿಸಿತು. ತಮ್ಮ ಪಟ್ಟಣವು ಯಾರು ಜಯಿಸಲಾಗದೆಂದು ಬಾಬೆಲಿನವರು ಪರಿಗಣಿಸಿದ್ದರು. ಪಟ್ಟಣದ ಗೋಡೆ ಭಾಗವು ಸುಮಾರು 100 ಕಿ.ಮೀ. ಸುತ್ತಳತೆ ಉಳ್ಳದ್ದಾಗಿತ್ತು. ಗೋಡೆಯು 45 ಮೀಟರ್ ಎತ್ತರ ಮತ್ತು 27 ಮೀಟರ್ ದಪ್ಪವಾಗಿತ್ತು. ಗೋಡೆಯ ಮೇಲ್ಭಾಗದ ಮೇಲೆ ನಾಲ್ಕು ರಥಗಳು ಅಕ್ಕ–ಪಕ್ಕವಾಗಿ ಸವಾರಿ ಮಾಡಬಹುದಾಗಿತ್ತು. ಅಲ್ಲದೆ ಬಾಬೆಲಿನವರ ಬಳಿಯಲ್ಲಿ 20 ವರ್ಷಗಳಿಗೆ ಬೇಕಾದ ಆಹಾರ ಸರಬರಾಜನ್ನು ಹೊಂದಿದ್ದರು ಮತ್ತು ಪಟ್ಟಣದ ಹೃದಯಭಾಗದ ಮೂಲ ಯೂಫ್ರೇಟೀಸ್ ನದಿಯ ಕಾಲುವೆಯ ಶುದ್ಧವಾದ ನೀರು ಹರಿಯುತ್ತಿತ್ತು.

ನದಿಯ ನೀರನ್ನು ಬದಲಿಸಲು ಪರ್ಶಿಯನ್ ಸೈನ್ಯವು ಬೇರೊಂದು ಕಾಲುವೆಯನ್ನು ತೋಡಿತೆಂದು ಪ್ರಾಚೀನ ಗ್ರೀಕ್ ಇತಿಹಾಸಕಾರನಾದ ಹೆರೊಡೋಟಸನು ಬರೆಯುತ್ತಾನೆ. ಬೇಲ್ಶಚ್ಚರನ ಔತಣಕೂಟದ ರಾತ್ರಿಯಂದು ಒಂದು ಹೊಸ ಕಾಲುವೆಯನ್ನು ತೆರೆದರು ಮತ್ತು ಈ ರೀತಿ ನದಿ ಮಾರ್ಗವಾಗಿ ಅವರು ಬಾಬೆಲನ್ನು ಮುಟ್ಟಿದರು. ಅವರಿಗೆ ಯಾವುದೇ ಅಡೆತಡೆಗಳಾಗಲಿಲ್ಲ. ಸೈನಿಕರು ಮಲಗಿದ ನಂತರ ಮತ್ತು ಬೇಲ್ಯಚ್ಚರನು ಔತಣಕೂಟ ನಡೆಸುವಾಗ ಪರ್ಷಿಯನ್ನರು ಈ ಅಜೇಯ ಪಟ್ಟನವನ್ನು ಜಯಿಸಿದರು.

ಈಗ ದಾನಿಯೇಲನ ವಯಸ್ಸು ಎಂಬತ್ತು ಮೀರಿದ್ದು, ಬಾಬೆಲಿನ ರಾಜಾಲಯದಲ್ಲಿನ ಈ ಹಿಂದಿನ ಉನ್ನತವಾದ ಸ್ಥಾನದಿಂದ ನಿವೃತ್ತನಾದಂತೆ ತೋರುತ್ತದೆ (ಹೋಲಿಸಿ ವ. 11–12).

ಗೋಡೆಯ ಮೇಲೆ ಬರೆಯಲ್ಪಟ್ಟ ಮೂರು ಪದಗಳು (ಮನೇ, ಮನೇ, ತೆಕೇಲ್, ಉಫರ್ಸಿನ್) ಅಸ್ಪಷ್ಟವಾಗಿದ್ದು ಪ್ರತಿಯೊಂದು ಪದಗಳು ಸಹ ಒಂದಕ್ಕಿಂತ ಹೆಚ್ಚು ಅರ್ಥವನ್ನು ಹೊಂದಿವೆ. ಹಾಗಾಗಿ ಮೊದಲು ಅವುಗಳನ್ನು ಸರಿಯಾದ ರೀತಿಯಲ್ಲಿ ಓದಿ ಅನಂತರ ಅರ್ಥವಿವರಣೆ ಮಾಡಬೇಕು. ಇದನ್ನು ಮಾಡುವುದರಲ್ಲಿ ಬಾಬೆಲಿನ ವಿದ್ವಾಂಸರು ವಿಫಲರಾದರು (ವ. 8)

ಮೇದ್ಯನಾದ ದಾರ್ಯಾವೆಷನ ಗುರುತಿನ ಬಗ್ಗೆ ಸತ್ಯವೇದ ಪಂಡಿತರು ಖಚಿತತೆ ಇಲ್ಲದವರಾಗಿದ್ದಾರೆ (ವ. 31) ಏಕೆಂದರೆ ದಾನಿಯೇಲನ ಪುಸ್ತಕ ಹೊರತಾಗಿ ಪ್ರಾಚೀನ ಐತಿಹಾಸಿಕ ದಾಖಲೆಗಳಲ್ಲಿ ಈತನ ಬಗ್ಗೆ ಯಾವ ಪ್ರಸ್ತಾಪವಿಲ್ಲ. ಆದರೆ ಇದು ಮೇದ್ಯ ಮತ್ತು ಪರ್ಷಿಯಾ ಎರಡನ್ನೂ ಆಳಿದ ರಾಜನಾದ ಕೋರೆಷ ಮಹಾಶಯನಿಗಿರುವ ಮತ್ತೊಂದು ಹೆಸರಾಗಿರಬಹುದು (ಹೋಲಿಸಿ ವ. 28) ಅಥವಾ ಅನಾಮಿಕನಾಗಿರುವ ಈತನ ರಾಜಪ್ರತಿನಿಧಿಯ ಹೆಸರಾಗಿರಬಹುದು ಅಥವಾ ಕೋರೆಷನ ಸೈನ್ಯದಲ್ಲಿ ಒಬ್ಬ ಅಧಿಕಾರಿಯಾಗಿದ್ದು ನಂತರದಲ್ಲಿ ದಕ್ಷಿಣ ಬಾಬೆಲಿನ ಪರ್ಷಿಯನ್ ಪ್ರಾಂತ್ಯದ ರಾಜ್ಯಪಾಲನಾದ ಗುಬಾರುವಿನ ಇನ್ನೊಂದು ಹೆಸರಾಗಿರಬಹುದು.

## ಪ್ರಶ್ನೆಗಳು

1. ಈ ಕಥೆಯ ಸಂದರ್ಭ ಯಾವುದಾಗಿತ್ತು?
2. ರಾಜನಾದ ಬೇಲ್ಯಚ್ಚರನು ಮತ್ತು ಆತನ ಅತಿಥಿಗಳು ತಮ್ಮ ದ್ರಾಕ್ಷಾರಸವನ್ನು ಹೇಗೆ ಪಾನ ಮಾಡಿದರು?
3. ಕುಡಿಯುತ್ತಿರುವಾಗ ಅವರು ಏನು ಮಾಡಿದರು?
4. ಬೇಲ್ಯಚ್ಚರ್ ರಾಜನನ್ನು ಬಹಳವಾಗಿ ಹೆದರುವಂತೆ ಮಾಡಿದ್ದು ಯಾವುದು?
5. ಬೇಲ್ಯಚ್ಚರನು ಯಾಕೆ ತನ್ನ ಪಂಡಿತರನ್ನೆಲ್ಲಾ ಕರೆಯಿಸಿದನು?

6. ಗೋಡೆಯ ಮೇಲಿನ ಬರಹದ ಅರ್ಥವನ್ನು ತಿಳಿಸಿ ಹೇಳುವವನು "ರಾಜ್ಯದ ಮೂವರು ಮುಖ್ಯಾಧಿಕಾರಿಗಳಲ್ಲಿ ಒಬ್ಬನಾಗುವನೆಂದು" ಬೇಲ್ಯಚ್ಚರನು ವಾಗ್ದಾನ ಮಾಡಿದನು (ವ. 7, 16, 29). ಮೇಲಿನ ಟಿಪ್ಪಣಿಯಲ್ಲಿ ಬಾಬೆಲಿನ ಮುಖ್ಯಾಧಿಕಾರಿಗಳು ಕೊಟ್ಟ ಮಾಹಿತಿಗಳ ಬೆಳಕಿನಡಿಯಲ್ಲಿ ಈ ವಾಗ್ದಾನವನ್ನು ಅರ್ಥೈಸಿಕೊಳ್ಳುವುದು ಹೇಗೆ?

7. ರಾಣಿಯು ದಾನಿಯೇಲನನ್ನು ಹೇಗೆ ವರ್ಣಿಸುತ್ತಾಳೆ?

8. ದಾನಿಯೇಲನು ಬೇಲ್ಯಚ್ಚರನಿಗೆ ಹೇಳಿದ ಮಾತುಗಳಿಂದ ಅವನ ಪಾಪಗಳ ಬಗ್ಗೆ ನಾವೇನನ್ನು ಕಲಿಯುತ್ತೇವೆ?

9. ದಾನಿಯೇಲನು ಬೇಲ್ಯಚ್ಚರನಿಗೆ ಹೇಳಿದ ಮಾತುಗಳು ನಾವು ಹೆಚ್ಚಾಗಿ ತಗ್ಗಿಸಿಕೊಂಡು ದೇವರಿಗೆ ಕೃತಜ್ಞತರಾಗುವಂತೆ ನಮಗೆ ಹೇಗೆ ಸಹಾಯ ಮಾಡಬಲ್ಲವು?

10. ಗೋಡೆಯ ಮೇಲಣ ಬರಹದ ದಾನಿಯೇಲನ ಅರ್ಥವಿವರಣೆಯನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ.

11. ಯಾವ ರೀತಿಯಲ್ಲಿ ಬೇಲ್ಯಚ್ಚರನು ನಮಗೊಂದು ಎಚ್ಚರಿಕೆಯಾಗಿ ಇಡಲ್ಪಟ್ಟಿದ್ದಾನೆ?

12. ಈ ಅಧ್ಯಾಯದಲ್ಲಿ ದಾನಿಯೇಲನು ಯಾವ ರೀತಿಯಲ್ಲಿ ನಮಗೊಂದು ಮಾದರಿಯಾಗಿದ್ದಾನೆ?

# ಅಧ್ಯಯನ 6: ಸಿಂಹದ ಗವಿಯೊಳಗೆ ದಾನಿಯೇಲನು, ಅಧ್ಯಾಯ 6

## ಟಿಪ್ಪಣಿಗಳು

ಈ ಹಿಂದಿನ ಅಧ್ಯಯನದಲ್ಲಿ ಸತ್ಯವೇದ ಪಂಡಿತರು ಮತ್ತು ಇತಿಹಾಸಕಾರರು 5:31ರಲ್ಲಿ "ಮೇದ್ಯನಾದ ದಾರ್ಯಾವೇಷ"ನೆಂಬುದಾಗಿ ಕರೆಯಲ್ಪಡುವ ರಾಜನಾದ ದಾರ್ಯಾವೆಷ (ವ. 1)ನ ಗುರುತನ್ನು ಹಿಡಿಯುವುದರಲ್ಲಿ ಗೊಂದಲಕ್ಕೀಡಾಗಿದ್ದನ್ನು ನಾವು ಕಾಣುತ್ತೇವೆ. ಈ ಅಧ್ಯಾಯದಲ್ಲಿ ಹೇಗೆ ದಾರ್ಯಾವೆಷನು ಇಡೀ ಮೇದ್ಯ ಮತ್ತು ಪರ್ಷಿಯನ್ ಸಾಮ್ರಾಜ್ಯದ ಆಡಳಿತವನ್ನು ಸಂಘಟಿಸುತ್ತಾನೆಂಬುದನ್ನು ನಾವು ಕಾಣಬಹುದು (ವ. 1–2). ಇದೇ ಕಥೆಯುದ್ದಕ್ಕೂ ಆತನು ನಿರೂಪಕನಿಂದ (ವ. 2), ಮುಖ್ಯಾಧಿಕಾರಿಗಳು ಮತ್ತು ದೇಶಾಧಿಪತಿಗಳಿಂದ (ವ. 6–8, 12–15) ಮತ್ತು ದಾನಿಯೇಲನಿಂದ (ವ. 21–22) "ಅರಸೇ" (ರಾಜನೇ) ಎಂಬುದಾಗಿ ಕರೆಯಲ್ಪಡುತ್ತಾನೆ. ಬಾಬೆಲಿನ ಸಾಮ್ರಾಜ್ಯದ ಬದಲಾಗಿ ಅಧಿಕಾರಕ್ಕೇರಿದ ಮೇದ್ಯ–ಪರ್ಷಿಯನ್ ಸಾಮ್ರಜ್ಯದ ಮೊದಲ ರಾಜನ ಹೆಸರು ಕೋರೆಷ ಎಂಬುದನ್ನು ನಾವು ಐತಿಹಾಸಿಕ ದಾಖಲೆ ಮತ್ತು ಸತ್ಯವೇದದಿಂದ ತಿಳಿದಿದ್ದೇವೆ (2 ಪೂ.ವೃ. 36 ಮತ್ತು ಎಜ್ರ 1), 6:28 ರಲ್ಲಿ ಒಬ್ಬ ಅರಸನು ಎರಡು ಹೆಸರುಗಳಿಂದ ಕರೆಯಲ್ಪಡುತ್ತಿದ್ದನೆಂಬುದನ್ನು ಸೂಚಿಸುತ್ತದೆಂಬುದನ್ನು ಸಹ ಅರ್ಥೈಸಿಕೊಳ್ಳುವ ಸಾಧ್ಯತೆ ಇದೆ (ದಾರ್ಯವೆಷ ಮತ್ತು ಕೋರೆಷ) (ಆಂಗ್ಲ ಎನ್.ಐ.ವಿ. ಪರ್ಯಾಯ ಭಾಷಾಂತರದಲ್ಲಿರುವಂತೆ). ಹಾಗೆಯೇ ದಾನಿಯೇಲನು ದಾರ್ಯಾವೆಷನ ಆಳ್ವಿಕೆಯಲ್ಲಿ ಘನವಂತನಾಗಿ ಬಾಳಿದನು. ಅಂದರೆ ಅದು ಕೋರೆಷನ ಆಳ್ವಿಕೆಯಾಗಿದೆ. ಮೇದ್ಯರು ಮತ್ತು ಪರ್ಷಿಯನ್ನರ ಆಳ್ವಿಕೆ ಅಡಿಯಲ್ಲಿ ಅಪರಾಧಿಗಳನ್ನು ಹಸಿದ ಸಿಂಹದ ಗವಿಗಳಲ್ಲಿ ಹಾಕಾಲಾಗುತ್ತಿತ್ತು.

ಬಾಬೆಲಿನವರ ಆಳ್ವಿಕೆ ಅಡಿಯಲ್ಲಿ  ಅಪರಾಧಿಗಳನ್ನು ಧಗಧಗನೆ ಉರಿಯುವ ಆವಿಗೆಯಲ್ಲಿ ಹಾಕಲಾಗುತ್ತಿತ್ತು. ಮೇದ್ಯರು ಮತ್ತು ಪರ್ಷಿಯನ್ನರು ಅಗ್ನಿ ದೇವರನ್ನು ಆರಾಧಿಸುತ್ತಿದ್ದರು ಮತ್ತು ಅವರು ತಮ್ಮ ದೇವತೆಗಳಿಗೆ ಯಜ್ಞಗಳನ್ನು ಸಮರ್ಪಿಸುವ ರೀತಿಯಲ್ಲಿ ಅಪರಾದಿಗಳಿಗೆ ಶಿಕ್ಷೆಕೊಡುವುದನ್ನು ನಿರಾಕರಿಸಿದರು.

## ಪ್ರಶ್ನೆಗಳು

1. ರಾಜನಾದ ದಾರ್ಯಾವೆಷನ ಆಳ್ವಿಕೆಯ ಆರಂಭದಲ್ಲಿ ದಾನಿಯೇಲನು ಅಧಿಕೃತವಾಗಿ ಯಾವ ಸ್ಥಾನಮಾನವನ್ನು ಹೊಂದಿದ್ದನು? ಮತ್ತು ಆತನಿಗಾಗಿ ಅರಸನು ಮುಂದೆ ಯಾವ ಯೋಜನೆಗಳನ್ನು ಹೊಂದಿದ್ದನು?
2. ಈ ಅಧ್ಯಾಯದ ಮೊದಲ ಭಾಗದಲ್ಲಿ ದಾನಿಯೇಲನ ಗುಣಸ್ವಭಾವದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
3. ಅರಸನಾದ ದಾರ್ಯಾವೆಷನು ಹೊರಡಿಸಿದ ಮೊದಲ ಆಜ್ಞೆಯಲ್ಲಿದ್ದ ವಿಷಯಾಂಶವೇನಾಗಿತ್ತು?
4. ಆಜ್ಞೆಗೆ ದಾನಿಯೇಲನು ಹೇಗೆ ಪ್ರತಿಕ್ರಿಯಿಸಿದನು? ಬದಲಾಗಿ ಆತನು ಏನು ಮಾಡಬಹುದಿತ್ತು? ಒಂದು ವೇಳೆ ಆತನ ಸ್ಥಾನದಲ್ಲಿ ನೀವು ಇದ್ದರೆ ಏನು ಮಾಡುತ್ತಿದ್ದೀರಿ?
5. ದಾನಿಯೇಲನ ವಿಪತ್ತಿಗೆ ರಾಜನು ಹೇಗೆ ಪ್ರತಿಕ್ರಯಿಸಿದನು?
6. ದಾನಿಯೇಲನಿಗೆ ರಾಜನು ಹೇಳಿದ ಬೀಳ್ಕೊಡುಗೆಯ ಮಾತುಗಳೇನು? ಈ ಮಾತುಗಳು ಏನನ್ನು ಸೂಚಿಸುತ್ತವೆ?
7. ರಾಜನು ಆ ರಾತ್ರಿಯನ್ನು ಹೇಗೆ ಕಳೆದನು?
8. ರಾತ್ರಿಯಲ್ಲಿನ ಘಟನೆಗಳ ಬಗ್ಗೆ ದಾನಿಯೇಲನು ಅರಸನಿಗೆ ಏನೆಂದು ಹೇಳಿದನು?
9. ದಾನಿಯೇಲನು ಹೇಳಿದ ಶುಭಸಮಾಚಾರಕ್ಕೆ ರಾಜನು ಹೇಗೆ ಪ್ರತಿಕ್ರಯಿಸಿದನು?
10. ದಾನಿಯೇಲನ ಮೇಲೆ ದೂರು ಹೇಳಿದವರ ಗತಿ ಏನಾಯಿತು?
11. ರಾಜನಾದ ದಾರ್ಯಾವೆಷನು ಹೊರಡಿಸಿದ ಎರಡನೇ ಆಜ್ಞೆಯ ಸಾರಾಂಶವೇನಾಗಿತ್ತು?
12. ತನ್ನ ಎರಡನೇ ಆಜ್ಞೆಯಲ್ಲಿ ರಾಜನಾದ ದಾರ್ಯಾವೆಷನು ದೇವರನ್ನು ಹೇಗೆ ವರ್ಣಿಸಿದ್ದಾನೆ?
13. ಈ ಕಥೆಯಲ್ಲಿನ ಮುಖ್ಯ ವ್ಯಕ್ತಿಗಳು ಯಾರು? ಮತ್ತು ಅವರಿಬ್ಬರ ನಡುವಿನ ಸಂಬಂಧ ಹೇಗಿದೆ?
14. ಈ ಕಥೆಯನ್ನು (ಅಧ್ಯಾಯ6) ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ಕಥೆಯೊಂದಿಗೆ (ಅಧ್ಯಾಯ3) ಹೋಲಿಸಿರಿ. ಇವೆರಡರ ನಡುವೆ ಯಾವ ಪ್ರಮುಖ ಸಮಾನತೆಗಳನ್ನು ಕಾಣಬಹುದು? ಮತ್ತು ಈ ಸಮಾನತೆಗಳಿಂದ ನೀವು ಪ್ರಮುಖ ಅಂಶಗಳನ್ನು ಕಂಡುಕೊಳ್ಳುವಿರಿ?

15. ಅಧ್ಯಾಯ 6ರಲ್ಲಿ ಹೇಗೆ ರಾಜನಾದ ದಾರ್ಯಾವೆಷನು ನಮಗೊಂದು ಎಚ್ಚರಿಕೆಯ ಉದಾಹರಣೆಯಾಗಿದ್ದಾನೆ?
16. ಅಧ್ಯಾಯ 6 ರಲ್ಲಿ ಹೇಗೆ ದಾನಿಯೇಲನು ನಮಗೊಂದು ಮಾದರಿಯಾಗಿದ್ದಾನೆ?
17. ನಿಮ್ಮ ಮೇಲೆ ತೀವ್ರ ನಿಗಾ ಇರಿಸಲ್ಪಟ್ಟಿದ್ದರೆ (ಈ ಕಥೆಯಲ್ಲಿನ ದಾನಿಯೇಲನಂತೆ), ನಿಮ್ಮ ಪ್ರಸ್ತುತ ಜೀವನಶೈಲಿಯಲ್ಲಿ ನೀವು ಯಾವ ಬದಲಾವಣೆಯನ್ನು ಮಾಡಿಕೊಳ್ಳಲು ಬಯಸುವಿರಿ?

# ಅಧ್ಯಯನ 7: ದಾನಿಯೇಲನು – ಒಂದು ಮಾದರಿ

## ಪೀಠಿಕೆ

ದಾನಿಯೇಲನ ಪುಸ್ತಕದ ಮೊದಲ ಅರ್ಧಭಾಗದ ನಮ್ಮ ಅಧ್ಯಯನದಿಂದ ಇದರ ಮುಖ್ಯ ವ್ಯಕ್ತಿಯಾದ ದಾನಿಯೇಲನ ಬಗ್ಗೆ ನಾವು ಬಹುಮಟ್ಟಿಗೆ ತಿಳಿದಿದ್ದೇವೆ.

ಬಹುಶಃ ಆತನೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುವುದರಲ್ಲಿ ನಮಗೆ ಸ್ವಲ್ಪ ಸಮಸ್ಯೆಯೆನಿಸಬಹುದು. ಆತನ ಜೀವನ ಮತ್ತು ಗುಣಸ್ವಭಾವವು ನಮಗಿಂತ ಎಷ್ಟೋ ವಿಭಿನ್ನವಾಗಿದೆ. ಆತನಲ್ಲಿ ನಮ್ಮಲ್ಲಿರುವಂತಹ ಬಲಹೀನತೆ ಮತ್ತು ಕಳಂಕಗಳೇನು ಕಾಣಸಿಗುವುದಿಲ್ಲ. ಈತನು ಇಂದು ದಕ್ಷಿಣ ಭಾರತದಲ್ಲಿನ ನಮ್ಮ ದೈನಂದಿನ ಜೀವಿತಗಳಿಗಿಂತ ಬಹಳಷ್ಟು ವಿಭಿನ್ನವಾಗಿರುವ ಉನ್ನತ ಸ್ಥಾನದ ಸಮಾಜದಿಂದ ಬಂದವನು. ನಾವು ನಮ್ಮನ್ನು ಮತ್ತು ನಮ್ಮ ಕುಟುಂಬಗಳನ್ನು ಪೋಷಿಸಲು ಪ್ರಯಾಸಪಡುತ್ತಿರುವ ಈ ಸಂದರ್ಭಗಳಲ್ಲಿ ಈತನು ಎರಡು ಪ್ರಸಿದ್ಧ ಪ್ರಾಚೀನ ಅರಸರುಗಳ ಸಾಮ್ರಾಜ್ಯದಲ್ಲಿ ಸೇವೆ ಮಾಡಿದನು. ನಾವಿಂದು ದೇವರು ನಮ್ಮನ್ನು ಉಪಯೋಗಿಸುತ್ತಾನೋ ಇಲ್ಲವೋ ಎಂದು ಯೋಚಿಸುತ್ತಿರುವಾಗಲೇ, ಈತನು ದೇವರಿಂದ ಅಸಾಮಾನ್ಯವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟನು. ಈತನು ನಮಗಿಂತ ಸಾವಿರಾರು ವರ್ಷಗಳ ಹಿಂದೆ ಮತ್ತು ಸಾವಿರಾರು ಕಿಲೋಮೀಟರ್ ದೂರದಲ್ಲಿರುವ ದೇಶದಲ್ಲಿ ಜೀವಿಸಿದನು.

ಆದರೂ ಇದರಲ್ಲೂ ಕೆಲವು ಸಮಾನತೆಗಳಿವೆ. ದಾನಿಯೇಲನು ಕೆಲವು ವಿಗ್ರಹಗಳನ್ನು ಆರಾಧಿಸುವ ಬಾಬೆಲಿನ ದೇಶದಲ್ಲಿ ಸೆರೆಯಾಗಿ ಹೋದ ಒಬ್ಬ ಯೆಹೂದ್ಯನಾಗಿದ್ದನು. ಮತ್ತು ಇಂದು ದಕ್ಷಿಣ ಭಾರತದಲ್ಲಿನ ಕ್ರೈಸ್ತ ವಿಶ್ವಾಸಿಗಳಾದ ನಾವು ಕೆಲವೊಮ್ಮೆ ನಮ್ಮನ್ನು ಸುತ್ತಿಕೊಂಡಿರುವ ಹಿಂದೂ ಸಂಸ್ಕೃತಿಯಲ್ಲಿ ಸೆರೆಯಾಗಿ ಹೋಗಿದ್ದೇವೆ ಎಂಬುದಾಗಿ ಭಾವಿಸುತ್ತೇವೆ. ನಮ್ಮ ಕ್ರೈಸ್ತೀಯ ನಂಬಿಕೆಯ ಪರವಾಗಿ ನಿಲ್ಲಬೇಕಾದಂತೆ ದಾನಿಯೇಲನು ಸಹ ತನ್ನ ಯೆಹೂದಿ ನಂಬಿಕೆಯ ಪರವಾಗಿ ನಿಲ್ಲಬೇಕಾಗಿತ್ತು. ನಾವು ವೈರಿಗಳನ್ನು ಮತ್ತು ಹಿಂಸೆಗಳನ್ನು ಎದುರಿಸುವಂತೆ ದಾನಿಯೇಲನು ಸಹ ವೈರಿಗಳನ್ನು ಮತ್ತು ಹಿಂಸೆಗಳನ್ನು ಎದುರಿಸಿದನು. ನಾವು ಶೋಧನೆಗಳನ್ನು ಎದುರಿಸುವಂತೆ ದಾನಿಯೇಲನು ಸಹ ಶೋಧನೆಗಳನ್ನು ಎದುರಿಸಿದನು.

ಹಾಗಾದರೆ ದಾನಿಯೇಲನಿಂದ ನಾವು ಏನನ್ನು ಕಲಿಯಬಹುದು? ಯಾವ ರೀತಿಯಲ್ಲಿ ಆತನು ನಮಗೊಂದು ಮಾದರಿಯಾಗಬಲ್ಲನು?

## ಗೃಹಕೆಲಸ

ದಾನಿಯೇಲನ ಕುರಿತಾಗಿ ಒಂದು ಪ್ರಬಂಧ ಬರೆಯಿರಿ. ಇದನ್ನು "ದಾನಿಯೇಲನು ನನಗೊಂದು ಮಾದರಿ" ಎಂದು ಕರೆಯಿರಿ. ಈ ಹಿಂದಿನ 6 ಅಧ್ಯಯನಗಳಿಂದ ಮಾಹಿತಿಗಳನ್ನು ಬಳಸಿಕೊಳ್ಳಿರಿ. ನಿಮ್ಮ ಪ್ರಬಂಧವು ಎರಡು ಭಾಗಗಳನ್ನು ಒಳಗೊಂಡಿರಬೇಕು.

ಭಾಗ 1: ದಾನಿಯೇಲನ ಪುಸ್ತಕದ ಮೊದಲ 6 ಅಧ್ಯಾಯಗಳಲ್ಲಿ ಕಂಡುಬಂದಂತೆ ದಾನಿಯೇಲನ ಕುರಿತಾದ ಒಂದು ವರ್ಣನೆ.

ಭಾಗ 2: ದಾನಿಯೇಲನು ಯಾವ ರೀತಿಯಲ್ಲಿ ನಿಮಗೊಂದು ಮಾದರಿ ಎಂಬುದರ ಬಗ್ಗೆ ವಿವರಣೆ ನೀಡಿರಿ. ನಿಮ್ಮ ವಿವರಣೆಯು ಇಂದು ದಕ್ಷಿಣ ಭಾರತದಲ್ಲಿನ ವಿಶ್ವಾಸಿಯಾದ ನೀವು ಎದುರಿಸುವ ಸಮಸ್ಯೆಗಳ ವಿಮರ್ಶೆಗಳನ್ನು ಒಳಗೊಂಡಿರಬೇಕು.

ನಿಮ್ಮ ಪ್ರಬಂಧವನ್ನು ನಿಮ್ಮ ಸಹ ವಿದ್ಯಾರ್ಥಿಗಳಿಗೆ ಕೊಡಿರಿ. ಇದನ್ನು ಈ ಕೋರ್ಸಿನ ಒಂದು ಭಾಗವೆಂಬುದಾಗಿ ಪರಿಗಣಿಸಬೇಕು

# ಎಸ್ತೇರಳು – ಅಧ್ಯಯನಗಳು

# ಎಸ್ತೇರಳು ಪುಸ್ತಕದ ಪರಿಚಯ

ಎಸ್ತೇರಳು ಎಂಬುದು ದೈವೀಕ ಗುಣಸ್ವಭಾವವನ್ನು ಬೆಳೆಸಿಕೊಳ್ಳುವುದರ ಕುರಿತಾದ ಒಂದು ಪುಸ್ತಕವಾಗಿದೆ. ನ್ಯಾಯವಾದದ್ದನ್ನು ಮಾಡಬೇಕೆಂಬುದಕ್ಕೆ ಒತ್ತು ಕೊಡದೆ ಇರುವ ಒಂದು ಸಂಸ್ಕೃತಿಯಲ್ಲಿ ನಾವು ಜೀವಿಸುತ್ತಿದ್ದೇವೆ. ನಮ್ಮ ಸುತ್ತ ನಾವು ನೋಡಿದರೆ ಸ್ವಾರ್ಥ ಮತ್ತು ಗರ್ವ, ಭ್ರಷ್ಟತೆ ಮತ್ತು ಅಪ್ರಾಮಾಣಿಕ ಜನರನ್ನೇ ನಾವು ಕಾಣುತ್ತೇವೆ. ಪ್ರತಿದಿನ ಸಹ ಅವರು ಸ್ವತಃ ತಮ್ಮ ಸ್ವಾರ್ಥಮಯವಾದ ಆಶೆಯನ್ನು ಮೊದಲಿಟ್ಟು ವೈಯಕ್ತಿಕ ಗುರುತು, ಸಂಪತ್ತು ಮತ್ತು ಅಧಿಕಾರವನ್ನೇ ಹುಡುಕುವವರಾಗಿದ್ದಾರೆ. ಆದರೆ ಇಂತಹ ದೇವಭಕ್ತಿಯಿಲ್ಲದ ಸಂಸ್ಕೃತಿಯ ನಡುವೆ "ಭೂಮಿಗೆ ಉಪ್ಪಾಗಿರಲು" ಮತ್ತು "ಲೋಕಕ್ಕೆ ಬೆಳಕಾಗಿರಲು" ಯೇಸುವು ನಮ್ಮನ್ನು ಕರೆದಿದ್ದಾನೆ. ಹಾಗಾಗಿ ಎಸ್ತೇರಳು ಪುಸ್ತಕದ ಅಧ್ಯಯನವು ನಮಗೆ ಅತೀ ಅವಶ್ಯಕವಾಗಿರುವ ದೈವೀಕ ಗುಣಸ್ವಭಾವವನ್ನು ಬೆಳೆಸಿಕೊಳ್ಳಲು ನಮಗೆ ಸಹಾಯ ಮಾಡಬಲ್ಲದು.

ಆದರೆ ಎಸ್ತೇರಳ ಪುಸ್ತಕದಲ್ಲಿ ಮಾನವ ಗುಣಸ್ವಭಾವದ ವಿಷಯವಸ್ತುವಿನೊಂದಿಗೆ ಸಂಬಂಧ ಕಲ್ಪಿಸುವ ಇನ್ನೊಂದು ಬಲವಾದ ವಿಷಯವಸ್ತುವಿದೆ, ಅದು ತನ್ನ ಆಲೋಚನೆ (ಯೋಜನೆ)ಗಳನ್ನು ತರುವುದಕ್ಕಾಗಿ ಅಥವಾ ನೆರವೇರಿಸುವುದಕ್ಕಾಗಿ ಜನರ ಜೀವಿತಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ದೇವರು ಕಾರ್ಯಮಾಡುವ ಒಂದು ವಿಷಯವಸ್ತುವಾಗಿದೆ. ಈ ಪುಸ್ತಕದಲ್ಲಿ ದೇವರು ಎಂಬ ಹೆಸರೇ ಬರೆಯಲ್ಪಟ್ಟಿಲ್ಲ ಆದರೂ ಇದರಲ್ಲಿನ ಘಟನೆಗಳೆಲ್ಲ ನಿರ್ದೇಶಿಸಿವವನು ಆತನೇ ಆಗಿದ್ದಾನೆ. ಅಲ್ಲಿ ಆಗುವ ಎಲ್ಲಾ ಸಂಗತಿಗಳ ಮೇಲೆ ಆತನು ನಿಯಂತ್ರಣವನ್ನು ಹೊಂದಿದ್ದಾನೆ. ದೇವರು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುವಾಗ ಸರಿಯಾದದ್ದನ್ನು ನಾವು ಆಯ್ಕೆಮಾಡಿಕೊಳ್ಳಬೇಕು, ಆ ಮೂಲಕ ನಾವು ದೇವರ ಯೋಜನೆಯ ಭಾಗವಾಗಬಹುದು, ಎಸ್ತೇರಳು ಇದ್ದಂತೆ ಮತ್ತು ಮಾಡಿದಂತೆ ನಾವು ಇರಬೇಕು.

ಎಸ್ತೇರಳು ಪುಸ್ತಕದ ಘಟನೆಗಳೆಲ್ಲವು ಪರ್ಷಿಯಾದಲ್ಲಿ ಸಂಭವಿಸಿದವು. ಕ್ಷೆರಕ್ಸೆಸ್‌ನ ಆಳ್ವಿಕೆಯ ಕಾಲದಲ್ಲಿ ಸಂಭವಿಸಿದವು. ಕನ್ನಡದಲ್ಲಿ ಈತನನ್ನು ಅಹಷ್ವೇರೋಷನೆಂದು ಕರೆಯಲಾಗಿದೆ (ಇದು ಆತನ ಹೆಸರಿನ ಇಬ್ರಿಯ ರೂಪವಾಗಿದೆ).

ಈತನು ರಾಜನಾದ ದಾರ್ಯಾವೆಷ ಮಹಾಶಯನ ಮಗನು ಮತ್ತು ಆತನ ಉತ್ತರಧಿಕಾರಿಯೂ ಆಗಿದ್ದು ಪರ್ಷಿಯಾವನ್ನು ಆಳಿದನು. ಆಗ ಕ್ರಿ.ಪೂ. 486ರಿಂದ 465ರ ವರೆಗೆ ಆಳಿದನು. ಆಗ ಕ್ರಿ.ಪೂ. 539ರಲ್ಲಿ ಅರಸನಾದ ಕೋರೆಷ ಮಹಾಶಯನಿಂದ ಪರ್ಷಿಯನ್ನರು ಬಾಬೆಲ್ ಸಾಮ್ರಾಜ್ಯವನ್ನು ಆಕ್ರಮಿಸಿಕೊಂಡ ನಂತರ ಯೆಹೂದದ ಇಸ್ರಾಯೇಲ್ಯರ ಹಿಂತಿರುಗುವಿಕೆಯು ಪ್ರಾರಂಭವಾಗಿ ನೂರಾರು ವರ್ಷ ಕಳೆದಿರುತ್ತದೆ. ಆದರೆ ಹೆಚ್ಚಿನ ಬಾಬೆಲಿನ ಯೆಹೂದ್ಯರು, ಅವರಲ್ಲೂ ಎಸ್ತೇರಳ ಕುಟುಂಬವು ಬಹುಶಃ ಮೆಸೊಪೊತಾಮ್ಯದಲ್ಲೇ ಇದ್ದು ಅದನ್ನೆ ತಮ್ಮ ಮನೆಯನ್ನಾಗಿ ಮಾಡಿಕೊಳ್ಳಲು ಆರಿಸಿಕೊಂಡಿರಬಹುದು.

ಈ ಕಥೆಯು ಕೋಟೆಕೊತ್ತಲುಗಳುಳ್ಳ ಶೂಷನ್ ಎಂಬ ಪಟ್ಟಣದಲ್ಲಿ ಸಂಭವಿಸುತ್ತದೆ. ಈ ಪಟ್ಟಣದಲ್ಲಿಯೆ ಅರಸನಿಗೆ ಚಳಿಗಾಲದ ಅರಮನೆಯಿತ್ತು. ಇದು ಸಾಮ್ರಾಜ್ಯದ ಎಲ್ಲಾ ಯೆಹೂದ್ಯರನ್ನು ಒಳಗೊಂಡಿತ್ತು. ಆದರೆ ಅರಸನಾದ ಅಹಷ್ವೇರೋಷ, ಆತನ ಯೆಹೂದಿ ಪತ್ನಿಯಾದ ಎಸ್ತೇರಳು, ಆಕೆಯ ಚಿಕ್ಕಪ್ಪನಾದ ಮೊರ್ದೆಕೈ ಮತ್ತು ಅರಸನ ಅಸ್ಥಾನದಲ್ಲಿ ಪ್ರಧಾನ ಮಂತ್ರಿಯಾಗಿದ್ದ ಹಾಮಾನರ ಜೀವಿತಗಳ ಮೇಲೆ ಕೇಂದ್ರಿಕರಿತವಾಗಿದೆ.

ಇದರ ಕಥೆಯು ಹಳೇ ಒಡಂಬಡಿಕೆಯ ಸಮಯದಲ್ಲಿ ಯೆಹೂದ್ಯರಿಗೆ ಬಂದ ಕೊನೆಯ ಮತ್ತು ಪ್ರಮುಖ ಬೆದರಿಕೆಯನ್ನು ತಿಳಿಸುತ್ತದೆ. ಎಸ್ತೇರಳ ಮೂಲಕ ಯೆಹೂದ್ಯರು ಸಂರಕ್ಷಿಸಲ್ಪಡುತ್ತಾರೆ ಮತ್ತು ಪೂರೀಮ್ ಎಂಬ ಹಬ್ಬವು ಸ್ಥಾಪಿಸಲ್ಪಡುತ್ತದೆ (ಈಗಲೂ ಸಹ ಜಗತ್ತಿನಾದ್ಯಾಂತ ಈ ಹಬ್ಬ ಎಲ್ಲಾ ಯೆಹೂದ್ಯರಿಂದ ಆಚರಿಸಲ್ಪಡುತ್ತದೆ).

ಇದು ದೇವರು ತನ್ನ ಜನರನ್ನು ಸಂರಕ್ಷಿಸುವ ಒಂದು ಸುಂದರ ಕಥೆಯಾಗಿದ್ದು, ಆತನ ಮಹಾ ಕೌಶಲ್ಯದಿಂದ ಹೇಳಲಾಗಿದೆ. ಇದರ ಗ್ರಂಥಕರ್ತನು ಅನಾಮಿಕನಾಗಿದ್ದಾನೆ. ಆದರೆ ಇದನ್ನು ಬರೆದ ಗ್ರಂಥಕರ್ತನು ಪರ್ಷಿಯಾದಲ್ಲೆ ವಾಸಿಸಿದ ಒಬ್ಬ ಯೆಹೂದ್ಯನಾಗಿರಬಹುದು.

- ಎಸ್ತೇರಳು ಪುಸ್ತಕದಲ್ಲಿ ಇಂದು ದಕ್ಷಿಣ ಭಾರತದಲ್ಲಿ ವಾಸಿಸುತ್ತಿರುವ ನಮಗಾಗಿ ಎರಡು ಮಾದರಿ ವ್ಯಕ್ತಿಗಳನ್ನು ಕಾಣಬಹುದು.
- ಎಸ್ತೇರಳು – ಇವಳೊಬ್ಬ ಯೆಹೂದ ಹುಡುಗಿಯಾಗಿದ್ದು, ತದನಂತರ ಪರ್ಷಿಯಾದ ರಾಣಿಯಾಗುತ್ತಾಳೆ ಮತ್ತು ತನ್ನ ಜನರನ್ನು ಅಳಿವಿನಿಂದ ರಕ್ಷಿಸುತ್ತಾಳೆ.
- ಮೊರ್ದೆಕೈ – ಈತನು ಎಸ್ತೇರಳ ಚಿಕ್ಕಪ್ಪನಾಗಿದ್ದು, ಯೆಹೂದ್ಯರ ವಿರುದ್ಧದ ಸಂಚನ್ನು ಬಹಿರಂಗಡಿಸುತ್ತಾನೆ ಮತ್ತು ಎಸ್ತೇರಳಿಗೆ ಮಾರ್ಗದರ್ಶನ ಮಾಡುವವನಾಗಿದ್ದು, ಅನಂತರ ಪರ್ಷಿಯನ್ ಸಾಮ್ರಾಜ್ಯದಲ್ಲಿ ಯೆಹೂದಿ ಸಮುದಾಯದ ಒಬ್ಬ ಗೌರವಾನ್ವಿತ ನಾಯಕನಾಗುತ್ತಾನೆ.

# ಅಧ್ಯಯನ 1: ವಷ್ಟಿರಾಣಿಯು ತಳ್ಳಲ್ಪಟ್ಟದ್ದು, ಅಧ್ಯಾಯ 1

## ಟಿಪ್ಪಣಿಗಳು

ಅಹಷ್ವೇರೋಷನು ಕ್ರಿ.ಪೂ. 485–465ರ ವರೆಗೆ ಪರ್ಷಿಯಾದ ರಾಜನಾಗಿದ್ದನು. ಈತನು ಪೂರ್ವದಲ್ಲಿ ಸಿಂಧೂ ನದಿಯಿಂದ ಪಶ್ಚಿಮದಲ್ಲಿ ಐಗುಪ್ತದವರೆಗೆ ಅಂತು ಒಂದು ವಿಶಾಲವಾದ ಸಾಮ್ರಾಜ್ಯವನ್ನು ಆಳಿದನು. ಕೂಶ ಎಂಬುದು ಈಗಿನ ದಕ್ಷಿಣ ಈಜಿಪ್ಟ್ ಮತ್ತು ಪೂರ್ವ ಸೂಡಾನ್ ಪ್ರಾಂತ್ಯದ ಒಂದು ಹೆಸರಾಗಿತ್ತು. ಎಸ್ತೇರಳು ಪುಸ್ತಕದ ಕಥನವು ಕ್ರಿ.ಪೂ. 483–482ರಲ್ಲಿ ಪ್ರಾರಂಭವಾಗುತ್ತದೆ.

ಶೂಷನ್ ಎಂಬುದು ಪರ್ಷಿಯನ್ ಅರಸರಿಗೆ ಚಳಿಗಾಲದಲ್ಲಿನ ನಿವಾಸವಾಗಿತ್ತು. ಇದು ರಾಜರ ಅರಮನೆ ಇರುವ ಕೋಟೆಯ ಪ್ರದೇಶವನ್ನು (ಶೂಷನ್ ಕೋಟೆ 1:2) ಮತ್ತು ಸಾಮಾನ್ಯ ಜನರು ವಾಸಿಸುವ ಮುಖ್ಯಪಟ್ಟಣವನ್ನು ಒಳಗೊಂಡಿತ್ತು (ಶೂಷನ್ ಪಟ್ಟಣ 3:15). ಈ ಮೊದಲ ಅಧ್ಯಯನದ ವಿಷಯವಸ್ತುವು "ಗೌರವ"ವಾಗಿದೆ.

## ಪ್ರಶ್ನೆಗಳು

1. ರಾಜನ ಅದ್ಧೂರಿ ಔತಣಕೂಟದ ಕಾರಣವೇನಾಗಿದ್ದಿರಬಹುದು?
2. ಈ ಔತಣಕೂಟದಲ್ಲಿ ನೀವು ಇರುವಿರೆಂಬುದಾಗಿ ಕಲ್ಪಿಸಿಕೊಳ್ಳಿ, ನಿಮ್ಮ ಅನುಭವ ಹೇಗಿರುತ್ತಿತ್ತು (ದೃಶ್ಯಗಳು, ವಾದ್ಯಗಳು, ವಾಸನೆ ಮತ್ತು ಇತ್ಯಾದಿ)?
3. ರಾಜನು ಯಾವ ಕಾರಣಕ್ಕಾಗಿ ವಷ್ಟಿರಾಣಿಯು ತನ್ನ ಬಳಿಗೆ ಬರಬೇಕೆಂದು ಆಜ್ಞಾಪಿಸಿದನು?
4. ಯಾವ ಕಾರಣಕ್ಕಾಗಿ ವಷ್ಟಿರಾಣಿಯು ರಾಜನ ಬಳಿಗೆ ಬರಲು ನಿರಾಕರಿಸದಳೆಂಬುದಾಗಿ ನೀವು ಯೋಚಿಸುವಿರಿ?
5. ಯಾಕೆ ವಷ್ಟಿರಾಣಿಯ ತಿರಸ್ಕಾರವು ಇಡೀ ಸಂಸ್ಥಾನಕ್ಕೆ ಅಪಾಯಕಾರಿಯಾಗಬಲ್ಲದೆಂದು ಪಂಡಿತರು ಯೋಚಿಸಿದರು?
6. ವಷ್ಟಿರಾಣಿಗೆ ಏನಾಯಿತು?
7. ಈ ಅಧ್ಯಾಯದಲ್ಲಿ ನಮಗೆ ಎದುರಾಗುವ ಜನರನ್ನು ವರ್ಣಿಸಿರಿ: ಅಹಷ್ವೇರೋಷ, ವಷ್ಟಿ, ಪಂಡಿತರು.
8. ಈ ಅಧ್ಯಾಯದಲ್ಲಿನ ಪ್ರಾಮುಖ್ಯ ವಿಷಯವು "ಗೌರವ"ವಾಗಿದೆ. ಗೌರವವನ್ನು ಗಳಿಸುವುದು ಹೇಗೆ ಮತ್ತು ಗೌರವವನ್ನು ಪಾಲಿಸುವುದು ಹೇಗೆ? ಈ ದೃಷ್ಟಿಕೋನದಿಂದ ಮುಖ್ಯ ವ್ಯಕ್ತಿಗಾರರನ್ನು (ಅಹಷ್ವೇರೋಷ, ವಷ್ಟಿ, ಜ್ಞಾನಿ)ನೋಡಿರಿ. ನಿಮ್ಮ ಮುಕ್ತಾಯಗಳೇನು?
9. ನಿಮಗೆ ಮಾಡಲು ಹಿತಕರವೆನಿಸಿದ ಕಾರ್ಯವನ್ನು ನೀವು ಮಾಡಲೇಬೇಕೆಂಬ ಪ್ರಮೇಯ ಬಂದೊದಗಿದ ಸಮಯವನ್ನೊಮ್ಮೆ ಯೋಚಿಸಿ ನೋಡಿರಿ, ನಿಮಗೇನನಿಸಿತು?
10. ಜನರ ಮಧ್ಯೆ (ನಡುವೆ) ಗೌರವವು ಹೇಗೆ ಬೆಳೆಯುತ್ತದೆ?
11. ಯಾವ ಯಾವ ರೀತಿಯಲ್ಲಿ ಗೌರವವನ್ನು ಸಂಪಾದಿಸಲು ನೀವು ಪ್ರಯತ್ನಿಸಿರುವಿರಿ? ನೀವು ಪ್ರಯತ್ನಿಸಿದ ಯಾವ ಬಗೆಯು ಸಹಕಾರಿ ಮತ್ತು ದೈವೀಕವಾದದ್ದಲ್ಲ? ಯಾವುದು ಸಹಕಾರಿ ಮತ್ತು ದೈವೀಕವಾದದ್ದು?

# ಅಧ್ಯಯನ 2: ಎಸ್ತೇರಳು ರಾಣಿಯಾದದ್ದು, ಅಧ್ಯಾಯ 2

## ಟಿಪ್ಪಣಿಗಳು

ಕ್ರಿ.ಪೂ. 721ರಲ್ಲಿ ಅಶ್ಶೂರ್ಯರಿಂದ ಉತ್ತರ ರಾಜ್ಯದ ಇಸ್ರಾಯೇಲ್ಯರು ಗಡಿಪಾರಾಗಿ ಹೋದಂದಿನಿಂದ ಯೆಹೂದ್ಯರು ಮೆಸೊಪೊತಾಮ್ಯದ ಪಟ್ಟಣ ಮತ್ತು ಅದರ ಹೊರಗೆ ವಾಸಿಸುತ್ತಾರೆ. ಹೆಚ್ಚಿನ ಯೆಹೂದ್ಯರು ಸುಮಾರು ಕ್ರಿ.ಪೂ. 600ರಲ್ಲಿ ಬಾಬೆಲಿನವರಿಂದ ಸೆರೆಯಾಗಿ ಹೋಗಿದ್ದರು. ಇದರಲ್ಲಿ ಕೆಲವು ಯೆಹೂದ್ಯರು (ಎಜ್ರ 2:64–47ರ ಪ್ರಕಾರ ಐವತ್ತು ಸಾವಿರ ಜನರು) ಕ್ರಿ.ಪೂ. 538ರಲ್ಲಿ ಪರ್ಷಿಯಾದ ರಾಜನಾದ ಕೋರೆಷನ ಅಪ್ಪಣೆಯ ಮೇರೆಗೆ ಪಾಲೆಸ್ತೇನಿಗೆ ಹಿಂದಿರುಗಿದರು. ಪರ್ಷಿಯಾದಲ್ಲಿ ವಿಶಾಲವಾದ ಯೆಹೂದಿ ಜನಸಂಖ್ಯೆಯ ಇರುವಿಕೆಯು ಕ್ರಿ.ಪೂ. 5ನೇ ಶತಮಾನದ ಪುರಾತತ್ವ ಸಂಶೋಧನೆಗಳಿಂದ ದೃಢೀಕರಿಸಲ್ಪಟ್ಟಿದೆ. ಇದರಲ್ಲಿನ ಅನೇಕ ಯೆಹೂದ್ಯರು ಪ್ರಾಮುಖ್ಯವಾದ ಮತ್ತು ಸಂಪದ್ಭರಿತವಾದ ಸ್ಥಾನಮಾನವನ್ನು ಗಳಿಸಿದ್ದರು.

ಈ ಯೆಹೂದ್ಯರಲ್ಲಿ ಒಬ್ಬರೆಂದರೆ – ಮೊರ್ದೆಕೈ. ಈತನುದು ಬಾಬೆಲಿನ ಹೆಸರಾಗಿದೆ (ಮಾರ್ಡುಕ್ ದೇವರಿಂದ). ತನ್ನ ಯೌವನಸ್ಥ ಸಂಬಂಧಿ ಎಸ್ತೇರಳಂತೆ ಇವನಿಗೂ ಒಂದು ಇಬ್ರಿಯ ಹೆಸರಿದ್ದಿರಬಹುದು (ಎಸ್ತೇರ್ ಎಂಬುದು ಮೆಸೊಪೊತಾಮ್ಯದ ದೇವತೆ ಇಶ್ಟಾರ್‌ನಿಂದ ಬಂದಿದೆ, ಆದರೆ ಇದು "ನಕ್ಷತ್ರ"ವೆಂದು ಅರ್ಥಕೊಡುವ ಪರ್ಷಿಯನ್ ಪದ ಸಹ ಆಗಿರಬಹುದು), ಈಕೆಯ ಯೆಹೂದಿ ಹೆಸರು ಹದೆಸ್ಸಾ (ಇಬ್ರಿಯಾದಲ್ಲಿ ಪೊದೆಯಲ್ಲಿನ ಹಸಿರಾದ ಸಸ್ಯ) ಎಂಬುದಾಗಿದೆ.

ಈ ಮೊರ್ದೆಕೈ ಬಹುಶಃ ಬಾಬೆಲಿನ ಮಣ್ಣಿನ ಹಲಗೆಯ ಮೇಲೆ ತಿಳಿಸಲಾದ "ಮರ್ಡುಕಾಯ"ನಾಗಿರಬಹುದು. ಈತನು ಅರಸನಾದ ಅಹಷ್ವೇರೋಷನ ಆಳ್ವಿಕೆಯ ಪ್ರಾರಂಭದ ಅವಧಿಯಲ್ಲಿ ಶೂಷನ್ನಿನ ಪರ್ಷಿಯನ್ ರಾಜಾಲಯದಲ್ಲಿ ಒಬ್ಬ ಖಜಾಂಚಿ ಅಥವಾ ಪ್ರಧಾನಮಂತ್ರಿಯಾಗಿದ್ದನು. ಮೊರ್ದೆಕೈಯು ಅರಮನೆಯ ಹೆಬ್ಬಾಗಿಲಲ್ಲಿ ಕೂತುಕೊಂಡಿದ್ದನು (ವ. 19) ಎಂಬ ವಾಸ್ತವಾಂಶವು ಈತನು ಸಾಮ್ರಾಜ್ಯದ ನಾಗರಿಕ ಸೇವೆಯಲ್ಲಿ ಒಂದು ಉನ್ನತವಾದ ಸ್ಥಾನವನ್ನು ಹೊಂದಿದ್ದನೆಂಬುದನ್ನು ತೋರಿಸುತ್ತದೆ.

ಎಸ್ತೇರಳು ಕ್ರಿ.ಪೂ. 478ರ ಆರಂಭ ಅಥವಾ ಕ್ರಿ.ಪೂ. 479ರ ಅಂತ್ಯದಲ್ಲಿ ಅರಸನಾದ ಅಹಷ್ವೇರೋಷನ ರಾಜಗೃಹಕ್ಕೆ ಹೋಗುತ್ತಾಳೆ (ರಾಜನ ಏಳನೇ ವರ್ಷದ ಹತ್ತನೇ ತಿಂಗಳಲ್ಲಿ ವ. 16). ಆಕೆಯು ತನ್ನ ಕುಟುಂಬ ಹಿನ್ನಲೆಯನ್ನು ರಹಸ್ಯವಾಗಿಟ್ಟ ಅಂಶವು ಈ ಕಥೆಯ ಕಥಾವಸ್ತುವಿಗೆ ಅತೀ ಪ್ರಾಮುಖ್ಯವಾಗಿದೆ (ವ. 10, 20). ಇಲ್ಲದಿದ್ದರೆ ಯೆಹೂದಿ ಜನಾಂಗದ ಜೀವವನ್ನು ಕಾಪಾಡುವುದು ಅವಳಿಗೆ ಅಸಾಧ್ಯವಾಗುತ್ತಿತ್ತು. ದೇವರ ಬಗ್ಗೆ ಈ ಪುಸ್ತಕದಲ್ಲಿ ಎಲ್ಲಿಯೂ ಮುಕ್ತವಾಗಿ ತಿಳಿಸದಿದ್ದರೂ ಆತನೇ ತೆರೆಯ ಹಿಂದಿನ ನಿರ್ದೇಶಕನಾಗಿದ್ದಾನೆ. ಇಡೀ ನಾಟಕದ ವಿವರಗಳನ್ನು ರಚಿಸುವವನು ಆತನೇ ಆಗಿದ್ದಾನೆ. ತನ್ನ ಯೋಜನೆಗಳನ್ನು ಕ್ರಮವಾಗಿಡಲು ಆತನು ಪರಿಸ್ಥಿತಿಗಳ ಮೂಲಕ ಕಾರ್ಯಮಾಡುತ್ತಾನೆ.

ವಷ್ಟಿರಾಣಿಯ ಸ್ಥಾನವನ್ನು ತುಂಬಲು ಮಾಡುವ ಬದಲಿ ಪ್ರಕ್ರಿಯೆ ಪೂರ್ಣಗೊಳ್ಳಲು ವರ್ಷಗಳೇ ತೆಗೆದುಕೊಳ್ಳುತ್ತದೆ.

ಈ ಎರಡನೇ ಅಧ್ಯಯನದ ವಿಷಯವಸ್ತು "ದೇವರ ಕಾರ್ಯಗಳಲ್ಲಿ ಭರವಸವಿಡುವುದಾಗಿದೆ".

## ಪ್ರಶ್ನೆಗಳು

1. ಹೊಸ ರಾಣಿಯನ್ನು ಹುಡುಕಲು ರಾಜನು ಕೈಗೊಂಡ ಕ್ರಮದ ಯೋಜನೆಯನ್ನು ಸಾರಾಂಶಗೊಳಿಸಿರಿ (ವ. 1–4).
2. ಈ ಕಥೆಗೆ ಎಸ್ತೇರಳು ಹೇಗೆ ಪ್ರವೇಶಿಸುತ್ತಾಳೆ ಮತ್ತು ರಾಣಿಯಾಗುತ್ತಾಳೆ. (ವ. 5–17).
3. ಎಸ್ತೇರಳು ಅಥವಾ ಮೊರ್ದೆಕೈ ಸ್ಥಾನದಲ್ಲಿ ನಿಮ್ಮನ್ನು ಇರಿಸಿಕೊಳ್ಳಿ. ಈ ದೀರ್ಘವಾದ ಪ್ರತಿಕ್ರಿಯೆಯುದ್ದಕ್ಕೂ ಈ ಇಬ್ಬರೂ ಹೇಗೆ ಭಾವಿಸಿರಬಹುದು?
4. ಎಸ್ತೇರಳು ದಯೆಗೆ ಪಾತ್ರಳಾದಳು ಎಂಬುದಾಗಿ ಗ್ರಂಥಕರ್ತನು ಮೂರು ಬಾರಿ ತಿಳಿಸುತ್ತಾನೆ (ವ. 9, 15, 17). ಇದು ಎಸ್ತೇರಳ ಬಗ್ಗೆ ನಮಗೇನನ್ನು ತಿಳಿಸುತ್ತದೆ.
5. ಅನೇಕ ತರುಣಿಯರನ್ನು ಅರಮನೆಗೆ ತಂದು ಅವರನ್ನು ಅಂತಃಪುರದಲ್ಲಿ ಇರಿಸಲಾಯಿತು. ಈ ಸ್ತ್ರೀಯರ ಪಾತ್ರವೇನಾಗಿತ್ತು ಮತ್ತು ಅಂತಃಪುರದಿಂದ ಎಸ್ತೇರಳು ರಾಣಿಯಾದಾಗ ಅವಳ ಜೀವನ, ಪಾತ್ರ ಮತ್ತು ಹಕ್ಕುಗಳು ಹೇಗೆ ವಿಭಿನ್ನವಾಗಿತ್ತು?
6. ತನ್ನ ಗುರುತನ್ನು ರಹಸ್ಯವಾಗಿ ಇಡಬೇಕೆಂದು ಎಸ್ತೇರಳಿಗೆ ಮೊರ್ದೆಕೈಯು ಅನೇಕಬಾರಿ ಅಪ್ಪಣೆಕೊಟ್ಟಿದ್ದನು ಎಂದು ಗ್ರಂಥಕರ್ತನು ಹೇಳುತ್ತಾನೆ, ಈ ಅಪ್ಪಣೆಗೆ ಕಾರಣವೇನಿರಬಹುದು?
7. ಈ ಕಥೆಯ ಕಥಾವಸ್ತುವಿನೊಳಗೆ ಮೊರ್ದೆಕೈ ಹೇಗೆ ಪ್ರವೇಶಿಸುತ್ತಾನೆ (ವ. 9–23)?

8. ಮೊರ್ದೆಕೈ ಜೀವಿತದ ಈ ಮೊದಲ ನೋಟಗಳು ಆತನ ಗುಣಸ್ವಭಾವದ ಬಗ್ಗೆ ನಮಗೆ ಏನೆಂದು ಹೇಳುತ್ತವೆ?

9. ಈ ಪುಸ್ತಕದಲ್ಲಿ ದೇವರ ಬಗ್ಗೆ ಮುಕ್ತವಾಗಿ ತಿಳಿಸದೆ ಇದ್ದರೂ ಈವರೆಗೂ ಈ ಕಥೆಯಲ್ಲಿ ಆತನ ಹಸ್ತವು ಕಾರ್ಯಮಾಡುವುದನ್ನು ನೀವು ಎಲ್ಲಿ ಕಾಣುವಿರಿ?

10. ತಮ್ಮ ವ್ಯಕ್ತಿತ್ವದ ನಿಮಿತ್ತ ಬೇರೆಯವರ ಮೆಚ್ಚುಗೆಗೆ ಪಾತ್ರರಾಗಿರುವ ನಿಮ್ಮ ಪರಿಚಿತರೊಬ್ಬರ ಬಗ್ಗೆ ಯೋಚಿಸಿನೋಡಿ. ನಿಮ್ಮ ಸ್ವಂತ ಜೀವನದಲ್ಲಿ ಈ ವ್ಯಕ್ತಿಯ ಒಂದು ಗುಣಸ್ವಭಾವವನ್ನು ಬೆಳೆಸಿಕೊಳ್ಳಲು ನೀವು ಹೇಗೆ ಪ್ರಾರಂಭಿಸಬಹುದು?

11. ಏನೋ ಒಂದು ಕಾರ್ಯವನ್ನು ಸಾಧಿಸುವುದಕ್ಕಾಗಿ ಈ ಹಿಂದೆ ನಿಮ್ಮ ಜೀವನದಲ್ಲಿ ದೇವರು ಪರಿಸ್ಥಿತಿಗಳ ಮೂಲಕ ಕಾರ್ಯಮಾಡುವುದನ್ನು ನೀವು ನೋಡಿದ ಸಮಯವನ್ನು ವಿವರಿಸಿರಿ.

12. ಈಗ ನಿಮ್ಮ ಜೀವನದ ಪರಿಸ್ಥಿತಿಗಳಲ್ಲಿ ದೇವರ ಹಸ್ತವು ಸಂಚರಿಸುವುದನ್ನು ನೀವು ಎಲ್ಲಿ ಕಾಣುವಿರಿ?

13. ಈಗ ನೀವು ಎದುರಿಸುತ್ತಿರುವ ಸನ್ನಿವೇಶಗಳಿಗೆ ಪ್ರತಿಕ್ರಯಿಸಲು ದೇವರು ಅಪೇಕ್ಷಿಸುತ್ತಾನೆಂದು ನೀವು ಹೇಗೆ ಯೋಚಿಸುವಿರಿ?

14. ಸಕರಾತ್ಮಕವಾಗಿ ಅಥವಾ ನಕರಾತ್ಮಕವಾಗಿ ನಿಮ್ಮ ಪರಿಸ್ಥಿತಿ (ಸನ್ನಿವೇಶ)ಗಳಲ್ಲಿ ದೇವರ ಹಸ್ತವು ಕಾರ್ಯಮಾಡುತ್ತಿರುವುದನ್ನು ನೋಡುವ ಸಾಮರ್ಥ್ಯಕ್ಕಾಗಿ ಪ್ರಾರ್ಥಿಸಿರಿ.

# ಅಧ್ಯಯನ 3: ಯೆಹೂದ್ಯರನ್ನು ಸಂಹರಿಸಲು ಹಾಮಾನನ ಪಿತೂರಿ, ಅಧ್ಯಾಯ 3

## ಟಿಪ್ಪಣಿಗಳು

ಈ ಅಧ್ಯಯನದಲ್ಲಿ ಒಬ್ಬ ಹೊಸ ವ್ಯಕ್ತಿಯು ವೇದಿಕೆಯನ್ನು ಪ್ರವೇಶಿಸುತ್ತಾನೆ. ಈತನು ಸಾಮ್ರಾಜ್ಯದ ಒಬ್ಬ ಸರದಾರನಾದ ಹಾಮಾನನು. ಈತನನ್ನು ಅಗಾಗನ ವಂಶದವರೆಂದು ಕರೆಯಲಾಗಿದೆ, ಇದರರ್ಥ ಈತನು ಬಹುಶಃ ಅಮಾಲೇಕ್ಯರ ಅರಸನಾದ ಅಗಾಗನ (1 ಸಮು. 15:20) ವಂಶದಿಂದ ಬಂದಿರಬಹುದು. ಇಸ್ರಾಯೇಲ್ಯರು ಐಗುಪ್ತದಿಂದ ಬಿಡುಗಡೆಯಾಗಿ ಬಂದ ನಂತರ ಸೌಲನು ಅಮಾಲೇಕ್ಯರ ಮೇಲೆ ಆಕ್ರಮಣ ಮಾಡಿದರು. ಇದು ಅವರ ಮೇಲೆ ದೇವರ ಖಂಡನೆ (ನ್ಯಾಯತೀರ್ಪು)ಯನ್ನು ಬರಮಾಡಿತು. ಹಾಗಾಗಿ ಅನೇಕ ತಲೆಮಾರಿನ ನಂತರ ಸೌಲನು ಅಮಾಲೇಕ್ಯರ ಮೇಲೆ ಆಕ್ರಮಣ ಮಾಡಿದಾಗ ಅರಸನಾದ ಅಗಾಗನನ್ನು ಮತ್ತು ಹೆಚ್ಚಿನವರನ್ನೆಲ್ಲಾ ಸಂಹರಿಸಿದನು (ಆದರೆ ಎಲ್ಲರನ್ನಲ್ಲ 1 ಪೂ.ವೃ. 4:42–43). ಈಗ ಐನೂರು ವರ್ಷಗಳ ತರುವಾಯ ಎಸ್ತೇರಳು ಪುಸ್ತಕದಲ್ಲಿ ಹಾಮಾನನಿಂದ ಪ್ರತಿನಿದಿಸಲ್ಪಟ್ಟ ಅಮಾಲೇಕ್ಯರ ವಿರುದ್ಧ ಬೆನ್ಯಾಮೀನ್ಯನಾದ ಮೊರ್ದೆಕೈ ಹೇಗೆ ಯುದ್ಧಮಾಡುವುದನ್ನು ಮುಂದುವರೆಸುವುದನ್ನು (2:5) ನಾವು ಕಾಣಬಹುದು.

ಅರಸನಾದ ಅಹಷ್ವೇರೋಷನು ಯಾಕೆ ಹಾಮಾನನನ್ನು ಪದವಿಯಲ್ಲಿ ಹೆಚ್ಚಿಸಿ ತನ್ನ ಒಡ್ಡೋಲಗದ ಎಲ್ಲಾ ಸರದಾರರಲ್ಲಿ ಅವನಿಗೆ ಪ್ರಥಮ ಸ್ಥಾನವನ್ನು ಕೊಡಲು ತೀರ್ಮಾನಿಸಿದನೆಂಬುದಕ್ಕೆ ಇಲ್ಲಿ ಯಾವ ಕಾರಣವನ್ನೂ ಕೊಟ್ಟಿಲ್ಲ.

ಈ ಅಧ್ಯಯನದ ವಿಷಯವಸ್ತುವು ಸಲಹೆಯನ್ನು ಮೌಲ್ಯಮಾಪನ ಮಾಡುವುದು ಅಥವಾ ಪರಾಮರ್ಶಿಸುವುದಾಗಿದೆ.

ದೇವರ ಭಯಭಕ್ತಿಯುಳ್ಳ ಗುಣಲಕ್ಷಣವು ಬೇರೆಯವರಿಂದ ನಾವು ಪಡೆಯುವ ಸಲಹೆಯನ್ನು ನಾವು ಹೇಗೆ ಮೌಲ್ಯಮಾಪನಮಾಡಬೇಕೆಂಬುದನ್ನು ತಿಳಿದುಕೊಳ್ಳುವುದಾಗಿದೆ, ಅಲ್ಲದೆ ಇದು ಶುದ್ಧವಾದ ಉದ್ದೇಶದಿಂದ ಮತ್ತು ವೈಯಕ್ತಿಕವಾಗಿ ಯಾವುದೇ ಲಾಭವನ್ನು ನೋಡದೆ ಬೇರೆಯವರಿಗೆ ಸ್ವಸ್ಥವಾದ ಮತ್ತು ವಿವೇಕವುಳ್ಳ ಸಲಹೆಯನ್ನು ಕೊಡುವುದಾಗಿದೆ.

## ಪ್ರಶ್ನೆಗಳು

1. ಹಾಮಾನನ ಮತ್ತು ಮೊರ್ದೆಕೈ ನಡುವಿನ ಯಾವ ಸಂಘರ್ಷವು ಹಾಮಾನನು ಮೊರ್ದೆಕೈ ಮೇಲೆ ತೀವ್ರವಾಗಿ ಪ್ರತಿಕ್ರಯಿಸುವಂತೆ ಮಾಡಿತು (ವ. 6)?
2. ತನ್ನ ಯೋಜನೆಯ ಪ್ರಕಾರ ಯೆಹೂದ್ಯರನ್ನು ಸಂಹರಿಸಬೇಕೆಂದು ಹಾಮಾನನು ರಾಜನನ್ನು ಹೇಗೆ ಮನವೊಲಿಸುತ್ತಾನೆ (ವ. 8–9)?
3. ರಾಜಶಾಸನವು ಒಳಗೊಂಡಿದ್ದ ಆಜ್ಞೆಗಳನ್ನು ವಿವರಿಸಿರಿ (ವ. 13).
4. ವ. 12–14ರಲ್ಲಿ "ಆಯಾ", "ಎಲ್ಲಾ" ಮತ್ತು "ಪ್ರತಿಯೊಂದು" ಎಂಬ ಪದಗಳು ಅನೇಕಬಾರಿ ಕಂಡುಬರುತ್ತವೆ. ಈ ಪುನಾರಾವರ್ತನೆಯಿಂದ ಮತ್ತು ರಾಜಶಾಸನದ ವಿವರವಾದ ವರ್ಣನೆಯಿಂದ ಗ್ರಂಥಕರ್ತನು ಏನನ್ನು ಹೇಳಲು ಪ್ರಯತ್ನಿಸುತ್ತಿರುವನೆಂದು ನೀವು ಯೋಚಿಸುವಿರಿ?
5. ರಾಜಾಜ್ಞೆಯ ವಿಷಯವು ತಿಳಿಯುತ್ತಿದ್ದಂತೆ ಶೂಷನ್ ಪಟ್ಟಣದಲ್ಲಿನ ಜನರ ನಡುವೆ ಯಾವ ರೀತಿಯ ವಾತವರಣ ಸೃಷ್ಟಿಯಾಯಿತು?
6. ಈ ಅಧ್ಯಾಯದಲ್ಲಿ ಹಾಮಾನನ ಗುಣಸ್ವಭಾವದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
7. ಈ ಅಧ್ಯಾಯದಲ್ಲಿ ರಾಜನಾದ ಅಹಷ್ವೇರೋಷನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುತ್ತೇವೆ, ಅದನ್ನು ವಿವರಿಸಿ.
8. ಅರಸನಾದ ಅಹಷ್ವೇರೋಷನ ರಾಜಾಜ್ಞೆಯು ಪ್ರಕಟವಾದ ಸಮಯದಲ್ಲಿ ನೀವೊಬ್ಬ ಯೆಹೂದ್ಯರಾಗಿರುವಿರೆಂಬುದಾಗಿ ಊಹಿಸಿಕೊಳ್ಳಿರಿ, ನಿಮಗೆ ಏನನ್ನಿಸುತ್ತಿತ್ತು?
9. ನಿಮ್ಮ ಜೀವನದಲ್ಲಿ ಒಂದು ಸಮಯದಲ್ಲಿ ಯಾರನ್ನೋ ಸಮಧಾನಪಡಿಸುವುದಕ್ಕಾಗಿ ನೀವು ಅರ್ಧ ಸತ್ಯ ಮತ್ತು ಸುಳ್ಳನ್ನು ಉಪಯೋಗಿಸುವ ಶೋಧನೆಗೆ ಒಳಗಾಗಿರುವಿರೆಂಬುದಾಗಿ ಯೋಚಿಸಿರಿ. ಆ ಸಮಯದಲ್ಲಿ ನಿಮ್ಮ ಆಲೋಚನೆ ಮತ್ತು ಭಾವನೆಗಳೇನಾಗಿದ್ದವು? ಮತ್ತು ಈಗ ಅದರ ಬಗ್ಗೆ ಬೇರೆಯವರಿಗೆ ಹೇಳಲು ನಿಮಗೆ ಏನನಿಸುತ್ತದೆ?
10. ನಾವು ಸಲಹೆಯನ್ನು ಕೊಡುವಾಗ ಅಥವಾ ಸ್ವೀಕರಿಸುವಾಗ ಹೇಗೆ ನಮ್ಮ ಗುಣಸ್ವಭಾವವನ್ನು ಪ್ರತಿಬಿಂಬಿಸಬಹುದು?
11. ಹೇಗೆ ನೀವು ಬುದ್ಧಿಹೀನ ಸಲಹೆಯನ್ನು ಕೊಡುವುದರ ವಿರುದ್ಧವಾಗಿ ಸ್ವತಃ ನಿಮ್ಮನ್ನು ಕಾಯ್ದುಕೊಳ್ಳಬಹುದು?
12. ನೀವು ಬೇರೆಯವರಿಂದ ಪಡೆಯುವ ಸಲಹೆಯನ್ನು ಯಾವ ರೀತಿಯಲ್ಲಿ ಪರಾಮರ್ಶಿಸಬಹುದು?

13. ನಿಮ್ಮ ಜೀವನದಲ್ಲಿ ನಿಮ್ಮ ಸಲಹೆ/ ಸಮಾಲೋಚನೆಯನ್ನು ಬಯಸುವವರಾಗಿ ಪ್ರಾರ್ಥಿಸಿರಿ ಅದೇ ರೀತಿ ನಿಮ್ಮ ಸಲಹೆಯು ದೈವೀಕವಾಗಿಯೂ ಮತ್ತು ಸ್ವಸ್ಥವಾಗಿರಬೇಕೆಂಬುದಕ್ಕಾಗಿ ಸಹ ಪ್ರಾರ್ಥಿಸಿರಿ.

# ಅಧ್ಯಯನ 4: ಸಹಾಯಕ್ಕಾಗಿ ಮೊರ್ದೆಕೈ ಎಸ್ತೇರಳ ಮನವೊಲಿಸುವುದು, ಅಧ್ಯಾಯ 4

## ಟಿಪ್ಪಣಿಗಳು

ಎಸ್ತೇರಳು ಶೂಷನ್ ಕೋಟೆಯಲ್ಲಿ ಅರಮನೆಯ ಏಕಾಂತವಾದ ಅಂತಃಪುರದಲ್ಲಿ ವಾಸಿಸುತ್ತಿದ್ದಳು. ಮತ್ತು ಪ್ರಾರಂಭದಲ್ಲಿ ಆಕೆಯು ಎಲ್ಲಾ ಯೆಹೂದಿ ಜನಾಂಗವನ್ನು ನಾಶಮಾಡಬೇಕೆಂದು ರಾಜಶಾಸನದ ಬಗ್ಗೆ ಅರಿವನ್ನು ಹೊಂದಿರಲಿಲ್ಲ.

ಅಧ್ಯಾಯ 4 ಎಸ್ತೇರಳ ಕಥೆಗೆ ಒಂದು ಕೇಂದ್ರವಾಗಿದೆ. ಆಕೆಯ ಗುಣಸ್ವಭಾವವು ಆಕೆಯ ಪ್ರತಿಕ್ರಿಯೆ ಮತ್ತು ಆಯ್ಕೆಗಳಲ್ಲಿ ಸ್ಪಷ್ಟವಾಗಿ ತೋರಿಬಂದಿದೆ. ಈ ಅಧ್ಯಯನದ ವಿಷಯವಸ್ತುವು "ಸರಿಯಾದದ್ದನ್ನು ಮಾಡುವುದಾಗಿದೆ". ಆತನ ಜನರಾದ ನಾವು ಪ್ರತಿಯೊಂದು ಸನ್ನಿವೇಶದಲ್ಲೂ ಸಹ ಸರಿಯಾದುದನ್ನು ಮಾಡಬೇಕೆಂದು ದೇವರು ಅಪೇಕ್ಷಿಸುತ್ತಾನೆ.

## ಪ್ರಶ್ನೆಗಳು

1. ಈ ಅಧ್ಯಾಯನದಲ್ಲಿನ ಘಟನೆಗಳ ಅನುಕ್ರಮವೇನಾಗಿದೆ?
2. ರಾಜಾಜ್ಞೆಯ ಸುದ್ದಿಗೆ ಮೊರ್ದೆಕೈ ಮತ್ತು ಯೆಹೂದಿ ಜನರು ಹೇಗೆ ಪ್ರತಿಕ್ರಿಯಿಸಿದರು (ವ. 1–3)?
3. ಆ ಸಮಯದಲ್ಲಿ ಪರ್ಷಿಯಾದಲ್ಲಿನ ಯೆಹೂದ್ಯರ ಬಗ್ಗೆ ಹಾಮಾನನ ಪಿತೂರಿಗೆ ಮೊರ್ದೆಕೈ ಮತ್ತು ಯೆಹೂದ್ಯರ ಪ್ರತಿಕ್ರಿಯೆಯು ನಮಗೆ ಏನೆಂದು ಹೇಳುತ್ತದೆ?
4. ವ. 3ರಲ್ಲಿ ಯೆಹೂದಿ ಜನರ ಉಪವಾಸವು ಮೊದಲ ಮೂರು ಅಧ್ಯಾಯಗಳಲ್ಲಿನ ಘಟನೆಗಳೊಂದಿಗೆ ಹೇಗೆ ತದ್ವಿರುದ್ಧವಾಗಿದೆ?
5. ಈ ಸನ್ನಿವೇಶಕ್ಕೆ ಎಸ್ತೇರಳು ಹೇಗೆ ಪ್ರತಿಕ್ರಯಿಸಿದಳು? ತನ್ನ ಪ್ರತಿಕ್ರಿಯೆಯಲ್ಲಿ ಆಕೆ ವಿಭಿನ್ನ ಅಂಶಗಳನ್ನು ಯೋಚಿಸಿರಬಹುದೆಂದು ನೀವು ಹೇಗೆ ಯೋಚಿಸುವಿರಿ (ವ. 9)?
6. ಈ ಪರಿಸ್ಥಿತಿಯಲ್ಲಿ ಎಸ್ತೇರಳ ಪಾತ್ರ ಮತ್ತು ಜವಬ್ದಾರಿಯ ಬಗ್ಗೆ ಮೊರ್ದೆಕೈಯ ದೃಷ್ಟಿಕೋನವೇನು?
7. ವಚನ 12–14 ರಲ್ಲಿನ ಮೊರ್ದೆಕೈಯ ವಾದವು ಎಸ್ತೇರಳು ರಾಜನ ಬಳಿಗೆ ಹೋಗುವಂತೆ ಹೇಗೆ ಒತ್ತಾಯಿಸುತ್ತದೆ?
8. ಈ ಅಧ್ಯಾಯದಲ್ಲಿ ದೇವರ ಸಾರ್ವಭೌಮತೆ ಮತ್ತು ಜನರ ಪ್ರತಿಕ್ರಿಯೆಯು ಒಟ್ಟಾಗಿ ಕಾರ್ಯಮಾಡುವುದನ್ನು ನಾವು ಹೇಗೆ ಕಾಣಬಹುದು?
9. ಈ ಅಧ್ಯಾಯದುದ್ದಕ್ಕೂ ಎಸ್ತೇರಳು ಎಂಥಹ ಗುಣಲಕ್ಷಣಗಳನ್ನು ತೋರ್ಪಡಿಸುತ್ತಾಳೆ?
10. ನೀವು ಗಂಭೀರವಾದ ಸವಾಲುಗಳನ್ನು ಎದುರಿಸಲು ದೇವರು ನಿಮ್ಮನ್ನು ಕರೆದ ಈ ಹಿಂದಿನ ಒಂದು ಸನ್ನಿವೇಶವನ್ನು ಯೋಚಿಸಿರಿ. ನಿಮ್ಮ ಮೊದಲ ಪ್ರತಿಕ್ರಿಯೆ ಏನು? ಮತ್ತು ದೇವರು ನಿಮ್ಮನ್ನು ಕರೆದಾಗ ನಿಮಗೆ ಏನನಿಸಿತು? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
11. ದೇವರು ತನ್ನ ಚಿತ್ತವನ್ನು ಮಾಡಲು ಇಟ್ಟಿದ್ದಾನೆಂದು ನೀವು ಭಾವಿಸುವ ಪ್ರಸ್ತುತ ಒಂದು ಹಿನ್ನಲೆಯನ್ನು ಯೋಚಿಸಿರಿ. ಈ ಸನ್ನಿವೇಶದಲ್ಲಿ ಸರಿಯಾದುದನ್ನು ಮಾಡುವಲ್ಲಿ ನೀವು ಯಾವ ಸವಾಲುಗಳನ್ನು ಎದುರಿಸಿದ್ದೀರಿ? ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.
12. ಇಂತಹ ಸನ್ನಿವೇಶಗಳಲ್ಲಿ ಸರಿಯಾದುದ್ದನ್ನು ಮಾಡುವ ಸಲುವಾಗಿ ಎಂತಹ ಗುಣಲಕ್ಷಣಗಳನ್ನು ತೋರ್ಪಡಿಸಬೇಕು?
13. ನಿಮ್ಮ ಜೀವನದ ಪ್ರಸಕ್ತ ಪರಿಸ್ಥಿತಿಗಳಲ್ಲಿ ವಿಧೇಯರಾಗಿರಲು ಧೈರ್ಯವನ್ನು ಕೊಡುವಂತೆ ದೇವರನ್ನು ಪ್ರಾರ್ಥಿಸಿರಿ.

# ಅಧ್ಯಯನ 5: ಅರಸನ ಬಳಿ ಎಸ್ತೇರಳ ಮನವಿ, ಅಧ್ಯಾಯ 5

## ಟಿಪ್ಪಣಿಗಳು

ಕಷ್ಟಕರವಾದ ಸವಾಲುಗಳೊಂದಿಗೆ ಮತ್ತು ನಮ್ಮೊಂದಿಗೆ ಕೋಪಿಸಿಕೊಳ್ಳುವ ವ್ಯಕ್ತಿಗಳೊಂದಿಗಿನ ನಮ್ಮ ಪ್ರತಿಕ್ರಿಯೆಯು ನಮ್ಮ ಗುಣಸ್ವಭಾವದ ಬಗ್ಗೆ ಒಂದು ದೊಡ್ಡ ವ್ಯವಹಾರವನ್ನು ತಿಳಿಸುತ್ತದೆ. ಈ ಹಿಂದಿನ ಸನ್ನಿವೇಶಗಳನ್ನು ನಾವು ಧೈರ್ಯ ಮತ್ತು ದೀನತೆಯಿಂದ ಅಥವಾ ಕೋಪ, ಕಠಿತನ ಮತ್ತು ಗರ್ವದೊಂದಿಗೆ ಎದುರಿಸುತ್ತೇವಾ?

ಪುಸ್ತಕದುದ್ದಕ್ಕೂ ಎಸ್ತೇರಳು ಮತ್ತು ಹಾಮಾನರಿಬ್ಬರೂ ತದ್ವಿರುದ್ಧತೆಯ ಒಂದು ಪಾಠವಾಗಿದ್ದಾರೆ. ಈ ಅಧ್ಯಯನದಲ್ಲಿ ನಾವು ಎಸ್ತೇರಳು ಮತ್ತು ಹಾಮಾನರ ಒಳಗೆ ಏನಿದೆ ಎಂಬುದರ ಬಗ್ಗೆ ಬಹಳಷ್ಟು ವಿಭಿನ್ನತೆಯನ್ನು ಕಾಣುತ್ತೇವೆ. "ಕಷ್ಟಕರ ಸನ್ನಿವೇಶವನ್ನು ಎದುರಿಸುವುದು ಹೇಗೆ" ಎಂಬುದು ಈ ಅಧ್ಯಯನದ ವಿಷಯವಸ್ತುವಾಗಿದೆ.

## ಪ್ರಶ್ನೆಗಳು

1. ವ. 1–8ರಲ್ಲಿ ಎಸ್ತೇರಳು ತೆಗೆದುಕೊಳ್ಳುವ ಸವಾಲು/ ಅಪಾಯಗಳೇನು?
2. ಕಥೆಯ ಈ ಒಂದು ಹಂತದಲ್ಲಿ ಎಸ್ತೇರಳ ಸ್ಥಾನದಲ್ಲಿ ನಿಮ್ಮನ್ನು ಇಟ್ಟುಕೊಳ್ಳಿ, ಆಕೆಯ ಭಾವನೆ ಏನಾಗಿದ್ದಿರಬಹುದು ಮತ್ತು ಆಕೆ ಏನೆಂದು ಯೋಚಿಸುತ್ತಿರಬಹುದು?
3. 4:15–16ನ್ನು ತಿರುಗಿ ನೋಡಿರಿ. ಕರೆಯಿಲ್ಲದೆ ಅರಸನ ಬಳಿಗೆ ಹೋಗುವ ಸವಾಲನ್ನು ಎದುರಿಸಲು ಎಸ್ತೇರಳನ್ನು ಬಲಪಡಿಸಿದ್ದು ಯಾವುದು?
4. ಔತಣಕ್ಕೆ ರಾಜ ಮತ್ತು ಹಾಮಾನರಿಬ್ಬರೂ ಬರಬೇಕೆಂದು ಎಸ್ತೇರಳು ಕೇಳಿಕೊಳ್ಳುತ್ತಾಳೆ. ಇಂತಹ ಮನವಿಗೆ ಕಾರಣವೇನಿರಬಹುದು (ವ. 4–8)?
5. ವ. 9–14 ರಲ್ಲಿ ಹಾಮಾನನ ಗುಣಸ್ವಭಾವದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
6. ನೀವು ಹಾಮಾನನೊಂದಿಗೆ ಮಾತನಾಡುತ್ತಿರುವ ಒಬ್ಬ ದಿನ ಪತ್ರಿಕೆಯ ವರದಿಗಾರರಾಗಿದ್ದರೆ ಈ ಒಂದು ಹಂತದಲ್ಲಿ ಆತನಿಗೆ ಯಾವ ಪ್ರಶ್ನೆಯನ್ನು ಕೇಳುತ್ತಿದ್ದೀರಿ? ಮತ್ತು ಈ ಪ್ರಶ್ನೆಗಳಿಗೆ ಹಾಮಾನನು ಹೇಗೆ ಪ್ರತಿಕ್ರಿಯಿಸುತ್ತಿದ್ದನು?
7. ಈ ಅಧ್ಯಾಯದಲ್ಲಿ ಹೇಗೆ ಎಸ್ತೇರಳು ಮತ್ತು ಹಾಮಾನರ ಗುಣಸ್ವಭಾವವಗಳು ತದ್ವಿರುದ್ಧವಾಗಿದೆ?
8. ಪ್ರಸ್ತುತ ನೀವು ಹಾದುಹೋಗುತ್ತಿರುವ ಹೋರಾಟದ ಮಧ್ಯದಲ್ಲಿ ಇತರ ವಿಶ್ವಾಸಿಯ ಬೆಂಬಲವು ನಿಮಗೆ ಹೇಗೆ ಸಹಾಯಕವಾಗಬಲ್ಲದು?
9. ಸಹಾಯ ಮತ್ತು ಬೆಂಬಲವನ್ನು ಕೇಳುವ ಸಮಯದಲ್ಲಿ ಕ್ಲಿಷ್ಟಕರವಾಗುವಂತೆ ಮಾಡುವಂತದ್ದು ಯಾವುದು?
10. ನಿಮ್ಮ ಜೀವನದ ಯಾವ ಕ್ಷೇತ್ರದಲ್ಲಿ ಎಸ್ತೇರಳ ಸಕರಾತ್ಮಕ ಗುಣವನ್ನು ನೀವು ಕಾಣುವಿರಿ?
11. ಪ್ರಸ್ತುತ ಯಾವ ಸನ್ನಿವೇಶದಲ್ಲಿ ನೀವು ಎಸ್ತೇರಳ ಧೈರ್ಯವನ್ನು ದೀನತೆಯೊಂದಿಗೆ ಪ್ರತಿಕ್ರಯಿಸಲು ಪ್ರಯತ್ನಿಸುವಿರಿ?
12. ಹಾಮಾನನಿಗೆ ಸಂಪತ್ತು, ಘನತೆ, ಮಕ್ಕಳು ಮತ್ತು ಗುರುತು ಇದ್ದರೂ ಸಹ ಮೊರ್ದೆಕೈಯೆಡೆಗಿನ ಆತನ ಭಾವನೆಗಳು ತನ್ನ ಜೀವನದಲ್ಲಿದ್ದ ಒಳ್ಳೆಯ ಸಂಗತಿಗಳನ್ನು ಸಹ ಹಾಳಾಗುವಂತೆಮಾಡಿತು. ಹಾಮಾನನ ಪೀಡಿಸುವಿಕೆಯು ಈ ದಿನ ನಮಗೇನನ್ನು ಕಲಿಸಬಲ್ಲದು?
13. ಪ್ರಸ್ತುತ ನಿಮ್ಮ ಜೀವನದಲ್ಲಿ ಪ್ರತ್ಯೇಕ ಜನ ಮತ್ತು ಸನ್ನಿವೇಶಗಳೊಂದಿಗೆ ಪ್ರತಿಕ್ರಯಿಸಲು ಧೈರ್ಯ ಮತ್ತು ದೀನತೆಗಾಗಿ ಪ್ರಾರ್ಥಿಸಿರಿ.

# ಅಧ್ಯಯನ 6: ಮೊರ್ದೆಕೈ ಸನ್ಮಾನಿಸಲ್ಪಟ್ಟಿದ್ದು, ಅಧ್ಯಾಯ 6

## ಟಿಪ್ಪಣಿಗಳು

ಈ ಅಧ್ಯಾಯದ ಮೊದಲ ವಚನವು ಈ ಪುಸ್ತಕದ ಕಥಾನಿರೂಪಣೆಯ ಸಾಹಿತ್ಯದ ಕೇಂದ್ರವನ್ನು ತಿಳಿಸುತ್ತದೆ. ಸಂಗತಿಗಳು ತೀರಾ ಕೆಟ್ಟದ್ದಾಗಿ ಕಾಣದಿರುವಾಗ ಕಾಕತಾಳೀಯ ಘಟನೆಗಳು ನಡೆದ ಕಥೆಯನ್ನು ಬಗೆಹರಿಸುತ್ತವೆ. ರಾಜನಿಗೆ ನಿದ್ರೆ ಬರದೆ ಇರುವುದು, ಪೂರ್ವಕಾಲವೃತ್ತಾಂತ ಗ್ರಂಥವನ್ನು ಪಾರಾಯಾಣ ಮಾಡಿಸುವುದು, ರಾಜ ಕಂಚುಕಿಗಳು ಒಳಸಂಚು ಮಾಡಿದ ಸಂಗತಿ ಮೊರ್ದೆಕೈ ಮುಖಾಂತರ ಬೈಲಿಗೆ ಬಂದದ್ದು (ಐದು ವರ್ಷದ ಹಿಂದೆ ಆದದ್ದು), ಹಾಮಾನನ ಗಲ್ಲು ಮರ ಸಿದ್ದವಾದದ್ದು (5:14), ತಕ್ಷಣ ಹಾಮಾನನ ಪ್ರಾಕಾರ ಪ್ರವೇಶ ಮತ್ತು ರಾಜನು ಸನ್ಮಾನಿಸತಕ್ಕ ವ್ಯಕ್ತಿ ತಾನೆ ಎಂಬ ಆತನ ಊಹೆ  ಇವೆಲ್ಲಾ ಘಟನೆಗಳ ಮೇಲೆ ದೇವರ ಸಾರ್ವಭೌಮತೆಯನ್ನು ಸಾಕ್ಷೀಕರಿಸುತ್ತವೆ. ಕಥೆಯು ತೆರೆದುಕೊಂಡಂತೆ ಈ ಹಿಂದೆ ಪ್ರಾಮುಖ್ಯವಲ್ಲವೆಂಬಂತೆ ತೋರಿದ ಸಂದರ್ಭಗಳೆಲ್ಲವೂ ನಿರ್ಣಾಯಿಕ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ನಮ್ಮಲ್ಲಿ ಪ್ರತಿಯೊಂದರಲ್ಲಿ ಸಹ ದೇವರಿಗೆ ಮೆಚ್ಚಿಕೆಯಾಗದ ಗುಣಸ್ವಭಾವದ ಕುರಿತಾದ ಕೆಲವು ಅಂಶಗಳಿವೆ, ಬಹುಶಃ ಅದು ಗರ್ವ ಅಥವಾ ಸೊಕ್ಕಾಗಿರಬಹುದು, ಸ್ವಾರ್ಥಮಯ ಆಕಾಂಕ್ಷೆ ಅಥವಾ ಕೆರಳಿಸುವಿಕೆ ಆಗಿರಬಹುದು ಅಥವಾ ನಮ್ಮನ್ನು ಇತರರಿಗಿಂತ ಉತ್ತಮವೆಂದು ಕಾಣುವಂತೆ ಮಾಡುವ ಆಶೆಯಾಗಿರಬಹುದು. ದೇವರು ಇವುಗಳನ್ನೆಲ್ಲಾ ತೆಗೆದುಹಾಕಬೇಕೆಂದು ಪ್ರಾರ್ಥಿಸುವುದರ ಬದಲು ಈ ಸಂಗತಿಗಳೆಲ್ಲಾ ನಮ್ಮ ಜೀವನದಲ್ಲಿ ಬೆಳೆಯುವಂತೆ ಅನುಮತಿಸುವಾಗ ನಮ್ಮ ಅನೀತಿಯ ಕಾರಣದಿಂದ ಆಗುವ ಎಲ್ಲಾ ರೀತಿಯ ಪರಿಣಾಮಗಳನ್ನು ನಾವು ಅನುಭವಿಸಬೇಕಾಗುತ್ತದೆ.

ಈ ಅಧ್ಯಾಯದಲ್ಲಿನ ಹಾಮಾನನ ಅನುಭವವು ಶತಮಾನಗಳ ನಂತರ ಒಬ್ಬ ಪ್ರಖ್ಯಾತ ಫರಿಸಾಯನ ಮನೆಯಲ್ಲಿ ಯೇಸುವು ಹೇಳಿದಂತಹ ವಿಷಯದಂತೆಯೆ ಇದೆ. *"ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು"* (ಲೂಕ 14:11).

ವಿಶ್ವಾಸಿಗಳಾದ ನಾವು ದೇವರಿಗೆ ಮೆಚ್ಚಿಕೆಯಾಗದೆ ಇರುವ ನಮ್ಮ ಗುಣಸ್ವಭಾವದ ಕ್ಷೇತ್ರಗಳನ್ನು ಗುರುತಿಸುವುದು ಅತೀ ಪ್ರಾಮುಖ್ಯವಾದದ್ದು ಆಗಿದೆ. ಅವೆಲ್ಲವನ್ನು ನಾವು ದೇವರ ಮುಂದೆ ತಂದು ನಮ್ಮಿಂದ ಅಂತಹ ಲಕ್ಷಣಗಳನ್ನು ತೆಗೆದುಹಾಕಬೇಕೆಂದು ದೇವರಬಳಿ ಕೇಳಬೇಕಾಗಿದೆ. "ಅನೀತಿಯನ್ನು ಗುರುತಿಸುವುದು" ಈ ಅಧ್ಯಯನದ ವಿಷಯವಸ್ತುವಾಗಿದೆ.

## ಪ್ರಶ್ನೆಗಳು

1. ಈ ಅಧ್ಯಾಯದಲ್ಲಿನ ಯಾವ ಘಟನೆಗಳು ಕಾಕತಾಳೀಯವೆಂಬಂತೆ (ಸಹಘಟನೆ) ತೋರಿದರೂ ಅವು ಕಥೆಯ ಅಭಿವೃದ್ಧಿಗೆ (ಬೆಳವಣಿಗೆ)ಯೆಡೆಗೆ ನಡೆಸುತ್ತವೆ?
2. ಒಳಸಂಚು ಮಾಡಿದ ಸಂಗತಿಯನ್ನು ಬೈಲಿಗೆ ತರುವಲ್ಲಿ ಮೊರ್ದೆಕೈಯ ಪಾತ್ರವನ್ನು ತಿಳಿದಾಗ ಅರಸನು ಅದಕ್ಕೆ ಹೇಗೆ ಪ್ರತಿಕ್ರಯಿಸುತ್ತಾನೆ (ವ. 2–6)?
3. ಆ ನಿರ್ದಿಷ್ಟವಾದ ರಾತ್ರಿಯಲ್ಲಿ ಅರಸನಾದ ಅಹಷ್ವೇರೋಷ ಮತ್ತು ಹಾಮಾನನ ಕ್ರಮಗಳಲ್ಲಿ ನಾವು ವ್ಯಂಗ್ಯವನ್ನು ಕಾಣಬಹುದು (ವ. 1–6 ಮತ್ತು 5:14)?
4. ವ. 6ರಲ್ಲಿ ಅರಸನಾದ ಅಹಷ್ವೇರೋಷನಿಂದ ಮತ್ತು 3:8ರಲ್ಲಿ ಹಾಮಾನನಿಂದ ಕೊಡಲ್ಪಟ್ಟ ಮಾಹಿತಿಯ ಸಂಧಿಗ್ಧತೆಯಲ್ಲಿ ಎಲ್ಲಿ ನಾವು ವ್ಯಂಗ್ಯವನ್ನು ಕಾಣಬಹುದು?
5. ವ. 7–9ರಲ್ಲಿ ಅರಸನ ಪ್ರಶ್ನೆಗೆ ಆತನು ತೋರುವ ಪ್ರತಿಕ್ರಿಯೆಯ ಮೂಲಕ ಹಾಮಾನನ ಗುಣಸ್ವಭಾವದ ಬಗ್ಗೆ ನಾವೇನನ್ನು ಕಲಿಯಬಹುದು?
6. ಈ ಐತಿಹಾಸಿಕ ದಿನದ ಘಟನೆಗಳ ಸಂಧರ್ಭದಲ್ಲಿ ರಾಜನಾದ ಅಹಷ್ವೇರೋಷ, ಮೊರ್ದೆಕೈ ಮತ್ತು ಹಾಮಾನರು ಏನೆಂದು ಭಾವಿಸುತ್ತಾರೆಂಬುದಾಗಿ ನೀವು ಯೋಚಿಸುವಿರಿ?
7. ಮೊರ್ದೆಕೈಯೊಂದಿಗೆ ಪಟ್ಟಣವನ್ನೆಲ್ಲಾ ಸವಾರಿ ಮಾಡಿದ ನಂತರ ಹಾಮಾನನು ತನ್ನ ಪತ್ನಿ ಮತ್ತು ಸ್ನೇಹಿತರಿಂದ ಆದರಣೆಯನ್ನು ಬಯಸುತ್ತಾನೆ. ಆದರೆ ಈ ಬಾರಿ ಆತನು ವಿಭಿನ್ನವಾದ ಪ್ರತಿಕ್ರಿಯೆಯನ್ನು ಸ್ವೀಕರಿಸುತ್ತಾನೆ (ಹೋಲಿಸಿ 5:14). ಈ ಬಾರಿ ಆತನ ಪತ್ನಿ ಮತ್ತು ಸ್ನೇಹಿತರು ಹೇಗೆ ಈ ಸನ್ನಿವೇಶವನ್ನು ವ್ಯಾಖ್ಯಾನಿಸಿ ಹಾಮಾನನಿಗೆ ಪ್ರತಿಕ್ರಯಿಸುತ್ತಾರೆ (ವ. 12–14)? ಯಾಕೆ?
8. ಹೇಗೆ ಆತನ ಪತ್ನಿ ಮತ್ತು ಸ್ನೇಹಿತರು ಹಾಮಾನನಿಂದ ತಮ್ಮನ್ನು ದೂರವಿರಿಸಿಕೊಳ್ಳುವಂತೆ ಕಾಣುತ್ತಾರೆ?

9. ಹೇಗೆ ಹಾಮಾನನ ಜೀವಿತವು ಲೂಕ 14:11ರಲ್ಲಿನ ಯೇಸು ಕ್ರಿಸ್ತನ ಮಾತುಗಳಲ್ಲಿನ ಉದಾಹರಣೆಯಂತೆ ಇದೆ?

10. ಈ ಅಧ್ಯಾಯದಲ್ಲಿ ದಾಖಲಿಸಲ್ಪಟ್ಟ ಅನೇಕ ಘಟನೆಗಳನ್ನು ಒಟ್ಟಾಗಿ ಸೇರಿಸುವುದಕ್ಕಾಗಿ ದೇವರು ಶಾಂತವಾಗಿ ಕಾರ್ಯಮಾಡುತ್ತಿದ್ದನು. ತನ್ನ ಯೋಜನೆಗಳನ್ನು ಯಶಸ್ವಿಗೊಳಿಸಲು ಆತನು ಪ್ರಾಮುಖ್ಯತೆಯಿಲ್ಲದ ಸಂಗತಿಗಳನ್ನು ಉಪಯೋಗಿಸುತ್ತಾನೆ. ತನ್ನ ಉದ್ದೇಶಕ್ಕಾಗಿ ನಿಮ್ಮ ಜೀವನದಲ್ಲಿ ದೇವರು ಪ್ರಾಮುಖ್ಯತೆಯಿಲ್ಲದ ಅಂಶ (ಸಂಗತಿ)ಗಳನ್ನು ಉಪಯೋಗಿಸಿದ ಒಂದು ಸಂದರ್ಭವನ್ನು ವಿವರಿಸಿರಿ. ನಿಮ್ಮ ಸಾಕ್ಷಿಗಳನ್ನು ಹಂಚಿಕೊಳ್ಳಿರಿ.

11. ನಿಮ್ಮ ಯೋಚನೆಗೆ ಬರುವ ಎಲ್ಲಾ ಕ್ರಿಸ್ತನಲ್ಲಿರುವಂತಹ ಗುಣಗಳನ್ನು ಪಟ್ಟಿಮಾಡಿರಿ. ಸ್ವತಃ ನಿಮ್ಮ ಪ್ರಾರ್ಥನೆಯನ್ನು ಮಾರ್ಗದರ್ಶಿಸಿ, ನಿಮ್ಮೊಂದಿಗೆ ಮಾತನಾಡಲಿ. ನಿಮ್ಮ ಜೀವನದಲ್ಲಿ ಅವಶ್ಯವಿರುವ ಗುಣವನ್ನು ಕಂಡುಕೊಳ್ಳುವಲ್ಲಿ ಮುಕ್ತಮನಸ್ಸಿನಿಂದಿರಿ.

12. ಈ ಹಿಂದಿನ ಪ್ರಶ್ನೆಯಲ್ಲಿ ನಿಮ್ಮ ಅವಿಷ್ಕಾರವನ್ನು ಮತ್ತೊಮ್ಮೆ ನೋಡಿರಿ. ನಿಮ್ಮ ಜೀವನದ ಈ ಕ್ಷೇತ್ರದಲ್ಲಿ ದೇವರ ಬಿಡುಗಡೆಯ ಶಕ್ತಿಯು ಕಾರ್ಯಮಾಡುವಂತೆ ಅನುವು ಮಾಡಿಕೊಡಲು ಈ ವಾರದಲ್ಲಿ ನೀವು ಯಾವ ಒಂದು ಹೆಜ್ಜೆಯನ್ನು ತೆಗೆದುಕೊಳ್ಳುವಿರಿ?

13. ನಿಮ್ಮ ಗುಣಸ್ವಭಾವವನ್ನು ಹೆಚ್ಚಾಗಿ ಕ್ರಿಸ್ತನ ಸ್ವಾರೂಪ್ಯಕ್ಕೆ ರೂಪಾಂತರಿಸುವಂತೆ ಪವಿತ್ರಾತ್ಮನ ನಿರಂತರ ಕಾರ್ಯಕ್ಕಾಗಿ ಪ್ರಾರ್ಥಿಸಿರಿ.

# ಅಧ್ಯಯನ 7: ಹಾಮಾನನು ಗಲ್ಲಿಗೇರಿಸಲ್ಪಟ್ಟದ್ದು, ಅಧ್ಯಾಯ 7

## ಟಿಪ್ಪಣಿಗಳು

ಕಥೆಯುದ್ದಕ್ಕೂ ಎಸ್ತೇರಳು ಮತ್ತು ಮೊರ್ದೆಕೈರಿಬ್ಬರೂ ನ್ಯಾಯ (ಸರಿ)ವಾದದ್ದನ್ನೆ ಮಾಡಲು ಆರಿಸಿಕೊಂಡಿದ್ದಾರೆ. ಆದಾಗ್ಯೂ ಅವರು ಈ ನಾಶನವನ್ನು ಎದುರಿಸುತ್ತಾರೆ. ಗರ್ವಿಷ್ಠ, ಕೋಪಿಷ್ಠ ಮತ್ತು ಕಹಿತನದ ಹಾಮಾನನು ಯೆಹೂದ್ಯರನ್ನು ನಾಶಮಾಡುವ ತನ್ನ ಕುತಂತ್ರದಲ್ಲಿ ಈವರೆಗೂ ಸಫಲನಾಗಿದ್ದಾನೆ. ಆದರೆ ಈ ಅಧ್ಯಾಯದಲ್ಲಿ ಅರಸನು ಮೊರ್ದೆಕೈಗಾಗಿ ಸಿದ್ಧಪಡಿಸಿದ್ದ ಗಲ್ಲುಕಂಬಕ್ಕೆ ಹಾಮಾನನನ್ನು ಏರಿಸುವುದರ ಮೂಲಕ ಎಸ್ತೇರಳು ಮತ್ತು ಮೊರ್ದೆಕೈಗೆ ನ್ಯಾಯ ಸಿಗುವುದನ್ನು ನಾವು ಕಾಣಬಹುದು. ಒಳಸಂಚು ಬಯಲಾದಾಗ ಪುನಃ ವ್ಯಂಗ್ಯ ಕಾರ್ಯಮಾಡುವುದನ್ನು ನಾವು ಕಾಣಬಹುದು.

ರಾಜನಾದ ಅಹಷ್ವೇರೋಷ ಮತ್ತು ಆತನ ಸರದಾರನಾದ ಹಾಮಾನಿಗಾಗಿ ಸಿದ್ಧಪಡಿಸಿದ್ದ ತನ್ನ ಎರಡನೇ ಔತಣಕೂಟದಲ್ಲಿ ಎಸ್ತೇರಳು – "ನಾನು ಮತ್ತು ನನ್ನ ಜನರು, ಜನರಿಂದ ಕೊಲ್ಲಲ್ಪಟ್ಟು ಸಂಹಾರವಾಗಲು ಮತ್ತು ನಿರ್ನಾಮವಾಗುವುದಕ್ಕಾಗಿ ಮಾರಲ್ಪಟ್ಟೆವು" ಎಂಬ ಕಠೋರ ಪದಗಳಿಂದ ತನ್ನೆಲ್ಲಾ ಪರಿಸ್ಥಿತಿಯನ್ನು ರಾಜನಿಗೆ ಕೊಟ್ಟ ಲಂಚವನ್ನು ಸೂಚಿಸುತ್ತದೆ (ನೋಡಿ. 3:9 ಮತ್ತು 4:7).

"ಸ್ಥಿರವಾದ ಗುಣಸ್ವಭಾವ" ಎಂಬುದು ಈ ಅಧ್ಯಯನದ ವಿಷಯವಸ್ತುವಾಗಿದೆ. ನಾವು ಈ ಜೀವಿತದಲ್ಲಿ ನ್ಯಾಯವನ್ನು ಕಾಣದೆ ಇದ್ದರೂ ಸಹ ನಮ್ಮ ಗುಣಸ್ವಭಾವವು ಆತನ ಗುಣಮಟ್ಟಕ್ಕನುಸಾರವಾಗಿ ಇರಬೇಕೆಂದು ಬಯಸುತ್ತಾನೆ.

ಎಸ್ತೇರಳು ಮತ್ತು ಮೊರ್ದೆಕೈ ನಮಗೆ ಒಳ್ಳೆಯ ಮಾದರಿಗಳಾಗಿದ್ದಾರೆ. ಅವರ ಗುಣಸ್ವಭಾವವು ಸ್ಥಿರವಾದುದ್ದಾಗಿದೆ.

## ಪ್ರಶ್ನೆಗಳು

1. ಈ ಹಿಂದೆ ಮರೆಯಾಗಿದ್ದು ಆದರೆ ಈಗ ಪ್ರಕಟಗೊಂಡ ಈ ಅಧ್ಯಾಯದಲ್ಲಿನ ಎಲ್ಲಾ ಸತ್ಯಗಳನ್ನು ಪಟ್ಟಿಮಾಡಿರಿ.
2. ಎಸ್ತೇರಳು ಹೇಗೆ ತನ್ನ ಮನವಿಯನ್ನು ಅರಸನ ಮುಂದೆ ಇಡುತ್ತಾಳೆ (ವ. 3–4)?
3. ಎಸ್ತೇರಳು ತನ್ನ ಮನವಿಯನ್ನು ಅರಸನ ಮುಂದೆ ಇಟ್ಟಾಗ ಅರಸನ ಮತ್ತು ಹಾಮಾನರಲ್ಲಿ ಎಂತಹ ಆಲೋಚನೆ ಮತ್ತು ಭಾವನೆಗಳು ಬಂದಿರಬಹುದು (ವ. 6–7)
4. ಈ ಅಧ್ಯಾಯದ ಘಟನೆಗಳ ಕುರಿತಾದ ವ್ಯಂಗ್ಯವೇನಾಗಿದೆ?
5. ವ. 6–8 ಹಾಮಾನನ ಗುಣಸ್ವಭಾವದ ಬಗ್ಗೆ ಏನೆಂದು ತಿಳಿಸುತ್ತದೆ?
6. ಎಸ್ತೇರಳು, ಮೊರ್ದೆಕೈ ಮತ್ತು ಹಾಮಾನರ ಜೀವಿತಗಳಲ್ಲಿ ನ್ಯಾಯವು ಹೊರಬರುವುದನ್ನು ನೀವು ಹೇಗೆ ಕಾಣುವಿರಿ?
7. ಈ ಅಧ್ಯಾಯದಲ್ಲಿ ನ್ಯಾಯ ಮತ್ತು ಸರಿಯಾದದ್ದು ಮಾಡುವುದು, ಹೇಗೆ ಇವೆರಡೂ ಒಟ್ಟಾಗಿ ಕಾರ್ಯಮಾಡುತ್ತವೆ?
8. ಪ್ರಸ್ತುತ ಅನ್ಯಾಯವನ್ನೆ ಕಾಣುವಂತಹ ಸನ್ನಿವೇಶಗಳಲ್ಲಿ ನ್ಯಾಯವನ್ನು ನೀವು ಹೇಗೆ ಹುಡುಕುವಿರಿ ಅಥವಾ ಸರಿಯಾದದ್ದನ್ನು ಮಾಡುವಿರಿ (ವ್ಯಕ್ತಿಗತವಾಗಿ ಅಥವಾ ಒಂದು ವಿದ್ಯಾರ್ಥಿ ಗುಂಪಾಗಿ ಅಥವಾ ಒಂದು ಸಭಾ ಅನ್ಯೋನತೆಯಾಗಿರಬಹುದು)?
9. ಒಂದು ವೇಳೆ ನ್ಯಾಯವು ಸಿಗದೆ ಇದ್ದರೆ ನೀವು ಹೇಗೆ ಪ್ರತಿಕ್ರಯಿಸುವಿರಿ?
10. ಪ್ರಶ್ನೆ 7ರ ಉತ್ತರದಲ್ಲಿ ನ್ಯಾಯ ಮತ್ತು ಸರಿಯಾದುದ್ದನ್ನು ಮಾಡುವುದೆರಡೂ ಸಹ ಹಾಮಾನ ಮತ್ತು ಮೊರ್ದೆಕೈ ಜೀವಿತಗಳಲ್ಲಿ ಹೇಗೆ ಕಾರ್ಯಮಾಡುತ್ತವೆಂಬುದನ್ನು ನಾವು ನೋಡಿದ್ದೇವೆ. ಆದರೆ ಸ್ವತಃ ನಮ್ಮ ಜೀವಿತಗಳಲ್ಲಿ ಯಾವಾಗಲೂ ಈ ರೀತಿ ಆಗುವುದನ್ನು ನಾವು ಕಾಣುವುದಿಲ್ಲ. ಸ್ವತಃ ನಿಮ್ಮ ಜೀವಿತದ ಹೋರಾಟಗಳಲ್ಲಿ ಈ ಸಂಘರ್ಷವನ್ನು ನೀವು ಹೇಗೆ ನಿಭಾಯಿಸುವಿರಿ?
11. ನಮ್ಮನ್ನು ಸುತ್ತಿರುವ ಅನೀತಿಯ ಹೊರತಾಗಿಯು ದೇವರ ನೈತಿಕ ಗುಣಮಟ್ಟವನ್ನು ಪ್ರತಿಬಿಂಬಿಸುವ ಒಂದು "ಸ್ಥಿರವಾದ ಗುಣಸ್ವಭಾವ"ಕ್ಕಾಗಿ ಪ್ರಾರ್ಥಿಸಿರಿ.
12. ಅನ್ಯಾಯಕ್ಕಾಗಿ ನಿಮ್ಮ ಹೃದಯ ಒಡೆಯುವ ಒಂದು ಕ್ಷೇತ್ರಕ್ಕಾಗಿ ಪ್ರಾರ್ಥಿಸಿರಿ.

# ಅಧ್ಯಯನ 8: ಅರಸನ ಆಜ್ಞೆ, ಅಧ್ಯಾಯ 8

## ಟಿಪ್ಪಣಿಗಳು

ಕೆಲವೊಮ್ಮೆ ನ್ಯಾಯವು ನಾವು ಬಯಸಿದ ರೀತಿಯಲ್ಲಿಯೇ ಬರುತ್ತದೆ. ಮತ್ತು ಕೆಲವು ಸಮಯ ನಾವು ದೇವರ ಮಾರ್ಗಗಳಿಂದ ಆಶ್ಚರ್ಯಗೊಳ್ಳುತ್ತೇವೆ ಎಂಬುದನ್ನು ಎಸ್ತೇರಳ ಪುಸ್ತಕವು ತೋರಿಸುತ್ತದೆ. ಆದರೆ ಒಂದು ಅಂಶ ಮಾತ್ರ ಯಾವಾಗಲೂ ನಿಶ್ಚಿತವಾಗಿ ಇರುವಂತದ್ದಾಗಿದೆ: ಅದು ದೇವರು ನಂಬಿಗಸ್ತನಾಗಿದ್ದಾನೆ ಆತನು ತನ್ನ ಜನರಿಗೆ ನ್ಯಾಯ ಒದಗಿಸುತ್ತಾನೆ ಮತ್ತು ಅವರಿಗಾಗಿ ಚಿಂತಿಸುತ್ತಾನೆ, ತಾಳಲಾರದ ವಿರೋಧದಿಂದ ಹಿಡಿದು ಅತಿ ಸಣ್ಣ ಕಾಳಜಿವರೆಗೂ ದೇವರು ನಮಗೆ ನಂಬಿಗಸ್ತನಾಗಿಯೇ ಇರುತ್ತಾನೆ.

ಈ ಅಧ್ಯಾಯದಲ್ಲಿ ನಾವು ಎಸ್ತೇರಳು ಮತ್ತು ಮೊರ್ದೆಕೈಗಾಗಿ ಪರಿಸ್ಥಿತಿಗಳನ್ನೆಲ್ಲಾ ಹೇಗೆ ಸರಿಯಾಗಿ ಹೊಂದಿಸುತ್ತಾನೆಂಬುದನ್ನು ಕಾಣಬಹುದು. ದೇವರು ನಂಬಿಗಸ್ತನಾಗಿರುವುದರ ನಿಮಿತ್ತ ಯೆಹೂದ್ಯರು ಹರ್ಷಿಸಿ ಸಂಭ್ರಮಿಸುತ್ತಾರೆ. ದೇವರಿಗಾಗಿನ ನಮ್ಮ ಪ್ರತಿಕ್ರಿಯೆ ಸಹ ಇದೇ ಆಗಿರಬೇಕು. ಎಸ್ತೇರಳ ಜೀವನವನ್ನು ರಕ್ಷಿಸಿ ಹಾಮಾನನು ಸತ್ತನು ಆಕೆಗೆ ಕೊಟ್ಟಂತೆ ಮತ್ತು ಮೊರ್ದೆಕೈ ಜೀವವನ್ನು ರಕ್ಷಿಸಿ ಆತನನ್ನು ಪರ್ಶಿಯಾದಲ್ಲಿನ ಎಲ್ಲಾ ಮುಖಂಡರ ನಡುವೆ ಉನ್ನತ ಸ್ಥಾನವನ್ನು ಕೊಟ್ಟು ಆತನಿಗೆ ಒದಗಿಸಿದಂತೆಯೆ ದೇವರು ತನ್ನೆಲ್ಲಾ ಜನರಿಗೂ ಸಹ ಒದಗಿಸುತ್ತಾನೆ. ದೇವರು ಪಾಪ ಮತ್ತು ದುಃಖದಲ್ಲಿನ ಜೀವಿತದಿಂದ ನಮ್ಮನ್ನು ರಕ್ಷಿಸಿ ಪರಲೋಕ ರಾಜ್ಯಕ್ಕೆ ಸಹಬಾಧ್ಯರನ್ನಾಗಿ ಇಟ್ಟಿದ್ದಾನೆ ಮತ್ತು ಪರಲೋಕದಲ್ಲಿ ಆತನೊಂದಿಗೆ ಇರುವ ನಿತ್ಯಜೀವವನ್ನು ನಮಗೆ ಅನುಗ್ರಹಿಸಿದ್ದಾನೆ.

ರಾಜನಾದ ಅಹಷ್ವೇರೋಷನು ಒಂದು ಹೊಸ ಆಜ್ಞೆಯನ್ನು ಬರೆಯುವ ಅಧಿಕಾರವನ್ನು ಮೊರ್ದೆಕೈಗೆ ಕೊಡುತ್ತಾನೆ. ರಾಜಲೇಖಕರು ಕರೆಯಲ್ಪಟ್ಟರು, ಹೊಸ ರಾಜಾಜ್ಞೆಯನ್ನು ಪರ್ಷಿಯನ್ ಸಾಮ್ರಾಜ್ಯದ ಆಯಾ ಸಂಸ್ಥಾನಗಳ ಬರಹಗಳಲ್ಲಿಯೂ ಮತ್ತು ಆಯಾ ಜನಾಂಗಗಳ ಭಾಷೆಯಲ್ಲಿಯೂ ಲಿಖಿತವಾದವು. ಇದು ಕ್ರಿ.ಪೂ. 474ರಲ್ಲಿ ಸಂಭವಿಸಿತು. ಮರು ವರ್ಷದಲ್ಲಿ ಯೆಹೂದ್ಯರ ರಕ್ಷಣೆಯನ್ನು ನೆನಪಿಸುವ ಮತ್ತು ಪೂರೀಮ್ ಎಂಬುದಾಗಿ ಕರೆಯಲ್ಪಡುವ ಯೆಹೂದ್ಯರ ಒಂದು ಹೊಸ ಹಬ್ಬವನ್ನು ಆಚರಿಸಲಾಗುತ್ತದೆ.

**"ದೇವರ ನಂಬಿಗಸ್ತಿಕೆಯನ್ನು ಕೊಂಡಾಡುವುದು"** ಈ ಅಧ್ಯಯನದ ವಿಷಯವಸ್ತುವಾಗಿದೆ.

## ಪ್ರಶ್ನೆಗಳು

**1.** ರಾಜನ ಕ್ರಮಗಳ ಮೂಲಕ ಎಸ್ತೇರಳು ಮತ್ತು ಮೊರ್ದೆಕೈ ದೇವರಿಂದ ಸನ್ಮಾನಿಸಲ್ಪಟ್ಟ ರೀತಿಯನ್ನು ಪಟ್ಟಿಮಾಡಿರಿ.

**2.** ಈ ಅಧ್ಯಾಯದಲ್ಲಿ (ವ. 3–6) ಎಸ್ತೇರಳ ಗುಣಸ್ವಭಾವ ಮತ್ತು ಆಕೆಯ ಹೃದಯ (ಮನಸ್ಸು)ದ ಬಗ್ಗೆ ಇನ್ನೂ ಹೆಚ್ಚಾಗಿ ಕಲಿಯುತ್ತೇವೆ. ಆಕೆಯ ಬಗ್ಗೆ ಈ ವಚನಗಳು ಏನೆಂದು ತಿಳಿಸುತ್ತವೆ.

**3.** ಎಸ್ತೇರಳ ಮನವಿಗೆ ರಾಜಾನಾದ ಅಹಷ್ವೇರೋಷನು ಹೇಗೆ ಪ್ರತಿಕ್ರಿಯಿಸುತ್ತಾನೆ (ವ. 7–10)?

**4.** ಹೇಗೆ ಮೊರ್ದೆಕೈ ಹೊರಡಿಸಿದ ಆಜ್ಞೆಯು (ವ. 11–13), ಮೊದಲ ಆಜ್ಞೆಯನ್ನು ಮುರಿಯದೆ (ನೋಡಿ. 3:13–14) ವ. 5–6 ರಲ್ಲಿ ಎಸ್ತೇರಳು ಕೇಳಿದ್ದನ್ನು ಒದಗಿಸುತ್ತದೆ?

**5.** ತನ್ನ ಜನರಿಗಾಗಿನ ದೇವರ ಒದಗಿಸುವಿಕೆ(ಅವಕಾಶ) ಮತ್ತು ರಕ್ಷಣೆ ಹೇಗಿತ್ತು?

**6.** ದೇವರ ಒದಗಿಸುವಿಕೆ ಮತ್ತು ರಕ್ಷಣೆಗೆ ಯೆಹೂದ್ಯರ ಪ್ರತಿಕ್ರಿಯೆ ಏನಾಗಿತ್ತು (ವ. 15–17)?

**7.** ಅಧ್ಯಾಯ 4ರಲ್ಲಿನ ಮೊದಲ ರಾಜಾಜ್ಞೆಗೆ ತೋರಿದ ಯೆಹೂದ್ಯರ ಪ್ರತಿಕ್ರಿಯೆಯು (4:1–3, 15–16) ಹೇಗೆ ಈ ಅಧ್ಯಾಯದಲ್ಲಿ ಘಟನೆಗಳಿಗೆ ಮಾರ್ಗವನ್ನು ಸುಗಮಗೊಳಿಸುತ್ತದೆ?

**8.** ಎಸ್ತೇರಳ ಪುಸ್ತಕದಲ್ಲಿ ಮೊರ್ದೆಕೈ ಮತ್ತು ಎಸ್ತೇರಳ ಕುಟುಂಬವು ಸರಿ(ನ್ಯಾಯ)ವಾದುದ್ದನ್ನು ಮಾಡಿ ನಂಬಿಗಸ್ತಿಕೆಯಿಂದ ದೇವರನ್ನು ಸೇವಿಸುತ್ತದೆ. ಇದಕ್ಕಾಗಿ ಅವರು ಈ ಲೋಕದ ಪ್ರತಿಫಲವನ್ನು ಹೊಂದುತ್ತಾರೆ ಏನೇ ಆದರೂ ನಾವು ಜಾಗೂರಕರಾಗಿರಬೇಕು, ಸರಿ(ನ್ಯಾಯ)ವಾದುದನ್ನು ಮಾಡುವ ಆಯ್ಕೆಯಲ್ಲಿ ಈ ಲೋಕದ ಪ್ರತಿಫಲ(ಬಹುಮಾನ)ವೇನಮಗೆ ಪ್ರೇರಣೆಯಾಗಬಾರದು. ಯಾಕೆ?

**9.** ಎಸ್ತೇರಳು ತನ್ನ ಜನರಿಗಾಗಿ ಆಳವಾದ ಕಾಳಜಿ ಮತ್ತು ಕನಿಕರವನ್ನು ಹೊಂದುತ್ತಾಳೆ. ಯಾವ ವ್ಯಕ್ತಿಗಾಗಿ ನೀವು ಇದೆ ರೀತಿಯ ಕಾಳಜಿಯನ್ನು ಹೊಂದಲು ಬಯಸುವಿರಿ? ಅವನಿಗಾಗಿ/ ಅವಳಿಗಾಗಿ/ ಅವರಿಗಾಗಿ ನೀವು ಕಾಳಜಿಯನ್ನು ಹೇಗೆ ಬೆಳೆಸುವಿರಿ?

**10.** ನಮ್ಮ ಜೀವಿತಗಳಲ್ಲಿ ದೇವರು ಕಾರ್ಯಮಾಡಬೇಕೆಂದು ಕಾದಿರುವಾಗ ಹೇಗೆ ನಾವು ಪ್ರತಿಕ್ರಯಿಸಬಹುದು?

**11.** ಕಳೆದ ವಾರವನ್ನೊಮ್ಮೆ ಯೋಚಿಸಿ ನೋಡಿರಿ ಮತ್ತು ದೇವರು ನಿಮಗೆ ಹೇಗೆ ನಂಬಿಗಸ್ತನಾಗಿದ್ದನೆಂಬುದನ್ನು ಹಂಚಿಕೊಳ್ಳಿರಿ. ಯಾವ ರೀತಿಯಲ್ಲಿ ನೀವು ದೇವರಿಗೆ ನಿಮ್ಮ ಸಂತೋಷವನ್ನು ಹಂಚಿಕೊಳ್ಳುವಿರಿ.

**12**. ನಿಮ್ಮ ಗುಂಪಿಗೆ ಅಥವಾ ವೈಯಕ್ತಿಕವಾಗಿ ನಿಮಗೆ ದೇವರ ನಂಬಿಗಸ್ತಿಕೆಗಾಗಿ ಕೃತಜ್ಞತಾಪೂರ್ವಕವಾಗಿ ಪ್ರಾರ್ಥಿಸಿರಿ.

**13**. ಈಗಲೂ ದೇವರು ಕಾರ್ಯಮಾಡಬೇಕೆಂದು ಕಾಯುತ್ತಿರುವ ಗುಂಪಿನ ಸದಸ್ಯರಿಗಾಗಿ ಪ್ರಾರ್ಥಿಸಿರಿ.

# ಅಧ್ಯಯನ 9: ಯೆಹೂದ್ಯರ ವಿಜಯೋತ್ಸವ, ಅಧ್ಯಾಯ 9–10.

## ಟಿಪ್ಪಣಿಗಳು

ಮೊರ್ದೆಕೈ ಆಜ್ಞೆಯನ್ನು ಬರೆದು ಎಂಟು ತಿಂಗಳು ಮತ್ತು ಇಪ್ಪತ್ತು ದಿಗಳಾದ ನಂತರ ಅದರ ಆದೇಶಗಳು ಹೊರಡಿಸಲ್ಪಟ್ಟವು. ಇವು ದುಷ್ಟ ಹಾಮಾನನಿಂದ ಪ್ರಚೋದಿಸಲ್ಪಟ್ಟವು. ಈ ಹಿಂದಿನ ಆಜ್ಞೆಯ ಆದೇಶಗಳೊಂದಿಗೆ ಸಂಘರ್ಷಕ್ಕೊಳಗಾದವು. ಆದರೆ ವಷ್ಟರು, ರಾಜ್ಯಪಾಲರುಗಳು ಮತ್ತು ಪರ್ಷಿಯನ್ ಸಂಸ್ಥಾನದ ಆಡಳಿತ ವರ್ಗದವರು ರಾಜಾಜ್ಞೆಯ ಪುಸ್ತಕ ಕ್ರಮವನ್ನು ಪಾಲಿಸಲು ಸಾಕಷ್ಟು ಜ್ಞಾನವುಳ್ಳವರಾಗಿದ್ದರು.

ಅಧ್ಯಾಯ 9ರಲ್ಲಿ ದಾಖಲಿಸಲ್ಪಟ್ಟ ಘಟನೆಗಳು ಮಾರ್ಚ್ ಕ್ರಿ.ಪೂ. 473ರಲ್ಲಿ ನಡೆದವು. ಅದೇ ವರ್ಷ ಪೂರೀಮ್ ಹಬ್ಬವನ್ನು ಮೊದಲ ಬಾರಿಗೆ ಆಚರಿಸಲಾಯಿತು. ಪಾಲ್ಗುನಮಾಸದ 14 ಮತ್ತು 15ನೇ ದಿನಗಳು ಆಚರಣೆಯ ದಿನಗಳಾಗಿದ್ದವು. ಮೊದಲ ದಿನ ಪ್ರಾಂತ್ಯಗಳಲ್ಲಿ, ಎರಡನೇ ದಿನ ಶೂಷನ್ನಿನಲ್ಲಿ ಇದನ್ನು ಆಚರಿಸಲಾಯಿತು. ಇಂದು ಜಗತ್ತಿನಾದ್ಯಂತ ಯೆಹೂದ್ಯರು 14ರಂದು ಮತ್ತು ಯೆರೂಸಲೇಮಿನಲ್ಲಿ 15ರಂದು ಪೂರೀಮ್ ಹಬ್ಬವನ್ನು ಆಚರಿಸುತ್ತಾರೆ.

ಎಸ್ತೇರಳು ಪುಸ್ತಕದ ಕಡೇ ಅಧ್ಯಾಯವು ಅನೇಕ ಓದುಗರ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡಿ ತೊಂದರೆಯ ಪ್ರಶ್ನೆಗಳನ್ನು ಎಬ್ಬಿಸುತ್ತದೆ. ಜೀವವನ್ನು ನಾಶಮಾಡುವುದರ ವರ್ಣನೆಯು ಸ್ಥಿರವಲ್ಲದ್ದಾಗಿದೆ. ಆದರೆ ಇದು ಹಳೇ ಒಡಂಬಡಿಕೆಯ ಕಾಲದಲ್ಲಿ ದೇವರಾದುಕೊಂಡ ಜನರ ಅನುಭವದ ಒಂದು ಭಾಗವಾಗಿತ್ತು. ಆದರೆ ಈ ವಾಕ್ಯಭಾಗವು ವಿಶಿಷ್ಟವಾದುದ್ದಾಗಿದೆ, ಯಾಕೆಂದರೆ ಸಾವಿನ (ಮರಣದ) ವರ್ಣನೆಯು ಸಂಭ್ರಮದ ಹಿನ್ನಲೆಯಲ್ಲಿ ಬರುವುದಾಗಿದೆ. ಈ ಸಂಭ್ರಮವು ಜೀವವನ್ನು ಕಳಕೊಂಡದ್ದಾಕ್ಕಾಗಿ ಅಲ್ಲ, ಆದರೆ ಇದು ತನ್ನ ಜನರನ್ನು ಸರ್ವನಾಶದಿಂದ ತಪ್ಪಿಸಿದ ದೇವರ ನಂಬಿಗಸ್ತಿಕೆಗಾಗಿ ಆಚರಿಸುವುದಾಗಿದೆ.

ದೇವರು ನಮ್ಮ ಮಧ್ಯದಲ್ಲಿ ಏನನ್ನಾದರು ಮಾಡುವಾಗ ಅದನ್ನು ಜ್ಞಾಪಿಸಿಕೊಳ್ಳುವುದು ಮತ್ತು ಸಂಭ್ರಮಿಸುವುದು ಅತೀ ಪ್ರಾಮುಖ್ಯವಾಗಿದೆ. ಆತನ ಒಳ್ಳೆತನವನ್ನು ನೆನಪಿಗೆ ತಂದುಕೊಳ್ಳುವಾಗ ನಮ್ಮ ನಂಬಿಕೆ ಬಲಗೊಳ್ಳುತ್ತದೆ ಮತ್ತು ಆಗ ನಮ್ಮ ಜೀವನದಲ್ಲಿನ ಮುಂದಿನ ಸವಾಲು/ಹೋರಾಟವನ್ನು ಎದುರಿಸಲು ನಮ್ಮ ಸಾಮರ್ಥ್ಯ ಹೆಚ್ಚುತ್ತದೆ. ಈ ಅಧ್ಯಯನದ ವಿಷಯವಸ್ತುವು ನೆನಪು ಮಾಡಿಕೊಳ್ಳುವುದು ಮತ್ತು ಆಚರಿಸುವುದಾಗಿದೆ.

## ಪ್ರಶ್ನೆಗಳು

1. ಪಾಲ್ಗುನಮಾಸದ ಹದಿನಾಲ್ಕು ಮತ್ತು ಹದಿನೈದನೆ ದಿನದ ಘಟನೆಗಳನ್ನು ಸಾರಾಂಶಗೊಳಿಸಿರಿ.
2. ಈ ದಿನಗಳಲ್ಲಿ ಯೆಹೂದ್ಯರಿಂದ ಸಂಹರಿಸಲ್ಪಟ್ಟ ಜನರನ್ನು ವಿವರಿಸಿರಿ (9:5–17).
3. ಯೆಹೂದ್ಯರು ಮೂರು ಪ್ರತ್ಯೇಕ ಸಮಯಗಳಲ್ಲಿ ಸುಲಿಗೆಗೆ ಕೈ ಹಾಕಲಿಲ್ಲವೆಂದು ಗ್ರಂಥಕರ್ತನು ತಿಳಿಸುತ್ತಾನೆ. ಅರಸನ ಸಮ್ಮತಿಯ ಹೊರತಾಗಿಯೂ ಯಾಕೆ ಯೆಹೂದ್ಯರು ಸುಲಿಗೆಗೆ ಕೈ ಹಾಕಲಿಲ್ಲ (9:10, 15–16, ಹೋಲಿಸಿ 8:11)
4. ಈ ಅಧ್ಯಾಯವನ್ನು ಓದುವಾಗ ನಿಮಗೆ ಯಾವ ರೀತಿಯ ಆಲೋಚನೆ ಮತ್ತು ಭಾವನೆಗಳುಂಟಾಗುತ್ತವೆ?
5. ಮೊರ್ದೆಕೈ ಮತ್ತು ಎಸ್ತೇರಳು ಪೂರೀಮ್ ಹಬ್ಬದ ಆಚರಣೆಯನ್ನು ಎಲ್ಲಾ ಯೆಹೂದ್ಯರಿಗೂ ಒಂದು ರಜಾದಿನವನ್ನಾಗಿ ಘೋಷಿಸುತ್ತಾರೆ. ಈ ಆಚರಣೆಯ (ಸಂಭ್ರಮ)ಯ ಉದ್ದೇಶವೇನಾಗಿತ್ತು (9:20–27)?
6. 9:28ರಲ್ಲಿನ ಮಾತು ಎಲ್ಲಾ ಯೆಹೂದ್ಯರಿಗೆ ಆಚರಣೆಯ ಮಹತ್ವಕ್ಕೆ ಒತ್ತುಕೊಡುತ್ತದೆ. ಯಾಕೆ ಪೂರೀಮನ್ನು ಲಕ್ಷಿಸುವುದು ಅಷ್ಟೊಂದು ನಿರ್ಣಾಯಕವಾದುದ್ದಾಗಿದೆ?
7. ಪೂರೀಮ್ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಯೆಹೂದ್ಯರಿಗೆ ಸೂಚಿಸಲಾಯಿತು (9:22)?
8. ಪೂರೀಮ್ ಆಚರಣೆಯು ನಮ್ಮೆಲ್ಲಾ ಆಚರಣೆಗಳಿಗಿಂತ ಹೇಗೆ ವಿಭಿನ್ನವಾಗಿದೆ?
9. ದೇವರು ತನ್ನ ಜನರನ್ನು ರಕ್ಷಿಸಿ, ಆತನೆಡೆಗಿನ ತಮ್ಮ ವಿಧೇಯತೆಗಾಗಿ ಎಸ್ತೇರಳು ಮತ್ತು ಮೊರ್ದೆಕೈಯನ್ನು ಆಶೀರ್ವದಿಸುತ್ತಾನೆ. ಕಥೆಯ ಕೊನೇಯ ಭಾಗದಲ್ಲಿ ಎಸ್ತೇರಳು ಮತ್ತು ಮೊರ್ದೆಕೈಗೆ ಏನಾಗುತ್ತದೆ (9:29–10:3)?
10. ಮೊರ್ದೆಕೈಯಲ್ಲಿನ ಯಾವ ಗುಣಗಳು ಆತನನ್ನು ಒಬ್ಬ ಗೌರಾವಾನ್ವಿತ ನಾಯಕನನ್ನಾಗಿ ಮಾಡಿದವು?

11. ಸತ್ಯವೇದದುದ್ದಕ್ಕೂ ದೇವರು ತನ್ನ ಜನರನ್ನು ರಕ್ಷಿಸಿ ಮತ್ತು ಅವರಿಗೆ ಒದಗಿಸಿದ ಸಮಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಆದೇಶೀಸುತ್ತಾನೆ. ಕ್ರೈಸ್ತರಾದ ನಮಗೆ ದೇವರ ನಂಬಿಗಸ್ತಿಕೆಯ ಕಾರ್ಯವನ್ನು ನೆನಪುಮಾಡಿಕೊಳ್ಳುವುದು ಯಾಕೆ ಅಷ್ಟು ಪ್ರಾಮುಖ್ಯವಾಗಿದೆ?

12. ನಿಮಗಾಗಿ ಅಥವಾ ನಿಮ್ಮ ಗುಂಪಿಗಾಗಿ/ ಸಭೆಗಾಗಿ ನೀವು ನೆನಪುಮಾಡಿಕೊಳ್ಳಲೇಬೇಕಾದ ದೇವರ ಒಂದು ಕಾರ್ಯ ಯಾವುದು? ಯಾವ ರೀತಿಯಲ್ಲಿ ನೀವಿದನ್ನು ಆಚರಿಸಬಹುದು?

13. ನಿಮ್ಮ ಜೀವನದಲ್ಲಿ ಆಚರಿಸಲು ಅರ್ಹವಾದ ಸಂಗತಿಗಳಿಗಾಗಿ ದೇವರನ್ನು ಸ್ತುತಿಸಿರಿ.

# ಅಧ್ಯಯನ 10: ಎಸ್ತೇರ್ ಪುಸ್ತಕದಲ್ಲಿನ ಎರಡು ಮಾದರಿಗಳು

## ಪೀಠಿಕೆ

ಈ ಪುಸ್ತಕದಲ್ಲಿ ನಾವು ಪರ್ಷಿಯನ್ ಸಂಸ್ಥಾನದಲ್ಲಿನ ಯೆಹೂದಿ ಜನಾಂಗವನ್ನು ರಕ್ಷಿಸುವುದಕ್ಕಾಗಿ ದೇವರಿಂದ ಅಸಾಮಾನ್ಯವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟ ಎಸ್ತೇರಳು ಮತ್ತು ಆಕೆಯ ಚಿಕ್ಕಪ್ಪನಾದ ಮೊರ್ದೆಕೈ ಎಂಬ ಇಬ್ಬರು ವ್ಯಕ್ತಿಗಳನ್ನು ತಿಳಿದುಕೊಳ್ಳುತ್ತೇವೆ. ಅವರಿಬ್ಬರೂ ಸಹ ಪರಂಪರೆ ಮತ್ತು ನಂಬಿಕೆಯಲ್ಲಿ ಯೆಹೂದ್ಯರಾಗಿದ್ದಾರೆ. ಅವರಿಬ್ಬರೂ ಸಹ ಪರ್ಷಿಯಾದ ಅರಸನಾದ ಅಹಷ್ವೇರೋಷನ ಆಸ್ಥಾನದಲ್ಲಿ ಉನ್ನತ ಸ್ಥಾನಮಾನವನ್ನು ಹೊಂದಿದವರಾಗಿದ್ದರು. ಇವರಿಬ್ಬರೂ ಸಹ ಅಸಾಧರಣವಾದ ಸವಾಲುಗಳನ್ನು ಎದುರಿಸಬೇಕಾಯಿತು.

ಅವರಿಬ್ಬರೂ ಸಹ ದೇವಜನರು ಅಲ್ಪಸಂಖ್ಯಾತರಾಗಿ ಚದುರಿಸಲ್ಪಟ್ಟ ಮತ್ತು ಬೆದರಿಸಲ್ಪಟ್ಟ ಸನ್ನಿವೇಶಗಳಲ್ಲಿ ಜೀವಿಸಿದರು.

ಆದರೆ ಅವರು ಬಹು ವಿಭಿನ್ನವಾಗಿ ಸಹ ಇದ್ದರು. ಎಸ್ತೇರಳು ಒಬ್ಬ ಸುಂದರವಾದ ತರುಣಿಯಾಗಿದ್ದು ಪರ್ಷಿಯಾದಲ್ಲಿ ರಾಣಿಯಾಗಿ ವಷ್ಟಿಯ ಸ್ಥಾನವನ್ನು ತುಂಬುವುದಕ್ಕಾಗಿ ಜಟಿಲವಾದ ಆಯ್ಕೆಯ ಪ್ರಕ್ರಿಯೆಗಳನ್ನು ಹಾದು ಹೋದಳು. ಆದರೆ ಆಕೆಯ ನಂಬಿಕೆ ಮತ್ತು ಜನಾಂಗಿತೆಯನ್ನು ರಾಜನ ಅಸ್ಥಾನದಲ್ಲಿ ತಿಳಿಸಲಿಲ್ಲ. ಇನ್ನೊಂದು ಕಡೆ ಮೊರ್ದೆಕೈ ತನ್ನ ಯೆಹೂದಿ ನಂಬಿಕೆ ಮತ್ತು ಜನಾಂಗಿಯತೆ ಬಗ್ಗೆ ಮುಕ್ತ ಮನಸ್ಸಿನಿಂದಿದ್ದನು. ಈತನೊಬ್ಬ ಮಧ್ಯವಯಸ್ಕ ಪುರುಷನಾಗಿದ್ದು ಪ್ರಾಯಶಃ ಅರಸನ ಕಛೇರಿಯಲ್ಲಿ ಕೆಲಸ ಮಾಡುವವನಾಗಿದ್ದು ಬಹುಶಃ ಈತನೊಬ್ಬ ನಪುಂಸಕನಾಗಿದ್ದಿರಬಹುದು (ಯಾಕೆಂದರೆ ಈತನು ಹೆಂಡತಿ ಅಥವಾ ಮಕ್ಕಳನ್ನು ಹೊಂದಿದ್ದರ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ 2:11).

ತಮ್ಮ ಮಿತಿ ಮತ್ತು ಕಷ್ಟಕರವಾದ ಪರಿಸ್ಥಿತಿಗಳ ಹೊರತಾಗಿಯೂ ಎಸ್ತೇರಳು ಮತ್ತು ಮೊರ್ದೆಕೈ ದೇವರಿಂದ ಉಪಯೋಗಿಸಲ್ಪಟ್ಟರು.

ದಕ್ಷಿಣ ಭಾರತದ ಕ್ರೈಸ್ತ ವಿಶ್ವಾಸಿಗಳಾದ ನಾವು ಸಹ ಇಂದು ವೈಯಕ್ತಿಕವಾದ ನಮ್ಮ ಮಿತಿ ಮತ್ತು ನಮ್ಮ ಕಷ್ಟದ ಪರಿಸ್ಥಿತಿಯ ಹೊರತಾಗಿಯೂ ದೇವರಿಂದ ಉಪಯೋಗಿಸಲ್ಪಡಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಹಾಗಾದರೆ ಎಸ್ತೇರಳು ಮತ್ತು ಮೊರ್ದೆಕೈಯಿಂದ ನಾವೇನನ್ನು ಕಲಿಯುತ್ತೇವೆ? ಯಾವ ರೀತಿಯಲ್ಲಿ ಅವರು ನಮಗೆ ಮಾದರಿಯಾಗಬಲ್ಲರು?

## ಗೃಹಕೆಲಸ

ಎಸ್ತೇರಳು ಅಥವಾ ಮೊರ್ದೆಕೈ ಕುರಿತಾಗಿ ಒಂದು ಪ್ರಬಂಧವನ್ನು ಬರೆಯಿರಿ. ಇದಕ್ಕೆ **"ಎಸ್ತೇರಳು ಅಥವಾ ಮೊರ್ದೆಕೈ ನನಗೊಂದು ಮಾದರಿ"** ಎಂಬುದಾಗಿ ಹೆಸರಿಡಿರಿ. ಈ ಹಿಂದಿನ 9 ಅಧ್ಯಯನಗಳಿಂದ ಮಾಹಿತಿಗಳನ್ನು ಉಪಯೋಗಿಸಿರಿ. ನಿಮ್ಮ ಪ್ರಬಂಧವು ಎರಡು ಭಾಗಗಳನ್ನು ಒಳಗೊಂಡಿರಬೇಕು:–

**ಭಾಗ 1:** ನೀವು ಆರಿಸಿಕೊಂಡ ವ್ಯಕ್ತಿಯ ಒಂದು ವಿವರಣೆ/ ಚಿತ್ರಣ

**ಭಾಗ 2:** ಯಾವ ರೀತಿಯಲ್ಲಿ ಈ ವ್ಯಕ್ತಿಯು ನಿಮಗೆ ಒಂದು ಮಾದರಿಯಾಗಿದ್ದಾರೆಂದು ವಿವರಣೆ, ನಿಮ್ಮ ವಿವರಣೆಯು ಇಂದು ದಕ್ಷಿಣ ಭಾರತದ ವಿಶ್ವಾಸಿಯಾಗಿ ನೀವು ಎದುರಿಸುತ್ತಿರುವ ಸಮಸ್ಯೆಗಳ ಮೇಲಿನ ವಿಮರ್ಶೆಯನ್ನು ಒಳಗೊಂಡಿರಬೇಕು.

# ರೂತಳು – ಉತ್ತರಗಳು

# ಉತ್ತರಗಳು 1: ನೊವೊಮಿ ಮತ್ತು ರೂತಳು, ಅಧ್ಯಾಯ 1

1. ಯೆಹೂದದಲ್ಲಿ ಬಂದ ಬರದಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಎಲೀಮೆಲೆಕನು ಮತ್ತು ಆತನ ಕುಟುಂಬ ಮೋವಾಬ್ ದೇಶಕ್ಕೆ ಹೋಗುತ್ತದೆ. ಅವರು ಅಲ್ಲಿ ಶಾಶ್ವತವಾಗಿ ನೆಲೆಯೂರುವ ಯೋಚನೆ ಮಾಡಲಿಲ್ಲ, ಆದರೆ ಅವರಲ್ಲಿ ಹತ್ತು ವರ್ಷಗಳ ಕಾಲ ವಾಸಿಸಿದರು (ವ. 3–5): ಎಲೀಮೆಲೆಕನು ಸಾಯುತ್ತಾನೆ. ಆತನ ಇಬ್ಬರು ಗಂಡು ಮಕ್ಕಳು ಬೆಳೆದು ಸ್ಥಳೀಯ ಸ್ತ್ರೀಯರನ್ನು ಮದುವೆಯಾಗುತ್ತಾರೆ. ಆದರೆ ಅವರಿಗೆ ಮಕ್ಕಳಾಗುವುಗಕ್ಕಿಂತ ಮೊದಲೇ ಅವರಿಬ್ಬರೂ ಸಾಯುತ್ತಾರೆ.
2. ಯೆಹೂದದಲ್ಲಿನ ಬರದ ಕಾಲವು ಮುಗಿಯಿತೆಂಬ ವರ್ತಮಾನವನ್ನು ಕೇಳಿದ ಕೂಡಲೆ ನೊವೊಮಿಯು ಯೆಹೂದಕ್ಕೆ ಮರಳಲು ತೀರ್ಮಾನಿಸುತ್ತಾಳೆ (ವ. 6).
3. ಈ ಎರಡು ಕಾರಣಗಳಿಂದ ನೊವೊಮಿಯು ತನ್ನ ಇಬ್ಬರು ಸೊಸೆಯಂದಿರಿಗೆ ಮೋವಾಬಿನಲ್ಲೆ ಇರಲು ಕೇಳಿಕೊಂಡಿರಬಹುದು:
    - ಮೋವಾಬು ಅವರ ಸ್ವಂತ ದೇಶವಾಗಿತ್ತು, ಮತ್ತು ಯೆಹೂದದಲ್ಲಿ ಪರದೇಶಿ ಅಪರಿಚಿತರಾಗಿರುವುದಕ್ಕಿಂತ ಮೋವಾಬಿನಲ್ಲಿ ಅವರು ಸಂತೋಷವಾಗಿ ಇರಬಹುದಿತ್ತು. ಮೋವಾಬಿನಲ್ಲಿ ಅವರಿಗೆ ಕುಟುಂಬವಿತ್ತು. ಸ್ಥಳೀಯ ಸಂಸ್ಕೃತಿಯನ್ನು ಅವರು ಬಲ್ಲವರಾಗಿದ್ದರು. ಅಲ್ಲಿ ಅವರು ತಮ್ಮ ಸ್ವಂತ ದೇವರುಗಳನ್ನು ಆರಾಧಿಸಬಹುದಾಗಿತ್ತು.
    - ಮೋವಾಬಿನಲ್ಲೆ ಅವರು ಉಳಿದುಕೊಂಡಿದ್ದರೆ ಅಲ್ಲಿ ಅವರು ಮರುವಿವಾಹವಾಗಿ ಮಕ್ಕಳನ್ನು ಪಡೆಯಬಹುದಾಗಿತ್ತು. ಆದರೆ ಇಬ್ಬರು ಮೋವಾಬ್ಯ ಸ್ತ್ರೀಯರು ಯೆಹೂದದಲ್ಲಿ ಗಂಡಂದಿರನ್ನು ಕಂಡುಕೊಳ್ಳುವ ಸಾಧ್ಯತೆಯಿರಲಿಲ್ಲ. ಮಕ್ಕಳನ್ನು ಹಡೆದು ಅವರನ್ನು ಮದುವೆ ಮಾಡಿಕೊಟ್ಟು ಎಲೀಮೆಲೆಕನ ಸಂತತಿಯನ್ನು ಮುಂದುವರಿಸಲು ಸ್ವತಃ ನೊವೊಮಿಯೇ ತೀರಾ ವರ್ಷಮೀರಿದವಳಾಗಿದ್ದಳು. ಒಂದು ವೇಳೆ ಆಕೆಗೆ ಮಕ್ಕಳು ಹುಟ್ಟಿದರೂ ಅವರು ಬೆಳೆದು ರೂತಳು ಮತ್ತು ಒರ್ಫಾಳನ್ನು ಮದುವೆಯಾಗಲು ಅನೇಕ ವರ್ಷಗಳೇ ಬೇಕಾಗಿತ್ತು.
4. ಒರ್ಫಾಳು ನೊವೊಮಿಯ ಸಲಹೆಯನ್ನು ಕೇಳುತ್ತಾಳೆ. ಆಕೆಯು ತನ್ನ ಸ್ವಂತ ಜನರ ಬಳಿಗೆ ಹೋಗಿ ಅವರ ದೇವರುಗಳನ್ನು ಆರಾಧಿಸುವವಳಾಗುತ್ತಾಳೆ (ವ. 15). ಕೆಮೋಷ್ ಎಂಬುದು ಮೋವಾಬ್ಯರ ಮುಖ್ಯ ದೇವರಾಗಿತ್ತು (ಹೋಲಿಸಿ ಅರಣ್ಯಕಾಂಡ 21:29, ನ್ಯಾಯಸ್ಥಾಪಕರು 11:24).
5. ಈ ಎರಡು ಮುಖ್ಯಕಾರಣಗಳಿಗಾಗಿ ರೂತಳು ಮೋವಾಬಿನಲ್ಲಿ ಉಳಿದುಕೊಳ್ಳಲು ಇಷ್ಟಪಡಲಿಲ್ಲ (ವ. 16–17): ತನ್ನ ಅತ್ತೆಯಾದ ನೊವೊಮಿಯು ಬದುಕಿರುವರೆಗೂ ಮತ್ತು ಆಕೆಯು ಎಲ್ಲಿಗೆ ಹೋದರು ಆಕೆಯೊಂದಿಗೆ ಇರಲು ರೂತಳು ಬಯಸುತ್ತಾಳೆ. ದೇವರು ಆಕೆಯ ಸಂಕಲ್ಪಕ್ಕೆ ಸಾಕ್ಷಿಯಾಗಿದ್ದು ಆಕೆಯ ಸಂಕಲ್ಪವು ಎರಡು ಪರಿಣಾಮಗಳನ್ನು ಒಳಗೊಂಡಿತ್ತು:
    - ಆಕೆಯು ಸಹ ನೊವೊಮಿಯಂತೆ ಇಸ್ರಾಯೇಲ್ಯಳು ಆಗಬಹುದಿತ್ತು.
    - ಆಕೆಯು ನೊವೊಮಿಯ ದೇವರಾದ ಇಸ್ರಾಯೇಲಿನ ಕರ್ತನಾದ ಯೆಹೋವನನ್ನು ಆರಾಧಿಸಬಹುದಿತ್ತು.
6. ನೊವೊಮಿ ಮತ್ತು ರೂತಳು ಬೇತ್ಲೆಹೇಮಿಗೆ ಆಗಮಿಸಿದಾಗ ಆಶ್ಚರ್ಯದಿಂದ ಸ್ವಾಗತಿಸಲ್ಪಡುತ್ತಾರೆ. ಅಲ್ಲಿದ್ದ ಸ್ತ್ರೀಯರಿಗೆ ಸಹ ನೊವೊಮಿಯನ್ನು ಗುರುತಿಸುವುದು ಕಷ್ಟಕರವಾಯಿತು (ವ. 19).
7. ಕಳೆದ ಹತ್ತು ವರ್ಷಗಳಲ್ಲಿನ ತನ್ನ ಜೀವನವನ್ನು ವಿವರಿಸಲು ನೊವೊಮಿಯು ಎರಡು ರೂಪಾಲಂಕಾರಗಳನ್ನು ಉಪಯೊಗಿಸುತ್ತಾಳೆ. (ವ. 20–21):
    - "ನೊವೊಮಿ" ಎಂಬ ಆಕೆಯ ಹೆಸರು "ಮಾರಾ" ಎಂಬುದಾಗಿ ಬದಲಾಗಬೇಕು (ನೊವೊಮಿ ಎಂದರೆ "ರಮಣೀಯಳು" ಮತ್ತು ಮಾರಾ ಎಂದರೆ ದುಃಖಿತಳು (ಕಯಿ) ಎಂದರ್ಥ. ಆಕೆಯು ಬೇತ್ಲೆಹೇಮನ್ನು ಬಿಡುವಾಗ ಆಕೆಯ ಜೀವನ ರಮಣೀಯವಾಗಿತ್ತು ಆದರೆ ಈಗ ಕಹಿಯಾಯಿತು.
    - ಆಕೆಯು ಹೋಗುವಾಗ "ಭಾಗ್ಯವಂತಳಾಗಿ" ಹೋದಳು (ಆಕೆಯ ಕುಟುಂಬವನ್ನು ಸೂಚಿಸುತ್ತದೆ: ಗಂಡ ಮತ್ತು ಇಬ್ಬರು ಯೌವನಸ್ಥ ಗಂಡು ಮಕ್ಕಳು) ಆದರೆ ಆಕೆಯು "ಗತಿಹೀನಳಾಗಿ" (ಇದು ಆಕೆಯ ಗಂಡ ಮತ್ತು ಇಬ್ಬರು ಮಕ್ಕಳನ್ನು ಕಳಕೊಂಡಿದ್ದನ್ನು ಸೂಚಿಸುತ್ತದೆ) ಹಿಂತಿರುಗಿದಳು. ಆದರೆ ಇನ್ನೊಂದು ರೀತಿಯಲ್ಲಿ ಸಹ ಆಕೆ ಗತಿಹೀನಳಾಗಿದ್ದಾಳೆ. ಆಕೆಯ ಗರ್ಭ ಬರಿದಾಗಿದೆ, ಇದರ ನಿಮಿತ್ತ ಎಲೀಮೆಲೆಕನ ಸಂತತಿಯೇ ಇಲ್ಲದಂತಾಗಿ ಬರಿದಾಗಿಬಿಡುತ್ತದೆ.
8. ಅಧ್ಯಾಯ 1ರಲ್ಲಿನ ಸ್ತ್ರೀಯರ ಗುಣಲಕ್ಷಣಗಳನ್ನು ಈ ರೀತಿ ವಿವರಿಸಬಹುದು:

- ನೊವೊಮಿ: ಈಕೆಯು ತನ್ನ ಗಂಡನಿಗೆ ನಂಬಿಗಸ್ತಳಾಗಿದ್ದು, ಆತನೊಂದಿಗೆ ಮೋವಾಬಿಗೆ ಬರುತ್ತಾಳೆ. ಈಕೆಯೊಬ್ಬ ನಂಬಿಗಸ್ತ ಇಸ್ರಾಯೇಲ್ಯಳಾಗಿರುವುದರಿಂದ ಬರವು ಮುಗಿದ ಕೂಡಲೇ ತನ್ನ ಕುಟುಂಬವನ್ನು ಮತ್ತು ತನ್ನ ಜನರೊಂದಿಗೆ ಸೇರಲು ಬೇತ್ಲೆಹೇಮಿಗೆ ತಿರುಗಿ ಬರುತ್ತಾಳೆ. ಈಕೆಯು ತನ್ನ ಇಬ್ಬರ ಸೊಸೆಯಂದಿರ ಯೋಗಕ್ಷೇಮದ ಬಗ್ಗೆ ಕಾಳಜಿವಹಿಸುತ್ತಾಳೆ ಮತ್ತು ಅವರಿಗೆ ಒಳ್ಳೆದನ್ನೆ ಹಾರೈಸುತ್ತಾಳೆ. ಅಲ್ಲದೆ ಆಕೆ ತನ್ನ ಗಂಡನ ಸಂತತಿಯ ಭವಿಷ್ಯದ ಬಗ್ಗೆ ಸಹ ಕಾಳಜಿಯುಳ್ಳವಳಾಗಿದ್ದಾಳೆ. ಈಗಾಗಲೇ ಆಕೆಯ ಇಬ್ಬರು ಗಂಡು ಮಕ್ಕಳು ಸಹ ಮಕ್ಕಳಿಲ್ಲದೆ ಸತ್ತಿದ್ದಾರೆ ಮತ್ತು ಈಗ ಮಕ್ಕಳನ್ನು ಪಡೆಯಲು ಸಹ ಆಕೆಯು ಪ್ರಾಯಮೀರಿದವಳಾಗಿದ್ದಾಳೆ. ತನ್ನ ಪರಿಸ್ಥಿತಿಗಳಾದ ಗತಿಹೀನತೆ ಮತ್ತು ದುಃಖದ ಬಗ್ಗೆ ಆಕೆ ಅರಿವುಳ್ಳವಳಾಗಿದ್ದಾಳೆ.
- ಒರ್ಫಾ: ಈಕೆಯೊಬ್ಬ ಒಳ್ಳೆಯ ಯೌವನಸ್ಥ ಸ್ತ್ರೀಯಾಗಿದ್ದಾಳೆ. ಈಕೆಯು ತನ್ನ ಅತ್ತೆಯೊಂದಿಗೆ ಬೇರೊಂದು ದೇಶದಲ್ಲಿ ನೆಲೆಸಲು ಸಿದ್ಧಳಾಗಿದ್ದಾಳೆ. ಈಕೆ ಸಹ ನೊವೊಮಿಗೆ ವಿಧೇಯಳಾಗುತ್ತಾಳೆ ಮತ್ತು ಆಕೆ ಹೇಳಿದಂತೆಯೇ ತನ್ನ ಸ್ವಂತ ದೇಶ ಮತ್ತು ಸ್ವಜನರ ಬಳಿಗೆ ಹಿಂತಿರುಗುತ್ತಾಳೆ.
- ರೂತಳು: ಈಕೆಯೊಬ್ಬ ಅಮೋಘವಾದ ಸ್ತ್ರೀಯಾಗಿದ್ದಾಳೆ. ಈಕೆಯು ಸಂಪೂರ್ಣವಾಗಿ ಬದ್ಧಳಾಗಿದ್ದು, ಇಸ್ರಾಯೇಲ್ಯಳಾಗಲು ಮತ್ತು ಇಸ್ರಾಯೇಲ್ ಜನರ ನಂಬಿಕೆಗೆ ಪರಿವರ್ತನೆಯಾಗಲು ಸಹ ಸಿದ್ಧಳಿದ್ದಾಳೆ.

# ಉತ್ತರಗಳು 2: ರೂತಳು ಬೋವಜನನ್ನು ಸಂಧಿಸುವುದು, ಅಧ್ಯಾಯ 2

## ಉತ್ತರಗಳು

1. ಬೋವಜನು ಸತ್ತುಹೋದ ನೊವೊಮಿಯ ಗಂಡನಾದ ಎಲೀಮೆಲೆಕನ ಗೋತ್ರಕ್ಕೆ ಸೇರಿದವನಾಗಿದ್ದಾನೆ (ವ. 1). ಇದು ಯೆಹೂದ ಕುಲದ ಗೋತ್ರವಾಗಿತ್ತು. ಹಾಗೆಯೇ ಬೋವಜನು ಮದುವೆಯ ಮೂಲಕ (ವ. 20) ನೊವೊಮಿ ಮತ್ತು ರೂತಳಿಗೆ ಸಂಬಂಧಿಕನಾದನು (ವ. 20). ಈತನೊಬ್ಬ "ಧನವಂತನಾಗಿದ್ದನು" (ವ. 1). ಇದರರ್ಥ ಈತನೊಬ್ಬ ಭೂಮಾಲೀಕನಾಗಿದ್ದು ಬೇತ್ಲೆಹೇಮ್ ಪಟ್ಟಣದಲ್ಲಿ ಈತನಿಗೆ ಒಂದು ಒಳ್ಳೆಯ ಹೆಸರಿತ್ತು.
2. ತನಗೆ ಮತ್ತು ತನ್ನ ನೊವೊಮಿಗಾಗಿ ಆಹಾರವನ್ನು ಪೂರೈಸಿಕೊಳ್ಳಲು ರೂತಳು ಹೊಲಕ್ಕೆ ಹೋಗಲು ಬಯಸಿದಳು. (ವ. 2, 7). ಅವರಿಗೆ ಯಾವುದೇ ಆದಾಯದ ಮೂಲವಿರಲಿಲ್ಲ. ಬಡ ಜನರಿಗಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿ ನಿಬಂಧನೆಗಳಿದ್ದವು (ವಿಶೇಷವಾಗಿ ಅನಾಥರು, ವಿಧವೆಯರು ಮತ್ತು ಪರದೇಶಿಗಳಿಗಾಗಿ). ಸುಗ್ಗಿಯ ಹೊಲದಿಂದ ಅವರು ಹಕ್ಕಲನ್ನು ಆಯ್ದುಕೊಳ್ಳಬಹುದಿತ್ತು. ಆದರೆ ಈ ರೀತಿ ಮಾಡಲು ಎಲ್ಲಾ ಭೂಮಾಲೀಕರು ಉದಾರತೆ ತೋರುತ್ತಿರಲಿಲ್ಲ. ಹಾಗಾಗಿ ಒಬ್ಬ ಒಳ್ಳೆಯ ಮತ್ತು ಉದಾರ ಮನುಷ್ಯನೊಬ್ಬನ ಹೊಲವನ್ನು ರೂತಳು ಕಂಡುಕೊಂಡಿದ್ದು ಅತೀ ಪ್ರಾಮುಖ್ಯವಾದುದ್ದಾಗಿತ್ತು.
3. ಹೊಲದಲ್ಲಿ ರೂತಳು ಎದುರಿಸಿದ ಮುಖ್ಯ ಅಪಾಯವೆಂದರೆ ಗಂಡಸರ ಕಿರುಕುಳ (ವ. 9, 22). ಖಂಡಿತವಾಗಿ ಆಕೆಯು ಭೂಮಿಯ ಒಡೆಯ ಮತ್ತು ಆತನ ಆಳುಗಳಿಂದ ಹೊಡೆಯಲ್ಪಟ್ಟು ಹೊರಹಾಕಲ್ಪಡಬಹುದಾಗಿತ್ತು.
4. ಅನೇಕ ರೀತಿಯಲ್ಲಿ ಬೋವಜನು ರೂತಳಿಗೆ ಸಹಾಯ ಮಾಡಿದನು:
    - ಆತನು ಆಕೆಗೆ ಸುಗ್ಗಿ ತೀರುವವರೆಗು ತನ್ನ ಹೊಲದಲ್ಲಿ ಹಕ್ಕಲಾಯಬೇಕೆಂದು ಅನುಮತಿಸಿದನು (ವ. 8, 21, 23).
    - ರೂತಳೊಂದಿಗೆ ಉದಾರವಾಗಿರಬೇಕೆಂದು ಆತನು ತನ್ನ ಸೇವಕರಿಗೆ ಹೇಳಿದನು. ಅವರು ಆಕೆಗೆ ಸಿವುಡುಗಳ ಮಧ್ಯದಲ್ಲಿ ಸಹ ಹಕ್ಕಲಾಯಲು ಅನುಮತಿಸಬೇಕಿತ್ತು ಮತ್ತು ಕಟ್ಟುಗಳಿಂದ ಸಹ ತೆನೆಗಳನ್ನು ಕಿತ್ತು ಹಾಕಬೇಕಿತ್ತು.
    - ಆತನು ತನ್ನ ಸೇವಕರುಗಳಿಗಾಗಿ ತಂದ ನೀರಿನ ಪಾತ್ರೆಗಳಿಂದಲೇ ನೀರನ್ನು ಕುಡಿಯಲು ಆಕೆಗೆ ಅನುಮತಿಸಿದನು (ವ. 9). ಆತನು ತನ್ನೊಂದಿಗೆ ಆಹಾರವನ್ನು ತಿನ್ನಲು ಮತ್ತು ದ್ರಾಕ್ಷಾರಸವನ್ನು ಕುಡಿಯಲು ಆಕೆಯನ್ನು ಕರೆದನು (ವ. 14). ಆತನು ಆಕೆಗೆ ತಿಂದು (ಅಲ್ಲದೆ ಆಕೆಯ ಅತ್ತೆಗಾಗಿ ಸಹ) ಉಳಿಸಿಕೊಳ್ಳುವಷ್ಟು ಆಹಾರವನ್ನು ಕೊಟ್ಟನು (ವ. 18).
    - ಆತನು ಆಕೆಯೊಂದಿಗೆ ಸಭ್ಯವಾಗಿ ನಡೆದುಕೊಂಡನು ಮತ್ತು ಆಕೆಗೆ ಉಪಯುಕ್ತವಾದ ಸಲಹೆಗಳನ್ನು ಕೊಟ್ಟನು (ವ. 8–9, 12)
5. ಬೋವಜನ ಹೊಲದಲ್ಲಿ ಹಕ್ಕಲಾಯ್ದ ಮೊದಲ ದಿನದ ಸಂಜೆಯ ವೇಳೆಗೆ ರೂತಳು ಮನೆಗೆ ಹಿಂತಿರುಗಿಬಂದಾಗ ನೊವೊಮಿ ಆಶ್ಚರ್ಯಗೊಳ್ಳಲು ಮೂರು ಕಾರಣಗಳಿವೆ ಎಂಬುದಾಗಿ ನಾನು ನೆನೆಸುತ್ತೇನೆ:
    - ರೂತಳು ತನ್ನೊಂದಿಗೆ ಬಹಳಷ್ಟು ಜವೆಗೋದಿಯನ್ನು ತಂದಿದ್ದಳು ಅದು ಒಂದು ದಿನದಲ್ಲಿ ಒಬ್ಬ ಮಹಿಳೆಯು ಆಯಬಹುದಾದ ಹಕ್ಕಲಿಗಿಂತಲೂ ಹೆಚ್ಚಾಗಿತ್ತು (ವ. 18).
    - ರೂತಳು ತನಗಾಗಿ ತಂದ ಉಳಿದ ಆಹಾರದ ಬಗ್ಗೆ ಸಹ ನೊವೊಮಿಗೆ ಆಶ್ಚರ್ಯವಾಗಿರಬೇಕು (ವ. 18).
    - ಆದರೆ ಎಲ್ಲಕ್ಕಿಂತ ಮಿಗಿಲಾಗಿ ಆಕೆ ದೇವರ ಮಾರ್ಗದರ್ಶನದ ಬಗ್ಗೆ ಹೆಚ್ಚಾಗಿ ಅಚ್ಚರಿಗೊಂಡಳು. ಅವರಿಗೆ ಸಮೀಪ ಬಂಧುವಾದ ಬೋವಜನಿಗೆ ಸೇರಿದ ಹೊಲಕ್ಕೆ ದೇವರು ರೂತಳನ್ನು ಕರೆದೊಯ್ಯುತ್ತಾನೆ (ವ. 20). ಈ ವಚನವು ಈ ಕಥೆಯಲ್ಲಿನ ಒಂದು ತಿರುವು ಆಗಿದ್ದು ನೊವೊಮಿಯ ನಿರಾಶೆಯ ಕತ್ತಲೆಯು ಒಂದು ಸಣ್ಣ ನಿರೀಕ್ಷೆಯಿಂದ ತೂರಿಕೊಂಡು ಹೋಗುತ್ತದೆ.
6. ಗೋದಿಯ ಸುಗ್ಗಿಯಕಾಲವು ತೀರುವವರೆಗೂ ರೂತಳು ಬೋವಜನ ಹೊಲದಲ್ಲಿ ಹಕ್ಕಲಾಯುತ್ತಾಳೆ (ವ. 23). ಈ ಒಂದು ಕಾಲವು ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೆಲವು ವಾರಗಳವರೆಗೆ ಇರುತ್ತದೆ. ಮೊದಲು ಜವೆಗೋದಿಯ ನಂತರ ಗೋದಿಯು ಕೊಯ್ಲಿಗೆ ಬರುತ್ತಿತ್ತು.
7. ಬೋವಜನ ಗುಣಸ್ವಭಾವವನ್ನು ಈ ರೀತಿಯಾಗಿ ವರ್ಣಿಸಬಹುದು:

- ಈತನೊಬ್ಬ ದೇವರಿಗೆ ಭಯಪಡುವ ಮನುಷ್ಯನಾಗಿದ್ದು, ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಿ ರೂತಳಿಗೆ ತನ್ನ ಹೊಲದಲ್ಲಿ ಹಕ್ಕಲಾಯಲು ಅನುಮತಿಸಿದನು. ರೂತಳ ಜೀವನದ ಪರಿಸ್ಥಿತಿಗಳಲ್ಲಿ ದೇವರ ಹಸ್ತವು ಕಾರ್ಯಗತವಾಗಿರುವುದನ್ನು ಅರಿತುಕೊಂಡ ಈತನು ಆಕೆಗೆ ದೇವರ ಆಶೀರ್ವಾದವನ್ನು ಕೋರಿದನು (ವ. 12).

- ಈತನೊಬ್ಬ ಸಭ್ಯ ವ್ಯಕ್ತಿಯಾಗಿದ್ದು ತನ್ನ ಸೇವಕರು ಮತ್ತು ಒಬ್ಬ ವಿದೇಶಿ ಯೌವನಸ್ಥ ಸ್ತ್ರೀಯನ್ನು ಬಹಳಷ್ಟು ಗೌರವ ಮತ್ತು ಸಭ್ಯತೆಯಿಂದ ನೋಡಿಕೊಳ್ಳುತ್ತಾನೆ.

- ಈತನೊಬ್ಬ ಉದಾರ ವ್ಯಕ್ತಿಯಾಗಿದ್ದು ಧರ್ಮಶಾಸ್ತ್ರದಲ್ಲಿ ನಿಗಧಿಯಾದ ಧಾನ್ಯಕ್ಕಿಂತಲೂ ಹೆಚ್ಚಾದ ಧಾನ್ಯವನ್ನು ಆಯಲು ರೂತಳಿಗೆ ಅನುಮತಿಸಿದನು. ಅಲ್ಲದೆ ತನ್ನ ಆಹಾರವನ್ನು ಸಹ ಆಕೆಯೊಂದಿಗೆ ಹಂಚಿಕೊಂಡು ಉಳಿದಿದ್ದನ್ನು ನೊವೊಮಿಗಾಗಿ ಮನೆಗೆ ಕೊಂಡೊಯ್ಯಲು ಅನುಮತಿಸಿದನು.

- ಈತನು ರೂತಳಂತ ಯೌವನಸ್ಥ ಸ್ತ್ರೀಯ ಸುರಕ್ಷಿತತೆಗಾಗಿ ಕಾಳಜಿಯನ್ನು ವಹಿಸುವ ಮನುಷ್ಯನಾಗಿದ್ದನು.

8. ಈ ಅಧ್ಯಾಯದಲ್ಲಿ ನೊವೊಮಿಯ ಗುಣಸ್ವಭಾವವನ್ನು ಈ ರೀತಿ ವಿವರಿಸಬಹುದು:

   - ಈಕೆಯೊಬ್ಬ ದೇವರಿಗೆ ಭಯಪಡುವ ಸ್ತ್ರೀಯಾಗಿದ್ದು ಬೋವಜನಿಗೆ ಸೇರಿದ ಹೊಲಕ್ಕೆ ರೂತಳನ್ನು ಮಾರ್ಗದರ್ಶಿಸಿದವರು ದೇವರೇ ಎಂಬುದಾಗಿ ಅರಿತುಕೊಂಡಳು. ಈಗ ದೇವರು ತಮ್ಮ ಭವಿಷ್ಯವನ್ನು ನೋಡಿಕೊಳ್ಳುತ್ತಾನೆಂದು ಆಕೆಗೆ ಗೊತ್ತಿತ್ತು (ವ. 20).

   - ಈಕೆಯು ರೂತಳ ಬಗ್ಗೆ ಕಾಳಜಿಯನ್ನು ಹೊಂದಿದ್ದು, ಆಕೆಯ ದಿನವು ಹೇಗಿತ್ತೆಂಬುದನ್ನು ತಿಳಿಯಲು ಬಯಸಿದಳು (ವ. 29). ಅಲ್ಲದೆ ರೂತಳ ಸುರಕ್ಷತೆಯ ಬಗ್ಗೆ ಸಹ ಆಕೆ ಕಾಳಜಿಯುಳ್ಳವಳಾಗಿದ್ದಳು (ವ. 22).

9. ರೂತಳ ಗುಣಸ್ವಭಾವವು ಈ ಅಧ್ಯಾಯದಲ್ಲಿ ಇಂತಿದೆ:

   - ಈಕೆಯೊಬ್ಬ ಶ್ರಮಪಟ್ಟು ಕೆಲಸ ಮಾಡುವ ಸ್ತ್ರೀಯಾಗಿದ್ದು ತನ್ನನ್ನು ಮತ್ತು ತನ್ನ ವಯಸ್ಸಾದ ಅತ್ತೆಯನ್ನು ನೋಡಿಕೊಳ್ಳಲು ಸಿದ್ಧಳಿದ್ದಳು.

   - ಈಕೆಯೊಬ್ಬ ಸಭ್ಯ ಸ್ತ್ರೀಯಾಗಿದ್ದು ಬೋವಜನ ಹೊಲದಲ್ಲಿ ಹಕ್ಕಲಾಯಲು ಅನುಮತಿಯನ್ನು ಕೇಳುತ್ತಾಳೆ. ಅಲ್ಲದೆ ಈಕೆ ಬೋವಜನೊಂದಿಗೆ ಗೌರವದಿಂದ ವರ್ತಿಸುತ್ತಾಳೆ.

   - ಈಕೆ ಒಬ್ಬ ಒಳ್ಳೆಯ ಹೆಸರುಳ್ಳ ಸ್ತ್ರೀಯಾಗಿದ್ದಳು. ಈಕೆಯ ಕಷ್ಟ, ನೊವೊಮಿಯೊಂದಿಗಿನ ನಂಬಿಗಸ್ಥಿಕೆ ಮತ್ತು ಹೊಸ ದೇಶ ಮತ್ತು ಹೊಸ ನಂಬಿಕೆಯೊಂದಿಗಿನ ಈಕೆಯ ಸಂಕಲ್ಪದ ಬಗ್ಗೆ ಬೋವಜನು ಕೇಳಿದ್ದನು. (ವ. 11–12).

   - ಈಕೆಯೊಬ್ಬ ಕೃತಜ್ಞತಾಭಾವವುಳ್ಳ ಸ್ತ್ರೀಯಾಗಿದ್ದು ತನಗೆ ಮತ್ತು ತನ್ನ ಅತ್ತೆಗಾಗಿ ಮಾಡಿದ ಸಹಾಯಕ್ಕಾಗಿ ಬೋವಜನನ್ನು ಪ್ರಶಂಸಿಸಿ ಆತನಿಗೆ ಕೃತಜ್ಞತೆ ಹೇಳುತ್ತಾಳೆ (ವ. 13).

   - ಈಕೆಯೊಬ್ಬ ದೀನ ಮನಸುಳ್ಳ ಸ್ತ್ರೀಯಾಗಿದ್ದು ಒಬ್ಬ ಪರದೇಶಿ ಮತ್ತು ಯೌವನಸ್ಥ ಹೆಣ್ಣಾಗಿ ಬೋವಜನಂತಹ ಧನವಂತನ ಮುಂದೆ (ವ. 10, 13) ತನ್ನ ಸ್ಥಾನಮಾನವನ್ನು ತಿಳಿದವಳಾಗಿದ್ದಳು. ಆತನ ದಯೆ ಮತ್ತು ಉದಾರತೆಗಾಗಿ ಬೇಡಿಕೆಯಿಡಲು ಆಕೆಗೆ ಯಾವುದೇ ಹಕ್ಕಿರಲಿಲ್ಲ. ತನ್ನ ಸುಗ್ಗಿ (ಬೆಳೆ) ರೂತಳಂತಹ ಯೌವನಸ್ಥ ವಿದೇಶಿ ಮಹಿಳೆಯೊಂದಿಗೆ ಆತನು ತನ್ನ ಮನಸ್ಸಿಗೆ ಬಂದಂತೆ ಇರಬಹುದಿತ್ತು.

10. ಕಥೆಯ ವಿಶಾಲಾರ್ಥದಲ್ಲಿ "ವಿಧಿಯಂತೆಯೆ" ಎಂಬ ಹೇಳಿಕೆಯನ್ನು ಈ ದೈನಂದಿನ ಘಟನೆ ಸನ್ನಿವೇಶಗಳ ಹಿಂದೆ ದೇವರ ಹಸ್ತವು ಕಾರ್ಯಮಾಡುತ್ತಿತ್ತು ಎಂಬುದನ್ನು ತನ್ನ ಓದುಗರಿಗೆ ಸೂಚಿಸಲು ಗ್ರಂಥಕರ್ತನು ಈ ರೀತಿಯಾಗಿ ಹೇಳುತ್ತಾನೆಂಬುದಾಗಿ ಅರ್ಥೈಸಿಕೊಳ್ಳಬೇಕಿದೆ. ಕನ್ನಡದ JV ಯು "ದೈವಾನುಗ್ರದಿಂದ" ಎಂಬ ಭಾಷಾಂತರದ ಮೂಲಕ ಇದನ್ನು ಮುಕ್ತವಾಗಿ ಹೇಳಿದೆ. ಖಂಡಿತವಾಗಿ ತಾನು ಹಕ್ಕಲನ್ನು ಆಯ್ದ ಮೊದಲ ದಿನದಲ್ಲಿ ರೂತಳಿಗೆ ಏನಾಯಿತೆಂಬುದನ್ನು ಆಕೆಯ ಸುವಿಧಿ ಅಥವಾ ಹಣೆಬರಹವೆಂಬುದಾಗಿ ಅನೇಕರು ಅರ್ಥೈಸಿಕೊಳ್ಳುತ್ತಾರೆ. ಆದರೆ ರೂತಳ ಮತ್ತು ನೊವೊಮಿಯ ಭವಿಷ್ಯವನ್ನು ಮತ್ತು ಇಸ್ರಾಯೆಲ್ ಇತಿಹಾಸದ ಭವಿಷ್ಯವನ್ನು ದೇವರು ಆಯೋಜಿಸಿದ್ದಾನೆ ಎಂಬುದಾಗಿ ದೇವರಿಗೆ ಭಯಪಡುವವರು ಬಲ್ಲವರಾಗಿದ್ದಾರೆ. ಈ ಘಟನೆಗಳ ಮೂಲಕ ದೇವರು ಲೋಕರಕ್ಷಕನಾದ ಯೇಸು ಕ್ರಿಸ್ತನ ಬರೋಣಕ್ಕೆ ಸಿದ್ಧತೆ ನಡೆಸುತ್ತಿದ್ದಾನೆಂಬುದಾಗಿ ಹೊಸ ಹೊಡಂಬಡಿಕೆಗೆ ಸಂಬಂಧಿಸಿದವರಾದ ನಾವು ತಿಳಿದಿರುವವರಾಗಿದ್ದೇವೆ.

# ಉತ್ತರಗಳು 3: ಒಕ್ಕುವ ಕಣದಲ್ಲಿ ರೂತಳು ಮತ್ತು ಬೋವಜ, ಅಧ್ಯಾಯ 3

## ಉತ್ತರಗಳು

1. ರಾತ್ರಿಗಾಗಿ ಸ್ನಾನ ಮಾಡಿಕೊಂಡು ಒಳ್ಳೆಯ ಬಟ್ಟೆಯನ್ನು ಹಾಕಿಕೊಂಡು ತನ್ನನ್ನು ಸಿದ್ಧಪಡಿಸಿಕೊಳ್ಳಬೇಕೆಂದು ನೊವೊಮಿಯು ರೂತಳಿಗೆ ಹೇಳುತ್ತಾಳೆ. ಅಲ್ಲದೆ ತೈಲವನ್ನು ಸಹ ಹಚ್ಚಿಕೊಳ್ಳಬೇಕೆಂದು ಹೇಳುತ್ತಾಳೆ (ವ. 3). ಈ ಸಿದ್ಧತೆಗಳೆಲ್ಲಾ ಸಾಧ್ಯವಾದಷ್ಟು ರೂತಳು ಬೋವಜನಿಗೆ ಆಕರ್ಷಣೀಯವಾಗಿ ಕಾಣುವಂತೆ ಮಾಡುವುದು ನೊವೊಮಿಯ ಕಾರಣವಾಗಿತ್ತು. ಬೋವಜನು ತನ್ನ ಸಮೀಪಬಂಧುಗಳಲ್ಲಿ ಒಬ್ಬನೆಂಬುದಾಗಿ ಅವಳಿಗೆ ಗೊತ್ತಿತ್ತು (ವ. 2:20). ಅಲ್ಲದೇ ಆತನು ಒಳ್ಳೆಯ ಮತ್ತು ಗೌರವಾನ್ವಿತ ವ್ಯಕ್ತಿ ಎಂಬುದಾಗಿ ಆಕೆ ತಿಳಿದಿದ್ದಳು. ಅಲ್ಲದೇ ಬೋವಜನು ರೂತಳಿಗೆ ಒಬ್ಬ ಸರಿಯಾದ ಗಂಡನಾಗಬಲ್ಲನು (ವ. 2) ಮತ್ತು ಆಕೆಗಾಗಿ ಒಂದು ಒಳ್ಳೆಯ ಮನೆಯನ್ನು ಸಹ ಒದಗಿಸಬಲ್ಲನೆಂದು ಸಹ ಆಕೆ ಯೋಚಿಸಿದ್ದಳು. (ವ. 1)

2. ಸುಗ್ಗಿ ಹಬ್ಬದ ಆಹಾರವನ್ನು ಒಳಗೊಂಡ ಭೋಜನದ ನಂತರ ಬೋವಜನು ದೀರ್ಘ ನಿದ್ರೆಯಲ್ಲಿದ್ದನು. ಹಾಗಾಗಿ ತನ್ನ ಕಾಲುಗಳ ಬಳಿಯಲ್ಲಿ ಯಾರೋ ಇದ್ದಾರೆಂಬುದಾಗಿ ಆತನು ತಿಳಿದುಕೊಂಡನು. ಆದರೆ ಪ್ರಾರಂಭದಲ್ಲಿ ಆತನಿಗೆ ರೂತಳನ್ನು ಗುರುತಿಸಲಾಗಲಿಲ್ಲ (ವ. 8–9).

3. ಬೋವಜನು ತನ್ನ ಹೊದಿಕೆಯ ಅಂಚನ್ನು ಆಕೆಯ ಮೇಲೆ ಹಾಕಿ ಆಕೆಯನ್ನು ಆಶೀರ್ವದಿಸುವ ಮೂಲಕ ಆಕೆಯ ಮನವಿಗೆ ಪ್ರತಿಕ್ರಯಿಸಿದನು (ವ. 10). ಹಾಗೆಯೇ ಆತನು ನಿನ್ನ ಪತಿಭಕ್ತಿಯು ಮುಂಚಿಗಿಂತ ವಿಶೇಷವಾಗಿ ಪ್ರತ್ಯಕ್ಷವಾಯಿತು ಎಂದು ಹೇಳಿದನು (ವ. 10). ಬೋವಜನು ಈ ಹಿಂದೆ ರೂತಳೊಂದಿಗಿನ ಸಂಭಾಷಣೆಯ ಕುರಿತಾಗಿ ಈ ರೀತಿ ಹೇಳುತ್ತಾನೆ ಎಂಬುದಾಗಿ ನಾನೆಣಿಸುತ್ತೇನೆ. *"ನೀನು ಅತ್ತೆಯನ್ನು ಪ್ರೀತಿಸಿ ತಂದೆತಾಯಿಗಳನ್ನೂ ಸ್ವದೇಶವನ್ನೂ ಬಿಟ್ಟು ನೀನು ಈ ವರೆಗೂ ಅರಿಯದ ಜನರ ಬಳಿಗೆ ಬಂದಿರುವೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ"* (ವ. 2:11). ಆದರೆ ರೂತಳು ಇನ್ನೂ ಆಕರ್ಷಣೀಯವಾಗಿರುವ ಪುರುಷನ ಬಳಿಗೆ ಹೋಗದೆ ಮತ್ತು ಯೌವನಸ್ಥನ ಬಳಿ ಸಹಾಯಕೋರಲು ಹೋಗದೆ ರಕ್ಷಣೆಗಾಗಿ ತನ್ನ ಬಳಿಗೆ ಬಂದದ್ದಕ್ಕಾಗಿ ಬೋವಜನು ಮೆಚ್ಚಿದನು. ಬೋವಜನು ಪ್ರಾಯದಲ್ಲಿರುವ ರೂತಳಿಗಿಂತಲೂ ಅನೇಕ ವರ್ಷ ಹಿರಿಯವನಾಗಿದ್ದಾನೆಂಬುದು ಆತನ ಹೇಳಿಕೆಯಿಂದ ತಿಳಿದುಬರುತ್ತದೆ. ನೀನು ಹೇಳಿದ್ದನ್ನೆಲ್ಲಾ ಮಾಡುವೆನೆಂಬುದಾಗಿ ಬೋವಜನು ರೂತಳಿಗೆ ಮಾತುಕೊಡುತ್ತಾನೆ (ವ. 11). ಹೀಗೆ ಎಲೀಮೆಲೆಕನ ಕುಟುಂಬದ ಆಸ್ತಿಯನ್ನು ತಾನು ಬಿಡಿಸಿ, ರೂತಳೊಂದಿಗೆ ಭರವಸೆಕೊಡುತ್ತಾನೆ.

4. ಬೋವಜನು ರೂತಳಿಗೆ ತಮ್ಮ ಸಂಬಂಧದ ಬಗ್ಗೆ ಒಂದು ಪ್ರಾಮುಖ್ಯವಾದ ಮಾಹಿತಿಯನ್ನು ಕೊಡುತ್ತಾನೆ. ಅವರು ಸಂಬಂಧಿಕರು ಮತ್ತು ಆತನೊಬ್ಬ ಸಮೀಪಬಂಧುವಾಗಿದ್ದರೂ, ರೂತಳಿಗೆ (ನೊವೊಮಿ) ಅವನಿಗಿಂತಲೂ ಸಮೀಪವಾದವನೊಬ್ಬನಿದ್ದನು. ಹಾಗೆಯೇ ಆಸ್ತಿಯನ್ನು ಬಿಡಿಸಿ ರೂತಳನ್ನು ವಿವಾಹವಾಗುವ ವಿಚಾರವನ್ನು ಆತನು ತಿರಸ್ಕರಿಸುತ್ತಾನೆ ಆದರೆ ಬೋವಜನು ಇದಕ್ಕೆ ಸಿದ್ಧನಿದ್ದು ಈ ಕಾರ್ಯವನ್ನು ಮಾಡಲು ದೇವರೆದುರು ಆತನು ಮಾತುಕೊಡುತ್ತಾನೆ (ವ. 12–13).

5. ಗೋದಿ ಒಕ್ಕುವ ಕಣದಲ್ಲಿ ಬೋವಜನೊಂದಿಗೆ ಕಳೆದ ರಾತ್ರಿಯ ಕುರಿತಾದ ರೂತಳ ವರದಿಯನ್ನು ನೊವೊಮಿಯು ಮೆಚ್ಚಿದಳು ಈಗ ತಮ್ಮ ಕಷ್ಟಗಳು ತೀರಿದವೆಂಬುದಾಗಿ ಆಕೆ ತಿಳಿಕೊಂಡಳು. ಬೋವಜನು ಒಬ್ಬ ಗೌರವಾನ್ವಿತ ಮತ್ತು ದೇವರಲ್ಲಿ ಭಯಭಕ್ತಿಯುಳ್ಳ ಪುರುಷನಾಗಿದ್ದು, ದೇವರೆದುರು ರೂತಳಿಗೆ ಮಾಡಿದ ವಾಗ್ದಾನವನ್ನು ಹಿಂತೆಗೆಯುವವನಾಗಿರಲಿಲ್ಲ (ವ. 18).

6. ಈ ಅಧ್ಯಾಯದಲ್ಲಿ ಬೋವಜನ ಗುಣಸ್ವಭಾವವನ್ನು ಈ ರೀತಿಯಾಗಿ ವರ್ಣಿಸಬಹುದು:

    - ತನ್ನ ಸೇವಕರೊಂದಿಗೆ ಸುಗ್ಗಿಯನ್ನು ಆಚರಿಸಿದಂತೆ, ಈ ಜೀವನದ ಸುಖವನ್ನೆಲ್ಲಾ ಅನುಭವಿಸಿದ ವ್ಯಕ್ತಿ ಆತನಾಗಿದ್ದನು. ಆತನು ಸಂತೋಷದಿಂದಿದ್ದು ಒಳ್ಳೆಯ ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದನು. ಸಂಜೆ ಊಟದ ನಂತರ ಒಂದು ಮನಸ್ಸಾಕ್ಷಿಯೊಂದಿಗೆ ಆತನು ಕಣದಲ್ಲಿ ಮಲಗಿದ್ದನು.

    - ಆತನೊಬ್ಬ ಸಭ್ಯ ಮತ್ತು ವಿನಯಶೀಲ ವ್ಯಕ್ತಿಯಾಗಿದ್ದನು. ರೂತಳು ಆತನ ನಿದ್ದೆಗೆಡಿಸಿದ ನಂತರ ಸಹ ಆತನು ಆಕೆಯನ್ನು ಆಶೀರ್ವದಿಸುತ್ತಾನೆ.

    - ಆತನೊಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದು, ರಾತ್ರಿ ವೇಳೆಯಲ್ಲಿ ತನ್ನ ಹಾಸಿಗೆ ಬಳಿಬಂದ ರೂತಳ ಲಾಭವನ್ನು ಪಡಕೊಳ್ಳಲಿಲ್ಲ. ಗೋದಿ ಕಣದಲ್ಲಿ ರೂತಳು ತನ್ನನ್ನು ಸಂದಿಸಿದ್ದನ್ನು ಆತನ ಆಳುಗಳು ನೊಡಿ ಆಕೆಯ ಹೆಸರು ಹಾಳಾಗುವುದನ್ನು ಆತನು ಬಯಸಿಲಿಲ್ಲ.

    - ರೂತಳನ್ನು ಮಧ್ಯರಾತ್ರಿಯಲ್ಲೇ ಆಕೆಯ ಮನೆಗೆ ಕಳುಹಿಸದೆ ಆಕೆಯು ತನ್ನೊಂದಿಗೆ ಬೆಳಗಾಗುವವರೆಗೂ ಇರಲು ಅನುಮತಿಸಿ, ರೂತಳ ಅಸಹಾಯಕ ಪರಿಸ್ಥಿತಿಗಾಗಿ ವಿಶೇಷ ಕಾಳಜಿಯನ್ನು ತೋರಿದನು (ಕಾಡುಪ್ರಾಣಿ ಅಥವಾ ಕುಡುಕರ ದಾಳಿಯ ಸಾಧ್ಯತೆಯಿತ್ತು).

- ಆತನೊಬ್ಬ ಜವಬ್ದಾರಿಯುಳ್ಳ ಮನುಷ್ಯನಾಗಿದ್ದನು. ರೂತಳು ಆತನನ್ನು ತನ್ನ ಸಮೀಪಬಂಧುವೆಂಬುದಾಗಿ ಹೇಳಿದನ್ನು ತಿಳಿದುಕೊಂಡಾಗ ಆ ಹಂಗಿನಿಂದ ಆತ ನಾಚಿ ದೂರ  ಹೋಗಲಿಲ್ಲ. ರೂತಳೊಂದಿಗಿನ ತನ್ನ ವಾಗ್ದನಕ್ಕೆ ಸಾಕ್ಷಿಯಾಗಬೇಕೆಂದು ದೇವರನ್ನು ಸಹ ಕೇಳಲು ಆತನು ಸಿದ್ಧನಿರುತ್ತಾನೆ.

- ಆತನೊಬ್ಬ ಕಾರ್ಯೋನ್ಮುಖ ವ್ಯಕ್ತಿಯಾಗಿದ್ದು ರೂತಳ ವಿಷಯದಲ್ಲಿ ಯಾರು ಮೈದುನಧರ್ಮವನ್ನು ಪೂರೈಸಬೇಕೆಂಬುದನ್ನು ನಿರ್ಧರಿಸಲು ಕೂಡಲೇ ಸಿದ್ಧನಾದನು.

- ನೊವೊಮಿಗಾಗಿ ಜವೆಗೋದಿಯನ್ನು ಮನೆಗೆ ಕೊಂಡೊಯ್ಯಲು ರೂತಳಿಗೆ ಕೊಡುವುದರ ಮೂಲಕ ಪುನಃ ತಾನೊಬ್ಬ ಉದಾರ ವ್ಯಕ್ತಿಯೆಂಬುದಾಗಿ ತೋರಿಸಿಕೊಂಡನು.

7. ಈ ಅಧ್ಯಾಯದಲ್ಲಿ ನೊವೊಮಿಯ ಗುಣಸ್ವಭಾವವನ್ನು ಈ ರೀತಿ ವರ್ಣಿಸಬಹುದು:

   - ಈಕೆಯು ರೂತಳ ಭವಿಷ್ಯದ ಬಗ್ಗೆ ಕಾಳಜಿಯುಳ್ಳವಳಾಗಿದ್ದಳು. ತನ್ನ ಸೊಸೆಯು ಒಂದು ಒಳ್ಳೆಯ ಮನೆಯಲ್ಲಿ ಒಬ್ಬ ಒಳ್ಳೆಯ ಗಂಡನೊಂದಿಗೆ ನೆಲೆಯಾಗಿರಬೇಕೆಂದು ಬಯಸಿದಳು.

   - ತಮ್ಮ ಪರಿಸ್ಥಿತಿಯ ಬಗ್ಗೆ ಏನಾದರೂ ಮಾಡಬೇಕೆಂದು ದೃಢನಿರ್ಧಾರವನ್ನು ಆಕೆ ಮಾಡಿಕೊಂಡಿದ್ದಳು. ಹಾಗಾಗಿ ಆಕೆಯು ಹೇಗೆ ಬೋವಜನನ್ನು ಸಂಧಿಸಿ ಒಬ್ಬ ಸಮೀಪಬಂಧುವಾಗಿ ಆತನು ಮಾಡಬೇಕಾದ ಕಾರ್ಯವನ್ನು ಆತನಿಗೆ ಹೇಗೆ ಮನವರಿಕೆ ಮಾಡಿಕೊಳ್ಳಬೇಕೆಂಬ ಮುಂದಿನ ಹೆಜ್ಜೆಗಾಗಿ ಜಾಗೂರಕತೆಯಿಂದ ರೂತಳನ್ನು ಸಿದ್ಧಪಡಿಸಿದಳು.

   - ಆಕೆಯು ದೇವರು ಬೋವಜನ ಮೂಲಕ ಸಮೀಪಬಂಧುವಾಗಿ ಮೈದುನಧರ್ಮವನ್ನು ನಡೆಸುವ ಕಾರ್ಯವನ್ನು ಇತ್ಯರ್ಥಪಡಿಸಿ, ತಮ್ಮೆಲ್ಲಾ ಸಮಸ್ಯೆಗಳನ್ನು ಪರಿಹರಿಸುವನೆಂಬುದಾಗಿ ತಾಳ್ಮೆಯಿಂದ ಭರವಸವುಳ್ಳವಳಾಗಿದ್ದಳು (ವ. 18).

8. ಈ ಅಧ್ಯಾಯದಲ್ಲಿ ರೂತಳ ಗುಣಸ್ವಭಾವವನ್ನು ಈ ರೀತಿಯಾಗಿ ಗುರುತಿಸಬಹುದು:

   - ಈಕೆಯು ವಿಧೇಯ ಸ್ತ್ರೀಯಾಗಿದ್ದು ಎಲ್ಲಾ ರೀತಿಯಿಂದಲೂ ನೊವೊಮಿಯ ಸಲಹೆಯನ್ನು ಪಾಲಿಸಲು ಸಿದ್ಧಳಿದ್ದಳು.

   - ಪುನಃ ಆಕೆ ತನ್ನ ದೀನತೆಯನ್ನು ತೋರ್ಪಡಿಸುತ್ತಾಳೆ. ರಾತ್ರಿವೇಳೆಯಲ್ಲಿ ತನ್ನ ಬಳಿ ಮಲಗಿರುವ ರೂತಳನ್ನು ಕಂಡಾಗ ತಾನು "ನಿನ್ನ ದಾಸಿ" ಎಂಬುದಾಗಿ ಹೇಳಿಕೊಳ್ಳುತ್ತಾಳೆ. ಶಾಂತಿಯಿಂದ ದೀನಳಾಗಿ ಆಕೆ ಕೇವಲ ನೊವೊಮಿಯ ಸಲಹೆಗೆ ವಿಧೇಯಳಾದುದ್ದಲ್ಲದೇ ಬೋವಜನಿಗೆ ತನ್ನನ್ನು ಆಕರ್ಷಣೀಯವಾಗಿ ಸಹ ತೋರ್ಪಡಿಸಿಕೊಂಡಳು.

# ಉತ್ತರಗಳು 4: ಬೋವಜನು ರೂತಳನ್ನು ಮದುವೆಯಾಗುವುದು, ಅಧ್ಯಾಯ 4

## ಉತ್ತರಗಳು

1. ಈ ಎರಡು ಸಾಧ್ಯತೆಗಳನ್ನು ನಾನು ಎರಡನೇಯದಕ್ಕೆ ಆಧ್ಯತೆ ಕೊಡುತ್ತೇನೆ, ಅದು – ನೊವೊಮಿಯು ತನ್ನ ಬಿಡುಗಡೆಯ ಹಕ್ಕನ್ನು ಈ ಹಿಂದೆ ಎಲೀಮೆಲಕನು ಹೊಂದಿದ್ದ ಹೊಲವನ್ನು ತಿರುಗಿ ಕೊಳ್ಳುವ ತನ್ನ ಹಕ್ಕನ್ನು ಮಾರುತ್ತಿದ್ದಳು, ಆದರೆ ಎಲೀಮೆಲೆಕನ ಕುಟುಂಬವು ಬರಬಂದ ಸಮಯದಲ್ಲಿ ಬೇತ್ಲೆಹೇಮನ್ನು ಬಿಟ್ಟು ಮೋವಾಬಿಗೆ ಬರುವುದಕ್ಕಿಂದ ಮೊದಲೇ ಆ ಹೊಲವನ್ನು ಮಾರಲಾಗಿತ್ತು. ಹಾಗಾಗಿ ನೊವೊಮಿಯು ಬರಮುಗಿದ ನಂತರ ಬೇತ್ಲೆಹೇಮಿಗೆ ಹಿಂತಿರುಗಿದಾಗ ಆಕೆಗೆ ಯಾವುದೇ ಸ್ವಂತ ಹೊಲವಿತ್ತೆಂಬುದಾಗಿ ನಾನು ಯೋಚಿಸುವುದಿಲ್ಲ. ನಿಯೊಗ ವಿವಾಹ ಪದ್ಧತಿಯ ಹಿನ್ನೆಲೆಯಲ್ಲಿ ಈ ಪರ್ಯಾಯ ಅಂಶವು ಹೆಚ್ಚು ಅರ್ಥವನ್ನು ಕೊಡುತ್ತದೆ. ಅದೇನೆಂದರೆ ನೊವೊಮಿ ಅಥವಾ ರೂತಳ ಕಥನದಲ್ಲಿ ಸಮೀಪಬಂಧು ಒಬ್ಬನು ಜವಬ್ದಾರಿ ವಹಿಸಬೇಕಾಗಿತ್ತು. ರೂತಳ ಗಂಡನು (ಅವನು ಬೋವಜ ಅಥವಾ ಇನ್ನೊಬ್ಬ ವ್ಯಕ್ತಿಯಾಗಿರಬಹುದು). ರೂತಳು ಮತ್ತು ನೊವೊಮಿಯನ್ನು ನೋಡಿಕೊಳ್ಳುವಷ್ಟರ ಮಟ್ಟಿಗೆ ಧನಿಕನಾಗಿರಬೇಕು ಮತ್ತು ನೊವೊಮಿಯ ಹೊಲವನ್ನು ಉಳುಮೆ ಮಾಡಿ ಬೆಳೆ ತೆಗೆಯಲು ಸಾಕಷ್ಟು ಕೂಲಿಯವರನ್ನು ಹೊಂದಿದವನಾಗಿರಬೇಕು. ಆಗ ನೊವೊಮಿಗೆ ಆ ಹೊಲವನ್ನು ಮಾರುವ ಅಗತ್ಯವಿರುವುದಿಲ್ಲ.

2. ಎಲೀಮೆಲೆಕನಿಗೆ ಸಂಬಂಧಪಟ್ಟ ಹೊಲವನ್ನು ಕೊಳ್ಳಬೇಕಾದರೆ ರೂತಳನ್ನು ಮದುವೆಯಾಗಬೇಕೆಂಬ ಒಪ್ಪಂದವು ಇರುವುದರ ನಿಮಿತ್ತ ಮೊದಲನೇಯ ಸಮೀಪಬಂಧುವು ತನ್ನ ಮನಸ್ಸನ್ನು ಬದಲಿಸಿಕೊಂಡನು. ರೂತಳನ್ನು ಮದುವೆಯಾದರೆ ತನ್ನ ಆಸ್ತಿಗೆ ನಷ್ಟವಾಗುತ್ತದೆಂಬ ಕಾರಣವನ್ನು ಆತನು ಕೊಟ್ಟನು (ವ. 6). ಹಾಗಾಗಿ ಈ ರೀತಿಯ ನಿಯೊಗ ವಿವಾಹ ಪದ್ಧತಿಯಲ್ಲಿ ಆರ್ಥಿಕ ಗಂಡಾಂತರ (ನಷ್ಟ) ಸಹ ಇರುತ್ತಿತ್ತು. ರೂತಳಿಗೆ ಹುಟ್ಟಿದ ಮಗನೊಬ್ಬನೆ ಸಮೀಪಬಂಧುವಿನ ಉಳಿದಿರುವ ಸಹಬಾಧ್ಯನಾಗಿರುವುದಾದರೆ ಆತನ ಸ್ವಂತ ಆಸ್ತಿಯೆಲ್ಲವು ಈ ಮಗನಿಗೆ ವರ್ಗಾವಣೆಯಾಗುತ್ತಿತ್ತು.

   ಬೋವಜನು ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದಾನೆಂಬುದುದಾಗಿ ಈ ಬದಲಾದ ಮನಸ್ಸು ಹೇಳುತ್ತದೆ. ಇನ್ನೊಬ್ಬನಂತೆ ರೂತಳನ್ನೆ ಮದುವೆಯಾಗುವುದರಿಂದ ಅದೇ ರೀತಿಯ ಆರ್ಥಿಕ ಸಮಸ್ಯೆಯನ್ನು ಈತನೂ ಸಹ ಎದುರಿಸಿದನು. ಆದರೆ ಈತನೊಬ್ಬ ದೇವರಿಗೆ ಭಯಪಡುವ ಮತ್ತು ನೀತಿವಂತ ಮನುಷ್ಯನಾಗಿದ್ದು ಮೋಶೆಯ ಧರ್ಮಶಾಸ್ತ್ರಕ್ಕನುಸಾರವಾಗಿ ಒಬ್ಬ ಸಮೀಪಬಂಧುವಾಗಿ ಮಾಡಬೇಕಾದ ಋಣವನ್ನು ತೀರಿಸಲು ಈ ನಷ್ಟವನ್ನು ಎದುರಿಸಲು ಸಹ ಸಿದ್ಧನಿದ್ದನು.

3. ಸಮೀಪಬಂಧುವಿನ ವ್ಯವಹಾರವು ವ್ಯವಸ್ಥಿತವಾಗುವಾಗ ಈ ಜನರೆಲ್ಲರೂ ಹಾಜರಿದ್ದರು: ಸಮೀಪಬಂಧುವಿನ ಪಟ್ಟಿಯಲ್ಲಿ ಮೊದಲು ಇದ್ದದ್ದು ಬೋವಜ, ಬೇತ್ಲೆಹೇಮಿನ ಹತ್ತು ಮಂದಿ ಹಿರಿಯರು ಮತ್ತು ಈ ವರ್ಗಾವಣೆ ವಿಷಯದಲ್ಲಿ ಊರು ಬಾಗಲಲ್ಲಿ ಕೂತುಕೊಂಡು ಸಾಕ್ಷಿಹೇಳಿದ ಜನರು (ವ. 1–3, 4, 9–10).

4. ಇನ್ನೊಬ್ಬನು ತನ್ನ ಕೆರವನ್ನು ಬೋವಜನಿಗೆ ಕೊಡುವುದರ ಮೂಲಕ ಆಸ್ತಿಯು ಕಾನೂನಾತ್ಮವಾಗಿ ವರ್ಗಾವಣೆಗೊಂಡಿತು (ವ. 7). ಈ ಕಾರ್ಯವು ಬೋವಜನಿಗೆ ಎಲೀಮೆಲೆಕನ ಆಸ್ತಿಯನ್ನು ಕೊಂಡೊಕೊಳ್ಳಲು ತನ್ನ ಹಕ್ಕನ್ನು ವರ್ಗಾವಣೆ ಮಾಡುತ್ತೇನೆಂಬುದನ್ನು ಸೂಚಿಸುತ್ತದೆ.

5. ಊರುಬಾಗಲಲ್ಲಿ ಹಿರಿಯರು ಮತ್ತು ಸಾಕ್ಷಿಗಳು ಬೋವಜನಿಗೆ ಮಾಡಿದ ಆಶೀರ್ವಾದವು ಈ ಹಿಂದೆ ಸತ್ಯವೇದದಲ್ಲಿನ ಈ ಎರಡು ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ:

   - ರಾಹೇಲ್ ಮತ್ತು ಲೇಯ: ಅವರಿಬ್ಬರು (ತಮ್ಮ ದಾಸಿಯರ ಸಹಾಯದಿಂದ) ಇಸ್ರಾಯೇಲಿನ 12 ಕುಲಗಳ ತಾಯಂದಿರಾಗುತ್ತಾರೆ. ಆ ರೀತಿಯಲ್ಲಿ ರೂತಳು ಸಹ ಅಭಿವೃದ್ಧಿ ಹೊಂದಬೇಕು ಮತ್ತು ಬೋವಜನು ಎಫ್ರಾತದಲ್ಲಿ ಘನವಂತನಾಗಬೇಕು. ಅರಸನಾದ ದಾವೀದನು ಬೋವಜ ಮತ್ತು ಆತನ ಮಗನಾದ ಓಬೇದನ ಸಂತತಿಯಲ್ಲಿ ಹುಟ್ಟಿದನು. ದೇವರು ದಾವೀದನಿಗಾಗಿ ಸದಾಕಾಲವು ಇರುವ ಮನೆಯನ್ನು ಕಟ್ಟಿದನು(2 ಸಮುವೇಲ 7:27–29).

   - ಯೆಹೂದ, ತಾಮಾರ್ ಮತ್ತು ಅವರ ಮಗನಾದ ಪೆರೆಚ್ (ವ. 12): ಪೆರೆಚನು ಬೋವಜನ ಪೂರ್ವಜನಾಗಿದ್ದನು (ವ. 18) ಮತ್ತು ಈತನು ನಿಯೊಗ ಸಂಬಂಧದ ಫಲವಾಗಿ ಹುಟ್ಟಿದನು (ನೋಡಿ ಆದಿಕಾಂಡ 38).

6. ರೂತಳು ಮತ್ತು ಬೋವಜನ ಮಗನ ಜನನವನ್ನು ತಿಳಿಸಲು ಗ್ರಂಥಕರ್ತನು "ಆಕೆಯು ಯೆಹೋವನ ಅನುಗ್ರಹದಿಂದ ಗರ್ಭಿಣಿಯಾಗಿ ಮಗನನ್ನು ಹೆತ್ತಳು" ಎಂಬ ಪದವನ್ನು ಉಪಯೋಗಿಸುತ್ತಾನೆ (ವ. 13). ಮೋವಾಬಿನಲ್ಲಿ ಮಹ್ಲೋನನನ್ನ ವಿವಾಹವಾದಾಗ ರೂತಳಿಗೆ ಯಾವುದೇ ಮಕ್ಕಳಾಗಿರಲಿಲ್ಲ (1:4). ಆದರೆ ದೇವರು ಆಕೆಗೆ ಬೋವಜನ ಮೂಲಕ ಒಬ್ಬ ಮಗನನ್ನು ಕೊಟ್ಟನು. ಜೀವ ಮತ್ತು ಮರಣ ಫಲವತ್ತತೆ ಮತ್ತು ಬಂಜೆತನವೆಲ್ಲವನ್ನು ದೇವರು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆಂಬುದನ್ನು ಗ್ರಂಥಕರ್ತನು ತನ್ನ ಓದುಗರಿಗೆ ಸ್ಪಷ್ಟಪಡಿಸುತ್ತಾನೆ.

7. ಸ್ತ್ರೀಯರು ನೊವೊಮಿಗೆ ಮಾಡಿದ ಆಶೀರ್ವಾದದ ಮೂಲಕ ಓಬೇದ ಮತ್ತು ರೂತಳ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 14–15):

- ಓಬೇದನು ಇಸ್ರಾಯೇಲಿನಲ್ಲೆಲ್ಲಾ ಹೆಸರು ಹೊಂದಿರಬಹುದು. ದಾವೀದನು ಇಸ್ರಾಯೇಲಿನಲ್ಲೆಲ್ಲಾ ಅರಸನಾದಾಗ ಈ ಸಂಗತಿ ನೆರವೇರಿತು, ಹೇಗೆಂದರೆ ಓಬೇದನು ದಾವೀದನ ಅಜ್ಜನೆಂಬುದಾಗಿ ಗುರುತಿಸಲ್ಪಟ್ಟಿದ್ದನು.

- ರೂತಳು ನೊವೊಮಿಗೆ ಬಹು ಅಮೂಲ್ಯಳಾಗಿದ್ದಳು. ಆಕೆಯು ತನ್ನ ಅತ್ತಿಗೆ ತೋರಿದ ಪ್ರೀತಿ ಮತ್ತು ಕಾಳಜಿಯಿಂದ ಅವಳು ಏಳುಮಂದಿ ಮಕ್ಕಳಿಗಿಂತಲೂ ಉತ್ತಮಳಾಗಿ ಕಂಡುಬಂದಳು. ನೊವೊಮಿ ಮತ್ತು ಓಬೇದನ ನಡುವಿನ ಸಂಬಂಧವನ್ನು ವ್ಯಕ್ತಪಡಿಸುವುದಕ್ಕಾಗಿ ಆ ಹೆಂಗಸರು "ಮಗನು" ಎಂಬ ಪದವನ್ನು ಬಳಸುತ್ತಾರೆ. ಹಾಗೆಯೇ ನೊವೊಮಿಯ ಪ್ರಾಯಮೀರಿ ಹೋದವಳಾದ ನಿಮಿತ್ತ ಯಾವುದೇ ಮಕ್ಕಳನ್ನು ಹಡೆಯಲು ಆಕೆಯಿಂದಾಗುತ್ತಿರಲಿಲ್ಲ. ಆದರೀಗ ರೂತಳ ಮೂಲಕ ಮಹ್ಲೋನನ ಸ್ಥಾನದಲ್ಲಿ (ಆಕೆಯ ಸತ್ತುಹೋದ ಮಗ ಮತ್ತು ರೂತಳ ಮೊದಲ ಗಂಡ) ಒಬ್ಬ ಬಾಧ್ಯಸ್ಥ (ಒಬ್ಬ ಮಗ)ನನ್ನು ಪಡೆದಳು.

8. ಅರಸನಾದ ದಾವೀದನು ರೂತಳ ಮೊಮ್ಮಗನಾಗಿದ್ದನು (ವ. 21–22).

9. ಹೊಸ ಒಡಂಬಡಿಕೆಯಲ್ಲಿ ನಾವು ಮತ್ತಾಯ 1 ಮತ್ತು ಲೂಕ 3ರಲ್ಲಿ ಯೇಸು ಕ್ರಿಸ್ತನ ಎರಡು ವಂಶಾವಳಿಗಳನ್ನು ಕಾಣುತ್ತೇವೆ. ಮತ್ತಾಯದಲ್ಲಿ ರೂತಳ ಪ್ರಸ್ತಾಪವಿದೆ.

10. ಈ ಅಧ್ಯಾಯದಲ್ಲಿ ಬೋವಜನ ಗುಣಸ್ವಭಾವವು ಇಂತಿದೆ:

- ಈತನೊಬ್ಬ ಕಾರ್ಯೋನ್ಮುಖ ವ್ಯಕ್ತಿಯಾಗಿದ್ದನು. ಸಮೀಪಬಂಧುವಾಗಿ ಮೈದುನಧರ್ಮವನ್ನು ಯಾರು ನೆರವೇರಿಸಬೇಕೆಂಬ ಕಾರ್ಯವನ್ನು ಆತನು ತಡಮಾಡಲಿಲ್ಲ, ಅದೇ ದಿನದಲ್ಲಿ ಅದನ್ನಾತನು ವ್ಯವಸ್ಥಿತಗೊಳಿಸಿದನು.

- ಈತನೊಬ್ಬ ಕೌಶಲ್ಯ ಮತ್ತು ಜ್ಞಾನವುಳ್ಳ ವ್ಯಕ್ತಿಯಾಗಿದ್ದನು. ಈ ವಿಷಯವನ್ನು ಆತನು ಇನ್ನೊಂದು ಕಡೆಯವನ ಸಮ್ಮುಖದಲ್ಲಿ ಸಾಕ್ಷಿಗಳೊಂದಿಗೆ ನ್ಯಾಯಸಭೆಯ ಮುಂದಿಟ್ಟನು. ಸಮೀಪಬಂಧುವಾದವನು ನೊವೊಮಿ ಮತ್ತು ರೂತಳ ವಿಷಯದಲ್ಲಿ ಯಾವೆಲ್ಲಾ ಜವಾಬ್ದಾರಿಗಳನ್ನು ಹೊರಬೇಕೆಂಬುದನ್ನು ತಿಳುಕೊಳ್ಳುವಂತೆ ಈತನು ಮಾಡಿದನು.

- ಈತನೊಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದನು. ಇಬ್ಬರು ನಿರ್ಗತಿಕ ಸ್ತ್ರೀಯರಿಗೆ ಸಮೀಪಬಂಧುವಾಗಲು ಆರ್ಥಿಕ ತೊಂದರೆಯನ್ನು ತೆಗೆದುಕೊಳ್ಳಲು ಸಹ ಈತನು ಸಿದ್ಧನಿದ್ದನು (ಅಲ್ಲದೆ ರೂತಳಂತ ಒಬ್ಬ ಬಡ ಮೋವಾಬ್ಯ ಸ್ತ್ರೀಯನ್ನು ವಿವಾಹವಾಗುವುದರ ಮೂಲಕ ತನ್ನ ಸಾಮಾಜಿಕ ಸ್ಥಾನಮಾನ ಕಳೆದುಕೊಳ್ಳುವ ಒಂದು ಸಮಸ್ಯೆ ಸಹ).

# ದಾನಿಯೇಲನು – ಉತ್ತರಗಳು

# ಉತ್ತರಗಳು 1: ಬಾಬೆಲಿನಿನಲ್ಲಿ ದಾನಿಯೇಲನ ತರಬೇತಿ, ಅಧ್ಯಾಯ 1

## ಉತ್ತರಗಳು

1. ಅರಸನಾದ ಯೆಹೋಯಾಕೀಮನಿಗೆ ಏನಾಯಿತೆಂಬುದಾಗಿ ಗ್ರಂಥಕರ್ತನು ವಿವರಿಸುತ್ತಾನೆ. ದೇವರಾದ ಯೆಹೋವನೇ ಆತನನ್ನು ರಾಜನಾದ ನೆಬೂಕದ್ನೆಚ್ಚರನ ಕೈಯಿಂದ ಬಿಡಿಸುತ್ತಾನೆ. ಹಾಗಾಗಿ ದೇವರು ಜಗತ್ತಿನ ಇತಿಹಾಸದ ಎಲ್ಲಾ ಘಟನೆಗಳನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆಂಬುದು ಗ್ರಂಥಕರ್ತನ ದೈವಶಾಸ್ತ್ರೀಯ ದೃಷ್ಟಿಕೋನವಾಗಿದೆ.
2. ರಾಜನಾದ ನೆಬೂಕದ್ನೆಚ್ಚರನು ಯೆರೂಸಲೇಮಿನ ದೇವಾಲಯದಿಂದ ಬಹು ಬೆಲೆಬಾಳುವ ಪಾತ್ರೆಗಳನ್ನು ಬಾಬೆಲಿಗೆ ತಂದು ಅವುಗಳನ್ನು ತನ್ನ ದೇವರ ಭಂಡಾರದಲ್ಲಿ ಇಟ್ಟಿದ್ದನು. ಮರ್ದುಕ್ ಎಂಬುದು ಬಾಬೆಲ್ ದೇಶದ ಮುಖ್ಯ ದೇವರಾಗಿತ್ತು.
3. ತನ್ನಲ್ಲಿ ತರಬೇತಿ ಪಡೆಯುವವರಲ್ಲಿ ನೆಬೂಕದ್ನೆಚ್ಚರನು ಅಪೇಕ್ಷಿಸಿದ ಅರ್ಹತೆಗಳು ಇಂತಿವೆ (ವ. 3–4):
    - ಉನ್ನತವಾದ ಸಾಮಾಜಿಕ ಹಿನ್ನಲೆ (ಅವರೆಲ್ಲರೂ ರಾಜವಂಶೀಯರಾಗಿದ್ದರು).
    - ಯೌವನಸ್ಥರು
    - ಅಂಗದೋಷವಿಲ್ಲದಿರುವರು
    - ಸುಂದರ ಮತ್ತು  ಪಂಡಿತರು. ರಾಜಾಲಯದಲ್ಲಿ ಸನ್ನಿದಿ ಸೇವೆ ಮಾಡಲು ಸಮರ್ಥರಿರುವವರು.
4. ಅಶ್ಪೆನಜನು ರಾಜನ ಕಂಚುಕಿಯರಲ್ಲಿ ಮುಖ್ಯನಾಗಿದ್ದನು (ವ. 3). ಈತನು ಯೌವನಸ್ಥ ಇಸ್ರಾಯೇಲ್ಯರಿಗೆ ಬಾಬೆಲಿನ ಭಾಷೆ ಮತ್ತು ಶಾಸ್ತ್ರದಲ್ಲಿ ಮೂರು ವರ್ಷಗಳ ತರಬೇತಿಯನ್ನು ಕೊಡಬೇಕೆಂದು ಅರಸನು ಬಯಸಿದ್ದನು (ವ. 4–5). ಈ ತರಬೇತಿಯು ವಿವಿಧ ಶಾಸ್ತ್ರೀಯ ಮತ್ತು ಸಾಂಸ್ಕೃತಿಕ ವಿಷಯಗಳನ್ನೆಲ್ಲಾ ಒಳಗೊಂಡಿರಬೇಕಿತ್ತು (ಹೋಲಿಸಿ ವ. 20). ಈ ತರಬೇತಿಯ ಉದ್ದೇಶವು ಈ ಯೌವನಸ್ಥರನ್ನು ರಾಜಾಲಯದಲ್ಲಿ ಸನ್ನಿಧಿ ಸೇವೆಮಾಡಲು ಸಿದ್ಧಪಡಿಸುವುದಾಗಿತ್ತು (ವ. 5).
5. ದಾನಿಯೇಲ ಮತ್ತು ಆತನ ಸ್ನೇಹಿತರು ವಿಭಿನ್ನವಾದ ಆಹಾರವನ್ನು ಕೇಳಿಕೊಂಡರು, ಯಾಕೆಂದರೆ ಅವರು ತಮ್ಮನ್ನು ಅಶುದ್ಧ ಮಾಡಿಕೊಳ್ಳಲು ಬಯಸಲಿಲ್ಲ (ವ. 8). ಇದರರ್ಥ ಮೋಶೆಯ ಧರ್ಮಶಾಸ್ತ್ರದಲ್ಲಿ ನಿಷೇಧಿತವಾಗಿರುವ ಮತ್ತು ಬಾಬೆಲಿನ ದೇವತೆಗಳಿಗೆ ಸಮರ್ಪಿಸಿದ ಆಹಾರ ಪಾನಗಳನ್ನು ಸೇವಿಸಿ ತಮ್ಮ ಯೆಹೂದಿ ನಂಬಿಕೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಅವರು ಇಷ್ಟಪಡಲಿಲ್ಲ.
6. ದಾನಿಯೇಲನ ಈ ಬೇಡಿಕೆಗೆ ಪ್ರತಿಯಾಗಿ ಅಶ್ಪೆನಜನು ಸಕರಾತ್ಮಕವಾದ ಪ್ರತಿಕ್ರಿಯೆಗೆ ಗ್ರಂಥಕರ್ತನು ಒಂದು ಆತ್ಮೀಕವಾದ ವಿವರಣೆಯನ್ನು ಕೊಡುತ್ತಾನೆ. ಸ್ವತಃ ದೇವರೇ ಬಾಬೆಲಿನ ಅಧ್ಯಕ್ಷನ ಮನಸ್ಸಿನಲ್ಲಿ ದಾನಿಯೇಲನ ಮೇಲೆ ಕನಿಕರವನ್ನೂ ದಯೆಯನ್ನೂ ಹುಟ್ಟಿಸಿದನು (ವ. 9).
7. ದಾನಿಯೇಲ ಮತ್ತು ಬಾಬೆಲಿನ ವಿಚಾರಕನ ನಡುವೆ ಆಹಾರ ಮತ್ತು ಪಾನದ ವಿಷಯದಲ್ಲಿ ಹೊಂದಾಣಿಕೆಯಾಯಿತು. ಪಥ್ಯಾಹಾರವು ತಮ್ಮ ಮೇಲೆ ಯಾವುದೇ ನಕರಾತ್ಮವಾಗಿ ಪರಿಣಾಮವನ್ನು ಬೀರುವುದಿಲ್ಲವೆಂದು ತೋರಿಸಲು ಇಸ್ರಾಯೇಲಿನ ಯೌವನಸ್ಥರು ಅನುಮತಿಸಲ್ಪಟ್ಟರು. ಹತ್ತು ದಿನಗಳ ಪರೀಕ್ಷೆಯ ನಂತರ ಅವರ ಮುಖಬಾವವನ್ನು ಇತರ ಯುವಕರ ಮುಖಭಾವದೊಂದಿಗೆ ಹೋಲಿಸಿ ನೋಡಲಾಯಿತು. ಈ ಹೊಂದಾಣಿಕೆಯ ಫಲಿತಾಂಶವು ದಾನಿಯೇಲ ಮತ್ತು ಆತನ ಸ್ನೇಹಿತರಿಗೆ ಸಕರಾತ್ಮವಾಗಿ ಕಂಡುಬಂದಿತು. ಅವರು ಅದೇ ಪಥ್ಯಾಹಾರವನ್ನು ಮುಂದುವರಿಸಲಾಯಿತು (ವ. 11–16).
8. ಆಹಾರದ ವಿಚಾರದಲ್ಲಿ ದಾನಿಯೇಲನು ಈ ರೀತಿಯಾಗಿ ವ್ಯವಹರಿಸಿದನು (ವ. 8–16). ಆತನು ಗಡಿಬಿಡಿ ಮಾಡಲಿಲ್ಲ (ಕೂಗಾಡಿ, ಚೀರಾಡಲಿಲ್ಲ ಅಥವಾ ಧರಣಿ ಮಾಡಲಿಲ್ಲ ಅಥವಾ ರಾಜಾಲಯ ಮತ್ತು ತರಬೇತಿಯನ್ನು ಬಿಟ್ಟು ಹೋಗಲಿಲ್ಲ).
9. ದಾನಿಯೇಲನು ಮತ್ತು ಆತನ ಸ್ನೇಹಿತರು ತಮ್ಮ ವಿದ್ಯಾಭ್ಯಾಸದಲ್ಲಿ ತೋರಿದ ಪ್ರಗತಿಯನ್ನು ತಿಳಿಸಲು ಗ್ರಂಥಕರ್ತನು ಪುನಃ ಒಂದು ಆತ್ಮೀಕವಾದ ವಿವರಣೆಯನ್ನು ಕೊಡುತ್ತಾನೆ. ಈ ಹಿಂದೆ ದೇವರು ಅಶ್ಪೆನಜನ ಮನಸ್ಸಿನಲ್ಲಿ ಯೆಹೂದಿ ಯುವಕರ ಮೇಲೆ ದಯೆ ಹುಟ್ಟಿಸಿದನು (ವ. 9). ಈಗ ಅದರ ಶೈಕ್ಷಣಿಕ ಯಶಸ್ಸಿಗಾಗಿ ಗ್ರಂಥಕರ್ತನು ದೇವರಿಗೆ ಎಲ್ಲಾ ಮಾನವನ್ನು ಸಲ್ಲಿಸುತ್ತಾನೆ (ವ. 17). ಅಲ್ಲದೆ ನಾಲ್ವರು ಯುವಕರು ಸಹ ತಮ್ಮ ಪ್ರಗತಿಗಾಗಿ ಶ್ರಮಿಸಿದ್ದರು. ತಮ್ಮ ವಿದ್ಯಾಭ್ಯಾಸದಲ್ಲೆಲ್ಲ ಅವರು ಬಹಳಷ್ಟು ಶ್ರಮಪಟ್ಟು ಬಾಬೆಲಿನ (ಆಸ್ಥಾನ) ರಾಜಾಲಯದಲ್ಲಿನ ಮೂರು ವರ್ಷಗಳ ತರಬೇತಿಯ ಅವಧಿಯಲ್ಲೆಲ್ಲ ಅವರು ತಮ್ಮನ್ನು ಶುದ್ಧವಾಗಿಟ್ಟುಕೊಂಡಿರಬೇಕು.

10. ಪರ್ಷಿಯ ರಾಜನಾದ ಕೋರೆಷನು ಬಾಬೆಲನ್ನು ವಶಪಡಿಸಿಕೊಳ್ಳುವವರೆಗೂ ದಾನಿಯೇಲನು ಬಾಬೆಲಿನ ಆಸ್ಥಾನದಲ್ಲಿ ಸೇವೆ ಸಲ್ಲಿಸುತ್ತಾನೆ (ವ. 21). ಇದು ಕ್ರಿ.ಪೂ. 539ರ ಕಾಲವಾಗಿತ್ತು. ಹೀಗೆ ದಾನಿಯೇಲನು ಬಾಬೆಲಿನ ಅರಸರಿಗೆ ಸುಮಾರು 66 ವರ್ಷಗಳ ಕಾಲ ಸೇವೆ ಮಾಡುತ್ತಾನೆ.

11. ಈ ಆಧ್ಯಾಯಲ್ಲಿನ ದಾನಿಯೇಲನ ಸ್ಥಾನದಲ್ಲಿ ನಿಮ್ಮನ್ನಿಟ್ಟುಕೊಳ್ಳಿರಿ:

**ಟಿಪ್ಪಣಿಗಳು:** ದಾನಿಯೇಲನು ಈ ರೀತಿಯಾಗಿ ಭಾವಿಸಿರಬಹುದೆಂದು ನಾನು ನೆನೆಸುತ್ತೇನೆ:

**ವಚನ 3**: ರಾಜನ ಆಸ್ಥಾನಕ್ಕೆ ತರಲ್ಪಟ್ಟಿದ್ದಕ್ಕೆ ದಾನಿಯೇಲನು ಮಿಶ್ರಭಾವನೆಗಳನ್ನು ಹೊಂದಿರುತ್ತಾನೆ. ದಾನಿಯೇಲನಲ್ಲಿ ಗೌರವ ಮತ್ತು ವಿಶೇಷತೆಯ ಭಾವನೆ ಉಂಟಾಗುತ್ತದೆ. ಅಲ್ಲದೆ ಆತನು ಏನಾಗಬಹುದೆಂದು ಚಕಿತನಾಗಿ, ಸಂಪೂರ್ಣವಾಗಿ ಅನ್ಯಸಂಸ್ಕೃತಿಯ ಪರಿಸರದಲ್ಲಿ ಕರ್ತನಾದ ಯೆಹೋವನಿಗೆ ಹೇಗೆ ನಂಬಿಗಸ್ತನಾಗಿರಬೇಕೆಂಬುದಾಗಿ ಯೋಚಿಸುತ್ತಾ ಆಯಾಸಗೊಂಡದ್ದಲ್ಲದೆ ನಿರೀಕ್ಷಿತನಾಗಿರುತ್ತಾನೆ.

**ವಚನ 8:** ಅರಸನ ಅಸ್ಥಾನದಲ್ಲಿ ಎಂಥಹ ಆಹಾರ ಮತ್ತು ಪಾನವನ್ನು ಸೇವಿಸಬೇಕೆಂಬುದನ್ನು ತಿಳುಕೊಂಡಾಗ ದಾನಿಯೇಲನಲ್ಲಿ ಸವಾಲಿನ ಮನೋಭಾವನೆಯುಂಟಾಗುತ್ತದೆ. ಬಹುಶಃ ಆತನು ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಸಹಾಯಕ್ಕಾಗಿ ದೇವರ ಬಳಿ ಪ್ರಾರ್ಥಿಸಿರಬಹುದು: ತಾನು ಆಸ್ಥಾನದಲ್ಲೆ ಇರಬೇಕಾ? ಅಥವಾ ಧರಣಿ ಕೂರಬೇಕಾ? ಅಥವಾ ತಾನು ತನ್ನ ನಂಬಿಕೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ರಾಜನು ಕೊಟ್ಟ ಆಹಾರ ಮತ್ತು ದ್ರಾಕ್ಷಾರಸವನ್ನು ಸೇವಿಸಬೇಕಾ? ಅಥವಾ ತನ್ನ ಕಷ್ಟಕರವಾದ ಸನ್ನಿವೇಶಕ್ಕೆ ಬೇರೆ ಪರ್ಯಾಯ ಪರಿಹಾರವಿದೆಯಾ?

**ವಚನ 15:** ದಾನಿಯೇಲನಿಗೆ ನೆಮ್ಮದಿ (ನಿರಾಳ)ಯೆನಿಸಿತು. ದೇವರು ಆತನ ಪ್ರಾರ್ಥನೆಯನ್ನು ಕೇಳಿ ಒಂದು ಆಹಾರವನ್ನು ಕಂಡುಕೊಳ್ಳಲು ಸಹಾಯಿಸಿದನು. ಈಗ ಜಗತ್ತಿನ ಬಹು ಬಲಿಷ್ಠ ಅರಸನಾದ ನೆಬೂಕದ್ನೆಚ್ಚರನ ಆಸ್ಥಾನದಲ್ಲಿ ಸನ್ನಿಧಿ ಸೇವೆಮಾಡುವುದಕ್ಕಾಗಿ ಒದಗಿಸುತ್ತಿರುವ ಪ್ರಥಮ ದರ್ಜೆಯ ತರಬೇತಿಯಲ್ಲಿ ಮುಂದುವರಿಯಲು ಆತನಿಗೆ ಸಾಧ್ಯವಾಯಿತು. ಈಗ ಆತನು ಯೆಹೂದಿ ಆಹಾರ ಪದ್ಧತಿಯೊಂದಿಗೆ ಹೊಂದಾಣಿಕೆಯಿಲ್ಲದೆ ರಾಜನ ಆಸ್ಥಾನದಲ್ಲಿ ಇರಬಹುದಾಗಿತ್ತು. ಆ ದಿನ ಸಂಜೆ ದಾನಿಯೇಲನು ದೇವರ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ಆತನನ್ನು ಸ್ತುತಿಸಿ ಕೃತಜ್ಞತೆ ಸಲ್ಲಿಸಿದ್ದರಬಹುದು.

**ವಚನ 20:** ದಾನಿಯೇಲನು ಒಂದು ದೊಡ್ಡ ನಿಟ್ಟುಸಿರುಬಿಟ್ಟನು. ಆತನ ಒಂದು ದೀರ್ಘವಾದ ಮತ್ತು ಪ್ರಯಾಸಕರವಾದ ತರಬೇತಿಯನ್ನು ಪೂರ್ಣಗೊಳಿಸಿದನು. ಆತನು ಗೌರವಗಳೊಂದಿಗೆ ಉತ್ತೀರ್ಣನಾದನು. ಈಗ ಆತನು ಬಾಬೆಲಿನ ಅಸ್ಥಾನದಲ್ಲಿ ಒಂದು ದೀರ್ಘವಾದ ಮತ್ತು ವಿಶಿಷ್ಟವಾದ ವೃತ್ತಿಯನ್ನು ಮುನ್ನೋಡಬಹುದಾಗಿತ್ತು. ಜಗತ್ತಿನ ಅತ್ಯುನ್ನತವಾದ ಆಡಳಿತಾತ್ಮಕ ಸ್ಥಾನಗಳೆಲ್ಲವೂ ಆತನ ಸಮೀಪವಿದ್ದವು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ದೇವರ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ಆ ರಾತ್ರಿ ದೇವರಿಗೆ ಕೃತಜ್ಞತೆ ಸಲ್ಲಿಸಿ, ಇನ್ನೂ ಉತ್ತಮವಾದ ರೀತಿಯಲ್ಲಿ ನಂಬಿಗಸ್ತನಾಗಿ ಆತನನ್ನು ಸೇವಿಸಲು ದೇವರ ಬಳಿ ಜ್ಞಾನವನ್ನು ಕೇಳಿಕೊಳ್ಳುತ್ತಾನೆ.

12. ದಾನಿಯೇಲನು ಮತ್ತು ಆತನ ಸ್ನೇಹಿತರು ತಮ್ಮ ತರಬೇತಿಯನ್ನಾಗಲಿ, ಅದರ ಸಾಂಸ್ಕೃತಿಕ ವಿಷಯ ಅಥವಾ ಅದರ ಗುರಿ/ ಉದ್ದೇಶವನ್ನಾಗಲಿ ಪ್ರಶ್ನಿಸಲಿಲ್ಲ. ಆದರೆ ಅವರು ರಾಜನ ಆಹಾರ ಮತ್ತು ಪಾನದಲ್ಲಿ ಪಾಲುಗಾರರಾಗಲಿಲ್ಲ. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಯಾವುದರಲ್ಲಿ ಪಾಲ್ಗೊಳ್ಳಬೇಕು, ಯಾವುದರಲ್ಲಿ ಪಾಲ್ಗೊಳ್ಳಬಾರದೆಂಬುದನ್ನು ನಿರ್ಧರಿಸುವುದು ಹೇಗೆ?

**ಟಿಪ್ಪಣಿಗಳು:** ದೇವರ ವಾಕ್ಯದ ಸ್ಪಷ್ಟವಾದ ಸೂಚನೆಯೊಂದಿಗೆ ಆ ಹೊಸ ಸಂಸ್ಕೃತಿಯು ನೇರವಾಗಿ ಸಂಘರ್ಷಕ್ಕಿಳಿದಾಗ ಮಾತ್ರ ದಾನಿಯೇಲನು ಪ್ರಶ್ನಿಸಿದನು/ ಆಕ್ಷೇಪಿಸಿದನು.

**ಉದಾ:** ದಾನಿಯೇಲನು ಮತ್ತು ಆತನ ಸ್ನೇಹಿತರಿಗೆ ಕೊಟ್ಟ ಬಾಬೆಲಿನ ಹೊಸ ಹೆಸರುಗಳು ಸ್ಥಳೀಯ ಅನ್ಯದೇವತೆಗಳ ಹೆಸರುಗಳನ್ನು ಒಳಗೊಂಡಿದ್ದರೂ ಅವರದನ್ನು ಆಕ್ಷೇಪಿಸಲಿಲ್ಲ ("ಬೇಲ್ತೆಶಚ್ಚರ್" ಹೆಸರಿನ ಅರ್ಥ "ತನ್ನ ಜೀವವನ್ನು ರಕ್ಷಿಸು" ಬಹುಶಃ ಇದು "ನೆಬು–ಬೇಲ್ತೆಶಚ್ಚರ್" ಅಂದರೆ "ನೆಬು ದೇವರು ಆತನ ಜೀವವನ್ನು ರಕ್ಷಿಸಲಿ" (ನೋಡಿ 4:8 ಮತ್ತು ಅಧ್ಯಯನ 4 ರ 6ನೇ ಪ್ರಶ್ನೆ) ಎಂಬುದರ ಸಂಕ್ಷಿಪ್ತ ರೂಪವಾಗಿರಬಹುದು, "ಶದ್ರಕ್" ಎಂದರೆ "ಅಕುವಿ ಆಜ್ಞೆ" (ಚಂದ್ರ ದೇವರು) ಎಂದರ್ಥ, "ಮೇಶಕ್" ಎಂದರೆ "ಅಕುವಿನಂತೆ ಇರುವವನು", "ಅಬೇದ್‌ನೆಗೋ" ಎಂದರೆ "ನೆಬು (ದೇವರ)ವಿನ ಸೇವಕ" ಎಂದರ್ಥವಾಗಿದೆ).

ಇಂದು ವಿಶ್ವಾಸಿಯು ಸತ್ಯವೇದದ ಬೋಧನೆಗೆ ವಿರುದ್ಧವಾಗಿರುವ ಚಟುವಟಿಕೆಗಳನ್ನು ಎದುರಿಸಿ ನಿಲ್ಲಬೇಕಾಗಿದೆ. ಒಂದು ವೇಳೆ ಹೊಸ ಒಡಂಬಡಿಕೆಯು ಅದರ ವಿರುದ್ಧವಾಗಿ ಮಾತನಾಡುವುದಾದರೆ ದೇವರ ಚಿತ್ತವು ಸ್ಪಷ್ಟವಾಗಿದೆ ಎಂದರ್ಥ. ಅಂಥವುಗಳಲ್ಲಿ ಭಾಗಿಯಾಗಬೇಡಿರಿ! ಒಂದು ವೇಳೆ ಸತ್ಯವೇದವು ಒಂದು ಚಟುವಟಿಕೆಗೆ ಅನುಮತಿಸಿದರೆ ಅಥವಾ ಆ ವಿಷಯದ ಬಗ್ಗೆ ಮೌನವಾಗಿದ್ದರೆ ಆಗ ವಿಶ್ವಾಸಿಗಳು ಉಳಿದ ವಾಸ್ತವಾಂಶಗಳನ್ನು ಪರಿಗಣಿಸಬೇಕು.

**ಉದಾಹರಣೆಗೆ:** ನನ್ನ ಮಾದರಿಯ ನಿಮಿತ್ತ ಈ ಒಂದು ಚಟುವಟಿಕೆಯು/ ಕಾರ್ಯವು ಇನ್ನೊಬ್ಬ ವಿಶ್ವಾಸಿಯನ್ನು ಪಾಪದಲ್ಲಿ ಬೀಳುವಂತೆ ಮಾಡುವುದಾ? ಅಥವಾ ಈ ಚಟುವಟಿಕೆಯು/ ಕಾರ್ಯವು ನನ್ನ ಸುತ್ತಲಿರುವವರಿಗೆ ಯೇಸು ಕ್ರಿಸ್ತನ ಸಂದೇಶವನ್ನು ಸಾರಲು ನನ್ನ ಸಾಮರ್ಥ್ಯವನ್ನು ವೃದ್ಧಿಸುವುದಾ?

13. –

14. –

# ಉತ್ತರಗಳು 2: ನೆಬೂಕದ್ನೆಚ್ಚರನ ಪ್ರತಿಮೆಯ ಕನಸು, ಅಧ್ಯಾಯ 2

## ಉತ್ತರಗಳು

1. ದುಃಸ್ವಪ್ನದ ನಿಮಿತ್ತ ನೆಬೂಕದ್ನೆಚ್ಚರನಿಗೆ ನಿದ್ರಿಸಲಾಗಲಿಲ್ಲ (ವ. 1).
2. ತನ್ನ ಸಮಸ್ಯೆಯನ್ನು ಪರಿಹರಿಸಲು ರಾಜನು ತನ್ನ ರಾಜ ಸಲಹೆಗಾರರನ್ನೆಲ್ಲಾ (ಜೋಯಿಸರು, ಮಂತ್ರವಾದಿಗಳು, ಮಾಟಗಾರರು ಮತ್ತು ಪಂಡಿತರು) ಕರೆಯಿಸಿದನು (ವ. 2–3).
3. ತನ್ನ ಕನಸಿನಲ್ಲಿ ತಾನು ಕಂಡದ್ದೇನೆಂಬುದನ್ನು ತಿಳಿಸಲು ರಾಜನು ಒಪ್ಪದ ನಿಮಿತ್ತ ಬಾಬೆಲಿನ ಪಂಡಿತರಿಗೆ ನೆಬೂಕದ್ನೆಚ್ಚರನ ಕನಸಿನ ಅರ್ಥವನ್ನು ತಿಳಿಸಲಾಗಲಿಲ್ಲ (ವ. 4–5).
4. ಬಾಬೆಲಿನ ವಿದ್ವಾಂಸರನ್ನೆಲ್ಲಾ ಕೊಲ್ಲಬೇಕೆಂದು ರಾಜನು ತೀರ್ಮಾನಿಸಿದನು (ವ. 12). ಅಲ್ಲದೆ ಆತನು ರಾಜನ ಮೈಗಾವಲಿನವರ ದಳವಾಯಿಯಾದ ಅರ್ಯೋಕನಿಗೆ ಬಾಬೆಲಿನ ಸಕಲ ವಿದ್ವಾಂಸರನ್ನು ಸಂಹರಿಸಬೇಕೆಂದು ಹೇಳಿದನು (ವ. 14).
5. ಶಿಕ್ಷೆಯ ಬಗ್ಗೆ ದಾನಿಯೇಲನಿಗೆ ರಾಜನ ಆಜ್ಞೆಯನ್ನು ಪಾಲಿಸಲು ಹೊರಟ ಅರ್ಯೋಕನ ಮೂಲಕ ತಿಳಿಯಿತು. ವಿದ್ವಾಂಸರ ಮಧ್ಯೆ ಈ ಪಟ್ಟಿಯಲ್ಲಿ ದಾನಿಯೇಲ ಮತ್ತು ಆತನ ಮೂವರು ಸ್ನೇಹಿತರು ಸಹ ಸೇರಿದ್ದರು.
6. –
7. ವೈಯಕ್ತಿಕವಾದ ಬಿಕ್ಕಟ್ಟಿಗೆ ಸಿಲುಕಿದಾಗ ಹೇಗೆ ಪ್ರತಿಕ್ರಯಿಸಬೇಕೆಂಬುದರ ಬಗ್ಗೆ ದಾನಿಯೇಲನ ಮಾದರಿ (ಉದಹಾರಣೆಗೆ)ಯಿಂದ ಸುಮಾರು 6 ಸಂಗತಿಗಳನ್ನು ನಾವು ಕಲಿಯಬಹುದು (ವ. 14–18):

   - ಬುದ್ಧಿ ಮತ್ತು ವಿವೇಕವನ್ನು ಉಪಯೋಗಿಸುವುದು (ವ. 14). ಅರಸನ ಮೈಗಾವಲಿನವರ ದಳವಾಯಿಯಿಂದ ಭಯಾನಕ ಸುದ್ದಿಯನ್ನು ಕೇಳಿದಾಗ ದಾನಿಯೇಲನು ಆತನೊಂದಿಗೆ ಬುದ್ಧಿವಿವೇಕದಿಂದ ಮಾತನಾಡಿ ಆತನಿಂದ ಅವಶ್ಯಕವಾದ ಮಾಹಿತಿಯನ್ನು ಪಡೆದುಕೊಳ್ಳುತ್ತಾನೆ. ಅಲ್ಲದೆ ಈ ಸಮಸ್ಯೆಯೊಂದಿಗೆ ವ್ಯವಹರಿಸುವಾಗ ತನ್ನ ಜ್ಞಾನವನ್ನೂ ಸಹ (ಮಾನುಷಿಕಜ್ಞಾನ ಮತ್ತು ಆತ್ಮೀಕಜ್ಞಾನ) ಉಪಯೋಗಿಸುತ್ತಾನೆ.

   - ಗಾಬರಿಗೊಳ್ಳದಿರುವಿಕೆ: ದಾನಿಯೇಲನು ಗಾಬರಿಗೊಳ್ಳಲಿಲ್ಲ ಬದಲಾಗಿ ರಾಜನ ಬಳಿಗೆ ಹೋಗಿ ಸಮಯವನ್ನು ಕೇಳುತ್ತಾನೆ. ತದನಂತರ ಆ ಪರಿಸ್ಥಿತಿಯನ್ನು ತನ್ನ ಸ್ನೇಹಿತರಿಗೆ ಹಾಗೆಯೇ ಇದರ ವಿಷಯವಾಗಿ ದೇವರ ಮುಂದೆ ಬೇಡಿಕೊಳ್ಳೋಣವೆಂದು ಹೇಳುತ್ತಾನೆ.

   - ಕಾರ್ಯ ಮಾಡಲು ದೇವರಿಗೆ ಸಮಯ ಕೊಡುವುದು: ದಾನಿಯೇಲನು ಅರಸನ ಬಳಿ ಸಮಯವನ್ನು ಕೇಳುತ್ತಾನೆ, ಇದರಿಂದ ಈ ವಿಷಯವನ್ನು ದೇವರ ಮುಂದಿಟ್ಟು ಈ ಕನಸಿನ ರಹಸ್ಯವನ್ನು ತನಗೆ ಪ್ರಕಟಿಸಬೇಕೆಂದು ದೇವರಿಗೆ ಸಮಯಕೊಡುತ್ತಾನೆ.

   - ಒಂದುವೇಳೆ ನಮ್ಮ ಯೋಜನೆಯು ವಿಫಲವಾದರು ಪರಿಣಾಮವನ್ನು ಸಹಿಸಿಕೊಳ್ಳಲು ಸಿದ್ಧವಾಗಿರುವುದು: ದೇವರು ಮಧ್ಯೆಪ್ರವೇಶಿಸಿ ಕನಸಿನ ಅರ್ಥವನ್ನು ತನಗೆ ತಿಳಿಸದಿದ್ದರೆ ತಾನು ಮತ್ತು ತನ್ನ ಸ್ನೇಹಿತರು ಸಾಯುವುದು ಖಚಿತವೆಂಬುದಾಗಿ ದಾನಿಯೇಲನಿಗೆ ತಿಳಿದಿತ್ತು.

   - ಸಂಕಷ್ಟಕ್ಕಾಗಿ ಬೇರೆಯವರನ್ನು ದೂರದಿರುವುದು: ಅಧ್ಯಾಯದ ಆರಂಭದಲ್ಲಿ ರಾಜ ಮತ್ತು ಆತನ ಪಂಡಿತರ ನಡುವಿನ ಸಂಭಾಷಣೆಯಲ್ಲಿ ದಾನಿಯೇಲ ಮತ್ತು ಆತನ ಸ್ನೇಹಿತರು ಭಾಗಿಯಾಗಿರುವುದಿಲ್ಲ. ಅವರ ಮುಗ್ಧತೆ/ ನಿರ್ದೋಷದ ಹೊರತಾಗಿಯೂ ಅವರು ಸಾಯಬೇಕಿತ್ತು. ಹಿರಿಯ ವಿದ್ವಾಂಸರ ಅಸಾಮರ್ಥ್ಯಕ್ಕಾಗಿ ದಾನಿಯೇಲನು ಅವರನ್ನು ದೂಷಿಸುವುದಿಲ್ಲ ಅಥವಾ ತನ್ನ ಮೇಲೆ ಬಂದ ವಿಪತ್ತಿಗಾಗಿ ಅವರನ್ನು ದೂರುವುದಿಲ್ಲ. ಬದಲಾಗಿ ಸ್ವತಃ ತಾನೇ ಈ ಸಮಸ್ಯೆಯೊಂದಿಗೆ ವ್ಯವಹರಿಸುತ್ತಾನೆ.

   - ಸಂದಿಗ್ಧತೆಯನ್ನು (ಸಂಕಷ್ಟ) ಸಂಧಿಸಲು ಮುನ್ನಡೆಯುವುದು: ದಾನಿಯೇಲನು ಓಡಿಹೋಗಲಿಲ್ಲ ಅಥವಾ ಅಡಗಿಕೊಳ್ಳಲಿಲ್ಲ ಬದಲಾಗಿ ಆತನು ಪರಿಸ್ಥಿತಿಯೊಂದಿಗೆ ವ್ಯವಹರಿಸಲು ಮುಂದೆ ಸಾಗಿದನು. ತನ್ನ ಯೌವನಪ್ರಾಯ ಮತ್ತು ತನ್ನ ಅನುಭವದ ಹೊರತಾಗಿಯೂ ಸವಾಲಿಡುವುದಕ್ಕಾಗಿ ಉನ್ನತವಾದ ಆತ್ಮೀಕ ಮತ್ತು ಮಾನುಷಿಕ ಜ್ಞಾನ ಮತ್ತು ಪರಿಪಕ್ವತೆಯೊಂದಿಗೆ ಎದ್ದು ನಿಂತನು.

8. ದಾನಿಯೇಲನ ಪ್ರಾರ್ಥನೆಯಲ್ಲಿ ದೇವರ ಬಗ್ಗೆ ನಾವು ಸುಮಾರು ಐದು ಸಂಗತಿಗಳನ್ನು ಕಲಿಯುತ್ತೇವೆ (ವ. 20–23):

- ದೇವರು ಬಲ (ಶಕ್ತಿ) ಮತ್ತು ಜ್ಞಾನವುಳ್ಳ ದೇವರಾಗಿದ್ದಾನೆ.
- ದೇವರು ಈ ಲೋಕದ ರಾಜರ ಭವಿಷ್ಯವನ್ನೆಲ್ಲಾ ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ.
- ಸ್ವತಃ ದೇವರೇ ಜನರಿಗೆ ಜ್ಞಾನ ಮತ್ತು ವಿವೇಚನೆಯನ್ನು ಕೊಡುವವನಾಗಿದ್ದಾನೆ.
- ದೇವರು ಎಲ್ಲವನ್ನು ಬಲ್ಲವನಾಗಿದ್ದಾನೆ, ಆತನಿಗೆ ಮರೆಯಾದದ್ದು ಒಂದೂ ಇಲ್ಲ.
- ದೇವರು ಪ್ರಕಟಣೆಯ ದೇವರಾಗಿದ್ದಾನೆ.

ರಾಜನಾದ ನೆಬೂಕದ್ನೆಚ್ಚರನ ಕನಸಿನ ಅರ್ಥವನ್ನು ತಿಳಿಸಲು ಜ್ಞಾನ ಮತ್ತು ಶಕ್ತಿಯನ್ನು ಕೊಟ್ಟದ್ದಕ್ಕಾಗಿ ದಾನಿಯೇಲನು ದೇವರಿಗೆ ಕೃತಜ್ಞತೆ ಅಥವಾ ಸ್ತೋತ್ರ ಸಲ್ಲಿಸುವುದರೊಂದಿಗೆ ತನ್ನ ಪ್ರಾರ್ಥನೆಯನ್ನು ಮುಗಿಸುತ್ತಾನೆ.

9. ದಾನಿಯೇಲನ ಮನವಿಯಂತೆ ಅರ್ಯೋಕನು ಆತನನ್ನು ಅರಸನ ಮುಂದೆ ಕರೆದೊಯ್ಯುತ್ತಾನೆ (ವ. 24).
10. ಆತನ ಕನಸು ಭವಿಷ್ಯದ ಕುರಿತಾದದ್ದು ಎಂಬುದಾಗಿ ದಾನಿಯೇಲನು ರಾಜನಿಗೆ ಹೇಳುತ್ತಾನೆ ("ಉತ್ತರ ಕಾಲದಲ್ಲಿ ನಡೆಯತ್ತಕ್ಕದ್ದು" ವ. 28–29, ವ. 45)
11. ದಾನಿಯೇಲನ ಕನಸಿನ ಕುರಿತಾದ ತನ್ನ ಅರ್ಥವನ್ನು ನಿಜ (ಸತ್ಯ) ದೇವರ ಗುಣಸ್ವಭಾವದ ಕುರಿತಾದ ಪಾಠದೊಂದಿಗೆ ಪ್ರಾರಂಭಿಸುತ್ತಾನೆ (ವ. 27–30, ನೋಡಿ ವ. 37–38):

    ನೆಬೂಕದ್ನೆಚ್ಚರನ ಅನುಭವದಲ್ಲಿನ ದೇವರುಗಳೆಲ್ಲವೂ ತಮ್ಮ ಶಕ್ತಿಯಲ್ಲಿ ಮಿತಿಯನ್ನು ಹೊಂದಿದ್ದವು. ಆದರೆ ದಾನಿಯೇಲನ ದೇವರು ಬಲ (ಶಕ್ತಿ) ಮತ್ತು ಜ್ಞಾನವುಳ್ಳ ದೇವರಾಗಿದ್ದಾನೆ. ಆತನು ಭವಿಷ್ಯದ ಬಗೆಗಿನ ರಹಸ್ಯಗಳನ್ನೂ ಸಹ ವ್ಯಕ್ತಪಡಿಸಬಲ್ಲನು. ಇಸ್ರಾಯೇಲ್ ಸೇನೆಯನ್ನು ಸೋಲಿಸಿದ್ದು, ಬಾಬೆಲಿನ ದೇವರುಗಳು ಇಸ್ರಾಯೇಲಿನ ದೇವರಿಗಿಂತಲೂ ಬಲಿಷ್ಠವಾಗಿವೆ ಎಂಬುದರ ಸಂಕೇತವೆಂದು ನೆಬೂಕದ್ನೆಚ್ಚರನು ಯೋಚಿಸಿದ್ದನು. ಆದರೆ ಅದು ತಪ್ಪಾಗಿತ್ತು. ಬಾಬೆಲಿನವರು ಇಸ್ರಾಯೇಲ್ಯರನ್ನು ಸೆರೆಯಿಡಿಯಲು ಇಸ್ರಾಯೇಲಿನ ದೇವರೇ ಅನುಮತಿಸಿದ್ದನು (ನೋಡಿ ವ. 1:1–2). ಸ್ವತಃ ನಿಜವಾದ ಸತ್ಯದೇವರೇ ನೆಬೂಕದ್ನೆಚ್ಚರನನ್ನು ಉನ್ನತ ಸ್ಥಾನಕ್ಕೇರಿಸಿದ್ದನು (2:37–38).

12. ರಾಜನು ಕನಸಿನಲ್ಲಿ ಕಂಡ ಪ್ರತಿಮೆಯು ನಾಲ್ಕು ಅಂಗ (ಭಾಗ)ಗಳನ್ನು ಒಳಗೊಂಡಿತ್ತು (ವ. 31–33). ಬಂಗಾರದ ತಲೆ, ಬೆಳ್ಳಿಯ ಎದೆ, ತಾಮ್ರದ ಹೊಟ್ಟೆ ಮತ್ತು ಸೊಂಟ ಮತ್ತು ಕಬ್ಬಿಣದ ಕಾಲುಗಳು (ಕಬ್ಬಿಣ ಮತ್ತು ಮಣ್ಣಿನ ಪಾದದೊಂದಿಗೆ). ಆ ಪ್ರತಿಮೆಯು ದೇವರ ಕಡೆಯಿಂದ ಸಿಡಿದು ಬಂದ ಒಂದು ಗುಂಡು ಬಂಡೆಯಿಂದ ಹೊಡೆಯಲ್ಪಟ್ಟು ಚೂರುಚೂರಾಗುತ್ತದೆ. ಅವುಗಳಿಗೆ ನೆಲೆಯೇ ಇಲ್ಲದಂತಾಗುತ್ತದೆ (ವ. 34–35).
13. ರಾಜನು ಕನಸಿನಲ್ಲಿ ಕಂಡ ಬಂಡೆಯು ಒಂದು ದೊಡ್ಡ ಪರ್ವತವಾಗಿ ನಿಲ್ಲುತ್ತದೆ. (ವ. 35).
14. ಅದರ ನಾಲ್ಕು ಭಾಗ (ಅಂಗ)ಗಳು ನಾಲ್ಕು ಸಾಮ್ರಾಜ್ಯಗಳನ್ನು ಪ್ರತಿನಿಧಿಸುವುದೇ ಆ ಪ್ರತಿಮೆಯ ಅರ್ಥವಾಗಿತ್ತು (ವ. 36–43).
15. ಬಂಡೆಯ ಅರ್ಥವೇನೆಂದರೆ (ವ. 44–45) ಇದು ಎಂದಿಗೂ ಅಳಿಯದ ದೇವರ ಶಾಶ್ವತವಾದ ಸಾಮ್ರಾಜ್ಯವನ್ನು ಸೂಚಿಸುತ್ತದೆ. ಈ ರಾಜ್ಯವು ಆ ಪ್ರತಿಮೆಯ ನಾಲ್ಕನೇಯ ಸಾಮ್ರಾಜ್ಯದ ಸಮಯದಲ್ಲಿ ಬರುವಂಥದ್ದಾಗಿದೆ ಮತ್ತು ಇದು ಹಿಂದಿನ ಎಲ್ಲಾ ಸಾಮ್ರಾಜ್ಯಗಳನ್ನು ಒಡೆದು ಚೂರುಚೂರು ಮಾಡಿ ಅವುಗಳಿಗೆ ಅಂತ್ಯಹಾಡುವುದು. ಇದು ಶಾಶ್ವತವಾಗಿ ನೆಲೆನಿಲ್ಲುವುದು.
16. ತನ್ನ ಕನಸಿನ ಕುರಿತಾದ ದಾನಿಯೇಲನ ಅರ್ಥವಿವರಣೆಗೆ ನೆಬೂಕದ್ನೆಚ್ಚರನು ಗಂಭೀರವಾಗಿ ಪ್ರತಿಕ್ರಯಿಸುತ್ತಾನೆ (ವ. 46–49):
    - ಆತನು ದಾನಿಯೇಲನ ಮುಂದೆ ಅಡ್ಡಬಿದ್ದು ಪೂಜಿಸಿ ದಾನಿಯೇಲನಿಗೆ ನೈವೇದ್ಯ ಮಾಡಿ ಧೂಪಹಾಕಬೇಕೆಂದು ಆಜ್ಞಾಪಿಸಿದನು.
    - ಆತನು ದೇವರ ಸಾರ್ವಭೌಮತೆಯನ್ನು ಮತ್ತು ದೇವರು ರಹಸ್ಯಗಳನ್ನೆಲ್ಲಾ ಬೈಲಿಗೆ ತರಲು ಸಮರ್ಥನೆಂಬುದಾಗಿ ಅರಿತುಕೊಂಡನು.
    - ಆತನು ದಾನಿಯೇಲನಿಗೆ ಅಮೂಲ್ಯವಾದ ಬಹುಮಾನಗಳನ್ನು ಕೊಟ್ಟನು.
    - ಆತನು ದಾನಿಯೇಲನನ್ನು ದೊಡ್ಡಸ್ಥಿಕೆಗೆ ತಂದು ಆತನನ್ನು ಬಾಬೆಲಿನ ಸಂಸ್ಥಾನದ ಸಕಲ ವಿದ್ವಾಂಸರ ಸಕಲ ಮುಖ್ಯಸ್ಥರಿಗೂ ಮುಖ್ಯಸ್ಥನನ್ನಾಗಿ ಮಾಡಿದನು.
    - ದಾನಿಯೇಲನ ಮನವಿಯ ಮೇರೆಗೆ ಆತನ ಮೂವರು ಸ್ನೇಹಿತರನ್ನು (ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ) ಸಹ ಬಾಬೆಲ್ ಸಂಸ್ಥಾನದ ಕಾರ್ಯಭಾರವನ್ನು ನೋಡಿಕೊಳ್ಳುವ ಸ್ಥಾನದಲ್ಲಿರಿಸಿದನು.
17. –
18. –

# ಉತ್ತರಗಳು 3: ಬಂಗಾರದ ಪ್ರತಿಮೆ ಮತ್ತು ಧಗಧಗನೆ ಉರಿಯುವ ಆವಿಗೆ, ಅಧ್ಯಾಯ 3

## ಉತ್ತರಗಳು

1. ದೂರಾ ಬೈಲಿನಲ್ಲಿ ತಾನು ನಿಲ್ಲಿಸಿದ ದೊಡ್ಡ ಬಂಗಾರದ ಪ್ರತಿಮೆಯ ಉದ್ಘಾಟನೆಗಾಗಿ ರಾಜನಾದ ನೆಬೂಕದ್ನೆಚ್ಚರನು ತನ್ನ ಇಡೀ ಸಾಮ್ರಾಜ್ಯದ ಆಡಳಿತ ವರ್ಗವನ್ನೆಲ್ಲಾ ದೂರಾ ಬೈಲಿನಲ್ಲಿ ಸೇರಿಸಿದನು (ವ. 3).
2. ಸಾರುವವರು ಆಡಳಿತಗಾರರಿಗೆ ವಾದ್ಯಗಳ ಧ್ವನಿಯನ್ನು ಕೇಳಿದೊಡನೆ ಬಂಗಾರದ ಪ್ರತಿಮೆಗೆ ಅಡ್ಡಬಿದ್ದು ಪೂಜಿಸಬೇಕೆಂದು ಹೇಳಿದರು (ವ. 6–12).
3. ಇದಕ್ಕೆ ವಿಧೇಯರಾಗಲು ಒಪ್ಪದವರನ್ನು ತಕ್ಷಣವೇ ಧಗಧಗನೆ ಉರಿಯುವ ಆವಿಯೊಳಗೆ ಹಾಕಲಾಗುವುದೆಂದು ಸಾರುವವರು ಹೇಳಿದರು (ವ. 6).
4. ನೆಬೂಕದ್ನೆಚ್ಚರನ ಬಳಿಗೆ ಬಂದ ಪಂಡಿತರು ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ಮೇಲೆ ಮೂರು ಆರೋಪಗಳನ್ನು ಮಾಡಿದರು (ವ. 6–12):
   - ಅವರು ರಾಜಾಜ್ಞೆಗೆ ವಿಧೇಯರಾಗುವುದಿಲ್ಲ, ಅವರು ಅವಿಧೇಯರಾಗಿದ್ದಾರೆ.
   - ಅವರು ಬಾಬೆಲಿನ ದೇವರುಗಳನ್ನು ಸೇವಿಸುವುದಿಲ್ಲ. ಅವರು ಬಾಬೆಲಿನ ಸಂಸ್ಕೃತಿಯನ್ನು ಮತ್ತು ಧರ್ಮವನ್ನು ಸಹ ಬೆಂಬಲಿಸಲಾರರು.
   - ಅವರು ಬಂಗಾರದ ಪ್ರತಿಮೆಗೆ ಅಡ್ಡಬಿದ್ದು ಅದನ್ನು ಪೂಜಿಸುವುದಿಲ್ಲ, ಅವರು ಹಟಮಾರಿಗಳು ಮತ್ತು ದಂಗೆಕೋರರಾಗಿದ್ದು, ತಮ್ಮ ಈ ಹೋರಾಟ ಮನೋಭಾವದಿಂದಾಗುವ ಗಂಭೀರ ಪರಿಣಾಮವನ್ನು ಲಕ್ಷಿಸದವರಾಗಿದ್ದಾರೆ.
5. ಅರಸನು ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ಮುಂದೆ ಎರಡು ಪರ್ಯಾಯ ಷರತ್ತುಗಳನ್ನಿಟ್ಟನು, ಅವೆಂದರೆ:
   - ಪ್ರತಿಮೆಯನ್ನು ಪೂಜಿಸುವುದು
   - ಧಗಧಗನೆ ಉರಿಯುವ ಆವಿಗೆಗೆ ಹಾಕಲ್ಪಡುವುದು
6. ಅರಸನ ಷರತ್ತಿಗೆ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರು ಕೊಟ್ಟ ಪ್ರತ್ಯುತ್ತರವೇನೆಂದರೆ (ವ. 14–18):
   - ತಾವು ಬಂಗಾರದ ಪ್ರತಿಮೆಯನ್ನು ಪೂಜಿಸುವುದಿಲ್ಲ.
   - ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಗೆಯಿಂದ ಸಹ ನಮ್ಮನ್ನು ರಕ್ಷಿಸಬಲ್ಲನು.
   - ಒಂದು ವೇಳೆ ರಕ್ಷಿಸದಿದ್ದರೂ ನಾವು ಪ್ರತಿಮೆಯನ್ನು ಪೂಜಿಸುವುದಿಲ್ಲ.
7. ಆವಿಗೆಯ ಕಾವು ಅತೀತೀಕ್ಷ್ಣವಾಗಿದ್ದರಿಂದ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರನ್ನು ಧಗಧಗನೆ ಉರಿಯುವ ಆವಿಗೆಗೆ ಎತ್ತಿ ಹಾಕಿದ ಸೈನಿಕರು ಸತ್ತರು. "ನಿತ್ಯಕ್ಕಿಂತ ಏಳರಷ್ಟು ಹೆಚ್ಚಾಗಿ" ಅಂದರೆ, ಅದು ಅತೀ ಗರಿಷ್ಠ ಮಟ್ಟದ ಕಾವಾಗಿತ್ತು.
8. ಉರಿಯುವ ಆವಿಗೆಯೊಳಗಿನ ನಾಲ್ಕನೇ ವ್ಯಕ್ತಿಯ ರೂಪವು "ದೇವಕುಮಾರನ ರೂಪದಂತಿತ್ತು" (ವ. 25). ಹೆಚ್ಚಿನ ಸತ್ಯವೇದ ಪಂಡಿತರೆಲ್ಲ ಆತನನ್ನು ದೇವದೂತನೆಂಬುದಾಗಿ ಅರ್ಥೈಸಿಕೊಳ್ಳುತ್ತಾರೆ. ಇನ್ನು ಕೆಲವರು ಆತನು ಯೇಸು ಕ್ರಿಸ್ತನು ಎನ್ನುತ್ತಾರೆ. ನನಗೇನು ಈ ಅಭಿಪ್ರಾಯವು ಸಮಂಜಸವೆನಿಸುವುದಿಲ್ಲ (ಹೋಲಿಸಿ ವ. 28). ಏನೇ ಆಗಲಿ ಮುಖ್ಯವಾದ ಅಂಶವೆಂದರೆ ಅವರನ್ನು ರಕ್ಷಿಸುವುದಕ್ಕಾಗಿ ದೇವರೇ ಆ ಮೂವರು ಪುರುಷರೊಂದಿಗಿದ್ದನು.
9. ದೇವರು ತನ್ನ ಸೇವಕರಾದ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರನ್ನು ಕಾಪಾಡಿದ್ದಕ್ಕಾಗಿ ರಾಜನಾದ ನೆಬೂಕದ್ನೆಚ್ಚರನು ದೇವರಿಗೆ ಸ್ತೋತ್ರ ಮಾಡುತ್ತಾನೆ (ವ. 28).
10. ಯಾರೂ ಸಹ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ದೇವರ ವಿಷಯದಲ್ಲಿ ಅಲ್ಲದ ಮಾತುಗಳನ್ನಾಡಬಾರದೆಂದು ಅರಸನು ಆಜ್ಞೆಯನ್ನು ಹೊರಡಿಸಿದನು (ವ. 29).
11. ರಾಜನು ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರನ್ನು ಬಾಬೆಲ್ ಸಂಸ್ಥಾನದಲ್ಲೆಲ್ಲಾ ಉನ್ನತ ಪದವಿಗೆ ತರುವುದರ ಮೂಲಕ ಸನ್ಮಾನಿಸಿದನು (ವ. 30).

12. ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರರು ದೇವರ ಸರ್ವಾಧಿಕಾರವನ್ನು ತಿಳಿದಿದ್ದರು (ವ. 17–18), ನಾನದನ್ನು ಒಪ್ಪುತ್ತೇನೆ. ಅನೇಕಬಾರಿ ನಾವು ದೇವರನ್ನು ಸೇವಕನ ರೀತಿಯಲ್ಲಿ ನೋಡುತ್ತೇವೆ, ನಮ್ಮ ಮಾನುಷಿಕ ತಿಳುವಳಿಕೆಗನುಸಾರವಾಗಿ ಆತನು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸಬೇಕೆಂದು ಅಪೇಕ್ಷಿಸುತ್ತೇವೆ. ದೇವರು ಯಾವಾಗಲೂ ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ, ಆದರೆ ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುವಂತೆ ಆತನಲ್ಲಿ ನಾವು ಸಾಕಷ್ಟು ಭರವಸೆಯನ್ನಿಡಬೇಕು.

13. ಅನಾರೋಗ್ಯ ಮತ್ತು ಕಷ್ಟಗಳು ಯಾವಾಗಲೂ ಪಾಪದಿಂದ ಮತ್ತು ನಂಬಿಕೆಯ ಕೊರತೆಯಿಂದ ಬರುತ್ತವೆಂದು ಅನೇಕ ಕ್ರೈಸ್ತ ವಿಶ್ವಾಸಿಗಳು ಹೇಳುತ್ತಾರೆ. ವಚನ 16–18 ರ ಬೆಳಕಿನಡಿಯಲ್ಲಿ ಅದು ತಪ್ಪಾದ ಹೇಳಿಕೆಯೆಂಬುದಾಗಿ ನಾನು ಹೇಳುತ್ತೇನೆ. ದೇವರು ಕಷ್ಟದಿಂದ ಮತ್ತು ಅನಾರೋಗ್ಯದಿಂದ ಬಿಡಿಸಲು ಶಕ್ತನಾಗಿದ್ದಾನೆ, ಆದರೆ ಆ ರೀತಿ ಮಾಡಲು ಆತನು ಕೆಲವೊಮ್ಮೆ ಬಯಸದೆ ಇರಬಹುದು. ಆಗಲೂ ಸಹ ಆತನು ನಾವು ಆತನಲ್ಲಿ ಭರವಸವಿಟ್ಟು, ಆತನಿಗೆ ವಿಧೇಯರಾಗಿ ಜೀವಿಸಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ.

14. ನಾನವರನ್ನು ಅನೇಕ ಕ್ಷೇತ್ರಗಳಲ್ಲಿ ಮಾದರಿಗಳಾಗಿ ಕಾಣುತ್ತೇನೆ, ಉದಾಹಾರಣೆಗೆ:

- ದೇವರ ಸರ್ವಾಧಿಕಾರದ ಕುರಿತಾದ ಅವರ ತಿಳುವಳಿಕೆಯಲ್ಲಿ
- ತಮ್ಮ ಜೀವನದಲ್ಲಿ ದೇವರ ಚಿತ್ತ ನೆರವೇರಬೇಕೆಂದು ತಮ್ಮನ್ನು ದೇವರಿಗೆ ಒಪ್ಪಿಸಿಕೊಡುವಿಕೆಯಲ್ಲಿ (ಹೋಲಿಸಿ ಲೂಕ. 22:42)
- ತಮ್ಮ ನಂಬಿಕೆಗಾಗಿ ಬಾಧೆಪಡಲು ಒಪ್ಪುವುದು
- ಬಾಬೆಲಿನ ದೇವರುಗಳನ್ನು ಸೇವಿಸಲು ಮತ್ತು ಬಂಗಾರದ ಪ್ರತಿಮೆಯನ್ನು ಪೂಜಿಸಲು ತಿರಸ್ಕರಿಸುವಿಕೆ
- ರಾಜನಾದ ನೆಬೂಕದ್ನೆಚ್ಚರನ ಮುಂದೆ ಅವರು ತೋರಿದ ಧೈರ್ಯ

15. **ಟಿಪ್ಪಣಿ:** ನಮ್ಮ ನಂಬಿಕೆಗೆ ಬರುವ ಸವಾಲುಗಳನ್ನು ಎದುರಿಸಲು ಸಿದ್ಧರಾಗಲು ಇರುವ ಸಮಯವು ಸವಾಲು ಬಂದೊದಗಿದಾಗಲ್ಲ, ಆದರೆ ಬರುವುದಕ್ಕಿಂತ ಮೊದಲೇ ಸಿದ್ಧರಾಗಬೇಕಿದೆ. ತಾವೆದುರಿಸುವ ಒತ್ತಡಗಳ ಹೊರತಾಗಿಯೂ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ (ದಾನಿಯೇಲ 1:8 ರಂತೆ) ಅದಾಗಲೇ ತಾವು ದೇವರ ವಾಕ್ಯಕ್ಕೆ ವಿಧೇಯರಾಗಬೇಕೆಂಬುದಾಗಿ ನಿರ್ಧರಿಸಿದ್ದರು. ಸವಾಲು ಬರುವುದಕ್ಕಿಂತ ಎಷ್ಟೋ ಮುಂಚೆಯೇ ಅವರು ನಿರ್ಧರಿಸಿಕೊಂಡಿದ್ದರು. ಹಾಗೆಯೆ ಈ ಒಂದು ರೀತಿಯಲ್ಲಿ ಸಹ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ ನಮಗೆ ಮಾದರಿಗಳಾಗಿದ್ದಾರೆಂಬುದನ್ನು ನಾವು ಕಾಣಬಹುದು.

# ಉತ್ತರಗಳು 4: ನೆಬೂಕದ್ನೆಚ್ಚರನ ಮರದ ಕನಸು, ಆಧ್ಯಾಯ 4

## ಉತ್ತರಗಳು

1. ಈ ಅಧ್ಯಾಯವು ಎರಡು ರೀತಿಯ ಪಠ್ಯಗಳನ್ನು ಒಳಗೊಂಡಿದೆ. ಇದರಲ್ಲಿ ನೆಬೂಕದ್ನೆಚ್ಚರನು ತನ್ನ ಸಾಕ್ಷಿ ಹೇಳುವ ವಾಕ್ಯಭಾಗ (ವ. 1–18 ಮತ್ತು 34–37) ಮತ್ತು ನಿರೂಪಕನು ತನ್ನ ಲೆಕ್ಕವನ್ನು ಕೊಡುವ ವಾಕ್ಯಭಾಗ (ವ. 19–33).
2. ಕಾಲಾನುಕ್ರಮದ ಪ್ರಕಾರ 1–3 ವಚನಗಳು ಈ ಅಧ್ಯಾಯದ ಕೊನೇ ಭಾಗದಲ್ಲಿ ಬರುತ್ತವೆ. ಈ ನೆಬೂಕದ್ನೆಚ್ಚರನ ಅನುಭವ ಮುಗಿದ ಮೇಲೆ ಕಂಡುಬರುವ ಕೊನೇಯ ಅಭಿಪ್ರಾಯಗಳಾಗಿವೆ. ಹಾಗೆಯೇ ಆತನ ಕನಸು ಮತ್ತು ಆತನ ಅನುಭವದ ಕುರಿತಾದ ಸಾಕ್ಷಿಯ ನಡುವೆ ಎಂಟು ವರ್ಷಗಳ ಸಮಯದ ಅಂತರವಿದೆ (ವ. 4–18).
3. ವಚನ 1–3ರಲ್ಲಿನ ನೆಬೂಕದ್ನೆಚ್ಚರನ ಹೇಳಿಕೆಯು, ಆತನು 3:28–29 ರಲ್ಲಿ ದೇವರ ಬಗ್ಗೆ ಹೇಳಿದ ಹೇಳಿಕೆಗಿಂತ ವಿಭಿನ್ನವಾಗಿದೆ. ಅಧ್ಯಾಯ 3ರಲ್ಲಿ ನೆಬೂಕದ್ನೆಚ್ಚರನು ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ದೇವರನ್ನು ಸ್ತುತಿಸುತ್ತಾನೆ. ಅಧ್ಯಾಯ 4ರಲ್ಲಿ ಆತನು ಅದೇ ದೇವರನ್ನು ತನ್ನ ವೈಯಕ್ತಿಕ ಅನುಭವದ ದೃಷ್ಟಿಕೋನದಿಂದ ಮತ್ತು ಆತನ ಕುರಿತಾದ ಜ್ಞಾನದಿಂದ ಸ್ತುತಿಸುತ್ತಾನೆ.
4. ಈ ಅಧ್ಯಾಯನದ ಪ್ರಾರಂಭದಲ್ಲಿ ನೆಬೂಕದ್ನೆಚ್ಚರನು ಈ ಲೋಕದಲ್ಲಿ ವಾಸಿಸುವ ಸಕಲ ಜನಾಂಗ ಕುಲಭಾಷೆಯವರನ್ನು ಸಂಬೋಧಿಸುತ್ತಾನೆ (ವ. 1). ಹಾಗೆಯೇ ದೇವರು ತನ್ನ ಜಿವನದಲ್ಲಿ ಏನನ್ನು ಮಾಡಿದನು ಮತ್ತು ಇದು ಹೇಗೆ ಜೀವಿತವನ್ನು ಬದಲಿಸಿತೆಂಬುದರ ಬಗ್ಗೆ ಇಡೀ ಲೋಕವೇ ತಿಳಿದುಕೊಳ್ಳಬೇಕೆಂದು ಆತನು ಬಯಸಿದನು.
5. ತನ್ನನ್ನು ಎದುರಿಸುವ ಒಂದು ಕನಸಿನ ಅರ್ಥವನ್ನು ತಿಳಿಸುವುದಕ್ಕಾಗಿ ರಾಜನು ತನ್ನ ವಿದ್ವಾಂಸರನ್ನೆಲ್ಲಾ ಕರೆಯಿಸುತ್ತಾನೆ (ವ. 5–6).
6. ನೆಬೂಕದ್ನೆಚ್ಚರನು ದಾನಿಯೇಲನ ಬಗ್ಗೆ ಎರಡು ಸಂಗತಿಗಳನ್ನು ಹೇಳುತ್ತಾನೆ (ವ. 8):
   - ಆತನು ದಾನಿಯೇಲನು ತನ್ನ ದೇವರ ಹೆಸರಿನಿಂದ ಅಂದರೆ ಬೇಲ್ತೆಶಚ್ಚರ ಎಂದು ಕರೆಯುತ್ತಾನೆ. ಬೇಲ್ತೆಶಚ್ಚರ ಎಂದರೆ– "ತನ್ನ ಜೀವವನ್ನು ರಕ್ಷಿಸು" ಎಂದರ್ಥವಾಗಿದೆ. ಬಹುಶಃ ಇದು "ಬೇಲ್–ಬೇಲ್ತೆಶಚ್ಚರ್ (ಇದರರ್ಥ ಬೇಲ್ ದೇವರು ಅವನ ಜೀವವನ್ನು ರಕ್ಷಿಸಲಿ) ಅಥವಾ ನೆಬು–ಬೇಲ್ತೆಶಚ್ಚರ್ (ಅಂದರೆ– ನೆಬು ದೇವರು ಅವನ ಜೀವವನ್ನು ರಕ್ಷಿಸಲಿ) ಎಂಬುದರ ಸಂಕ್ಷಿಪ್ತ ರೂಪವಾಗಿರಬಹುದು. ಬೇಲ್ ಎಂಬುದು ಬಾಬೆಲಿನಿಯರ ರಾಷ್ಟ್ರೀಯ ಮತ್ತು ರಾಜನ ಕುಟುಂಬದ ಸಂಸ್ಥಾನದ ದೇವರಾಗಿತ್ತು. ನೆಬು ಎಂಬುದು ಅರಸನಾದ ನೆಬೂಕದ್ನೆಚ್ಚರನ ವೈಯಕ್ತಿಕ ದೇವರಾಗಿರಬಹುದು (ನೆಬೂಕದ್ನೆಚ್ಚರ ಎಂದರೆ "ನೆಬು ದೇವರ ನನ್ನ ಮಗನನ್ನು ಕಾಪಾಡಲಿ ಎಂದರ್ಥವಾಗಿದೆ).
   - ನೆಬೂಕದ್ನೆಚ್ಚರನು ದಾನಿಯೇಲನನ್ನು ಅಸ್ಥಾನದಲ್ಲಿ ಇತರೆ ಪಂಡಿತರಗಳಿಗೆ ತದ್ವಿರುದ್ಧವಾಗಿ ಪರಿಶುದ್ಧದೇವರುಗಳ ಆತ್ಮವುಳ್ಳವನೆಂಬುದಾಗಿ ಕಾಣುತ್ತಾನೆ.
7. ನೆಬೂಕದ್ನೆಚ್ಚರನು ತನ್ನ ಕನಸಿನಲ್ಲಿ ಬಹು ಎತ್ತರವಾದ ಒಂದು ಮರವನ್ನು ಕಾಣುತ್ತಾನೆ (ವ. 10). ಆದರೆ ದೇವರ ಆಜ್ಞೆಂತೆ ಆ ಮರವನ್ನು ಕಡಿದುರುಳಿಸಲಾಯಿತು (ವ. 13–14).
8. ನೆಬೂಕದ್ನೆಚ್ಚರನು ದಾನಿಯೇಲನಿಗೆ ತನ್ನ ಕನಸಿನ ಬಗ್ಗೆ ಹೇಳಿದಾಗ ದಾನಿಯೇಲನು ದಿಗಿಲುಪಟ್ಟು ತುಸು ಹೊತ್ತು ಸ್ತಬ್ದನಾದನು (ವ. 19). ನಾನೆಣಿಸುತ್ತೇನೆ, ಆ ಕನಸಿನ ಅರ್ಥದಿಂದ ದಾನಿಯೇಲನು ಗಾಬರಿಗೊಂಡು ಅದನ್ನು ನೆಬೂಕದ್ನೆಚ್ಚರನಿಗೆ ಹೇಗೆ ಹೇಳಬೇಕೆಂದು ಚಕಿತನಾಗಿರಬಹುದು.
9. ದಾನಿಯೇಲನು ಕನಸಿನ ಅರ್ಥವನ್ನು ಈ ರೀತಿಯಾಗಿ ವಿವರಿಸುತ್ತಾನೆ:
   - ಆ ಮರವು ರಾಜನಾದ ನೆಬೂಕದ್ನೆಚ್ಚರನನ್ನು ಸೂಚಿಸುತ್ತದೆ (ವ. 22).
   - ಮರವನ್ನು ಕಡಿಯುವುದರ ಅರ್ಥ ನೆಬೂಕದ್ನೆಚ್ಚರನು ತನ್ನ ಸಾಮ್ರಾಜ್ಯದಿಂದ ತಳ್ಳಲ್ಪಡುತ್ತಾನೆಂಬುದಾಗಿದೆ (ವ. 25).
   - ಮರದ ಬುಡದ ಮೋಟನ್ನು ಉಳಿಸಲಾಗಿತ್ತು. ಇದು ನೆಬೂಕದ್ನೆಚ್ಚರನ ರಾಜ್ಯತ್ವವು ಮರುಸ್ಥಾಪಿಸಲ್ಪಡುವುದೆಂಬುದಾಗಿದೆ (ವ. 26). ಇದು ಏಳು ವರುಷಗಳಾದ ಮೇಲೆ ನೆಬೂಕದ್ನೆಚ್ಚರನು ದೇವರಿಗೆ ಸರ್ವಾಧಿಕಾರವಿದೆಯೆಂದು ತಿಳಿದ ನಂತರ ಸಂಭವಿಸುವುದಾಗಿದೆ.
10. ಕನಸಿನ ಅರ್ಥವನ್ನು ತಿಳಿಸಿದ ನಂತರ ದಾನಿಯೇಲನು ನೆಬುಕದ್ನೇಚ್ಚರನಿಗೆ ದುಷ್ಟತನವನ್ನು ಮತ್ತು ಪಾಪಮಯ ಜೀವಿತವನ್ನು ಬಿಟ್ಟುಬಿಟ್ಟು– ಬಡವರಿಗೆ ಕರುಣೆಯನ್ನು ತೊರಿಸಿ ನ್ಯಾಯವಾದುದನ್ನು ಮಾಡಬೇಕೆಂದು ಸಲಹೆಯನ್ನು ಕೊಟ್ಟನು (ವ. 28–29).

11. ಕನಸು ಒಂದು ವರ್ಷದ ನಂತರ ನೆರವೇರಿತು, ಅದು ನೆಬೂಕದ್ನೆಚ್ಚರನು ಗರ್ವದಿಂದ ಕೊಚ್ಚಿಕೊಂಡ ಸಂದರ್ಭದಲ್ಲಿ ನೆರವೇರಿತು (ವ. 28–29).

12. ಕನಸಿನ ನೆರವೇರಿವಿಕೆಯು ಏಳು ವರ್ಷಗಳ ನಂತರ ನೆಬೂಕದ್ನೆಚ್ಚರನು ದೇವರಕಡೆಗೆ ತಿರುಗಿಕೊಂಡು ಲೋಕದಾದ್ಯಂತ ದೇವರ ಒಡೆಯತ್ವವನ್ನು ತಿಳಿದುಕೊಳ್ಳುವುದರೊಂದಿಗೆ ಮುಕ್ತಾಯವಾಯಿತು (ವ. 34–35).

13. ದೇವರು ನೆಬೂಕದ್ನೆಚ್ಚರನಿಗೆ ಕನಸನ್ನು ಕೊಡುವ ಉದ್ದೇಶವು ಮೂರುಬಾರಿ ಪುನರಾವರ್ತನೆಯಾಗಿದೆ (ವ. 17, 25, 32). ಪರಮೋನ್ನತನು ದೇವರೇ ಹೊರತು ಆತನಲ್ಲವೆಂಬುದನ್ನು ನೆಬೂಕದ್ನೆಚ್ಚರನು ಅರ್ಥೈಸಿಕೊಳ್ಳಬೇಕೆಂದು ದೇವರ ಉದ್ದೇಶವಾಗಿತ್ತು. ಹಾಗಾಗಿ ನೆಬೂಕದ್ನೆಚ್ಚರನ ಮೇಲೆ ಆಳವಾದ ಪರಿಣಾಮವನ್ನು ಬೀರಲು ಈ ಕಥೆಯಲ್ಲಿ ದೇವರು ತನ್ನ ಪ್ರೀತಿ ಮತ್ತು ಕೃಪೆಗೆ ಬದಲಾಗಿ ತನ್ನ ಸಂಪೂರ್ಣ ಅಧಿಕಾರವನ್ನು ಆರಿಸಿಕೊಳ್ಳುತ್ತಾನೆ.

14. ಈ ಅಧ್ಯಾಯದಲ್ಲಿ ನೆಬೂಕದ್ನೆಚ್ಚರನು ದೇವರ ಬಗ್ಗೆ ಸುಮಾರು ಐದು ಸಂಗತಿಗಳನ್ನು ಹೇಳುತ್ತಾನೆ (ನೋಡಿ ವ. 2–3, 34–35, 37):

    - ದೇವರು ಮಹತ್ತು ಮತ್ತು ಅದ್ಭುತಗಳನ್ನು ಮಾಡುವ ದೇವರು
    - ದೇವರು ನಿತ್ಯನು ಮತ್ತು ಆತನ ರಾಜ್ಯ ಶಾಶ್ವತವಾದದ್ದು
    - ದೇವರ ಶಕ್ತಿಯು ಉನ್ನತವಾದದ್ದು, ಮನುಷ್ಯರು ಆತನನ್ನು ಪ್ರಶ್ನೆಮಾಡಲಾಗದು.
    - ದೇವರು ನೀತಿವಂತನು ಮತ್ತು ನ್ಯಾಯವಂತನಾಗಿದ್ದಾನೆ.
    - ದೇವರು ತನ್ನ ನೀತಿ ಮತ್ತು ನ್ಯಾಯದ ನಿಮಿತ್ತ ನಮ್ಮ ಸ್ತೋತ್ರಗಳಿಗೆ ಯೋಗ್ಯನಾಗಿದ್ದಾನೆ.

15. ವಚನ 17ರ ಬೆಳಕನಡಿಯಲ್ಲಿ ನೋಡುವಾಗ ದೇವರ ಆದೇಶದಿಂದ ದುಷ್ಟ ನಾಯಕರುಗಳು ಸಹ ಅಧಿಕಾರಕ್ಕೆ ಬಂದಿರುತ್ತಾರೆ. ದೇವರು ತನ್ನ ಅಧಿಕಾರದಲ್ಲಿ ಪರಮೋನ್ನತನಾಗಿದ್ದಾನೆ. ದುಷ್ಟನು ಮತ್ತು ಭ್ರಷ್ಟ ನಾಯಕರುಗಳು ಈ ಭೂಮಿ ಮೇಲೆ ಇರಲು ಆತನು ಹೇಗೂ ಅನುಮತಿಸುತ್ತಾನೆ. ಆದರೆ ಅತಿಯಾದ ಶೋಷಣೆಯಿರುವಲ್ಲಿ ಆತನು ಬಲಹೀನನಾಗಿರುವುದಿಲ್ಲ. ಆತನು ಕೆಟ್ಟತನಕ್ಕೆ ಮೂಲನಲ್ಲ. ಆದರೆ ತನ್ನ ಮುಖ್ಯ ಉದ್ದೇಶನ್ನು ನೆರವೇರಿಸಲು ಕೆಡುಕನು ಕಾರ್ಯಮಾಡಲು ಅನುಮತಿಸುತ್ತಾನಷ್ಟೆ. ಪಶ್ಚಾತ್ತಾಪಪಡದೇ ಇರುವ ರಾಜರು ಮತ್ತು ನಾಯಕರುಗಳ ಪಾಪಗಳಿಗಾಗಿ ದೇವರು ಎಲ್ಲಾ ಘಟನೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ, ಅವರ ಜವಬ್ದಾರಿಗಳನ್ನು ತೆಗೆದು ಹಾಕುವುದಿಲ್ಲ. ಈ ಸತ್ಯಕ್ಕೆ ನೆಬೂಕದ್ನೆಚ್ಚರನೇ ಒಂದು ಉತ್ತಮವಾದ ಉದಾಹರಣೆ.

16. ತನ್ನ ಅನುಭವದ ಮೂಲಕ ಒಬ್ಬ ಹೊಸ ನೆಬೂಕದ್ನೆಚ್ಚರನು ಹೊರಬರುತ್ತಾನೆ (ವ. 29–30ನ್ನು ವ. 34–7ರೊಂದಿಗೆ ಹೋಲಿಸಿರಿ). ಆತನ ಮನೋಭಾವನೆಯಲ್ಲಿ ನಿಜವಾದ ಒಂದು ಬದಲಾವಣೆ ಆಯಿತೆಂದು ನಾನು ಯೋಚಿಸುತ್ತೇನೆ. ಆತನು ತನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ ರೀತಿ ಮತ್ತು ದೃಷ್ಟಿಕೋನವು ಆತನ ಪ್ರಾಮಾಣಿಕತೆಯನ್ನು ತೋರಿಸುತ್ತದೆ.

17. ನೆಬೂಕದ್ನೆಚ್ಚರನ ಅನುಭವವು ನಮ್ಮನ್ನು ಆತ್ಮೀಕ ಪರಿಪಕ್ವತೆ ಮತ್ತು ಕ್ರಿಸ್ತನ ಸ್ವಾರೂಪ್ಯಕ್ಕೆ ತರುವುದಕ್ಕಾಗಿ ಹೇಗೆ ದೇವರು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಾನೆನ್ನುವುದರ ಬಗ್ಗೆ ಕಲಿಸುತ್ತದೆ. ನಮ್ಮ ದೇವರು ಜವಬ್ದಾರಿಯಿಲ್ಲದ ಅಥವಾ ಆಲೋಚನೆಗಳಿಲ್ಲದ ದೇವರಲ್ಲ. ಯಾವಾಗಲು ಆತನು ಮಾಡುವ ಮತ್ತು ಅನುಮತಿಸುವ ಕಾರ್ಯಗಳಿಗೆ ಒಂದೊಂದು ಉದ್ದೇಶ ಹೊಂದಿದ್ದಾನೆ. ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿಯನ್ನು ಯೇಸುಕ್ರಿಸ್ತನ ಸ್ವಾರೂಪ್ಯಕ್ಕೆ ಮಾರ್ಪಡಿಸುವುದು ಆತನ ಉದ್ದೇಶವಾಗಿದೆ. ನಮಗೆ ನೋವನ್ನುಂಟುಮಾಡುವ ಅನುಭವಗಳು ಸಹ ಸೇರಿ ನಮ್ಮ ಜೀವನದಲ್ಲಿ ದೇವರು ಬರಮಾಡುವದೆಲ್ಲವೂ ಸಹ ಆ ಗುರಿಯ ಹತ್ತಿರಕ್ಕೆ ನಮ್ಮನ್ನು ನಡಿಸುತ್ತದೆ.

18. ನೆಬೂಕದ್ನೆಚ್ಚರನಿಗೆ ಆತನ ಕನಸಿನ ಅರ್ಥವನ್ನು ತಿಳಿಸುವುದರಲ್ಲಿ ದಾನಿಯೇಲನು ಧೈರ್ಯವನ್ನು ತೋರುತ್ತಾನೆ. ಆದರೆ ವಿಶಾಲವಾಗಿ ನೋಡಿದರೆ ಈ ಅಧ್ಯಾಯವು ದಾನಿಯೇಲನಿಗಿಂತ ಹೆಚ್ಚಾಗಿ ಅರಸನಾದ ನೆಬೂಕದ್ನೆಚ್ಚರನ ಕುರಿತಾಗಿದೆ:

    - ಗರ್ವ ಮತ್ತು ಕೊಚ್ಚಿಕೊಳ್ಳುವಿಕೆಯಿಂದಾಗುವ ಅಪಾಯಗಳ ಬಗ್ಗೆ ನೆಬೂಕದ್ನೆಚ್ಚರನು ನಮಗೊಂದು ಎಚ್ಚರಿಕೆಯಾಗಿದ್ದಾನೆ.
    - ಆದರೆ ಆತನು ನಮಗೊಂದು ಒಳ್ಳೆಯ ಮಾದರಿ ಉದಾಹರಣೆ ಸಹ ಆಗಿದ್ದಾನೆ. ಆತನು ಪಶ್ಚಾತ್ತಾಪಪಟ್ಟನು. ತನ್ನ ಜೀವನವನ್ನು ಬದಲಿಸಿಕೊಳ್ಳುವ ಮನಸ್ಸು ಆತನಲ್ಲಿತ್ತು. ಆತನು ತನ್ನನ್ನು ಮತ್ತು ದೇವರನ್ನು ಒಂದು ಹೊಸ ಬೆಳಕಿನಲ್ಲಿ ಕಾಣಲು ಸಿದ್ಧನಿದ್ದನು. ತನಗೆ ಏನು ಸಂಭವಿಸಿತು ಮತ್ತು ದೇವರು ತನ್ನೊಂದಿಗೆ ಹೇಗೆ ವ್ಯವಹರಿಸಿದನೆಂಬುದರ ಬಗ್ಗೆ ಇಡೀ ಲೋಕಕ್ಕೆ ಸಾಕ್ಷಿಯನ್ನು ಕೊಡುವಲ್ಲಿ ಆತನು ಮುಕ್ತಮನಸ್ಸಿನಿಂದಿದ್ದನು.

# ಉತ್ತರಳು 5: ಗೋಡೆಯ ಮೇಲಣ ಬರಹ, ಅಧ್ಯಾಯ 5

## ಉತ್ತರಗಳು

1. ಈ ಕಥೆಯ ಸಂದರ್ಭವು ರಾಜನಾದ ಬೇಲ್ಶಚ್ಚರನು ತನ್ನ ರಾಜ್ಯದ ಮುಖಂಡರಲ್ಲಿ ಸಾವಿರ ಮಂದಿಗೆ ಔತಣವನ್ನು ಕೊಟ್ಟ ಸಂದರ್ಭವಾಗಿದೆ (ವ. 1).
2. ಅರಸನಾದ ಬೇಲ್ಶಚ್ಚರ ಮತ್ತು ಆತನ ಅಥಿತಿಗಳು ಸುಮಾರು ಐವತ್ತು ವರ್ಷಗಳ ಹಿಂದೆ ಆತನ ದಯೆಯಿಂದ ಎತ್ತಿಕೊಂಡು ಬಂದಿದ್ದ ಬೆಳ್ಳಿ ಬಂಗಾರದ ಪಾತ್ರೆಗಳಲ್ಲಿ ದ್ರಾಕ್ಷಾರಸವನ್ನು ಕುಡಿದರು (ವ. 2–3)
3. ಕುಡಿಯುತ್ತಿರುವಾಗ ರಾಜನಾದ ಬೇಲ್ಶಚ್ಚರ ಮತ್ತು ಆತನ ಅಥಿತಿಗಳು ತಮ್ಮ ಬಾಬೆಲಿನ ದೇವರು (ವಿಗ್ರಹ)ಗಳನ್ನು ಸ್ತುತಿಸಿದರು (ವ. 4).
4. ಅರಮನೆಯ ಗೋಡೆಯ ಮೇಲೆ ಹಸ್ತವೊಂದು ಬರೆದ ರಹಸ್ಯವಾದ ಬರಹವು ರಾಜನಾದ ಬೇಲ್ಶಚ್ಚರನನ್ನು ಬಹಳವಾಗಿ ಹೆದರುವಂತೆಮಾಡಿತು (ವ. 5–6).
5. ಗೋಡೆಯ ಮೇಲಣ ಬರಹವನ್ನು ಓದಿ ಅದರ ಅರ್ಥವಿವರಣೆಯನ್ನು ಮಾಡುವುದಕ್ಕಾಗಿ ರಾಜನಾದ ಬೇಲ್ಶಚ್ಚರನು ತನ್ನ ಪಂಡಿತರನ್ನೆಲ್ಲಾ ಕರೆದನು (ವ. 7).
6. ಗೋಡೆಯ ಮೇಲಿನ ಬರಹದ ಅರ್ಥವನ್ನು ವಿವರಿಸುವವನು ರಾಜ್ಯದ ಮೂವರು ಮುಖ್ಯಾಧಿಕಾರಿಗಳಲ್ಲಿ ಒಬ್ಬನಾಗುವನು (ವ. 7, 16, 29, ) ಎಂಬುದಾಗಿ ವಾಗ್ದಾನ ಮಾಡಿದ ಬೇಲ್ಶಚ್ಚರನು ಬಾಬೆಲಿನಲ್ಲಿ ಅರಸನಾಗಿರಲಿಲ್ಲವೆಂಬುದಾಗಿ ಟಿಪ್ಪಣಿಯಲ್ಲಿ ನಾವು ನೋಡಿದ್ದೇವೆ. ಆತನು ತನ್ನ ತಂದೆಯಾದ ನೆಬೋನಿಡಸ್‌ನ ಸ್ಥಳದಲ್ಲಿ ಆಳುತ್ತಿದ್ದನು.
7. ರಾಣಿಯು ದಾನಿಯೇಲನನ್ನು ಈ ರೀತಿಯಾಗಿ ವರ್ಣಿಸುತ್ತಾಳೆ (ವ. 11–12):
   - ಆತನಲ್ಲಿ ಪರಿಶುದ್ಧದೇವರುಗಳ ಆತ್ಮವಿದೆ. ಇದರರ್ಥ ಈತನಲ್ಲಿ ದೇವರಂತೆ ಜ್ಞಾನ, ಬುದ್ಧಿ ಮತ್ತು ವಿವೇಕವಿದೆ ಎಂದಾಗಿದೆ.
   - ರಾಜನಾದ ನೆಬೂಕದ್ನೆಚ್ಚರನ ಸಮಯದಲ್ಲಿ ಆತನ ಎಲ್ಲಾ ಪಂಡಿತರುಗಳ ನಡುವೆ ಈತನಿಗೆ ಅತ್ಯುನ್ನತ ಸ್ಥಾನವಿತ್ತು.
   - ದಾನಿಯೇಲನಲ್ಲಿ ಪರಮಬುದ್ಧಿಯೂ ಜ್ಞಾನವೂ ವಿವೇಕವೂ ಕನಸುಗಳ ಅರ್ಥವನ್ನು ಬಿಡಿಸುವ ಜಾಣತನವೂ ಗುಂಜುಗಂಟ್ಟು ಬಿಚ್ಚುವ ಚಾತುರ್ಯವೂ ಇದ್ದವು.
8. ದಾನಿಯೇಲನು ಹೇಳಿದ ಮಾತುಗಳಿಂದ ಬೇಲ್ಶಚ್ಚರನ ಪಾಪಗಳ ಬಗ್ಗೆ ನಾವು ಈ ಐದು ಸಂಗತಿಗಳನ್ನು ಕಲಿಯುತ್ತೇವೆ (12–24):
   - ಬೇಲ್ಶಚ್ಚರನ ಪಾಪಗಳು ಆತನನ್ನು ಹಿಡಿದುಕೊಂಡಿದ್ದವು. ಈತನಿಗಿಂತ ಮೊದಲು ಪ್ರಸಿದ್ಧ ರಾಜನಾದ ನೆಬೂಕದ್ನೆಚ್ಚರನಿಗೆ ಸಹ ತನ್ನ ಪಾಪದ ಪರಿಣಾಮಗಳನ್ನು ತಡೆಯಲಾಗಲಿಲ್ಲ. ಹಾಗಾದರೆ ಅದನ್ನು ತಡೆಯಲು ಬೇಲ್ಶಚ್ಚರನಿಗೆ ಹೇಗೆ ಸಾಧ್ಯವಾದೀತು?
   - ಬೇಲ್ಶಚ್ಚರನು ನೆಬೂಕದ್ನೆಚ್ಚರನ ಪಾಪಗಳನ್ನು ಮತ್ತು ದೇವರು ಆತನನ್ನು ಹೇಗೆ ಶಿಕ್ಷಿಸಿದನೆಂಬುದೆಲ್ಲವನ್ನು ತಿಳಿದವನಾಗಿದ್ದನು. ಆದರೆ ಈ ಪಾಠದಿಂದ ಕಲಿಯಲು ಆತನು ತೀರಾ ಗರ್ವಿಷ್ಠನೂ ಸೊಕ್ಕೇರಿದವನೂ ಆಗಿದ್ದನು.
   - ನೆಬೂಕದ್ನೆಚ್ಚರನು ಯೆರೂಸಲೇಮಿನ ದೇವಾಲಯದಿಂದ ಎತ್ತಿಕೊಂಡುಬಂದ ಬೆಳ್ಳಿ ಮತ್ತು ಬಂಗಾರದ ಪಾತ್ರೆಗಳಲ್ಲಿ ದ್ರಾಕ್ಷಾರಸವನ್ನು ಕುಡಿದು ಬೇಲ್ಶಚ್ಚರನು ದೇವರನ್ನು ಅವಮಾನಿಸಿದ್ದನು.
   - ಬೆಲ್ಶಚ್ಚರನು ದೇವರನ್ನು ಘನಪಡಿಸಲಿಲ್ಲ. ಬದಲಾಗಿ ಆತನು ಬಾಬೆಲಿನ ಪ್ರಯೋಜನಕ್ಕೆ ಬಾರದ ದೇವರುಗಳನ್ನು ಸ್ತುತಿಸಿದನು ಮತ್ತು ವಿಗ್ರಹಗಳನ್ನು ಆರಾಧಿಸಿದನು.
   - ಬೇಲ್ಶಚ್ಚರನು ಇತಿಹಾಸದ ಘಟನೆಗಳನ್ನು ಮತ್ತು ಮನುಷ್ಯರ ಜೀವಿತಗಳನ್ನು ನಿಯಂತ್ರಿಸಬಲ್ಲ ದೇವರ ನಿಜವಾದ ಸ್ವಭಾವವನ್ನು ಅರ್ಥೈಸಿಕೊಳ್ಳಲಿಲ್ಲ.
9. ದಾನಿಯೇಲನು ಬೆಲ್ಶಚ್ಚರನಿಗೆ ಹೇಳಿದ ಮಾತುಗಳು (ವ. 17–28) ನಾವು ಇನ್ನೂ ದೀನರಾಗಿ ದೇವರಿಗೆ ಕೃತಜ್ಞತರಾಗುವಂತೆ ನಮಗೆ ಸಹಾಯ ಮಾಡಬಲ್ಲವು.

- ದೇವರು ನೆಬೂಕದ್ನೆಚ್ಚರ ಮತ್ತು ಬೆಲ್ಶಚ್ಚರನಿಗೆ ತನ್ನ ಸಾರ್ವಭೌಮತೆಯನ್ನು ಪ್ರಕಟಿಸಿದನು. ನಾವು ಸತ್ಯವೇದವನ್ನು ಓದುವಾಗ ತಾನು ಯಾರಾಗಿದ್ದಾನೆಂಬುದನ್ನು ದೇವರು ಪದೇ ಪದೇ ಪ್ರಕಟಿಸುವುದನ್ನು ನಾವು ಕಾಣುತ್ತೇವೆ. ದೇವರು ಪ್ರಕಟಣೆಯ ದೇವರಾಗಿರುವುದಕ್ಕಾಗಿ ನಾವು ಆತನಿಗೆ ಸ್ತೋತ್ರ ಮಾಡಬೇಕು. ಮನುಷ್ಯರು ಆತನ ಸಾರ್ವಭೌಮತೆ ಮತ್ತು ಶಕ್ತಿಯನ್ನು, ಅಲ್ಲದೇ ತನ್ನ ಸೃಷ್ಟಿಗಾಗಿನ ಆತನ ಪ್ರೀತಿ ಮತ್ತು ಕಾಳಜಿಯನ್ನು ತಿಳಿದುಕೊಳ್ಳಬೇಕೆಂದು ಆತನು ಬಯಸುತ್ತಾನೆ.

- ದೇವರು ನೆಬುಕದ್ನೇಚ್ಚರ ಮತ್ತು ಬೇಲ್ಶಚ್ಚರನೊಂದಿಗೆ ಗಂಭಿರವಾಗಿ ವ್ಯವಹರಿಸಿ ತಮ್ಮ ಸೊಕ್ಕು ಮತ್ತು ಗರ್ವಗಳಿಗಾಗಿ ಅವರನ್ನು ಶಿಕ್ಷಿಸಿದನು. ಇದು ನಮಗೊಂದು ಎಚ್ಚರಿಕೆಯಾಗಿದೆ. ಪ್ರಸಿದ್ಧ ರಾಜರುಗಳು ಸಹ ತನ್ನ ಮುಂದೆ ದೀನರಾಗಿ ನಡೆಯಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಸಾಮಾನ್ಯ ಜನರಾದ ನಾವೆಂಥವರು ಎಂಬುದನ್ನು ಇದು ಬೋಧಿಸುತ್ತದೆ. ***"ಯೆಹೋವನು ದೀನರಿಗೆ ಆಧಾರವಾಗಿದಾನೆ, ದುಷ್ಟರನ್ನು ನೆಲಕ್ಕೆ ಹತ್ತಿಸಿಬಿಡುತ್ತಾನೆ"*** (ಕೀರ್ತನೆ147:6).

- ದೇವರು ನೆಬೂಕದ್ನೆಚ್ಚರನಿಗೆ ಎರಡನೇ ಅವಕಾಶವನ್ನು ಕೊಡುತ್ತಾನೆ. ಆತನು ತನ್ನನ್ನು ದೇವರ ಮುಂದೆ ತಗ್ಗಿಸಿಕೊಂಡಾಗ ದೇವರು ಆತನನ್ನು ಪುನಃ ರಾಜನನ್ನಾಗಿ ನೆಲೆಗೊಳಿಸಿದನು. ದೇವರ ಕ್ಷಮಾಪಣೆಗಾಗಿ ನಾವು ಆತನಿಗೆ ಕೃತಜ್ಞತೆ ಸಲ್ಲಿಸಬೇಕು. ನಾವು ದೀನರಾಗಿ ಆತನೆಡೆಗೆ ತಿರುಗಿಕೊಂಡಾಗ, ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ***"ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ"*** (ಕೀರ್ತನೆ 149:4).

10. ಗೋಡೆಯ ಮೇಲಣ ಬರಹದ ಕುರಿತಾದ ದಾನಿಯೇಲನ ಅರ್ಥವಿವರಣೆಯ ಸಾರಾಂಶ ಇಂತಿದೆ:

    "ನಿನ್ನಿಂದ ಮತ್ತು ನಿನ್ನ ಆಳ್ವಿಕೆಯಿಂದ ದೇವರಿಗೆ ಸಂತೋಷವಾಗಿಲ್ಲ. ಹಾಗಾಗಿ ಬಾಬೆಲ್ ಸಾಮ್ರಾಜ್ಯವನ್ನು ಜಜ್ಜಿ ಅದನ್ನು ಮೇದ್ಯ–ಪರ್ಷಿಯನ್ ಸಾಮ್ರಾಜ್ಯಕ್ಕೆ ಕೊಡುತ್ತಾನೆ".

11. ಈ ರೀತಿಯಾಗಿ ಬೇಲ್ಶಚ್ಚರನು ನಮಗೊಂದು ಎಚ್ಚರಿಕೆಯಾಗಿಬಲ್ಲನು:

- ದೇವರು ಸಾರ್ವಭೌಮನಾಗಿದಾನೆ. ಬೇಲ್ಯಚ್ಚರನು ದೇವರ ಸಾರ್ವಭೌಮತೆಯನ್ನು ತಿಳಿದುಕೊಳ್ಳಲಿಲ್ಲ. ಬದಲಾಗಿ ಆತನು ಬಾಬೆಲಿನ ವಿಗ್ರಹಗಳನ್ನು ಸ್ತುತಿಸಿ, ಪೂಜಿಸಿದಿನು. ಇದು ನಮಗೊಂದು ಎಚ್ಚರಿಕೆಯಾಗಿದ್ದಾನೆ.

- ದೇವರು ಪರಿಶುದ್ಧನಾದ ದೇವರಾಗಿದ್ದಾನೆ. ಬೇಲ್ಶಚ್ಚರನು ದೇವರ ಪರಿಶುದ್ಧತೆಯನ್ನು ಗೌರವಿಸಲಿಲ್ಲ, ಬದಲಾಗಿ ಆತನು ಯೆರೂಸಲೇಮಿನ ದೇವಾಲಯದಿಂದ ತಂದ ಪಾತ್ರೆಗಳನ್ನು ಅಪವಿತ್ರಗೊಳಿಸಿ, ಅವನ್ನು ತನ್ನ ಔತಣಕೂಟದಲ್ಲಿ ಅನ್ಯ ವಿಗ್ರಹಗಳನ್ನು ಪೂಜಿಸುವುದಕ್ಕಾಗಿ ಉಪಯೋಗಿಸಿದನು. ಇದೂ ಸಹ ನಮಗೊಂದು ಎಚ್ಚರಿಕೆಯಾಗಿದೆ.

- ಬೇಲ್ಶಚ್ಚರನ ಗರ್ವ ಮತ್ತು ಸೊಕ್ಕು ಆತನ ಮೇಲೂ ಮತ್ತು ಆತನ ಸಾಮ್ರಾಜ್ಯದ ಮೇಲೂ ನಾಶನವನ್ನು ತಂದಿತು ***("ಯೆಹೋವನು ಗರ್ವಿಷ್ಠನ ಮನೆಯನ್ನು ಕಿತ್ತುಹಾಕುವನು"*** (ಜ್ಞಾನೋಕ್ತಿ 15:15). ಇದು ನಮಗೊಂದು ಎಚ್ಚರಿಕೆಯಾಗಿದೆ.

- ತಿಳುವಳಿಕೆಯಿದ್ದರೆ ಸಾಲದು. ಬೆಲ್ಶಚ್ಚರನು ನೆಬೂಕದ್ನೆಚ್ಚರನ ಬಗ್ಗೆ ತಿಳಿದ್ದಿದ್ದನು (ಆತನ ಗರ್ವ, ಆತನ ಮೇಲೆ ದೇವರ ಶಿಕ್ಷೆ, ಆತನ ಮನಸ್ಸಿನಲ್ಲಾದ ಬದಲಾವಣೆ, ಆತನ ಮರುಸ್ಥಾಪನೆ). ಆದರೆ ಬೇಲ್ಶಚ್ಚರನು ತನ್ನ ತಿಳುವಳಿಕೆಗನುಗುಣಾವಾಗಿ ನಡೆಯಲಿಲ್ಲ. ಚರಿತ್ರೆಯಿಂದ ಆತನು ಪಾಠವನ್ನು ಕಲಿಯಲಿಲ್ಲ. ಇದು ನಮಗೊಂದು ಎಚ್ಚರಿಕೆಯಾಗಿದೆ. ದೇವರು ಯಾರಾಗಿದ್ದಾನೆ ಮತ್ತು ಮನುಷ್ಯರಿಗಾಗಿನ ಆತನ ಚಿತ್ತವೇನೆಂಬುದನ್ನು ಸತ್ಯವೇದವು ಬೋಧಿಸುತ್ತದೆ. ಆದರೆ ಇವೆಲ್ಲವನ್ನು ನಾವು ಬುದ್ಧಿಯಿಂದ ತಿಳುಕೊಂಡರೆ ಸಾಲದು, ನಮ್ಮ ತಿಳುವಳಿಕೆಗನುಗುಣವಾಗಿ ನಾವು ಕಾರ್ಯಮಾಡಬೇಕು. ನಾವು ದೇವರ ಮುಂದೆ ತಗ್ಗಿಸಿಕೊಂಡು ಆತನ ರಕ್ಷಣೆಯನ್ನು ಸ್ವೀಕರಿಸಬೇಕು.

12. ಸುಮಾರು ಮೂರು ವಿಧದಲ್ಲಿ ದಾನಿಯೇಲನು ಈ ಅಧ್ಯಾಯದಲ್ಲಿ ನಮಗೊಂದು ಮಾದರಿಯಾಗಿದ್ದಾನೆ:

- ತನ್ನ ವೃದ್ಧಾಪ್ಯದಲ್ಲಿ ಸಹ ಆತನು ದೇವರಿಂದ ಉಪಯೋಗಿಸಲ್ಪಡುವುದಕ್ಕಾಗಿ ಸಿದ್ಧನಿದ್ದನು.

- ಸೊಕ್ಕಿನಿಂದ ಕೂಡಿದ ಮತ್ತು ಕುಡಿದ ಮತ್ತಿನಲ್ಲಿರುವ ಬಹುಬಲಶಾಲಿ ರಾಜನೆದುರಿಗೆ ಸತ್ಯವನ್ನು ನುಡಿಯಲು ಸಾಕಷ್ಟು ಧೈರ್ಯವುಳ್ಳವನಾಗಿದ್ದನು.

- ವರ್ಷಗಳು ಕಳೆದರೂ ಆತನು ತನ್ನ ಆತ್ಮೀಕ ಜ್ಞಾನವನ್ನು ಕಳೆದುಕೊಳ್ಳಲಿಲ್ಲ. ಆದರೂ ಆತನು ಕನಸಿನ ಅರ್ಥ ಹೇಳಿ, ಸಮಸ್ಯೆಗಳನ್ನು ಬಗೆಹರಿಸಲು ಶಕ್ತನಾಗಿದ್ದನು.

# ಉತ್ತರಗಳು 6: ಸಿಂಹದ ಗವಿಯೊಳಗೆ ದಾನಿಯೇಲನು, ಅಧ್ಯಾಯ 6

## ಉತ್ತರಗಳು

1. ಅರಸನಾದ ದಾರ್ಯಾವೆಷನು ದಾನಿಯೇಲನನ್ನು ಮೇದ್ಯ–ಪರ್ಷಿಯನ್ ಸಾಮ್ರಾಜ್ಯದ ಮೇಲೆ ಮೂವರು ಮುಖ್ಯಾಧಿಕಾರಿಗಳಲ್ಲಿ ಒಬ್ಬನನ್ನಾಗಿ ನೇಮಿಸಿದನು. ಅವರ ಕೆಳಗೆ 120 ಮಂದಿ ದೇಶಾಧಿಪತಿಗಳಿದ್ದರು (ವ. 1–2). ದಾನಿಯೇಲನಲ್ಲಿದ್ದ ಪರಮಬುದ್ಧಿಯ ನಿಮಿತ್ತ ಆತನನ್ನು ತನ್ನ ಪೂರ್ಣ ರಾಜ್ಯದ ಮೇಲೆ ನೇಮಿಸಲು ಉದ್ದೇಶಿಸಿದನು (ವ. 3).
2. ದಾನಿಯೇಲನು ಅಸಾಧರಣ ವ್ಯಕ್ತಿಯೆಂಬುದನ್ನು ನಾವೀಗಾಗಲೆ ತಿಳಿದಿದ್ದೇವೆ. ಅಂತೆಯೇ ಆತನ ಬಗ್ಗೆ ಈ ಹೆಚ್ಚುವರಿ ಸಂಗತಿಗಳನ್ನು ನಾವು ಕಲಿಯುತ್ತೇವೆ (ವ. 4–5):
    - ಆತನು ಭ್ರಷ್ಟನಾಗಿರಲಿಲ್ಲ
    - ಆತನು ನಂಬಿಗಸ್ತನಾಗಿದ್ದನು
    - ಆತನು ಆಲಸ್ಯನಾಗಿರಲಿಲ್ಲ
    - ತನ್ನ ಯೆಹೂದ ಧರ್ಮಕ್ಕೂ ಸಹ ಆತನು ನಂಬಿಗಸ್ತನಾಗಿಯೇ ಇದ್ದನು. ಹಾಗಾಗಿ ದಾನಿಯೇಲನಲ್ಲಿ ಯಾವ ತಪ್ಪೂ ಕಾಣಲಿಲ್ಲ. ನ್ಯಾಯವಾದುದ್ದನ್ನು ಮಾಡುವುದರಲ್ಲಿ ಆತನು ಆಲಸ್ಯಗಾರನಾಗಿರಲಿಲ್ಲ.
3. ಅರಸನಾದ ದಾರ್ಯಾವೆಷನು ಹೊರಡಿಸಿದ ಮೊದಲ ಆಜ್ಞೆಯಲ್ಲಿ ಯಾರೂ ಸಹ ಮೂವತ್ತು ದಿನಗಳವರೆಗೆ ರಾಜನನ್ನು ಹೊರತುಪಡಿಸಿ ಬೇರೆ ಯಾವ ದೇವರಾಗಲಿ ಮನುಷ್ಯನಿಗಾಗಲಿ ವಿಜ್ಞಾಪನೆ ಮಾಡಿಕೊಳ್ಳಬಾರದೆಂಬ ವಿಷಯಾಂಶವಿತ್ತು (ವ. 7, 12).
4. ದಾನಿಯೇಲನು ರಾಜಾಜ್ಞೆಯನ್ನು ಕಡೆಗಣಿಸಿದನು. ಆತನ ದಿನನಿತ್ಯ ಮಾಡುವಂತೆ ಯೆರೂಸಲೇಮಿನ ಕಡೆಗೆ ಮುಖಮಾಡಿಕೊಂಡು ಇಸ್ರಾಯೇಲ್ ದೇವರನ್ನು ಪ್ರಾರ್ಥಿಸಿದನು. ಇದರ ಬದಲಾಗಿ ಆತನಿಗಿದ್ದ ಇನ್ನೆರಡು ಆಯ್ಕೆಗಳೆಂದರೆ, ಮೂವತ್ತು ದಿನಗಳವರೆಗೆ ಪ್ರಾರ್ಥಿಸದೆ ಇರಬಹುದಾಗಿತ್ತು. ರಾಜನಿಗೆ ಪ್ರಾರ್ಥಿಸಬಹುದಾಗಿತ್ತು. ರಾಜನಿಗೆ ಪ್ರಾರ್ಥಿಸುವುದಂತೂ ಆತನ ಆಯ್ಕೆಯಲ್ಲೆ ಇರಲಿಲ್ಲವೆಂಬುದುದಾಗಿ ನಾನೆಣಿಸುತ್ತೇನೆ. ನೀವು ಒಂದು ವೇಳೆ ಈ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದೀರಿ?
5. ದಾನಿಯೇಲನ ವಿಪತ್ತಿಗೆ ರಾಜನು ಗಂಭೀರವಾಗಿ ಪ್ರತಿಕ್ರಯಿಸಿದನು. ಇದರಿಂದ ರಾಜನಿಗೆ ವ್ಯಸನವಾಯಿತು ಮತ್ತು ಆತನು ಹೇಗಾದರೂ ಮಾಡಿ ದಾನಿಯೇಲನನ್ನು ರಕ್ಷಿಸಲು ಪ್ರಯತ್ನಿಸಿದನು. ಆದರೆ ರಾಜಾಜ್ಞೆಯು ರಾಜ್ಯದ ಧರ್ಮಸೂತ್ರದ ಪ್ರಕಾರ ವಿಧಿಸಲ್ಪಟ್ಟ ನಿಮಿತ್ತ ಅದಕ್ಕಾತನು ವಿಧೇಯನಾಗಲೇಬೇಕಾಯಿತು (ವ. 14–15).
6. ದಾನಿಯೇಲನಿಗೆ ರಾಜನು – *ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನುದ್ಧರಿಸಲಿ ಎಂದು ಆಶೀರ್ವದಿಸಿ ಬೀಳ್ಕೊಟ್ಟನು* (ವ. 16). ದಾನಿಯೇಲನ ಗುಣಸ್ವಭಾವ ಮತ್ತು ನಂಬಿಕೆಯು ರಾಜನ ಮೇಲೆ ಒಂದು ಬಲವಾದ ಪರಿಣಾಮವನ್ನು ಬೀರಿದ್ದವೆಂಬುದನ್ನು ಈ ಮಾತುಗಳೇ ಸೂಚಿಸುತ್ತವೆ. ಅಲ್ಲದೆ ದಾನಿಯೇಲನು ರಾಜನಾದ ದಾರ್ಯಾವೆಷನೊಂದಿಗೆ ದೇವರ ಬಗ್ಗೆ ಮಾತನಾಡಿದ್ದಿರಬಹುದು. ಹಾಗಾಗಿ ದಾನಿಯೇಲನ ದೇವರು ಆತನನ್ನು ರಕ್ಷಿಸಲು ಶಕ್ತನಾಗಿದ್ದಾನೆಂಬುದನ್ನು ರಾಜನು ಅರಿತುಕೊಳ್ಳುತ್ತಾನೆ (ಹೋಲಿಸಿ ವ. 20).
7. ರಾತ್ರಿ ರಾಜನು ಯಾವುದೇ ಅನ್ನಪಾನ ತೆಗೆದುಕೊಳ್ಳಲಿಲ್ಲ ಮತ್ತು ಸಂಜೆ ವಿನೋದಕ್ಕಾಗಿ ಯಾವುದೇ ವಾದ್ಯಗಳನ್ನು ತರಿಸಲಿಲ್ಲ, ಬದಲಾಗಿ ಆತನು ಇಡೀ ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಕಳೆದನು. ಯಾಕೆಂದರೆ ದಾನಿಯೇಲನ ಬಗ್ಗೆ ಆತನು ಚಿಂತಿತನಾಗಿದ್ದಾನು (ವ. 18).
8. ರಾತ್ರಿಯಲ್ಲಿನ ಘಟನೆಗಳ ಬಗ್ಗೆ ದಾನಿಯೇಲನು ಮುಂಜಾನೆಯಲ್ಲಿ ಅರಸನ ಬಳಿ ತನಗೇನೂ ಹಾನಿಯಾಗಿಲ್ಲ, ರಾತ್ರಿ ವೇಳೆಯಲ್ಲಿ ದೇವರು ತನ್ನ ದೂತನನ್ನು ಕಳುಹಿಸಿ ಸಿಂಹಗಳ ಬಾಯಿಗಳನ್ನು ಬಂಧಿಸನೆಂಬುದಾಗಿ ಹೇಳಿದನು (ವ. 21–22).
9. ದಾನಿಯೇಲನು ಹೇಳಿದ ಶುಭಸಮಾಚಾರಕ್ಕೆ ರಾಜನು ಬಹುಸಂತೋಷಗೊಂಡನು. ಅನಂತರ ಆತನು ದಾನಿಯೇಲನನ್ನು ಸಿಂಹದ ಗವಿಯಿಂದ ಮೇಲಕ್ಕೆತ್ತಬೇಕೆಂದು ಅಪ್ಪಣೆ ಮಾಡಿದನು (ವ. 23).
10. ದಾನಿಯೇಲನ ಮೇಲೆ ದೂರು ಹೊರಿಸಿದವರನ್ನು ತಂದು ಅವರನ್ನೂ ಅವರ ಹೆಂಡತಿಮಕ್ಕಳನ್ನೂ ಸಿಂಹಗಳ ಗವಿಯಲ್ಲಿ ಹಾಕಲಾಯಿತು(ವ. 24).
11. ಮೇದ್ಯ–ಪರ್ಷಿಯನ್ ಸಾಮ್ರಾಜ್ಯದವರೆಲ್ಲರೂ ದಾನಿಯೇಲನ ದೇವರಿಗೆ ಭಯಭಕ್ತಿಯಿಂದ ನಡೆದುಕೊಳ್ಳಬೇಕೆಂಬುದು ರಾಜನಾದ ದಾರ್ಯಾವೆಷನು ಹೊರಡಿಸಿದ ಎರಡನೇ ಆಜ್ಞೆಯ ಸಾರಾಂಶವಾಗಿತ್ತು (ವ. 26).

12. ತನ್ನ ಎರಡನೇ ಆಜ್ಞೆಯಲ್ಲಿ ರಾಜನಾದ ದಾರ್ಯಾವೆಷನು ದೇವರನ್ನು ಈ ರೀತಿಯಾಗಿ ವರ್ಣಿಸಿದ್ದಾನೆ (ವ. 26–27):

- ಆತನು ಜೀವಸ್ವರೂಪನಾದ ದೇವರು
- ಆತನು ಸನಾತನದೇವರು
- ದೇವರ ರಾಜ್ಯವು ಎಂದಿಗೂ ಅಳಿಯದು ಮತ್ತು ಅದು ಎಂದೆಂದಿಗೂ ಇರುವುದು.
- ದೇವರು ಉದ್ಧರಿಸುವವನೂ ರಕ್ಷಿಸುವವನೂ ಆಗಿದ್ದಾನೆ. ಆತನೇ ದಾನಿಯೇಲನನ್ನು ಸಿಂಹಗಳ ಕೈಯಿಂದ ತಪ್ಪಿಸಿದನು.
- ದೇವರು ಭೂಮ್ಯಾಕಾಶಗಳಲ್ಲಿ ಅದ್ಭುತಮಹತ್ವಗಳನ್ನು ಮಾಡುವ ದೇವರಾಗಿದ್ದಾನೆ.

13. ಈ ಕಥೆಯಲ್ಲಿನ ಮುಖ್ಯ ವ್ಯಕ್ತಿ (ಪಾತ್ರದಾರಿ)ಗಳೆಂದರೆ (ದೇವರು, ದೇವದೂತರು ಮತ್ತು ಸಿಂಹಗಳನ್ನು ಹೊರತುಪಡಿಸಿ) ದಾನಿಯೇಲ, ಸರದಾರರು, ಮುಖ್ಯಾಧಿಕಾರಿಗಳ ನಡುವಿನ ಆತನ ವಿರೋಧಿಗಳು ಮತ್ತು ರಾಜನಾದ ದಾರ್ಯಾವೆಷನು. ಮೇದ್ಯ–ಪರ್ಷಿಯನ್ ಸಮ್ರಾಜ್ಯದ ಸರ್ಕಾರದಲ್ಲಿನ ರಾಜ್ಯಭಾರವನ್ನು ನಿರ್ವಹಿಸುವ ಸ್ಥಾನಮಾನಗಳ ಮೂಲಕ ಇವರೆಲ್ಲರೂ ಪರಸ್ಪರ ಸಂಬಂಧ ಹೊಂದಿದ್ದರು. ದಾನಿಯೇಲನಿಗೆ ದೇಶಾದಿಪತಿಗಳ ಮೇಲೆ ಅಧಿಕಾರವಿತ್ತು. ಇಬ್ಬರು ಮುಖ್ಯಾಧಿಕಾರಿಗಳು ಆತನ ಸಹವರ್ತಿಗಳಾಗಿದ್ದರು. ರಾಜನಾದ ದಾರ್ಯಾವೆಷನು ಅವರಿಗೆ ದೊರೆಯಾಗಿದ್ದನು.

14. ಸಿಂಹದ ಗವಿಯೊಳಗೆ ಹಾಕಲ್ಪಟ್ಟ ದಾನಿಯೇಲನ ಕಥೆ (ಅಧ್ಯಾಯ 6) ಮತ್ತು ಉರಿಯುವ ಅವಿಗೆಗೆ ಹಾಕಲ್ಪಟ್ಟ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರ ಕಥೆ (ಅಧ್ಯಾಯ 3)ಯ ನಡುವೆ ಅನೇಕ ಸಮಾನತೆಗಳಿವೆ:

- ದೇವರಲ್ಲಿನ ನಂಬಿಕೆಗೆ ಏನಾದರೂ ಬೆಲೆ ಕಟ್ಟಬೇಕಾಗುತ್ತದೆ. ಎರಡು ಕಥೆಗಳೂ ಬಾಬೆಲಿಗೆ ಸೆರೆಯಾಗಿ ಹೋಗಿ ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತ ಯೆಹೂದ್ಯರ ಕುರಿತಾಗಿವೆ. ಇತರ ದೇವರುಗಳನ್ನು ಪೂಜಿಸಲು ತೋರಿದ ನಿರಾಕರಣೆಯು ಅವರಿಗೆ ಮರಣದಂಡನೆಯಾಗಿ ಪರಿಣಮಿಸಿತು. ದೇವರ ಮೇಲೆ ನಂಬಿಕೆಯಿಡುವುದನ್ನು ಆರಿಸಿಕೊಳ್ಳುವುದೆಂದರೆ ಆತನನ್ನೆ ಆತುಕೊಳ್ಳುವುದಾಗಿದೆ. ಈ ನಿಲುವಿನೊಂದಿಗಿನ ಸಮಸ್ಯೆಯೇನೆಂದರೆ, ನಾವಿರುವ ಜಗತ್ತು ದೇವರಿಗೆ ವಿರುದ್ಧವಾಗಿದೆ. ಹಾಗಾಗಿ ದೇವರಿಗೆ ಸ್ನೇಹಿತರಾಗುವುದೆಂದರೆ ಲೋಕಕ್ಕೆ ವೈರಿಯಾಗುವುದೆಂಬರ್ಥವಾಗಿದೆ. ದಾನಿಯೇಲ, ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋರಿಗೂ ಸಹ ಹೀಗೆಯೇ ಆಯಿತು.

- ದೇವರ ಪ್ರಸನ್ನತೆಯು ಎಲ್ಲಾ ಸಮಯಗಳಲ್ಲಿ, ಎಲ್ಲೆಡೆ ಸಹ ಖಚಿತವಾಗಿರುವುದಾಗಿದೆ. ಎರಡೂ ಕಥೆಗಳಲ್ಲಿ ಮರಣದಂಡನೆಯ ಹಂತದಲ್ಲಿ ಸಹ ದೇವರ ಪ್ರಸನ್ನತೆಯನ್ನನುಭವಿಸಿದ ಪುರುಷರನ್ನು ಕಾಣಬಹುದು. ದೇವರ ಗುಣಸ್ವಭಾವದ ಒಂದು ಪ್ರಾಮುಖ್ಯ ಅಂಶವೆಂದರೆ– ಅದು ಆತನ ನಂಬಿಗಸ್ತಿಕೆಯಾಗಿದೆ. ನಮಗೇನೇ ಸಂಭವಿಸಲಿ, ಆತನೆಂದೂ ನಮ್ಮನ್ನು ತೊರೆಯುವುದಿಲ್ಲ ಅಥವಾ ಕೈಬಿಡುವುದಿಲ್ಲ.

- ದೇವರು ತನ್ನ ಮತ್ತು ನಮ್ಮ ನ್ಯಾಯವನ್ನು ಎತ್ತಿ ಹಿಡಿಯುವವನಾಗಿದ್ದಾನೆ. ಎರಡೂ ಕಥೆಗಳಲ್ಲಿ ಸಹ ದೇವರು ತನ್ನ ನಂಬಿಗಸ್ತಿಕೆಯನ್ನು ಸಾಬೀತುಪಡಿಸಿದ್ದನ್ನು ಮತ್ತು ದಾನಿಯೇಲ ಮತ್ತು ಆತನ ಇತರ ಮೂವರು ಸ್ನೇಹಿತರು ತನ್ನ ಮೇಲೆ ಇಟ್ಟ ಭರವಸೆ (ನಂಬಿಕೆ)ಯನ್ನು ಗೌರವಿಸಿದ್ದನ್ನು ನಾವು ಕಾಣತ್ತೇವೆ. ದೇವರು ನಂಬಿಗಸ್ತನು ಮತ್ತು ಸತ್ಯವಂತನಾಗಿರುವುದರಿಂದ ಆತನು ಯಾವಾಗಲೂ ಜಯಶೀಲನಾಗಿರುತ್ತಾನೆ. ಅಂತಿಮವಾಗಿ ಆತನೇ ಸಮರ್ಥಿಸಲ್ಪಡುತ್ತಾನೆ.

- ದೇವರು ಕಾಪಾಡುತ್ತಾನೆ: ಎರಡೂ ಕಥೆಗಳಲ್ಲಿ ಸಹ ದೇವರು ತನ್ನ ನಂಬಿಗಸ್ತ ವಿಶ್ವಾಸಿಗಳನ್ನು ಮರಣದ ಹಿಡಿತದಿಂದ ಹೇಗೆ ರಕ್ಷಿಸುತ್ತಾನೆಂಬುದನ್ನು ನಾವು ಕಾಣಬಹುದು. ದೇವರು ನಂಬಿಗಸ್ತನೂ ಸತ್ಯವಂತನೂ ಆಗಿರುವುದರಿಂದ ತನ್ನ ಜನರನ್ನು ಆತನೆಂದಿಗೂ ತೊರೆಯುವುದಿಲ್ಲ. ಆದುದರಿಂದ ಖಂಡಿತವಾಗಿ ಆತನು ಅವರನ್ನು ರಕ್ಷಿಸಿ ಕಾಪಾಡುತ್ತಾನೆ.

15. ಮುಖಸ್ತುತಿಗೆ ತುತ್ತಾಗುವ ವಿಷಯದಲ್ಲಿ ರಾಜನಾದ ದಾರ್ಯಾವೆಷನು ನಮಗೊಂದು ಎಚ್ಚರಿಕೆಯ ಉದಾಹರಣೆಯಾಗಿದ್ದಾನೆ. ದಾನಿಯೇಲನ ವಿರೋಧಿಗಳು ಆತನ ಮುಂದೆ ಪ್ರಸ್ತಾಪವನ್ನು ತಂದಾಗ ಆತನು ಮುಖಸ್ತುತಿ (ಹೊಗಳಿಕೆ)ಯನ್ನು ಹೊಂದುತ್ತಾನೆ. ಹಾಗಾಗಿ ಆತನು ಮೂರ್ಖತನದಿಂದ ನಿಬಂಧಶಾಸನಕ್ಕೆ ರುಜು ಹಾಕುತ್ತಾನೆ.

16. ಅಧ್ಯಾಯ 6 ರಲ್ಲಿ ದಾನಿಯೇಲನು ನಮಗೊಂದು ಮಾದರಿಯಾಗಿದ್ದಾನೆ:

- ತನ್ನ ಕಾರ್ಯವನ್ನು ಮಾಡುವುದರಲ್ಲಿ: ತನ್ನ ಕಾರ್ಯಗಳಲ್ಲಿ ಆತನು ಆಲಸ್ಯ ಅಥವಾ ಆಕ್ರಮಗಾರನಾಗಿರದೆ ನಂಬಿಗಸ್ತನೇ ಆಗಿದ್ದನು.
- ತನ್ನ ನಂಬಿಕೆಯಲ್ಲಿ ದೃಢವಾಗಿರುವ ವಿಷಯದಲ್ಲಿ: ಅರಸನ ರಾಜಾಜ್ಞೆಯ ನಿಮಿತ್ತ ಆತನು ನಂಬಿಕೆಯನ್ನು ಕಳೆದುಕೊಳ್ಳಲಿಲ್ಲ ಅಥವಾ ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ.

17. –

# ಪ್ರಶ್ನೆಗಳು – ಉತ್ತರಗಳು

# ಉತ್ತರಗಳು 1: ವಷ್ಟಿರಾಣಿಯು ತಳ್ಳಲ್ಪಟ್ಟಿದ್ದು, ಅಧ್ಯಾಯ 1

## ಉತ್ತರಗಳು

1. ರಾಜನ ಅದ್ಧೂರಿ ಔತಣಕೂಟದ ಕಾರಣ ಇದಾಗಿದ್ದಿರಹುದು: ಆರು ತಿಂಗಳುಗಳ ದೀರ್ಘಕಾಲದ ಭಾಗವಾಗಿದ್ದ ಔತಣಕೂಟದ ಅದ್ಧೂರಿತನ ಬಗ್ಗೆ ಬಹಳಷ್ಟು ಮಾಹಿತಿಗಳನ್ನು ಗ್ರಂಥಕರ್ತನು ಕೊಡುತ್ತಾನೆ. ಬಹುಶಃ ರಾಜನಾದ ಅಹಷ್ವೇರೋಷನು ತನ್ನ ಘನವಾದ ರಾಜ್ಯದ ಐಶ್ವರ್ಯವನ್ನೂ ಮಹಾಮಹಿಮೆಯ ವೈಭವಗಳನ್ನೂ ತನ್ನ ಸಂಸ್ಥಾನದ ಸೇನಾಧಿಪತಿಗಳಿಗೂ ಮತ್ತು ಪ್ರಧಾನರಿಗೂ ತೋರಿಸಬೇಕೆಂದು ಬಯಸಿರಬಹುದು. ಅಲ್ಲದೆ ಆತನು ಈ ಸಂಭ್ರಮಾಚರಣೆಯ ಸಂದರ್ಭವನ್ನು ತನ್ನ ಮುಂಬರುವ ಸೇನಾ ಮತ್ತು ರಾಜಕೀಯ ಚಟುವಟಿಕೆಗಳ ಬಗ್ಗೆ ಯೋಜನೆ ರೂಪಿಸುವುದಕ್ಕಾಗಿ ಬಳಸಲು ಬಯಸಿದನು. ಕ್ರಿ.ಪೂ. 481ರಲ್ಲಿ ಗ್ರೀಕಿನ ಮೇಲೆ ರಾಜನಾದ ಅಹಷ್ವೇರೋಷನು ಒಂದು ದೊಡ್ಡ ದಂಡಯಾತ್ರೆಯನ್ನು ಕೈಗೊಂಡಿದ್ದನು ನಾವು ಇತಿಹಾಸದಿಂದ ತಿಳಿದಿದ್ದೇವೆ.

2. ಈ ಔತಣಕೂಟದಲ್ಲಿ ನೀವಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ, ನಿಮ್ಮ ಅನುಭವ ಹೇಗಿರುತ್ತಿತ್ತು?

   **ಟಿಪ್ಪಣಿ:** ಬಗೆಬಗೆಯ ಆಹಾರ, ಸುಗಂಧದ್ರವ್ಯ ಮತ್ತು ಹೂಗಳ ವ್ಯವಸ್ಥೆಯನ್ನು ಯೋಚಿಸಿ ನೋಡಿರಿ. ಸಂಗೀತ ವಾದ್ಯಗಳ ಶಬ್ದ, ಹಾಡುಗಳು, ನೃತ್ಯ, ಮಾತು ಮತ್ತು ಹಾಸ್ಯಗಳ ಬಗ್ಗೆ ಯೋಚಿಸಿರಿ. ಸುಂದರವಾದ ಅಲಂಕಾರಗಳು ಮತ್ತು ಶ್ರೀಮಂತರ ಉಡುಪುಗಳು ಎಲ್ಲಾ ವಿಧದ ರಾಷ್ಟ್ರೀಯತೆಯ ಪರಿಸ್ಪರ ಚರ್ಯೆ (ವರ್ತನೆ)ಯ ಬಗ್ಗೆ ಯೋಚಿಸಿ ನೋಡಿರಿ. ಪಾರ್ಟಿ ಪ್ರಾರಂಭವಾಗುತ್ತಿದ್ದಂತೆ ಅತಿಥಿಗಳ ವರ್ತನೆ ಮತ್ತು ಅನೇಕರು ಮಿತಿಮೀರಿ ಕುಡಿದು ಮತ್ತರಾಗುವುದನ್ನು ಯೋಚಿಸಿರಿ. ನೀವು ಅಲ್ಲಿದ್ದರೆ ನಿಮಗೇನನಿಸುತ್ತಿತ್ತೆಂಬುದನ್ನು ಯೋಚಿಸಿರಿ.

3. ಈ ಕೆಳಕಂಡ ಕಾರಣಕ್ಕಾಗಿ ರಾಜನು ವಷ್ಟಿರಾಣಿಯು ತನ್ನ ಬಳಿಗೆ ಬರಬೇಕೆಂದು ಆಜ್ಞಾಪಿಸಿದನು:

   ರಾಜನು ಈಗಾಗಲೆ ತನ್ನೆಲ್ಲಾ ಐಶ್ವರ್ಯ ಮತ್ತು ವೈಭವಗಳೆಲ್ಲವನ್ನು ಪ್ರದರ್ಶಿಸಿದ್ದನು. ಬಹುಶಃ ಈಗ ಉಳಿದ ಅಥಿತಿಗಳಂತೆ ಆತನು ಸ್ವಲ್ಪ ಮತ್ತೇರಿದ್ದ ನಿಮಿತ್ತ ಈಗ ಅತ್ಯಂತ ಸುಂದರವಾದ ನಿಧಿಯಂತಿದ್ದ ತನ್ನ ಹೆಂಡತಿ ಅಂದರೆ ವಷ್ಟಿರಾಣಿಯನ್ನೇ ಎಲ್ಲರಿಗೂ ಪ್ರದರ್ಶಿಸಬೇಕೆಂದು ಬಯಸಿದನು. ಹಾಗೆಯೇ ಜನರಿಂದ ಇನ್ನೂ ಹೆಚ್ಚಿನ ಪ್ರಶಂಸೆಯನ್ನು ಹೊಂದಿಕೊಳ್ಳಲು ತನ್ನ ಹೆಂಡತಿಯ ಸೌಂದರ್ಯವನ್ನು ತೋರಿಸುವುದರ ಮೂಲಕ ತನ್ನ ಅತಿಥಿಗಳನ್ನು ಮೆಚ್ಚಿಸುವ ಉದ್ದೇಶ ಹೊಂದಿದ್ದನೆಂಬುದಾಗಿ ಇಲ್ಲಿ ತೋರಿಬರುತ್ತದೆ.

4. ವಷ್ಟಿರಾಣಿಯು ರಾಜನ ಔತಣಕೂಟಕ್ಕೆ ಬರಲು ನಿರಾಕರಿಸಿದ್ದಕ್ಕೆ ಬಹುಶಃ ಎರಡು ಕಾರಣಗಳಿವೆ:

   - ರಾಜನ ಮನವಿಯು ಶ್ರೇಷ್ಠವಾದುದ್ದಾಗಿರಲಿಲ್ಲ: ಆತನು ಕುಡಿದ ಅತಿಥಿಗಳ ಮುಂದೆ ಆಕೆಯನ್ನು ತೋರಿಸಬೇಕೆಂದು ಅಪೇಕ್ಷಿಸಿದನು. ಹಾಗಾಗಿ ವಷ್ಟಿಗೆ ಬರಲು ಇದೊಂದು ರೀತಿಯಲ್ಲಿ ಅವಮಾನಕರವೆನಿಸಿತು.

   - ಸ್ತ್ರೀಯರಿಗೋಸ್ಕರ ತಾನು ಸಿದ್ಧಪಡಿಸಿದ ಔತಣಕೂಟದಲ್ಲಿ ವಷ್ಟಿರಾಣಿಯು ಅತಿಥಿಗಳಿಗಾಗಿ ತನ್ನದೇ ಜವಬ್ದಾರಿ ಹೊಂದಿದ್ದಳು. ಅದೇ ಸಮಯದಲ್ಲಿ ಅರಸನ ಆಜ್ಞೆಗೆ ವಿಧೇಯಳಾಗಲು ತಿರಸ್ಕರಿಸುವುದು ಖಂಡಿತವಾಗಿ ವಷ್ಟಿರಾಣಿಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುವುದಾಗಿತ್ತು. ಆದರೆ ಇದು ರಾಜನನ್ನು ಸಹ ಪೇಚಿಗೆ ಸಿಲುಕಿಸುವಂತದ್ದಾಗಿತ್ತು. ಹಾಗಾಗಿ ಬರಲು ನಿರಾಕರಿಸುವುದಕ್ಕಿಂತ ಮೊದಲೇ ವಷ್ಟಿರಾಣಿಯು ಜಾಗ್ರತೆಯಿಂದ ಯೋಚಿಸಿದ್ದಿರಬಹುದು.

5. ವಷ್ಟಿರಾಣಿಯು ರಾಜನ ಔತಣಕೂಟಕ್ಕೆ ಬರಲು ತಿರಸ್ಕರಿಸಿದ್ದು ಇಡೀ ಸಂಸ್ಥಾನಕ್ಕೆ ಅಪಾಯಕಾರಿಯೆಂಬುದಾಗಿ ಪಂಡಿತರು ಹೇಳಿದರು. ಯಾಕೆಂದರೆ ವಷ್ಟಿಯ ನಡತೆಯು ಉಳಿದೆಲ್ಲಾ ಸ್ತ್ರೀಯರಿಗೆ ಒಂದು ಕೆಟ್ಟ ಮಾದರಿಯಾಗಿ, ಅವರೆಲ್ಲರೂ ತಮ್ಮ ತಮ್ಮ ಗಂಡಂದಿರನ್ನು ತಿರಸ್ಕರಿಸುವುದಕ್ಕೆ ಕಾರಣವಾಗುತ್ತಿತ್ತು. ಇದು ದೇಶದಾದ್ಯಂತ ಅಗೌರವಕ್ಕೆ ನಡೆಸುವುದಾಗಿತ್ತು.

6. ವಷ್ಟಿರಾಣಿಯು ಶಾಶ್ವತವಾಗಿ ರಾಜನ ಸನ್ನಿಧಿಗೆ ಬಾರದಂತೆ ನಿಷೇಧ ಹೇರಲಾಯಿತು.

7. ಅಧ್ಯಾಯದಲ್ಲಿ ನಮಗೆ ಎದುರಾಗುವ ಅಹಷ್ವೇರೋಷ, ವಷ್ಟಿ ಮತ್ತು ಪಂಡಿತ (ಜ್ಞಾನಿ)ರನ್ನು ಈ ರೀತಿ ವರ್ಣಿಸಬಹುದು:

   - **ಅಹಷ್ವೇರೋಷ:** ಈತನು ಪರ್ಷಿಯನ್ ಸಾಮ್ರಾಜ್ಯದ ಅರಸನಾಗಿದ್ದಲ್ಲದೆ ಬಹಳಷ್ಟು ಬಲಿಷ್ಠನು ಮತ್ತು ಐಶ್ವರ್ಯವಂತನಾಗಿದ್ದನು. ದೇಶದ ನಾಯಕರುಗಳಿಗೆ ತನ್ನ ರಾಜ್ಯದ ಐಶ್ವರ್ಯವನ್ನೂ ವೈಭವವನ್ನೂ ತೋರಿಸಬೇಕೆಂದು ಹಾತೊರೆಯುತ್ತಿದ್ದನು. ಹಾಗೆಯೇ ಬಹುಶಃ ಆತನೊಬ್ಬ ಗರ್ವಿಷ್ಠ ಮನುಷ್ಯನಾಗಿದ್ದನು. ಆದರೆ ಆತನೊಬ್ಬ ತೋರ್ಪಡಿಸಿಕೊಳ್ಳುವವನಾಗಿದ್ದು, ತನ್ನ ಪಂಡಿತರುಗಳ ಮಾತನ್ನು ಪಾಲಿಸುವವನಾಗಿದ್ದನೆಂಬುದಾಗಿ ಈ ಕಥೆಯು ತಿಳಿಸುತ್ತದೆ. ಹಾಗಾಗಿ ಆತನು ಅಷ್ಟೇನು ಬಲಿಷ್ಠನಲ್ಲದ ಮತ್ತು ಸ್ವತಂತ್ರನಲ್ಲದ ವ್ಯಕ್ತಿತ್ವ ಹೊಂದಿದವನಾಗಿದ್ದಾನೆ.

- **ವಷ್ಟಿ:** ಪರ್ಷಿಯಾದ ರಾಣಿಯಾದ ಇವಳು ಅತ್ಯಂತ ಸುಂದರಿಯಾಗಿದ್ದು ತಾನು ಯೋಚಿಸಿದ್ದು ನ್ಯಾಯವಾದುದ್ದೆಂದು ಸಮರ್ಥಿಸಲು ತನ್ನ ಸ್ಥಾನವನ್ನು ನಷ್ಟಪಡಿಸಿಕೊಳ್ಳಲು ಸಹ ಸಿದ್ಧಳಿದ್ದಳು.

- **ಪಂಡಿತರು (ಜ್ಞಾನಿಗಳು):** ರಾಜನಿಗೆ ತೀರಾ ನಿಕಟವಾಗಿದ್ದು ಈ ಏಳು ಮಂದಿ ಪುರುಷರು ಎಲ್ಲಾ ವೇಳೆಯಲ್ಲಿಯೂ ರಾಜನ ಸಂಪರ್ಕದಲ್ಲಿರುತ್ತಿದ್ದರು. ಅಲ್ಲದೆ ಇವರು ರಾಜ್ಯದ ಕಾನೂನನ್ನು ಪಾಲಿಸಲು ಮತ್ತು ವಿವಧಾತ್ಮಕ ಸಂಗತಿಗಳನ್ನು ದೂರವಿರಿಸಲು ಸಲಹೆ ಕೊಡುವವರಾಗಿದ್ದರು.

8. ಈ ಅಧ್ಯಾಯದ ಪ್ರಮುಖ ವಿಷಯ ಗೌರವವಾಗಿದೆ. ಗೌರವವನ್ನು ಗಳಿಸುವುದು ಮತ್ತು ಪಾಲಿಸುವುದು ಹೇಗೆ? ಮುಖ್ಯ ವ್ಯಕ್ತಿತ್ವಗಳ (ಅಹಷ್ವೇರೋಷ, ವಷ್ಟಿ ಮತ್ತು ಪಂಡಿತರು) ದೃಷ್ಟಿಕೋನದಿಂದ ನಾನು ಈ ಮುಕ್ತಾಯಕ್ಕೆ ಬಂದಿದ್ದೇನೆ:

   - **ಅರಸನಾದ ಅಹಷ್ವೇರೋಷ:** ತನ್ನ ವಿಶಾಲವಾದ ಸಂಸ್ಥಾನದ ನಾಯಕರುಗಳ ಗೌರವವನ್ನು ಗಳಿಸುವುದಕ್ಕಾಗಿ ಈತನು ಎಲ್ಲವನ್ನು ಮಾಡುತ್ತಾನೆ. ಆತನು ತನ್ನ ಐಶ್ವರ್ಯ ಮತ್ತು ವೈಭವವನ್ನೆಲ್ಲ ತೋರಿಸುತ್ತಾನೆ.

   - **ವಷ್ಟಿರಾಣಿ:** ಈಕೆಯು ತಾನು ಸಿದ್ಧಪಡಿಸಿದ ಔತಣವನ್ನು ಬಿಟ್ಟು ತನ್ನ ಕುಡುಕ ಗಂಡನ ಮನವಿಗೆ ತನ್ನನ್ನು ಒಪ್ಪಿಸದೆ ತನ್ನ ವೈಯಕ್ತಿಕ ದೃಢತೆ (ಪ್ರಾಮಣಿಕತೆ)ಯನ್ನು ಪಾಲಿಸುವುದರಲ್ಲಿ ಹೆಚ್ಚು ಆಸಕ್ತಳಾಗಿದ್ದಳು. ಈ ರೀತಿ ಮಾಡುವುದರಿಂದ ನಿಜವಾಗಲು ಈಕೆಯು ನಮ್ಮ ಗೌರವವನ್ನು ಸಂಪಾದಿಸುತ್ತಾಳೆ. ಆಕೆಗೆ ಸಮರ್ಪಕವೆನಿಸಿದ ವಿಷಯದಲ್ಲಿ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳಲು ಆಕೆ ಸಿದ್ಧಳಿದ್ದಳು. ಇದೊಂದು ಗೌರಾವಾನ್ವಿತ ಆಯ್ಕೆಯಾಗಿದೆ.

   - **ಪಂಡಿತರು (ಜ್ಞಾನಿಗಳು):** ರಾಜನ ಉನ್ನತ ಸಲಹೆಗಾರರಾದ ಇವರು ಪ್ರತಿಯೊಂದು ಕಾರ್ಯವನ್ನು ಸಹ ಗೌರವವನ್ನು ಪಾಲಿಸುವುದಕ್ಕಾಗಿ ಮಾಡುವ ಒಂದು ಪುರುಷರ ಗುಂಪಿನವರಾಗಿದ್ದಾರೆ. ಹಾಗಾಗಿ ಇವರು ಸಂಸ್ಥಾನದ ನಿಯಮವನ್ನೆಲ್ಲ ಕಾನೂನಾತ್ಮಕವಾಗಿ ಅರ್ಥವಿವರಣೆ ಮಾಡಿ ವಷ್ಟಿಯನ್ನು ಉಚ್ಚಾಟಿಸಿದರೆ ದೇಶದ ಗಂಡಂದಿರಿಗೆಲ್ಲ ಗೌರವ ಉಂಟಾಗುತ್ತದೆಂಬ ಸಲಹೆಯನ್ನು ರಾಜನಿಗೆ ಕೊಟ್ಟರು. ಗೌರವವು (ಮರ್ಯಾದೆ) ಬಲವಂತದ ವಿಧೇಯತೆಯ ಮೂಲಕ ಗಳಿಸುವಂಥದ್ದೆ ವಿನಃ ಪರಸ್ಪರ ಗೌರವ ಮತ್ತು ಪ್ರಶಂಶೆಯಿಂದಲ್ಲವೆಂಬುದಾಗಿ ಅವರು ತಿಳಿದಿದ್ದರು.

9. –

10. ಜನರ ಮಧ್ಯೆ ಗೌರವವು ಈ ರೀತಿಯಾಗಿ ಬೆಳೆಯುತ್ತದೆಂಬುದಾಗಿ ನಾನು ನಂಬುತ್ತೇನೆ:

    ಪರಸ್ಪರ ಸಂಬಂಧ ಮತ್ತು ಪ್ರಶಂಶೆಯಿರುವಲ್ಲಿ ಮಾತ್ರ ಗೌರವ (ಮರ್ಯಾದೆ)ವು ವೃದ್ಧಿಯಾಗುತ್ತದೆ. ಗೌರವವು ಮಾನ್ಯತೆ, ಪರಿಗಣನೆ ಮತ್ತು ಇನ್ನೊಬ್ಬರಿಗಾಗಿನ ಮರ್ಯಾದೆಯನ್ನೆಲ್ಲಾ ಒಳಗೊಂಡಿದೆ ಎಂಬುದಾಗಿ ಶಬ್ಧಕೋಶವು ಹೇಳುತ್ತದೆ. ನೀವು ಯಾಕೆ ಇನ್ನೊಬ್ಬರನ್ನು ಗೌರವಿಸುತ್ತಿರೆಂಬುದನ್ನು ಯೋಚಿಸಿನೋಡಿರಿ. ಆನಂತರ ಇನ್ನೊಬ್ಬರಿಂದ ನೀವು ಗೌರವವನ್ನು ಪಡೆದುಕೊಳ್ಳಬೇಕಾದರೆ ಆ ಕಾರಣಗಳನ್ನು ನಿಮಗೆ ಅಳವಡಿಸಿಕೊಳ್ಳಿರಿ.

11. –

# ಉತ್ತರಗಳು 2: ಎಸ್ತೇರಳು ರಾಣಿಯಾದದ್ದು, ಅಧ್ಯಾಯ 2

## ಉತ್ತರಗಳು

1. ಹೊಸ ರಾಣಿಯನ್ನು ಹುಡುಕಲು ಅರಸನು ಕೈಗೊಂಡ ಯೋಜನೆಯ ಸಾರಾಂಶ ಇಂತಿದೆ (ವ. 1–4):

   ಔತಣಕೂಟದ ವೇಳೆ ವಷ್ಟಿರಾಣಿಯು ತಳ್ಳಲ್ಪಟ್ಟದ್ದರ (ಆತನ ಆಳ್ವಿಕೆಯ ಮೂರನೇ ವರ್ಷದಲ್ಲಿ) ಮತ್ತು ಆಕೆಗೆ ಬದಲಾಗಿ ಎಸ್ತೇರಳನ್ನು ರಾಣಿಯನ್ನಾಗಿ ಮಾಡಿದ್ದರ (ಆತನ ಆಳ್ವಿಕೆಯ ಏಳನೇ ವರ್ಷದಲ್ಲಿ) ನಡುವೆ ನಾಲ್ಕು ವರ್ಷಗಳು ಕಳೆದುಹೋಗುತ್ತವೆ. ಈ ಅವಧಿಯಲ್ಲಿ ರಾಜನಾದ ಅಹಷ್ವೇರೋಷನು ಗ್ರೀಕಿಗೆ ವಿರುದ್ಧವಾದ ಸೇನಾ ಕಾರ್ಯಚಾರಣೆಯಲ್ಲಿ ನಿರತನಾಗಿರುತ್ತಾನೆ. ಇದು ಕ್ರಿ.ಪೂ. 479ರಲ್ಲಿ ಆತನ ಸೋಲಿನೊಂದಿಗೆ ಮುಕ್ತಾಯವಾಗುತ್ತದೆ. ಶೂಷನ್ ಕೋಟೆಗೆ ಹಿಂದಿರುಗಿದ ಮೇಲೆ ಆತನು ವಷ್ಟಿಯನ್ನು ನೆನಪುಮಾಡಿಕೊಳ್ಳುತ್ತಾನೆ. ಆನಂತರ ಏನಾಯಿತೆಂಬುದರ ಸಾರಾಂಶ ಇದಾಗಿದೆ.

   - ಅಹಷ್ವೇರೋಷನು ವಷ್ಟಿಯನ್ನು ಕಳಕೊಂಡವನಾಗಿ ಆಕೆಯನ್ನು ನೆನಪುಮಾಡಿಕೊಳ್ಳುತ್ತಾನೆ.
   - ಆತನ ರಾಜಪರಿವಾರದವರು ವಷ್ಟಿರಾಣಿಯ ಬದಲಿಗೆ ರಾಜನಿಗಾಗಿ ಅತಿ ಸುಂದರಿಯರಾದ ಕನ್ಯೆಯರನ್ನು ಹುಡುಕುವ ಪ್ರಸ್ತಾಪವನ್ನು ಮುಂದಿಡುತ್ತಾರೆ.
   - ಅಹಷ್ವೇರೋಷನು ಈ ಪ್ರಸ್ತಾಪವನ್ನು ಒಪ್ಪಿ, ಹುಡುಕಿದ ಸುಂದರಿಯರ ಕಾಂತಿ ಹೆಚ್ಚಿಸುವುದಕ್ಕಾಗಿ ಅವರನ್ನು ರಾಜ ಕಂಚುಕಿಯಾದ ಹೇಗೈಯ ವಶಕ್ಕೆ ಒಪ್ಪಿಸುತ್ತಾನೆ.

2. ಕೆಳಕಂಡಂತೆ ಎಸ್ತೇರಳು ಈ ಕಥೆಯನ್ನು ಪ್ರವೇಶಿಸಿ ರಾಣಿಯಾಗುತ್ತಾಳೆ (ವ. 5–17):

   ಮೊದಲು ಯೆಹೂದಿ ಮನುಷ್ಯನಾದ ಮೊರ್ದೆಕೈ ಪರಿಚಯಿಸಲ್ಪಡುತ್ತಾನೆ. ಈತನು ತನ್ನ ಚಿಕ್ಕಪ್ಪನ ಅನಾಥ ಮಗಳಾದ ಹದೆಸ್ಸಾ ಎಂಬ ಎಸ್ತೇರಳನ್ನು ತಂದು ಸಾಕುತ್ತಿದ್ದನು. ರಾಜನಿಗಾಗಿ ಸುಂದರ ಕನ್ಯೆಯರನ್ನು ಹುಡುಕುತ್ತಿದ್ದವರ ಕಣ್ಣಿಗೆ ಎಸ್ತೇರಳು ಬಿದ್ದಳು. ಹೇಗೈ ಎಂಬ ರಾಜ ಕಂಚುಕಿಯ ಈಕೆಯನ್ನು ಮೆಚ್ಚಿ ಈಕೆಯ ಸೌಂದರ್ಯ ಹೆಚ್ಚಿಸುವುದಕ್ಕಾಗಿ ವ್ಯವಸ್ಥೆ ಮಾಡುತ್ತಾನೆ. ಆದರೆ ಎಸ್ತೇರಳು ತನ್ನ ಕುಲ ಮತ್ತು ಜನಾಂಗದ ಬಗ್ಗೆ ಯಾರಿಗೂ ಹೇಳಲಿಲ್ಲ. ಸೌಂದರ್ಯವರ್ಧಕ ಪ್ರಕ್ರಿಯೆಯು ಒಂದು ವರ್ಷವಿಡೀ ಸಾಗುತ್ತದೆ. ಅನಂತರ ಆಕೆಯು ರಾತ್ರಿಯನ್ನು ಕಳೆಯುವುದಕ್ಕಾಗಿ ರಾಜನ ಬಳಿಗೆ ಒಯ್ಯಲ್ಪಡುತ್ತಾಳೆ. ಮರುದಿನ ರಾಜನೊಂದಿಗೆ ಮಲಗಿದ ಉಳಿದ ಹುಡಿಗಿಯರಂತೆ ಈಕೆಯು ಉಪಪತ್ನಿಯರಿದ್ದ ಅಂತಃಪುರಕ್ಕೆ ಒಯ್ಯಲ್ಪಡುವುದಿಲ್ಲ. ಬದಲಾಗಿ ಈಕೆಯು ರಾಣಿಯಾಗಿ ಕಿರೀಟಧಾರಣೆ ಮಾಡಲ್ಪಡುವ ರಾಜಗೃಹಕ್ಕೆ ಒಯ್ಯಲ್ಪಡುತ್ತಾಳೆ.

3. ಎಸ್ತೇರಳು ಅಥವಾ ಮೊರ್ದೆಕೈ ಸ್ಥಾನದಲ್ಲಿ ನಿಮ್ಮನ್ನಿಟ್ಟುಕೊಳ್ಳಿರಿ.

   ಈ ದೀರ್ಘವಾದ ಪ್ರಕ್ರಿಯೆಯುದ್ದಕ್ಕೂ ಇವರಿಬ್ಬರ ಭಾವನೆ ಹೀಗಿದ್ದಿರಬಹುದು:

   **ಟಿಪ್ಪಣಿಗಳು:** ತನ್ನ ಸಂಬಂಧಿಯಾದ ಸುಂದರ ತರುಣಿಯಾದ ಎಸ್ತೇರಳ ಭವಿಷ್ಯದ ಬಗೆಗಿನ ಮೊರ್ದೆಕೈಯ ಆತಂಕವನ್ನು ಊಹಿಸಿಕೊಳ್ಳಿರಿ. ಆಕೆಯನ್ನು ಹೇಗೆ ನೋಡಿಕೊಳ್ಳಲಾಗುತ್ತದೆಂಬುದರ ಬಗ್ಗೆ ಆತನು ಚಿಂತಿತನಾಗಿರುತ್ತಾನೆ. ಅಲ್ಲದೆ ಆಕೆಯು ರಾಣಿಯಾಗುವ ಸಾಧ್ಯತೆ ಮತ್ತು ಸಾಮ್ರಾಜ್ಯದ ವ್ಯವಹಾರಗಳ ಮೇಲೆ ಪ್ರಭಾವಬೀರುವುದರ ಬಗ್ಗೆ ನಿರೀಕ್ಷೆಯುಳ್ಳವನಾಗಿರುತ್ತಾನೆ. ಎಸ್ತೇರಳು ಉತ್ಸಾಹ, ನಿರೀಕ್ಷೆ, ಭಯ, ದುಃಖ ಅನಿಶ್ಚಿತತೆಯ ಮಿಶ್ರ ಭಾವದಿಂದ ಇದ್ದಿರಬಹುದು.

4. ಎಸ್ತೇರಳು ದಯೆಗೆ ಅಥವಾ ಮೆಚ್ಚುಗೆಗೆ ಪಾತ್ರಳಾದಳೆಂಬುದಾಗಿ ಮೂರು ಬಾರಿ ತಿಳಿಸುತ್ತಾನೆ (ವ. 9, 15, 17). ಇದು ಎಸ್ತೇರಳ ಬಗ್ಗೆ ಪ್ರಾಮುಖ್ಯವಾದ ಅಂಶವನ್ನು ತಿಳಿಸುತ್ತದೆ:

   ತನ್ನ ಶಾರೀರಿಕ ಸೌಂದರ್ಯದ ನಿಮಿತ್ತ ಎಸ್ತೇರಳು ಎಲ್ಲರ ಮೆಚ್ಚುಗೆಯನ್ನು ಗಳಿಸದೆ ಇರಬಹುದು, ಆದರೆ ಎಸ್ತೇರಳ ವ್ಯಕ್ತಿತ್ವ ಮತ್ತು ಗುಣಸ್ವಭಾವವು ಆಕೆಯ ಸೌಂದರ್ಯಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿರಬೇಕು. ಉದಾಹರಣೆಗೆ ರಾಜನು ಅವಳನ್ನು ಮೆಚ್ಚುತ್ತಾನೆಂಬುದಾಗಿ ವಚನ 17 ಹೇಳುತ್ತದೆ, ಇದು ಬರೀ ಆಕೆಯ ಬಾಹ್ಯ ನೋಟದಿಂದಲ್ಲ. ಹೇಗೈ ನೇಮಿಸಿದನ್ನೇ ಹೊರತು ಆಕೆ ಬೇರೇನೂ ಆಯ್ಕೆಮಾಡದಿರುವುದು (ವ. 13–15) ಆಕೆಯ ದೀನತೆ ಮತ್ತು ನಮ್ರತೆಯನ್ನು ಸ್ಪಷ್ಟಪಡಿಸುತ್ತದೆ. ಒಬ್ಬ ವ್ಯಕ್ತಿಯು ಹೇಗೆ ಮೆಚ್ಚುಗೆಯನ್ನು ಗಳಿಸುತ್ತಾನೆನ್ನುವುದು ಹೆಚ್ಚಾಗಿ ಆತನ/ ಆಕೆಯ ವ್ಯಕ್ತಿತ್ವ ಮತ್ತು ಗುಣಸ್ವಭಾವನ್ನು ಪ್ರಕಟಿಸುತ್ತದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದದ್ದು ಅತೀ ಪ್ರಾಮುಖ್ಯವಾದುದ್ದಾಗಿದೆ.

5. ಅನೇಕ ತರುಣಿಯರನ್ನು ತಂದು ಅರಮನೆಯ ಅಂತಃಪುರದಲ್ಲಿ ಇರಿಸಲಾಯಿತು.

   **ಟಿಪ್ಪಣಿಗಳು:** ಸಾಮಾನ್ಯವಾಗಿ ಈ ತರುಣಿಯರು ಮತ್ತು ಅಂತಃಪುರದ ಉದ್ದೇಶವು ರಾಜನಿಗೆ ಸಂತೋಷ ಮತ್ತು ತೃಪ್ತಿಯನ್ನು ಕೊಡುವುದಾಗಿತ್ತು. ಅವರಿಗೆ ಯಾವುದೇ ಹಕ್ಕಿರಲಿಲ್ಲ. ಅವರ ಜೀವಿತವು ನಿರ್ಭಂದಿಸಲಾಗಿತ್ತು. ರಾಜನು ಕರೆಯುವವರೆಗೂ ಅವರು

ಅಂತಃಪುರದಲ್ಲೆ ಇರಬೇಕಾಗಿತ್ತು. ರಾಜನು ಕರೆದರೆ ಆಗ ಅವರು ಹೋಗಿ ಆತನಿಗೆ ಲೈಂಗಿಕ ಸುಖವನ್ನು ಕೊಡಬೇಕಾಗಿತ್ತು. ರಾಣಿಯಾಗಿ ಮಾಡಲ್ಪಡದೆ ಇರುವ ಸ್ತ್ರೀಯರೆಲ್ಲರೂ ವಿಧವೆಯರಂತೆ ಜೀವಿಸಬೇಕಾಗಿತ್ತು (ವ. 14). ಒಂದು ವೇಳೆ ಎಸ್ತೇರಳು ಆರಿಸಲ್ಪಡದೆ ಇದ್ದರೆ ಅವಳೂ ಸಹ ಅವರಲ್ಲಿ ಒಬ್ಬ ಸ್ತ್ರೀಯಾಗಿ ಇರಬೇಕಾಗಿತ್ತು. ರಾಜನಿಂದ ಮರೆಯಲ್ಪಡುತ್ತಿದ್ದಳು. ಎಸ್ತೇರಳು ರಾಣಿಯಾದ ನಿಮಿತ್ತ ಆಕೆಗೆ ಹೆಚ್ಚು ಹಕ್ಕು, ಸ್ವಾತಂತ್ರ್ಯ, ಪ್ರಭಾವ ಮತ್ತು ಅಧಿಕಾರವಿತ್ತು. ಸಮಯವು ಕೂಡಿಬಂದಾಗ ದೇವರಿಗಾಗಿ ಬಹಳಷ್ಟು ಸಾಧಿಸಬಹುದಾದ ಸ್ಥಾನದಲ್ಲಿ ಅವಳಿದ್ದಳು.

6. ತನ್ನ ಗುರುತನ್ನು ರಹಸ್ಯವಾಗಿಡಬೇಕೆಂದು ಎಸ್ತೇರಳಿಗೆ ಮೊರ್ದೆಕೈ ಸಲಹೆ ಕೊಡಲು ಕಾರಣವೆಂದರೆ:

   ಒಂದು ವೇಳೆ ಎಸ್ತೇರಳ ಕುಲ ಮತ್ತು ಜನಾಂಗದ ಬಗ್ಗೆ ಗೊತ್ತಾದರೆ ಎಸ್ತೇರಳನ್ನು ಯಾವ ರೀತಿ ನೋಡುತ್ತಾರೋ ಎಂಬುದರ ಬಗ್ಗೆ ಆತನಿಗೆ ಅನಿಶ್ಚಿತತೆಯಿದ್ದರಬಹುದು. ಆಕೆಯು ರಾಣಿಯಾಗುವ ಪ್ರಕ್ರಿಯೆಯಲ್ಲಿ ಆತನಿಗೆ ಒಂದು ರೀತಿಯ ದೇವರ ಹಸ್ತದ ಅರಿವಾಗಿದ್ದಿರಬಹುದು. ಬಹುಶಃ ಆಕೆಯ ಗುರುತು ಗೊತ್ತಾಗಲು ಒಂದು ನಿರ್ಧಿಷ್ಟ ಸಮಯವಿದೆ ಎಂಬುದಾಗಿ ಆತನು ಭಾವಿಸಿದನು.

7. ಈ ಕಥಾವಸ್ತುವಿನೊಳಗೆ ಮೊರ್ದೆಕೈ ಈ ರೀತಿಯಾಗಿ ಪ್ರವೇಶಿಸುತ್ತಾನೆ (ವ. 19–23):

   ಮೊರ್ದೆಕೈ ಅರಮನೆಯ ಹೆಬ್ಬಾಗಿಲಿನಲ್ಲಿ ಕೂತುಕೊಂಡು ಸಂಸ್ಥಾನದ ಉದ್ಯೋಗಿಗಳಲ್ಲೊಬ್ಬನಂತೆ ತನ್ನ ಕಾರ್ಯವನ್ನು ಮಾಡುತ್ತಿದ್ದನು. ಆಗ ಆತನು ರಾಜನಾದ ಅಹಷ್ವೇರೋಷನಿಗೆ ವಿರುದ್ಧವಾಗಿ ಮಾಡಿದ ಒಳಸಂಚಿನ ಬಗ್ಗೆ ತಿಳಿದುಕೊಳ್ಳುತ್ತಾನೆ. ಈ ಪಿತೂರಿಯನ್ನು ಆತನು ಎಸ್ತೇರ್ ರಾಣಿಗೆ ತಿಳಿಸುತ್ತಾನೆ, ಆಕೆ ಅದನ್ನು ರಾಜನಿಗೆ ತಿಳಿಸುತ್ತಾಳೆ. ಒಳಸಂಚು ಮಾಡಿದ ದ್ರೋಹಿಗಳನ್ನು ಗಲ್ಲಿಗೇರಿಸಲಾಯಿತು ಮತ್ತು ಈ ಸಂಗತಿಯು (ಮೊರ್ದೆಕೈ ಹೆಸರು ಸಹ ಸೇರಿ) "ರಾಜನ ದಿನಚರಿಯ ಪುಸ್ತಕ"ದಲ್ಲಿ ಬರೆಯಲ್ಪಟ್ಟಿತು.

8. ಮೊರ್ದೆಕೈ ಜೀವಿತದ ಕುರಿತಾಗಿನ ಈ ಮೊದಲ ನೋಟಗಳು ಆತನ ಗುಣಸ್ವಭಾವದ ಬಗ್ಗೆ ಈ ರೀತಿ ಹೇಳುತ್ತವೆ:

   ಈವರೆಗೂ ಆತನ ಬಗ್ಗೆ ನಾವು ಹೆಚ್ಚೇನಿದನ್ನು ಕಲಿತಿಲ್ಲ ಆದರೆ ಕಥಾವಸ್ತು ತೆರೆದುಕೊಟ್ಟಂತೆ ಈತನ ಬಗ್ಗೆ ಮತ್ತು ಈತನ ಗುಣಸ್ವಭಾವದ ಬಗ್ಗೆ ನಾವು ಹೆಚ್ಚಾಗಿ ಕಲಿಯಲಿದ್ದೇವೆ. ಅನೇಕ ಒತ್ತಡಗಳಿದ್ದರೂ ಸಹ ರಾಜನಿಗೆ ವಿರುದ್ಧವಾಗಿ ಮಾಡಲಾದ ಒಳಸಂಚಿನ ಬಗ್ಗೆ ತಿಳಿಸುವಲ್ಲಿ ಮೊರ್ದೆಕೈ ಪ್ರಾಮಾಣಿಕತೆಯನ್ನು ತೋರಿಸುತ್ತಾನೆ. ಅಲ್ಲದೆ ನಿರಂತರವಾಗಿ ಎಸ್ತೇರಳ ಸಂಪರ್ಕದಲ್ಲಿರುವುದರ ಮೂಲಕ ಆಕೆಯ ಬಗ್ಗೆ ವಿಶೇಷವಾದ ಕಾಳಜಿಯನ್ನು ಸಹ ತೋರಿಸುತ್ತಾನೆ. ಆತನು ಆಕೆಯನ್ನು ಅರಮನೆಯಲ್ಲಿ ಬಿಟ್ಟು, ಆಕೆಯ ಬಗ್ಗೆ ಮರೆತುಬಿಡುವುದಿಲ್ಲ. ಬದಲಾಗಿ ಆಕೆಯನ್ನು ಸಂಧಿಸಿ ಆಕೆಗೆ ಸಲಹೆಕೊಡುವುದನ್ನು ಮುಂದುವರಿಸುತ್ತಾನೆ. ನಮ್ಮ ಪರಿಚಯವಾದಂದಿನಿಂದ ಜನರು ನಮ್ಮ ಗುಣಸ್ವಭಾವದ ಒಂದು ಚಿತ್ರಣವನ್ನು ಇಟ್ಟುಕೊಳ್ಳುತ್ತಾರೆ. ಆ ಪರಿಚಯ ಎಷ್ಟು ನಿಖಟವಾದದೆಂಬುದು ಪ್ರಾಮುಖ್ಯವಲ್ಲ. ನಾವು ಯಾವಾಗಲು ಒಂದು ಸ್ಥಿರವಾದ, ದೇವರಲ್ಲಿ ಭಯಭಕ್ತಿಯಿಂದಿರುವ ಗುಣಸ್ವಭಾವದವರಾಗಿರಬೇಕೆಂದು ದೇವರು ನ್ಯಾಯವಾದುದ್ದನ್ನೇ (ಸರಿಯಾದುದ್ದನ್ನೇ) ಮಾಡಲು ಆರಿಸಿಕೊಳ್ಳಬೇಕು.

9. ಈ ಪುಸ್ತಕದಲ್ಲಿ ದೇವರ ಬಗ್ಗೆ ಮುಕ್ತವಾಗಿ ತಿಳಿಸದೆ ಇದ್ದರೂ ದೇವರ ಹಸ್ತವು ತೆರೆಯ ಹಿಂದೆ ಕಾರ್ಯಮಾಡುತ್ತದೆ.

   - ದೇವರು ಎಸ್ತೇರಳನ್ನು ಅಸಮಾನ್ಯವಾದ ಸೌಂದರ್ಯದಿಂದ ಆಶೀರ್ವದಿಸುತ್ತಾನೆ.
   - ದೇವರು ಮೊರ್ದೆಕೈಯನ್ನು ಸಂಸ್ಥಾನದ ಒಂದು ಉನ್ನತವಾದ ಅಧಿಕಾರ ವರ್ಗದಲ್ಲಿಡುತ್ತಾನೆ. ಆ ಮೂಲಕ ಆತನು ಹತ್ಯೆಯ ಒಳಸಂಚಿನ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.
   - ರಾಜನು ಕುಡಿದ ಮತ್ತಿನಲ್ಲಿರುವಾಗ ದೇವರು ವಷ್ಟಿರಾಣಿಯು ರಾಜನೆದುರಿಗೆ ಬರಲು ನಿರಾಕರಿಸುವಂತೆ ಆಕೆಯನ್ನು ನಡೆಸುತ್ತಾನೆ. ಇದು ಆಕೆಯು ತಳ್ಳಲ್ಪಟ್ಟು ಹೊಸ ರಾಣಿಯಾದ ಎಸ್ತೇರಳಿಗೆ ಒಂದು ಮಾರ್ಗವನ್ನು ತೆರೆದುಕೊಡುತ್ತದೆ.
   - ದೇವರು ಎಸ್ತೇರಳನ್ನು ಆಯ್ಕೆಮಾಡಿದವರೆಲ್ಲರ ಹೃದಯ ಮತ್ತು ಮನಸ್ಸುಗಳ ಮೂಲಕ ಕಾರ್ಯಮಾಡುತ್ತಾನೆ.
   - ರಾಜ ಕಂಚುಕಿಯಾದ ಹೇಗೈಯು ಎಸ್ತೇರಳನ್ನು ಅಂತಃಪುರದಲ್ಲಿಟ್ಟುಕೊಳ್ಳುವಂತೆ ದೇವರು ಕಾರ್ಯಮಾಡುತ್ತಾನೆ.
   - ಮೊರ್ದೆಕೈಯ ಹೆಸರು ಮತ್ತು ಆತನ ಕಾರ್ಯವು ರಾಜನ ದಿನಚರಿಯ ಪುಸ್ತಕದಲ್ಲಿ ಸೇರಿಸಲ್ಪಡುವಂತೆ ದೇವರು ಮಾಡುತ್ತಾನೆ.

10. –

11. –

12. –

13. –

# ಉತ್ತರಗಳು 3: ಯೆಹೂದ್ಯರನ್ನು ಸಂಹರಿಸಲು ಹಾಮಾನನ ಪಿತೂರಿ, ಅಧ್ಯಾಯ 3

## ಉತ್ತರಗಳು

1. ಈ ಒಂದು ಸಂಘರ್ಷವು ಹಾಮಾನನು ಮೊರ್ದೆಕೈ ಮೇಲೆ ತೀವ್ರವಾಗಿ ಪ್ರತಿಕ್ರಯಿಸುವಂತೆ ಮಾಡಿತು(ವ. 26):

   ಇದು ಮೊರ್ದೆಕೈ ಹಾಮಾನನಿಗೆ ಸಾಷ್ಟಾಂಗನಮಸ್ಕಾರ ಮಾಡಿ ಗೌರವಿಸುವುದನ್ನು ನಿರಾಕರಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಇದು ಸಂಘರ್ಷದ ಪ್ರಾರಂಭವಾಗಿದ್ದರೂ ಮೊರ್ದೆಕೈಯ ಜನರ (ಯೆಹೂದ್ಯರು) ಮತ್ತು ಹಾಮಾನನ ಜನರ (ಅಮಾಲೇಕ್ಯರು) ನಡುವಿನ ಚಾರಿತ್ರಿಕ ಜಗಳವು ಸಮಸ್ಯೆಯನ್ನು ಇನ್ನೂ ತೀವ್ರಗೊಳಿಸುತ್ತದೆ.

   ಗೌರವ ಮತ್ತು ಮರ್ಯಾದೆಯನ್ನು ತೋರಿಸಲು ಯೆಹೂದ್ಯರು ರಾಜನ ಮತ್ತು ಇತರ ಜನರ ಮುಂದೆ ಸಾಷ್ಟಾಂಗನಮಸ್ಕಾರ ಮಾಡುತ್ತಿದ್ದರು (ಅಬ್ರಹಾಮನು ಹಿತ್ತಿಯರ ಮುಂದೆ ಆದಿ. 23:7, ಮೋಶೆಯು ತನ್ನ ಮಾವನ ಮುಂದೆ ವಿಮೋ. 18:7, ದಾವೀದನು ಅರಸನಾದ ಸೌಲನ ಮುಂದೆ 1 ಸಮು. 24:9). ಯಾಕೆ ಮೊರ್ದೆಕೈ ಈ ರೀತಿಯಲ್ಲಿ ಹಾಮಾನನ್ನು ಗೌರವಿಸಲು ನಿರಾಕರಿಸದನೆಂದರೆ ಬಹುಶಃ ಈ ರೀತಿ ಮಾಡುವುದರಿಂದ ತಾನು ಹಾಮಾನನನ್ನು ದೇವರನ್ನೋ ಎಂಬಂತೆ ಪೂಜಿಸುವುದೆಂದರ್ಥದಿಂದಲ್ಲ. ಬದಲಾಗಿ ಇದರ ಕಾರಣವು ಅಮಾಲೇಕ್ಯರು ಮತ್ತು ಯೆಹೂದ್ಯರ ನಡುವಿನ ತೀವ್ರವಾದ ಪೈಪೋಟಿಯಾಗಿದೆ. ಹಾಮಾನನ ತೀವ್ರವಾದ ಪ್ರತಿಕ್ರಿಯೆಯು ತಮ್ಮ ಜನರ ನಡುವಿನ ಈ ದೀರ್ಘಕಾಲದ ಜಗಳದ ಪರಿಣಾಮವಾಗಿದೆ. ಈ ಹಿನ್ನೆಲೆಯಿಂದ ಮಾತ್ರ ನಾವು ಈ ಇಬ್ಬರ ನಡುವೆ ಏನಾಗುತ್ತದೆಂಬುದನ್ನು ಸರಿಯಾಗಿ ಅರ್ಥೈಸಿಕೊಳ್ಳಬಹುದು.

2. ತನ್ನ ಯೋಜನೆಯ ಪ್ರಕಾರ ಯೆಹೂದ್ಯರನ್ನು ಸಂಹರಿಸಬೇಕೆಂದು ಹಾಮಾನನು ರಾಜನನ್ನು ಈ ರೀತಿಯಾಗಿ ಮನವೊಲಿಸುತ್ತಾನೆ (ವ. 8–9): ಹಾಮಾನನು ಯೆಹೂದ್ಯರ ಹೆಸರನ್ನು ಹೇಳದೆ ರಾಜನ ಬಳಿ ಅವರ ಬಗ್ಗೆ ಒಂದು ತಪ್ಪಾದ ಚಿತ್ರಣವನ್ನು ಕೊಡುತ್ತಾನೆ. ಅಲ್ಲದೇ ಆತನು ರಾಜನಿಗೆ ಲಂಚವನ್ನು ಕೊಡಲು ಸಹ ಪ್ರಯತ್ನಿಸುತ್ತಾನೆ. ರಾಜನು ಈ ವಿಷಯದ ಬಗ್ಗೆ ಅಷ್ಟೇನು ತಲೆಕೆಡಿಸಿಕೊಳ್ಳದೆ ಹಾಮಾನನಿಗೆ ಏನು ಬೇಕಾದರೂ ಮಾಡಿಕೋ ಎಂದು ತನ್ನ ಮುದ್ರೆಯುಂಗುರವನ್ನು ಕೊಡುತ್ತಾನೆ. ಅಧಿಕಾರಕ್ಕಾಗಿನ ತನ್ನ ದುರಾಸೆಯ ನಿಮಿತ್ತ ಹಾಮಾನನು ಯಾವ ರೀತಿಯಲ್ಲಿ ರಾಜನನ್ನು ಮನವೊಲಿಸುತ್ತಾನೆ ಎನ್ನುವುದನ್ನು ಇಲ್ಲಿ ಕಾಣಬಹುದು.

   ವಾಸ್ತವಾಂಶವೆಂದರೆ ಯೆಹೂದ್ಯರಿಗೆ ತಮ್ಮದೆ ಆದ ನಿಯಮವಿದ್ದರೂ ಸಹ ಪರ್ಷಿಯನ್ ಸಾಮ್ರಾಜ್ಯದಲ್ಲಿ ಅವರು ಯಾವಾಗಲೂ ರಾಜನಿಗೆ ವಿಧೇಯರಾಗಿದ್ದು, ಯಾವುದೇ ತೊಂದರೆ ಕೊಡದವರಾಗಿ ಬದುಕುತ್ತಿದ್ದರು. ಹಾಗೆಯೇ ಹಾಮಾನನು ಇಲ್ಲಿ ಸ್ವತಃ ತನ್ನ ಅಜೆಂಡವನ್ನು ಸಾಧಿಸುತ್ತಿದ್ದರೂ ತಾನು ಅರಸನ ಅಭಿರುಚಿಗನುಣವಾಗಿ ಕಾರ್ಯಮಾಡುತ್ತಿರುವನೇನೋ ಎಂಬಂತೆ ತೋರ್ಪಡಿಸಿಕೊಳ್ಳುತ್ತಾನೆ.

3. ರಾಜಶಾಸನವು ಒಳಗೊಂಡಿದ್ದ ಆಜ್ಞೆಗಳನ್ನು ಈ ರೀತಿಯಾಗಿ ವಿವರಿಸಬಹುದು (ವ. 13):

   ಒಂದು ನಿರ್ದಿಷ್ಟವಾದ ದಿನದಲ್ಲಿ ಹುಡುಗರು, ಮುದುಕರು, ಹೆಂಗಸರು, ಮಕ್ಕಳು ಎಂದು ನೋಡದೆ ಎಲ್ಲಾ ಯೆಹೂದ್ಯರನ್ನು ಕೊಂದು ಸಂಹರಿಸುವುದು. ಅದರೊಂದಿಗೆ ಅವರ ಸೊತ್ತನ್ನೆಲ್ಲಾ ಸೂರೆ ಮಾಡುವುದು

4. ವಚನ 12–14 ರಲ್ಲಿ "ಆಯಾ", "ಎಲ್ಲಾ" ಮತ್ತು "ಪ್ರತಿಯೊಂದು" ಎಂಬ ಪದಗಳು ಅನೇಕ ಬಾರಿ ಕಂಡುಬರುತ್ತವೆ.

   **ಟಿಪ್ಪಣಿ: ಯೆ**ಹೂದ್ಯರಿಗೆ ವಿರೋಧವಾಗಿ ಮಾಡಲಾದ ಬೆದರಿಕೆಯ ತೀವ್ರತೆಯನ್ನು ಒತ್ತಿ ಹೇಳುವುದಕ್ಕಾಗಿ ಗ್ರಂಥಕರ್ತನು ಈ ರೀತಿಯ ಪದಗಳನ್ನು ಪುನರಾವರ್ತಿಸುತ್ತಾನೆ. ಅಲ್ಲದೆ ಆತನು ಹೇಗೆ ಮತ್ತು ಎಲ್ಲೆಲ್ಲಿ ರಾಜಾಜ್ಞೆಯನ್ನು ಹೊರಡಿಸಲಾಗಿದೆ ಎಂಬುದನ್ನು ಅನೇಕ ವಚನಗಳಲ್ಲಿ ವಿವರಿಸುತ್ತಾನೆ. ಯಾರೂ ಸಹ ತಪ್ಪಿಸಿಕೊಳ್ಳದೆ ರಾಜಶಾಸನವು ಪ್ರತಿಯೊಬ್ಬ ಯೆಹೂದ್ಯನ ಜೀವಿತವನ್ನು ಮುಟ್ಟುವಂತೆ ಓದುಗನ ಮನಸ್ಸಿನಲ್ಲಿ ಮುದ್ರೆಯಾಗಿರಬೇಕೆಂದು ಆತನು ಬಯಸುತ್ತಾನೆ. ಯೆಹೂದ್ಯರ ಮೇಲಿನ ಬೆದರಿಕೆಯು ಆಗಾಧವಾಗಿತ್ತು ಮತ್ತು ಸರ್ವವ್ಯಾಪಿಯಾಗಿತ್ತು.

5. ರಾಜಾಜ್ಞೆಯ ವಿಷಯವು ತಿಳಿಯುತ್ತಿದ್ದಂತೆ ಶೂಷನ್ ಪಟ್ಟಣದಲ್ಲಿ ಈ ರೀತಿಯ ವಾತಾವರಣ ಉಂಟಾಯಿತು:

   ಜನರಲ್ಲಿ ತಳಮಳ ಉಂಟಾಯಿತು (ವ. 15). ಯಾಕೆ ಯೆಹೂದಿ ಜನಾಂಗವು ಈ ರೀತಿಯ ಆಪತ್ತಿಗೆ ಗುರಿಯಾಯಿತೆಂಬುದು ಬಹುಶಃ ಅವರಿಗೆ ಅರ್ಥವಾಗದೆ ಇದ್ದಿರಬಹುದು. ಅದೇ ವೇಳೆ ದುಷ್ಟ ವ್ಯಕ್ತಿಯಾದ ಹಾಮಾನನು ಮತ್ತು ಅರಸನಾದ ಅಹಷ್ವೇರೋಷನು ಸುರಾಪಾನ ಮಾಡುವುದಕ್ಕಾಗಿ ಕುಳಿತುಕೊಳ್ಳುತ್ತಾರೆ.

6. ಈ ಅಧ್ಯಾಯದಲ್ಲಿ ಹಾಮಾನನ ಗುಣಸ್ವಭಾವದಲ್ಲಿ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   - ಈತನೊಬ್ಬ ಗರ್ವಿಷ್ಠನಾಗಿದ್ದು ಮೊರ್ದೆಕೈಯು ತನಗೆ ಸಾಷ್ಟಾಂಗನಮಸ್ಕಾರ ಮಾಡಬೇಕೆಂದು ಅಪೇಕ್ಷಿಸುತ್ತಾನೆ.

- ಈತನೊಬ್ಬ ನಿರ್ಧಯಿಯಾಗಿದ್ದು ಮುಗ್ಧ ಯೆಹೂದಿ ಜನಾಂಗವನ್ನೆಲ್ಲಾ ಸಂಹರಿಸಬೇಕೆಂಬ ಉಪಾಯ ಮಾಡುತ್ತಾನೆ.
- ಈತನೊಬ್ಬ ಪಿತೂರಿ ಮಾಡುವವನಾಗಿದ್ದು ತನ್ನ ಯೋಜನೆಯಂತೆ ಕಾರ್ಯಮಾಡುತ್ತಾನೆ.
- ರಾಜನನು ಮನವೊಲಿಸುವಲ್ಲಿ ಬಹಳ ಬುದ್ಧಿವಂತಿಕೆನ್ನು ತೋರಿಸುತ್ತಾನೆ.

7. ಈ ಅಧ್ಯಾಯದಲ್ಲಿ ಅರಸನಾದ ಅಹಷ್ವೇರೋಷನ ಬಗ್ಗೆ ಎರಡು ಪ್ರಾಮುಖ್ಯವಾದ ಮಾಹಿತಿಗಳನ್ನು ಪಡಕೊಳ್ಳುತ್ತೇವೆ.
    - ಇಡೀ ಜನಾಂಗವನ್ನೆ ಸಂಹರಿಸಲು ಬಹು ಬೇಗನೆ ಈತನು ಒಪ್ಪಿಕೊಳ್ಳುವುದರ ಮುಲಕ ತನ್ನ ಗುಣಸ್ವಭಾವವೇನೆಂಬುದನ್ನು ಆತನು ಪ್ರಕಟಿಸಿಕೊಳ್ಳುತ್ತಾನೆ (ಪ್ರಾರಂಭದಲ್ಲಿ ಈತನು ಆ ದಿನಗಳ ಸಂಪ್ರದಾಯವನ್ನು ಪಾಲಿಸುವದಕ್ಕಾಗಿ ಲಂಚ ಮುಟ್ಟದೆ ಇದ್ದರು ನಂತರದಲ್ಲಿ ಆತನು ತೆಗೆದುಕೊಂಡಿರಬಹುದು).
    - ಕೊನೆಯ ವಚನವು ಆತನ ಬಗ್ಗೆ ಇನ್ನೂ ಹೆಚ್ಚಾಗಿ ನಮಗೆ ತಿಳಿಸುತ್ತದೆ ಅದೇನಂದರೆ, ತಾನು ಸಂಹರಿಸಲು ಆಜ್ಞಾಪಿಸಲ್ಪಟ್ಟ ಜನರ ಬಗ್ಗೆ ಸ್ವಲ್ಪವೂ ಕಾಳಜಿಯಿಲ್ಲದವನಾಗಿ ಹಾಮಾನನೊಂದಿಗೆ ಸುರಾಪಾನ ಮಾಡುವುದಕ್ಕಾಗಿ ಕೂತುಕೊಳ್ಳುತ್ತಾನೆ. ಇದು ಆತನಲ್ಲಿನ ಕಾಳಜಿ ಕನಿಕರದ ಕೊರತೆಯನ್ನು ತೋರಿಸುತ್ತದೆ.
8. –
9. –
10. ನಾವು ಸಲಹೆಯನ್ನು ಕೊಡುವುದು ಮತ್ತು ಸ್ವೀಕರಿಸುವುದರಿಂದ ಯಾವಾಗಲೂ ಸ್ವತಃ ನಮ್ಮ ಗುಣಸ್ವಭಾವವನ್ನೇ ಪ್ರತಿಬಿಂಬಿಸುತ್ತವೆ (ತೋರ್ಪಡಿಸುತ್ತವೆ) ಎಂಬುದಾಗಿ ನಾನು ಯೋಚಿಸುತ್ತೇನೆ:
    - ನಾವು ನಮ್ಮ ದೀನತೆ ಅಥವಾ ಗರ್ವವನ್ನು ಬಹಿರಂಗ ಪಡಿಸುತ್ತೇವೆ.
    - ನಾವು ಕಾಳಜಿ ಅಥವಾ ಕಾಳಜಿ ಇಲ್ಲದೆ ಇರುವಿಕೆಯನ್ನು ಬಹಿರಂಗ ಪಡಿಸುತ್ತೇವೆ.
    - ನಾವು ಸ್ವಾರ್ಥ ಅಥವಾ ಇತರರಿಗೆ ಒಳಿತನ್ನು ಬಹಿರಂಗ ಪಡಿಸುತ್ತೇವೆ.
11. ಬುದ್ಧಿಹೀನ (ಜ್ಞಾನಹೀನ) ಸಲಹೆಯನ್ನು ಕೊಡುವುದರ ವಿರುದ್ಧವಾಗಿ ನಮ್ಮನ್ನು ಕಾಯ್ದುಕೊಳ್ಳಲು ಗಣನೆಗೆ ತೆಗೆದುಕೊಳ್ಳಬೇಕಾದ ಕೆಲವು ಅಂಶಗಳು ಇಂತಿವೆ:
    - ಸಲಹೆಯನ್ನು ಕೊಡುವುದಕ್ಕಿಂತ ಮೊದಲು ನಾವು ಜ್ಞಾನ ಮತ್ತು ಪರಿಸ್ಥಿತಿ ಕುರಿತಾಗಿನ ಅರಿವಿಗಾಗಿ ದೇವರನ್ನು ನೋಡಬೇಕು.
    - ಸ್ವತಃ ನಮ್ಮ ಜೀವಿತದಲ್ಲಿನ ಸಂಗತಿಗಳ ಬಗ್ಗೆ ದೇವರು ಮಾತಾಡುವುದನ್ನು ಕೇಳಿಸಿಕೊಳ್ಳುವ ಮನಸ್ಸು ನಮಗಿರಬೇಕು.
    - ದೇವರು ಮತ್ತು ಇತರರ ಮುಂದೆ ನಾವು ದೀನರಾಗಿ ನಡೆದುಕೊಳ್ಳಬೇಕು.
12. ನಾವು ಬೇರೆಯವರಿಂದ ಪಡೆಯುವ ಸಲಹೆಯನ್ನು ಪರಾಮರ್ಶಿಸುವಾಗ ಗಣನೆಗೆ ತೆಗೆದುಕೊಳ್ಳಬೇಕಾದ ಕೆಲವು ಅಂಶಗಳು ಇಂತಿವೆ:
    - ಅವರ ಸಲಹೆಯು ಕಳಪೆಯಾಗಿದ್ದರೂ ಸಹ ಸುಲಭವಾಗಿ ನಾವು ಅವರ ಹತೋಟಿಗೆ ಹೋಗಿ ಇತರರ ಸಲಹೆಯಂತೆ ನಡೆಯಬಹುದು (ರಾಜನಾದ ಅಹಷ್ವೇರೋಷನು ಮಾಡಿದಂತೆ).
    - ನಾವು ಯಾವಾಗಲೂ ದೇವರ ಜ್ಞಾನವನ್ನು ಹುಡುಕಬೇಕು.
    - ನಾವು ಯಾವಾಗಲೂ ಬೇರೆ ಜನರಿಂದ ಪಡೆದ ಸಲಹೆಯನ್ನು ಸತ್ಯವೇದದ ಸತ್ಯಗಳೊಂದಿಗೆ ಹೋಲಿಸಿ ನೋಡಬೇಕು.
    - ಸುಮ್ಮನೆ ನಾವು ಎಲ್ಲರಿಂದಲೂ ಸಲಹೆಯನ್ನು ಸ್ವೀಕರಿಸಬಾರದು. ಕೇಳುವಲ್ಲಿ ನಮ್ಮದೇ ಆದ ಆಯ್ಕೆಗಳಿರಬೇಕು.
    - ಬೇರೆಯವರಿಂದ ಪಡೆಯುವ ಯಾವುದೇ ಸಲಹೆಯನ್ನು ಪರಾಮರ್ಶಿಸಲು (ಮೌಲ್ಯಮಾಪನ) ನಾವು ಯಾವಾಗಲೂ ಸಿದ್ಧರಾಗಿರಬೇಕು.

# ಉತ್ತರಗಳು 4: ಸಹಾಯಕ್ಕಾಗಿ ಮೊರ್ದೆಕೈ ಎಸ್ತೇರಳ ಮನವೊಲಿಸುವುದು, ಅಧ್ಯಾಯ 4

## ಉತ್ತರಗಳು

1. ಈ ಅಧ್ಯಾಯದಲ್ಲಿನ ಘಟನೆಗಳ ಅನುಕ್ರಮಣಿಕೆ:

   - ಮೊರ್ದೆಕೈ ಮತ್ತು ಯೆಹೂದಿ ಜನಾಂಗದ ಗೋಳಾಟ, ವ. 1–3
   - ಮೊರ್ದೆಕೈಯ ದುಃಖಕ್ಕೆ ಎಸ್ತೇರಳ ಪ್ರಾರಂಭಿಕ ಪ್ರತಿಕ್ರಿಯೆ, ವ. 1–3.
   - ಮೊರ್ದೆಕೈ ಎಸ್ತೇರಳಿಗೆ ಯೆಹೂದ್ಯರನ್ನು ಸಂಹರಿಸುವ ಕುರಿತಾದ ರಾಜಶಾಸನ ಬಗ್ಗೆ ತಿಳಿಸಿ, ರಾಜನ ಬಳಿಯಲ್ಲಿ ಬಿನ್ನಹ ಮಾಡಿಕೊಳ್ಳಬೇಕೆಂದು ಆಕೆಯನ್ನು ಕೇಳಿಕೊಳ್ಳುತ್ತಾನೆ, ವ. 6–9
   - ರಾಜನ ಬಳಿಗೆ ಹೋಗುವುದು ತನಗೆ ಅಸಾಧ್ಯವಾದ್ದದೆಂದು ಎಸ್ತೇರಳು ಮೊರ್ದೆಕೈಗೆ ಹೇಳಿ ಕಳಿಯಿಸುತ್ತಾಳೆ, ವ. 10–11
   - ಆಕೆ ಮತ್ತು ಆಕೆಯ ಕುಟುಂಬ ಸಹ ಈ ರಾಜಶಾಸನದಡಿಯಲ್ಲಿ ಸಾಯುವರೆಂಬುದಾಗಿ ಮೊರ್ದೆಕೈ ಎಸ್ತೇರಳಿಗೆ ಎಚ್ಚರಿಸುತ್ತಾನೆ, ವ. 12–14.
   - ಎಸ್ತೇರಳು ಯೆಹೂದ್ಯರ ಬಳಿ ತನಗಾಗಿ ಉಪವಾಸ ಮಾಡಬೇಕೆಂದು ಕೇಳಿಕೊಂಡು ರಾಜನ ಬಳಿಗೆ ಹೋಗಲು ಒಪ್ಪುತ್ತಾಳೆ, ವ. 15–17

2. ರಾಜಾಜ್ಞೆಯ ಸುದ್ದಿಗೆ ಮೊರ್ದೆಕೈ ಮತ್ತು ಯೆಹೂದಿ ಜನರು ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾರೆ (ವ. 1–3)

   ಸುದ್ದಿಯನ್ನು ಕೇಳಿದೊಡನೆ ಮೊರ್ದೆಕೈ ಬಟ್ಟೆಗಳನ್ನು ಹರಿದುಕೊಂಡು ಗೋಣಿತಟ್ಟನ್ನು ಕಟ್ಟಿಕೊಂಡು ಬೂದಿಯನ್ನು ಹಾಕಿಕೊಂಡು ಪಟ್ಟಣದ ಮಧ್ಯದಲ್ಲಿ ಹೋಗುತ್ತಾ ದುಃಖಾತಿಶಯದಿಂದ ಗೋಳಾಡುತ್ತಾನೆ. ಯೆಹೂದ್ಯರು ಸಹ ಇದೇ ರೀತಿಯಲ್ಲಿ ಮಹಾದುಃಖ, ಉಪವಾಸರೋಧನ ಮತ್ತು ಪ್ರಲಾಪಗಳಿಂದ ಪ್ರತಿಕ್ರಯಿಸುತ್ತಾರೆ. ರಾಜಾಜ್ಞೆಯು ಪ್ರಕಟಿಸಲ್ಪಟ್ಟೆಲ್ಲೆಲ್ಲಾ ಯೆಹೂದ್ಯರು ಇದೇ ರೀತಿ ಮಾಡುತ್ತಾರೆ.

3. ಹಾಮಾನನ ಪಿತೂರಿಗೆ ಮೊರ್ದೆಕೈ ಮತ್ತು ಯೆಹೂದ್ಯರ ಪ್ರತಿಕ್ರಿಯೆಯು ಆ ಸಮಯದಲ್ಲಿ ಪರ್ಷಿಯಾದಲ್ಲಿನ ಯೆಹೂದ್ಯರಲ್ಲಿ ಒಂದು ಬಲವಾದ ಸಮುದಾಯಿಕ ಭಾವನೆ ಮತ್ತು ಸಂಪರ್ಕಶೀಲತೆ ಇತ್ತೆಂಬುದನ್ನು ತೋರಿಸುತ್ತದೆ. ಅವರೆಲ್ಲರೂ ಗೋಣಿತಟ್ಟನ್ನು ಹಾಸಿ, ಬೂದಿಯನ್ನು ಹಾಕಿಕೊಂಡು ರೋದಿಸುತ್ತಾರೆ. ತಮ್ಮ ದುಃಖವನ್ನು ಸಾರ್ವನಿಕವಾಗಿ ಈ ರೀತಿ ತೋರ್ಪಡಿಸಿಕೊಳ್ಳುವಲ್ಲಿ ಅವರು ಭಯಪಡುವುದಿಲ್ಲ. ತಕ್ಷಣವೆ ಅವರು ಸಹಾಯಕ್ಕಾಗಿ ದೇವರ ಮೊರೆಹೊಕ್ಕಿರುವುದನ್ನು ನಾವಿಲ್ಲಿ ಗಮನಿಸಬೇಕು. ಬೇರೇನನ್ನೂ ಮಾಡುವುದಕ್ಕಿಂತ ಮೊದಲು ಅವರು ದೇವರು ಮತ್ತು ಕರುಣೆಯನ್ನು ಹುಡುಕುತ್ತಾರೆ.

4. ವಚನ 3 ರಲ್ಲಿನ ಯೆಹೂದ್ಯರ ಉಪವಾಸವು ಮೊದಲ ಮೂರು ಅಧ್ಯಾಯಗಳ ಘಟನೆಗಳೊಂದಿಗೆ ಈ ರೀತಿಯಾಗಿ ತದ್ವಿರುದ್ಧವಾಗಿದೆ:

   ಇಲ್ಲಿಯವರೆಗೆ ಈ ಪುಸ್ತಕದಲ್ಲಿ ದೊಡ್ಡ ಔತಣ ಮತ್ತು ಸಂಭ್ರಮ ತುಂಬಿತ್ತು (ನೋಡಿ 1:3–9, 2:18). ಈ ಅಧ್ಯಾಯ ಪ್ರಾರಂಭವಾಗುವುದಕ್ಕಿಂತ ತುಸು ಮೊದಲು ಹಾಮಾನ ಮತ್ತು ರಾಜನು ಸುರಾಪಾನ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೆ. ಇದೊಂದು ಸಂತೋಷ ಮತ್ತು ವಿಶ್ರಾಂತಿಯ ಗಳಿಗೆಯಾಗಿದೆ. ನಿಜವಾಗಲೂ ಇದು ಯೆಹೂದಿ ಜನರ ಗೋಳಾಟಕ್ಕೆ ತದ್ವಿರುದ್ಧವಾಗಿದೆ. ಇಲ್ಲಿ ಇಡೀ ಯೆಹೂದಿ ಜನಾಂಗದ ಭವಿಷ್ಯ ಹಾಮಾನನ ಮತ್ತು ರಾಜನ ಕೈಯಲ್ಲಿ ಇತ್ತು ಎಂಬಂತೆ ತೋರುತ್ತದೆ. ಆದರೆ ವಾಸ್ತಾವಾಂಶದಲ್ಲಿ ಯೆಹೂದ್ಯರ ಭವಿಷ್ಯವು ದೇವರಲ್ಲಿತ್ತು. ದೇವರು ತೆರೆಯ ಹಿಂದೆ ಕಾರ್ಯಮಗ್ನನಾಗಿದ್ದನು.

5. ಈ ಸನ್ನಿವೇಶಕ್ಕೆ ಎಸ್ತೇರಳು ತೋರಿದ ಪ್ರತಿಕ್ರಿಯೆ (ಮತ್ತು ಆಕೆಯ ಭಾವನೆ)ಯಲ್ಲಿ ಮೂರು ಮುಖ್ಯ ಹಂತಗಳಿವೆ:

   - ಮೊರ್ದೆಕೈಯ ಗೋಳಾಟಕ್ಕೆ ಎಸ್ತೇರಳ ಮೊದಲ ಪ್ರತಿಕ್ರಿಯೆ ಖಂಡಿತವಾಗಿ ಆತನ ಬಗ್ಗೆ ಕಾಳಜಿಯುಳ್ಳವಳಾಗಿರುತ್ತಾಳೆ ಅಥವಾ ಆತನ ನಡುವಳಿಕೆಯ ಬಗ್ಗೆ ಆಕೆ ಪೇಚಿಗೆ ಸಿಲುಕುತ್ತಾಳೆ. ಆದರೆ ಪ್ರಾಥಮಿಕವಾಗಿ ಯೆಹೂದ್ಯರು ಎದುರಿಸುತ್ತಿರುವ ಬೆದರಿಕೆಯ ಬಗ್ಗೆ ಆಕೆ ಅಷ್ಟೇನು ಬಾಗ್ಯತೆಯಿಲ್ಲದವಳಾಗಿರುತ್ತಾಳೆ.
   - ಆಕೆಯು ಅರಸನ ಬಳಿಗೆ ಹೋಗಿ ಯೆಹೂದ್ಯರಿಗಾಗಿ ಆತನ ಬಳಿ ಬಿನ್ನಹವನ್ನು ಮಾಡಿಕೊಳ್ಳಬೇಕೆಂಬ ಮೊರ್ದೆಕೈಯ ಮನವಿಯನ್ನು ಕೇಳಿದೊಡನೆ ಆಕೆ ಭಯದಿಂದ ಪ್ರತಿಕ್ರಯಿಸುತ್ತಾಳೆ. ಅನುಮತಿಯಿಲ್ಲದೆ ರಾಜನ ಬಳಿಗೆ ಹೋಗುವುದು ಆಕೆಗೆ

ತೊಂದರೆ ಮತ್ತು ಅಪಾಯಕಾರಿಯಾದುದ್ದಾಗಿತ್ತು. ಈ ಸಮಯದಲ್ಲಿ ಆಕೆ ತನ್ನ ಜನರಿಗೆ ಸಹಾಯಮಾಡುವುದು ಅಥವಾ ಯೆಹೂದ್ಯರ ಭವಿಷ್ಯದ ಮೇಲೆ ಪ್ರಭಾವಬೀರಲು ತನ್ನ ಸ್ಥಾನಮಾನವನ್ನು ಉಪಯೋಗಿಸುವುದರ ಬಗ್ಗೆ ಯೋಚಿಸುವುದಿಲ್ಲ.

- ಎಸ್ತೇರಳ ಕೊನೆಯ ಪ್ರತಿಕ್ರಿಯೆಯು ಮೊರ್ದೆಕೈ ಮಾತಿನಲ್ಲಿನ ಸತ್ಯವನ್ನು ಗ್ರಹಿಸಿಕೊಳ್ಳುವುದಾಗಿದೆ. ಸ್ವತಃ ಆಕೆ ಮತ್ತು ಆಕೆಯ ಕುಟುಂಬ ಸಹ ಆ ರಾಜಾಜ್ಞೆಯ ಅಡಿಯಲ್ಲಿ ಬಂದಿರುತ್ತದೆ. ಈಗ ಆಕೆ ರಾಜನ ಬಳಿಗೆ ಹೋಗಲೇಬೇಕು ಮತ್ತು ತನ್ನ ಅಳಿವು–ಉಳಿವೆಲ್ಲಾ ಆತನ ಕೈಯಲ್ಲಿದೆ ಎಂಬುದನ್ನು ತಿಳಿದವಳಾಗಿದ್ದಾಳೆ. ಆದರೆ ದೇವರಿಗೆ ವಿಧೇಯಳಾಗುವುದೇ ತನ್ನ ಮೊದಲ ಆಧ್ಯತೆಯೆಂಬುದನ್ನು ಆಕೆ ಮನವರಿಕೆ ಮಾಡಿಕೊಳ್ಳುತ್ತಾಳೆ. ತನ್ನ ಭಯದ ನಡುವೆಯೂ ಸಹ ಆಕೆ ಒಂದು ದೊಡ್ಡ ನಿರ್ಧಾರಕ್ಕೆ ಬರುತ್ತಾಳೆ.

  ಮೊರ್ದೆಕೈಯ ಮನವಿಗೆ ಎಸ್ತೇರಳ ಮೊದಲ ಪ್ರತಿಕ್ರಿಯೆಯು ಸ್ವತಃ ತನ್ನ ಜೀವಿತಕ್ಕೆ ಭಯ ಹುಟ್ಟಿಸುವಂಥದ್ದಾಗಿತ್ತೆಂಬುದನ್ನು ನಾವು ಗಮನಿಸಬೇಕು. ಇದು ಮೊರ್ದೆಕೈಯ ಸಲಹೆಯನ್ನು ಪಾಲಿಸುವ ಆಕೆಯ ಕೊನೆಯ ನಿರ್ಧಾರವನ್ನು ಪ್ರಶಂಶಿಸಲು ನಮಗೆ ಸಹಾಯಕವಾಗುತ್ತದೆ. ಎಸ್ತೇರಳು ಭಯಗೊಂಡಿದ್ದು ವಾಸ್ತಾವಾಂಶವಾಗಿದ್ದರೂ ಸಹ ಗುರಿ ಸಾಧಿಸುವುದರಲ್ಲಿ ಆಕೆ ತೋರಿದ ಧೈರ್ಯವು ನಾವು ಸಹ ಅದೇ ರೀತಿ ಮಾಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ.

6. ಎಸ್ತೇರಳ ಪಾತ್ರ ಮತ್ತು ಜವಬ್ದಾರಿಯು ಕುರಿತಾಗಿನ ಮೊರ್ದೆಕೈಯ ದೃಷ್ಟಿಕೋನವು ಇಂತಿದೆ:

   ರಾಣಿಯಾಗಿ ಎಸ್ತೇರಳು ಹೊಂದಿದ್ದ ಪ್ರಭಾವಿ ಸ್ಥಾನದ ಬಗ್ಗೆ ಮೊರ್ದೆಕೈಗೆ ಅರಿವಿತ್ತು. ಘಟನೆಗಳ ದಿಕ್ಕನ್ನೂ ಬದಲಿಸುವಲ್ಲಿ ತಾನು ಹೊಂದಿರುವ ಸಾಮರ್ಥ್ಯವನ್ನು ಆಕೆ ಅರ್ಥೈಸಿಕೊಳ್ಳುತ್ತಾಳೆ. ದೇವರು ತನ್ನನ್ನು ಒಂದು ಉದ್ದೇಶಕ್ಕಾಗಿ ಈ ಸ್ಥಾನದಲ್ಲಿಟ್ಟಿದ್ದಾನೆಂಬುದನ್ನು ಆಕೆ ತಿಳಿದುಕೊಳ್ಳುತ್ತಾಳೆ. ವಚನ 14ರಲ್ಲಿ ಆತನದನ್ನು ಎಸ್ತೇರಳಿಗೆ ಪ್ರಕಟಿಸುತ್ತಾನೆ. *"ಇದಲ್ಲದೆ ನೀನು ಇಂಥ ಸಂದರ್ಭಕ್ಕಾಗಿಯೇ ಪಟ್ಟಕ್ಕೆ ಬಂದಿರಬಹುದು"* (ವ. 14). ಮೊರ್ದೆಕೈಯು ಎಸ್ತೇರಳ ಬಳಿ ಬೇಡಿಕೊಳ್ಳುತ್ತಾನೆ. ಯಾಕೆಂದರೆ ರಾಜನ ಬಳಿಗೆ ಹೋಗಲು ಆಕೆಯೊಬ್ಬಳೇ ಶಕ್ತಳಾಗಿರುತ್ತಾಳೆ.

7. ವಚನ 12–14 ರಲ್ಲಿ ಮೊರ್ದೆಕೈಯ ವಾದ (ಸಂಭಾಷಣೆ)ವು ಎಸ್ತೇರಳಿಗೆ ಕೆಲವು ಪ್ರಮುಖ ಬೋಧನೆಗಳನ್ನು ತಿಳಿಸುತ್ತದೆ:

   - ದೇವರು ಹೇಳಿದ್ದನ್ನು ಮಾಡುವಲ್ಲಿ ವಿಫಲವಾದರೆ ಎದುರಿಸಬೇಕಾದ ಪರಿಣಾಮದ ಬಗ್ಗೆ ಆತನು ಅವಳಿಗೆ ನೆನಪಿಸುತ್ತಾನೆ. ಒಂದು ವೇಳೆ ತನ್ನ ಜನರಿಗೆ ಸಹಾಯ ಮಾಡಲು ಎಸ್ತೇರಳು ತಿರಸ್ಕರಿಸಿದರೆ ಹಾಮಾನನ ಪಿತೂರಿಯಲ್ಲಿ ಆಕೆಯೂ ಸಹ ಬಲಿಪಶುವಾಗಬೇಕಾಗುತ್ತದೆ.

   - ಅಗತ್ಯ ಸಮಯ ಬಂದಾಗ ತನ್ನ ಜನರಿಗೆ ಸಹಾಯ ಮಾಡವುದಕ್ಕಾಗಿ ದೇವರು ಆಕೆಯನ್ನು ರಾಣಿಯನ್ನಾಗಿ ಮಾಡಿದನ್ನೆಂಬುದಾಗಿ ಮೊರ್ದೆಕೈ ಆಕೆಗೆ ಒತ್ತಾಯದಿಂದ ಮನವರಿಕೆ ಮಾಡುತ್ತಾನೆ. ದೇವರಲ್ಲಿ ನಂಬಿಕೆಯಿಡುವ ನಮಗೆ ದೇವರ ಮಧ್ಯಪ್ರವೇಶಿಸುವಿಕೆಯನ್ನು ತಿಳಿದುಕೊಳ್ಳವುದು ಒಂದು ಅತೀ ಪ್ರಾಮುಖ್ಯವಾದ ವಿಷಯವಾಗಿದೆ. ನಿಜವಾಗಲು ದೇವರು ನಮ್ಮನ್ನು ಸಂಬಂಧ, ಉದ್ಯೋಗ ಮತ್ತು ಸ್ಥಳಗಳಲ್ಲಿ ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಇಡುತ್ತಾನೆಂಬುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಿದೆ.

8. ಈ ಅಧ್ಯಾಯದಲ್ಲಿ ದೇವರ ಸಾರ್ವಭೌಮತೆ ಮತ್ತು ಜನರ ಪ್ರತಿಕ್ರಿಯೆಯು ಒಟ್ಟಾಗಿ ಕಾರ್ಯಮಾಡುವುದನ್ನು ಈ ಕೆಳಕಂಡಂತೆ ಮಾಡಬಹುದು:

   ಈ ಅಧ್ಯಾಯದಲ್ಲಿ ಎಸ್ತೇರಳು ಪುಸ್ತಕದ ವಿಷಯವಸ್ತುವನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಲೋಕದಲ್ಲಿನ ದೇವರ ಸಾರ್ವಭೌಮತೆಯ ಕಾರ್ಯ ಮತ್ತು ಆತನ ಜನರ ಪ್ರತಿಕ್ರಿಯೆಯ ನಡುವಿನ ಸಂಬಂಧವು ಮೊರ್ದೆಕೈಯ ಸಂಭಾಷಣೆಯಲ್ಲಿ ಸಾಕ್ಷೀಕರಿಸಲ್ಪಟ್ಟಿದೆ. ಒಂದುವೇಳೆ ಎಸ್ತೇರಳು ರಾಜನ ಬಳಿಗೆ ಹೋಗಲು ನಿರಾಕರಿಸಿದರೂ ಸಹ ದೇವರು ಯೆಹೂದ್ಯರಿಗೆ ಬಿಡುಗಡೆಯನ್ನು ಒದಗಿಸುತ್ತಾನೆಂಬುದನ್ನು ಮೊರ್ದೆಕೈ ಮನಗಂಡಿದ್ದನು. ದೇವರು ತಾನು ಆದುಕೊಂಡ ಜನರು ಸಂಪೂರ್ಣವಾಗಿ ನಾಶವಾಗುವುದಕ್ಕೆ ಬಿಡುವವನಲ್ಲ. ಇದೇ ದೇವರ ಸಾರ್ವಭೌಮತೆಯಾಗಿದೆ. ಆತನು ಎಲ್ಲವನ್ನೂ ನಿಯಂತ್ರಣದಲ್ಲಿ ಇಟ್ಟುಕೊಂಡವನಾಗಿದ್ದು ತನ್ನ ಉದ್ದೇಶವನ್ನು ನೆರವೇರಿಸುವವನಾಗಿದ್ದಾನೆ.

   ಹೇಗೇ ಆಗಲಿ ದೇವರು ತನ್ನ ಜನರ ಮೂಲಕ ಕಾರ್ಯಮಾಡಲು ಬಯಸುವವನಾಗಿದ್ದಾನೆ. ದೇವರು ನಮ್ಮ ಜೀವಿತಗಳ ಮೂಲಕ ತನ್ನ ಉದ್ದೇಶವನ್ನು ನೆರವೇರಿಸಲು ಅಪೇಕ್ಷಿಸುತ್ತಾನೆ. ಖಂಡಿತವಾಗಿ ಎಸ್ತೇರಳು ಆತನ ಯೋಜನೆಯಲ್ಲಿ ಭಾಗಿಯಾಗುವ ಒಂದು ಭಾಗ್ಯವನ್ನು ಅನುಭವಿಸುತ್ತಾಳೆ. ಒಂದುವೇಳೆ ಆಕೆ ತನ್ನ ಜನರಿಗೆ ಸಹಾಯಮಾಡುವುದನ್ನು ಆಯ್ಕೆ ಮಾಡಿಕೊಳ್ಳದಿದ್ದರೆ ತನ್ನಲ್ಲಿ ದೇವರ ಯೋಜನೆ ನೆರವೇರದಂತೆ ತಡೆದಂತಾಗುತ್ತಿತ್ತು. ಆದರವಳು ತಾನು ಕಾರ್ಯಮಾಡದೆ ಇರುವುದಕ್ಕೆ ಅದರ ಪರಿಣಾಮವನ್ನು ಎದುರಿಸಬೇಕಾಗಿತ್ತು ಮತ್ತು ತನಗೆ ದೇವರು ಕೊಟ್ಟ ಅವಕಾಶವನ್ನು ಕಳೆದುಕೊಳ್ಳುತ್ತಿದ್ದಳು.

   ಈ ಸಂಬಂಧವನ್ನು ತಿಳಿದುಕೊಳ್ಳಬೇಕಾದ್ದದ್ದು ವಿಶ್ವಾಸಿಗಳಾದ ನಮಗೆ ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ. ದೇವರು ನಮ್ಮ ಜೀವಿತಗಳ ಮೂಲಕ ತನ್ನ ಉದ್ದೇಶವನ್ನು ನೆರವೇರಿಸಲು ಬಯಸುತ್ತಾನೆ. ಆದರೆ ನಾವು ನಮ್ಮ ಆಯ್ಕೆಯನ್ನು ನಿರ್ಧರಿಸಬೇಕು.

ಆತನು ನಮ್ಮನ್ನು ಉಪಯೋಗಿಸುವಂತೆ ಅನುಮತಿಸಿ, ಆ ನಿರ್ಧಾರದ ಆಶೀರ್ವಾದನ್ನು ನಾವು ಅನುಭವಿಸಬಹುದು. ಅಥವಾ ಆತನು ನಮ್ಮನ್ನು ಉಪಯೋಗಿಸುವುದನ್ನು ನಿರಾಕರಿಸಿ ನಮಗಾಗಿನ ಆತನ ಆಶೀರ್ವಾದವನ್ನು ನಾವೇ ಕಳಕೊಳ್ಳಬಹುದು. ಏನೇ ಆದರೂ ನಾವಿದ್ದರೂ ನಾವಿಲ್ಲದಿದ್ದರೂ ದೇವರಂತೂ ತನ್ನ ಯೋಜನೆಯನ್ನು ನೆರವೇರಿಸುತ್ತಾನೆ.

9. ಈ ಅಧ್ಯಾಯದುದ್ದಕ್ಕೂ ಎಸ್ತೇರಳು ತೋರಿಸುವ ಗುಣಸ್ವಭಾವ ಇಂತಿದೆ:

- ಧೈರ್ಯ
- ದೇವರನ್ನು ಆತುಕೊಳ್ಳುವುದು.
- ನೈತಿಕ ಬಲ

ವಚನ 16 ರಲ್ಲಿ ಹೇಗೆ ಎಸ್ತೇರಳು ತನ್ನ ಜನರ ಬೆಂಬಲಕ್ಕಾಗಿ ನಿಲ್ಲುತ್ತಾಳೆ ಮತ್ತು ತೊಂದರೆ/ ಸವಾಲುಗಳನ್ನು ಎದುರಿಸಲು ತಾನು ದೇವರ ಕಡೆಗೆ ತಿರುಗಬೇಕೆಂಬುದನ್ನು ಹೇಗೆ ಮನವರಿಕೆ ಮಾಡಿಕೊಳ್ಳುತ್ತಾನೆಂಬುದನ್ನು ನಾವು ಕಾಣಬಹುದು.

10. –

11. –

12. ಇಂತಹ ಸನ್ನಿವೇಶಗಳಲ್ಲಿ ಸರಿಯಾದುದ್ದನ್ನು ಮಾಡಲು ನಾವು ಎಂತಹ ಗುಣಲಕ್ಷಣಗಳನ್ನು ತೋರಿಸಬೇಕು:

**ಟಿಪ್ಪಣಿಗಳು:** ಈ ಅಧ್ಯಯನದಲ್ಲಿ ಎಸ್ತೇರಳು ತೋರಿಸಿದಂತಹ ಗುಣಲಕ್ಷಣಗಳೇ ನಮಗೂ ಸಹ ಅವಶ್ಯಕವಾಗಿವೆ. ನಿಮಗೆ ಇಂತಹ ಗುಣಗಳಿರಬೇಕು:

- ಜ್ಞಾನ (ವಿವೇಕ)
- ತಾಳ್ಮೆ
- ದೀನತೆ

# ಉತ್ತರಗಳು 5: ಅರಸನ ಬಳಿ ಎಸ್ತೇರಳ ಮನವಿ, ಅಧ್ಯಾಯ 5

## ಉತ್ತರಗಳು

1. ಎಸ್ತೇರಳು ತೆಗೆದುಕೊಳ್ಳುವ ಸವಾಲುಗಳು, ವ. 1–8

   - ಆಕೆಯು ಅರಸನ ಅಪ್ಪಣೆಯಿಲ್ಲದೆ ಆತನ ಬಳಿಗೆ ಹೋಗುತ್ತಾಳೆ. ಒಂದು ವೇಳೆ ರಾಜನು ಕ್ಷಮಿಸದಿದ್ದರೆ (ದಯೆ ತೋರದಿದ್ದರೆ) ಇದು ತಕ್ಷಣವೇ ಆಕೆಯ ಜೀವಕ್ಕೆ ಕಂಟಕವಾಗುತ್ತಿತ್ತು.
   - ಅಲ್ಲದೆ ಆಕೆ ಎರಡುಬಾರಿ ಉತ್ತರ ಕೊಡುವುದರಲ್ಲಿ ತಡಮಾಡುತ್ತಾಳೆ. ಇದು ಆತನ ಕೋಪವನ್ನು ಇನ್ನೂ ಏರಿಸಬಹುದಿತ್ತು.
   - ಒಂದುವೇಳೆ ಆಕೆ ಸತ್ತರೆ, ತನ್ನ ಜನರನ್ನು ದುರವಸ್ಥೆಯಲ್ಲಿ ಬಿಟ್ಟಂತಾಗುತ್ತದೆ. ಆಕೆಗೆ ಆಗದಿದ್ದಲ್ಲಿ ಅವರಿಗೆ ಸಹಾಯ ಮಾಡುವವರಾರು?.

2. ಕಥೆಯ ಈ ಒಂದು ಹಂತದಲ್ಲಿ ಎಸ್ತೇರಳ ಸ್ಥಾನದಲ್ಲಿ ನಿಮ್ಮನ್ನು ಇಟ್ಟುಕೊಳ್ಳಿರಿ. ಆಕೆಯ ಭಾವನೆ ಮತ್ತು ಯೋಜನೆ ಏನಾಗಿದ್ದಿರಬೇಕು?

   **ಟಿಪ್ಪಣಿ:** ಆಕೆ ಭಯಪಟ್ಟಿರಬಹುದು (ಹೇಗೆ?), ದೇವರಲ್ಲಿ ಭರವಸವಿಟ್ಟಿರಬಹುದು (ಯಾಕೆ?), ತನ್ನ ಸ್ವಂತ ಜನರ ಬೆಂಬಲದಲ್ಲಿ ಭರವಸವಿಟ್ಟಿರಬಹುದು (ಯಾಕೆ?), ಕುತೂಹಲ (ಯಾಕೆ?), ಸಂದೇಹ, ಗೊಂದಲ, ನಿರೀಕ್ಷೆ ಅಥವಾ ಈ ಎಲ್ಲಾ ಭಾವನೆ ಮತ್ತು ಆಲೋಚನೆಗಳ ಮಿಶ್ರಣದಿಂದ ಆಕೆಯ ಮನಸ್ಸು ಕೂಡಿದ್ದಿರಬಹುದು.

3. 4:15–16ನ್ನು ತಿರುಗಿ ನೋಡಿರಿ, ಕರೆಯಿಲ್ಲದೆ ಅರಸನ ಬಳಿಗೆ ಹೋಗುವ ಸವಾಲನ್ನು ಎದುರಿಸಲು ಎಸ್ತೇರಳನ್ನು ಬಲಪಡಿಸಿದ್ದು:

   - ಆಕೆಯ ಜನರ ದುರವಸ್ಥೆ
   - ತನ್ನ ಜನರ ಆತ್ಮೀಕ ಬೆಂಬಲ
   - ದೇವರಲ್ಲಿನ ಆಕೆಯ ಭರವಸೆ (ನಂಬಿಕೆ)
   - ತನ್ನ ಜೀವಿತದೊಂದಿಗೆ ದೇವರ ಉದ್ದೇಶವನ್ನು ನೆರವೇರಿಸುವಲ್ಲಿನ ಆಕೆಯ ನಿರ್ಧಾರ

4. ಔತಣಕ್ಕೆ ರಾಜ ಮತ್ತು ಹಾಮಾನನರಿಬ್ಬರೂ ಬರಬೇಕೆಂದೂ ಎಸ್ತೇರಳು ಕೇಳಿಕೊಳ್ಳುತ್ತಾಳೆ. ಇಂತಹ ಮನವಿಗೆ ಕಾರಣವನ್ನು ವಾಕ್ಯಭಾಗದಲ್ಲಿ ತಿಳಿಸಲಾಗಿಲ್ಲ (ವ. 4–8). ಆದರೆ ಆಕೆಯು ಉಪವಾಸವಿದ್ದು ಪ್ರಾರ್ಥಿಸಿದಾಗ ದೇವರು ಆಕೆಯನ್ನು ಬಹುಶಃ ಮಾರ್ಗದರ್ಶಿಸುತ್ತಿದ್ದನು. ತಾಳ್ಮೆಯಿಂದ ಕಾದಿದ್ದು, ಈ ರೀತಿಯಲ್ಲಿ ರಾಜನ ಬಳಿ ಪ್ರಸ್ತಾಪವನ್ನಿಡಬೇಕೆಂದು ದೇವರೇ ಆಕೆಗೆ ಹೇಳಿರಬೇಕು. ಎರಡು ಪ್ರತ್ಯೇಕ ಔತಣಗಳಲ್ಲಿ ಭಾಗಿಯಾಗಬೇಕೆಂದಾಗ, ಆಕೆಯ ಮನವಿಯ ಪ್ರಾಮುಖ್ಯತೆಯೇನೆಂಬುದಾಗಿ ರಾಜನಿಗೆ ಅರಿವಾಗಿರಬೇಕು. ಆಕೆಯ ತಡಮಾಡುವಿಕೆಯು ಹಾಮಾನನು ಗಲ್ಲು ಮರವನ್ನು ಸಿದ್ಧಮಾಡುವ ಮತ್ತು ಪಿತೂರಿಯು ಮೊರ್ದೆಕೈ ಮೂಲಕ ಬಯಲಾದ ಘಟನೆಗಳಿಗೆ ಅನುವುಮಾಡಿಕೊಡುತ್ತದೆ.

   ಎಸ್ತೇರಳು ತಡಮಾಡಲು ಇನ್ನೊಂದು ಪ್ರೇರಣೆಯೆಂದರೆ – ರಾಜಾಲಯಕ್ಕಿಂತ ಔತಣದಲ್ಲಿ ಕಂಡುಬರುವ ವಿಭಿನ್ನವಾದ ವಾತಾವರಣ, ರಾಜಾಲಯದಲ್ಲಿ ಅನೇಕ ಜನರಿರುತ್ತಿದ್ದರು, ಆದರೆ ಔತಣದಲ್ಲಿ ಕಂಡುಬರುವ ಬರೀ ರಾಜ ಮತ್ತು ಹಾಮಾನರಿಬ್ಬರೇ ಇರುತ್ತಿದ್ದರು.

   ಖಂಡಿತವಾಗಿ ಎಸ್ತೇರಳು ತನ್ನ ಸ್ವಂತ ಜನರ ಉಪವಾಸ ಮತ್ತು ಪ್ರಾರ್ಥನೆಯ ಬಗ್ಗೆ ಅರಿವುಳ್ಳವಳಾಗಿದ್ದಳು. ತನ್ನ ಸಮಯವು ದೇವರ ಯೋಜನೆಗನುಗುಣವಾಗಿ ಇರಬೇಕೆಂದು ಆಕೆ ಬಯಸಿರಬಹುದು. ಪ್ರತೀ ಘಟನೆಯ ಸಮಯದಲ್ಲೂ ದೇವರ ಹಸ್ತವು ಹೇಗೆ ಕಾರ್ಯಮಾಡುತ್ತದೆಂಬುದನ್ನು ನಾವು ಕಾಣಬಹುದು.

5. ವಚನ 9–14 ರಲ್ಲಿ ಹಾಮಾನನ ಗುನಸ್ವಭಾವದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯಬಹುದು:

   - ಹಾಮಾನನು ಒಬ್ಬ ಸೊಕ್ಕಿನ ಮನುಷ್ಯನಾಗಿದ್ದನು. ಆತನು ತನ್ನ ಅಧಿಕಾರ ಮತ್ತು ಪ್ರಭಾವದಿಂದ ತನ್ನ ಯೋಗ್ಯತೆಯನ್ನು ಅಳೆಯುವವನಾಗಿದ್ದನು. ಆತನ ಗುರಿಯೇ ಬೇರೆಯವರನ್ನು ನಿಯಂತ್ರಿಸಿ ಗೌರವವನ್ನು ಹೊಂದಿಕೊಳ್ಳುವುದಾಗಿತ್ತು. ಆತನು ಕೋಪ, ಕಹಿತನ, ಮತ್ತು ಗರ್ವದಿಂದ ಬಂಧಿಸಲ್ಪಟ್ಟಿದ್ದನು. ಅಲ್ಲದೆ ಆತನು ಕೊಚ್ಚಿಕೊಳ್ಳುವವನಾಗಿದ್ದು ಸೇಡಿನ ಮನೋಭಾವದವನಾಗಿದ್ದನು.

6. ನೀವು ಒಬ್ಬ ದಿನಪತ್ರಿಕೆಯ ವರದಿಗಾರರಾಗಿದ್ದರೆ ಈ ಹಂತದಲ್ಲಿ ಹಾಮಾನನಿಗೆ ಯಾವ ಪ್ರಶ್ನೆಯನ್ನು ಕೇಳುತ್ತಿದ್ದೀರಿ? ಮತ್ತು ಹಾಮಾನನು ಹೇಗೆ ಉತ್ತರಿಸುತ್ತಿರಬಹುದು?

**ಟಿಪ್ಪಣಿ:** ಹಾಮಾನನಿಗೆ ನಾನು ಕೇಳಬಯಸುವ ಕೆಲ ಪ್ರಶ್ನೆಗಳು ಇಂತಿವೆ:

- **ಪ್ರಶ್ನೆ:** ಯಾಕೆ ನೀನು ಮೊರ್ದೆಕೈಯೊಂದಿಗೆ ಮುನಿಸಿಕೊಂಡಿರುವೆ?

  **ಹಾಮಾನ:** ಆತನು ನಿಜವಾಗಲೂ ಒಬ್ಬ ಸೊಕ್ಕಿನ ಮನುಷ್ಯ. ಆತನು ಯಾವಾಗಲೂ ಸಲ್ಲತಕ್ಕ ಮರ್ಯಾದೆಯನ್ನು ಸಲ್ಲಿಸುವುದಿಲ್ಲ.

- **ಪ್ರಶ್ನೆ:** ಅರಸನ ಆಸ್ಥಾನದಲ್ಲಿ ನೀನು ಮತ್ತು ಮೊರ್ದೆಕೈ ಅಧಿಕಾರಕ್ಕಾಗಿ ಕಾದಾಡುತ್ತಿರುವುದು ನಿಜವಾ?

  **ಹಾಮಾನ:** ಖಂಡಿತವಾಗಿಯೂ ಹಾಗೇನಿಲ್ಲ, ಅದರ ಅವಶ್ಯಕತೆಯೇ ಇಲ್ಲ. ಸಾಮ್ರಾಜ್ಯದಲ್ಲಿ ನಾನು ಶ್ರೇಷ್ಠಸ್ಥಾನದಲ್ಲಿದ್ದೇನೆ ಮತ್ತು ರಾಜನು ಯಾವಾಗಲೂ ನನ್ನ ಸಲಹೆಗೆ ಕಿವಿಗೊಡುತ್ತಾನೆ. ಆದರೆ ಮೊರ್ದೆಕೈ ಏನೂ ಅಲ್ಲದವನಾಗಿದ್ದಾನೆ.

- **ಪ್ರಶ್ನೆ:** ನೀನು ಕೇವಲ ನಿನ್ನ ಪ್ರಭಾವವನ್ನು ಉಪಯೋಗಿಸಿದ್ದಲ್ಲದೆ ಈ ಒಂದು ವಿವಾಧಾತ್ಮಕ ಶಾಸನ (ರಾಜಾಜ್ಞೆ) ಕೈಗೂಡಲು ನೀನು ಲಂಚವನ್ನು ಕೊಟ್ಟಿರುವೆಯೆಂಬ ವದಂತಿ ನಿಜವಾ?

  **ಹಾಮಾನ:** ನಿಜವಾಗಲೂ ಇಲ್ಲ. ನಾನು ಯಾರಿಗೂ ಲಂಚ ಕೊಟ್ಟವನಲ್ಲ. ನನ್ನ ಬಗ್ಗೆ ಇಂತಹ ಅನಾವಶ್ಯಕ ಪದ್ಧತಿಗಳಿಗೆ ಯಾಕೆ ಕಿವಿಗೊಡುವಿರಿ?

- **ಪ್ರಶ್ನೆ:** ರಾಜನು ತಾನೆಂದೂ ಓದದೇ ಇರುವ ಶಾಸನದಲ್ಲಿರುವ ವಿಷಯಾಂಶಗಳ ಬಗ್ಗೆ ಅರಿವಿಲ್ಲದವನಾಗಿದ್ದಾನೆ ಮತ್ತು ಮುದ್ರೆಯುಂಗುರವನ್ನು ಉಪಯೋಗಿಸಲು ನಿನಗೆ ಕೊಟ್ಟಿದ್ದಾನಷ್ಟೆ ಎಂಬ ವದಂತಿಯಿದೆ. ಈ ವದಂತಿಯನ್ನು ನೀನು ನಿರಾಕರಿಸುವಿಯಾ?

  **ಹಾಮಾನ:** ಖಂಡಿತವಾಗಿ ನಿರಾಕರಿಸುವೆ. ವೈಯಕ್ತಿಕವಾಗಿ ನಾನು ಶಾಸನದ ಬಗ್ಗೆ ರಾಜನಿಗೆ ತಿಳಿಸಿರುವೆ. ಅಲ್ಲದೆ ಆತನೇ ಅದರ ಮೇಲೆ ಮುದ್ರೆಯುಂಗುರವನ್ನಿಟ್ಟಿದ್ದಾನೆ. ಆ ಉಂಗುರ ಯಾವಾಗಲೂ ಆತನ ಕೈಯಲ್ಲೇ ಇರುತ್ತಿತ್ತು.

- **ಪ್ರಶ್ನೆ:** ಶಾಸನವು ತೀರಾ ಕಠಿಣವಾದುದ್ದೆನಿಸುವುದಿಲ್ಲವ? ಸಂಸ್ಥಾನದಿಂದಲೇ ಯೆಹೂದಿ ಸಂಕುಲವನ್ನು ಸಂಪೂರ್ಣವಾಗಿ ನಾಶಗೊಳಿಸಲು ಏನಾದರೂ ಕಾರಣವಿದೆಯಾ? ನಮಗೆ ತಿಳಿದ ಪ್ರಕಾರ ಯೆಹೂದ್ಯರೆಂದೂ ಸಮಸ್ಯೆ ಮಾಡುವವರಲ್ಲ. ಮೊರ್ದೆಕೈಯೊಬ್ಬನೆ ಶಿಕ್ಷಿಸಲ್ಪಟ್ಟರೆ ಸಾಲದ?

  **ಹಾಮಾನ:** ಇಲ್ಲ ಇಲ್ಲ, ಅಷ್ಟು ಸಾಲದು! ಎಲ್ಲಾ ಯೆಹೂದ್ಯರು ಭೂಮಿ ಮೇಲಿಂದಲೇ ಅಳಿಸಲ್ಪಡಬೇಕು. ಅವರು ತೀರಾ ಕೆಟ್ಟವರು ಪುರಾತನ ಕಾಲದಿಂದಲೂ ಅವರು ಅಮಾಲೇಕ್ಯರೊಂದಿಗೂ ಇತರ ರಾಷ್ಟ್ರಗಳೊಂದಿಗೂ ಹೋರಾಡುತ್ತಲೇ ಬಂದಿದ್ದಾರೆ. ಅಗಾಗ್ಯನಾದ ನನ್ನ ಬಳಿ ಎಲ್ಲಾ ಐತಿಹಾಸಿಕ ದಾಖಲೆಗಳಿವೆ

7. ಈ ಅಧ್ಯಾಯದಲ್ಲಿ ಎಸ್ತೇರಳ ಮತ್ತು ಹಾಮಾನರ ಗುಣಗಳು ಈ ರೀತಿಯಾಗಿ ತದ್ವಿರುದ್ಧವಾಗಿವೆ:

ಈ ಪ್ರಶ್ನೆಯು ಸರಿಯಾದುದ್ದನ್ನು ಮಾಡಬೇಕೆಂಬುದರ ಕುರಿತಾದ ಪ್ರಶ್ನೆಯಾಗಿದೆ. ಎಸ್ತೇರಳಲ್ಲಿ ಧೈರ್ಯ ಮತ್ತು ದೀನತೆಯಿತ್ತು. ಅಲ್ಲದೆ ಆಕೆ ಸರಿಯಾದ ರೀತಿಯಲ್ಲೇ ಕಾರ್ಯಮಾಡುತ್ತಿದ್ದಳು. ದೇವರು ಮತ್ತು ತನ್ನ ಜನರಿಗಾಗಿ ಆಕೆ ಸವಾಲು ತೆಗೆದುಕೊಳ್ಳಲು ಸಿದ್ಧಳಿದ್ದಳು. ಹಾಮಾನನಾದರೋ ಯಾವಾಗಲೂ ದುಷ್ಟತನವನ್ನೇ ಮಾಡುವವನಾಗಿದ್ದ. ಸ್ವ–ಹಿತಾಸಕ್ತಿಯನ್ನೇ ಅಪೇಕ್ಷಿಸುವವನಾಗಿದ್ದನು. ಕಥೆಯುದ್ದಕ್ಕೂ ಆತನು ಮಾಡಬಾರದ್ದನ್ನೆ ಮಾಡುತ್ತಾನೆ.

8. ಪ್ರಸ್ತುತ ನೀವು ಹೋಗುತ್ತಿರುವ ಹೋರಾಟದ ಮಧ್ಯದಲ್ಲಿ ಇತರ ವಿಶ್ವಾಸಿಯೊಬ್ಬರ ಬೆಂಬಲವು (ಪ್ರೋತ್ಸಾಹ) ಹೇಗೆ ಸಹಾಯಕವಾಗಬಲ್ಲದು?

**ಟಿಪ್ಪಣಿ:** ಕೆಲ ಸಲಹೆಗಳು (ಸೂಚನೆ) ಇಂತಿವೆ:

- ಈ ಕಥೆಯಲ್ಲಿ ಎಸ್ತೇರಳಿಗೆ ಉಪವಾಸವೇ ಒಂದು ದೊಡ್ಡ ಪ್ರೋತ್ಸಾಹವೆಂಬುದಾಗಿ ಕಾಣುತ್ತೇವೆ. ಇದು ಖಂಡಿತವಾಗಿ ಪ್ರಾರ್ಥನೆಯೊಂದಿಗೆ ಮಾಡಿದ್ದಾಗಿರಬಹುದು.
- ನೈತಿಕ ಬಲ, ಆದರಣೆ ಮತ್ತು ಪ್ರೋತ್ಸಾಹದ ಮಾತುಗಳು.
- ಆಪ್ತಸಮಾಲೋಚನೆ, ವಿಶೇಷವಾಗಿ ನೀವು ಏನೂ ಮಾಡಬೇಕೆಂದು ಗಲಿಬಿಲಿಗೊಂಡಾಗ.
- ಶಾರೀರಿಕ ಉಪಸ್ಥಿತಿ: ಜನರು ನಿನ್ನೊಂದಿಗಿರುವುದು, ನಿನ್ನ ಜೊತೆಯಾಗಿರುವುದು.

9. ಸಹಾಯ ಮತ್ತು ಬೆಂಬಲವನ್ನು ಕೇಳುವ ಸಮಯದಲ್ಲಿ ಕ್ಲಿಷ್ಟಕರವಾಗುವಂತೆ ಮಾಡುವಂಥದ್ದು, ಕೆಲ ಆಲೋಚನೆಗಳು ಇಂತಿವೆ:

- ಸಹಾಯವನ್ನು ಕೇಳಲು ನೀವು ಮುಜುಗರ ಪಡಬಹುದೇ
- ನೀವು ನಿಮ್ಮನ್ನು ಮತ್ತು ನಿಮ್ಮ ಬಲಹೀನತೆಗಳನ್ನು ತೋರಿಸಿಕೊಡಲು ಇಷ್ಟಪಡದೆ ಇರುವುದು.
- ನೀವು ಗರ್ವಿಷ್ಠರಾಗಿರುವುದು.
- ನಾನು ಮಾಡಬಲ್ಲೆ ಎಂಬುದನ್ನು ನೀವು ಸಾಧಿಸಲು ಪ್ರಯತ್ನಿಸುವುದು

10. –

11. –

12. ಹಾಮಾನನಿಗೆ ಸಂಪತ್ತು, ಘನತೆ ಮಕ್ಕಳು ಮತ್ತು ಗುರುತು ಇದ್ದರೂ ಸಹ ಮೊರ್ದೆಕೈಯನ್ನು ಪೀಡಿಸುತ್ತಿದ್ದನು. ಮೊರ್ದೆಕೈಯೆಡೆಗಿನ ಆತನ ಭಾವನೆಗಳು ತನ್ನ ಜೀವನದಲ್ಲಿದ್ದ ಒಳ್ಳೆಯ ಸಂಗತಿಗಳನ್ನು ಸಹ ಹಾಳಾಗುವಂತೆ ಮಾಡಿತು. ಹಾಮಾನನ ಪೀಡಿಸುವಿಕೆಯ ಈ ದಿನ ನಮಗೇನನ್ನು ಕಲಿಸಬಲ್ಲದು?

**ಟಿಪ್ಪಣಿ:** ನಾವು ಹಾಮಾನನಂತೆ ಆಗಬಾರದು.

- ಆತನು ಅಧಿಕಾರದಾಹಿಯಾಗಿದ್ದನು.
- ಈತನು ಹೆಚ್ಚು ಅಧಿಕಾರವನ್ನು ಪಡಕೊಳ್ಳುವುದಕ್ಕಾಗಿ ಅನ್ಯಾಯದ ಮಾರ್ಗಗಳನ್ನು ಸಹ ಬಳಸಲು ಸಿದ್ಧನಿದ್ದನು (ಕುಯುಕ್ತಿ, ಲಂಚ, ಒಳಸಂಚು, ಸುಳ್ಳು).
- ತನಗಿರುವುದರಲ್ಲಿ ಆತನು ಸಂತೃಪ್ತನಾಗಿರಲಿಲ್ಲ. ಆತನಿಗೆ ಇನ್ನೂ ಹೆಚ್ಚೂ ಬೇಕಾಗಿತ್ತು.
- ಆತನು ಗರ್ವಿಷ್ಠನು, ಕೊಚ್ಚಿಕೊಳ್ಳುವವನು, ಸೇಡು ತೀರಿಸಿಕೊಳ್ಳುವವನು ಆಗಿದ್ದು ಸ್ವಾರ್ಥದಿಂದ ತುಂಬಿದವನಾಗಿದ್ದನು. ಹಾಗಾಗಿ ನಾವು ಆತನಂತೆ ಆಗದಂತೆ ಎಚ್ಚರಿಕೆವಹಿಸಬೇಕು. ಸ್ವಾರ್ಥದಿಂದ ಕೂಡಿದ ಆಸೆ ಮತ್ತು ತೃಪ್ತರಾಗದೆ ಇರುವುದು ಅತೀ ಅಪಾಯಕಾರಿಯಾದದ್ದಾಗಿದೆ. ಇದು ನಮ್ಮನ್ನು ಅಪ್ರಾಮಣಿಕರಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಮತ್ತು ಇದು ನಮ್ಮ ಜೀವಿತವನ್ನು ಕಹಿಯಾಗಿ ಮಾಡುತ್ತದೆ.

13. –

# ಉತ್ತರಗಳು 6: ಮೊರ್ದೆಕೈ ಸನ್ಮಾನಿಸಲ್ಪಟ್ಟಿದ್ದು, ಅಧ್ಯಾಯ 6

## ಉತ್ತರಗಳು

1. ಎಸ್ತೇರಳ ಪುಸ್ತಕವು ತನ್ನ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ದೇವರು ಪರಿಸ್ಥಿತಿಗಳ ಮೂಲಕ ಕಾರ್ಯಮಾಡುವ ಉದಾಹರಣೆಗಳಿಂದ ತುಂಬಿಕೊಂಡಿದೆ. ಈ ಅಧ್ಯಾಯವು ಕಾಕತಾಳೀಯವೆಂಬಂತೆ ತೋರುವ ಅನೇಕ ಘಟನೆಗಳನ್ನು ಒಳಗೊಂಡಿದ್ದು, ಇದು ದೇವರು ಎಲ್ಲವುಗಳನ್ನು ನಿಯಂತ್ರಿಸಬಲ್ಲವವನಾಗಿದ್ದು, ಎಲ್ಲವನ್ನು ನಮ್ಮ ಒಳ್ಳೇಯದಕ್ಕಾಗಿ ಮಾಡುತ್ತಾನೆಂಬುದನ್ನು ತೋರಿಸುತ್ತದೆ:

   - ಅರಸನಿಗೆ ಆ ರಾತ್ರಿಯಲ್ಲಿ ನಿದ್ರೆ ಬರುವುದಿಲ್ಲ.
   - ಅಲ್ಲದೆ ಐದು ವರ್ಷದ ಹಿಂದೆ ಮೊರ್ದೆಕೈಯ ಒಳ್ಳೆಯ ಕಾರ್ಯವು ದಾಖಲಿಸಲ್ಪಟ್ಟ ಪೂರ್ವಕಾಲಗಳ ವೃತ್ತಾಂತವನ್ನು ತರಿಸಿಕೊಂಡು ಪಾರಾಯಣ ಮಾಡಿಸುತ್ತಾನೆ.
   - ರಾಜನು ಮೊರ್ದೆಕೈಯನ್ನು ಸನ್ಮಾನಿಸಬೇಕೆಂದಿರುವಾಗ ಹಾಮಾನನು ಪ್ರಾಕಾರದಲ್ಲಿರುತ್ತಾನೆ.
   - ಕೊನೆಗೆ ಹಾಮಾನನು ಮೊರ್ದೆಕೈಯನ್ನೇ ಸನ್ಮಾನಿಸಬೇಕಾಗುತ್ತದೆ (ಅವನನ್ನು ಗಲ್ಲಿಗೇರಿಸುವುದರ ಬದಲು). ದೇವರು ತನ್ನನ್ನು ಮಹಿಮೆಪಡಿಸಿಕೊಳ್ಳಲು ಮತ್ತು ತನ್ನ ಯೋಜನೆಗಳಿಗಾಗಿ ಪ್ರಾಮುಖ್ಯವಿಲ್ಲದವರನ್ನು ಉಪಯೋಗಿಸುತ್ತಾನೆ. ಇದು ಈ ಪುಸ್ತಕದಲ್ಲಿನ ಒಂದು ಮುಖ್ಯವಾದ ವಿಷಯವಸ್ತುವಾಗಿದೆ. ಅಲ್ಲದೆ ಇದನ್ನು ನಾವು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಕಾಣಬಹುದು.

2. ಒಳಸಂಚು ಮಾಡಿದ ಸಂಗತಿಯನ್ನು ಬೈಲಿಗೆ ತರುವಲ್ಲಿ ಮೊರ್ದೆಕೈ ಪಾತ್ರವೇನೆಂಬುದಾಗಿ ತಿಳಿದಾಗ ರಾಜನು ಈ ರೀತಿ ಪ್ರತಿಕ್ರಯಿಸುತ್ತಾನೆ (ವ. 2–6).

   ಮೊದಲನೇಯದಾಗಿ ಐದು ವರ್ಷಗಳ ಹಿಂದೆ ಮಾಡಿದ ಒಳ್ಳೇ ಕಾರ್ಯಕ್ಕಾಗಿ ಮೊರ್ದೆಕೈ ಹೇಗೆ ಸನ್ಮಾನಿಸಲ್ಪಟ್ಟಿದ್ದಾನೆಂಬುದನ್ನು ಆತನು ತಿಳಿದುಕೊಳ್ಳುತ್ತಾನೆ. ಈವರೆಗೂ ಮೊರ್ದೆಕೈಗೆ ಯಾವುದೇ ಸ್ಥಾನಮಾನಗಳು ದೊರೆತಿಲ್ಲವೆಂದು ಆತನು ತಿಳಿದುಕೊಳ್ಳುತ್ತಾನೆ. ಅನಂತರ ಆತನು ಹಾಮಾನನ ಬಳಿ ಅರಸನು ಸನ್ಮಾನಿಸಲು ಇಷ್ಟಪಡುವ ವ್ಯಕ್ತಿಗೆ ಮಾಡತಕ್ಕದ್ದೇನು ಎಂಬುದಾಗಿ ಕೇಳುತ್ತಾನೆ.

3. ಆ ನಿರ್ಧಿಷ್ಟವಾದ ರಾತ್ರಿಯಲ್ಲಿ ರಾಜನಾದ ಅಹಷ್ವೇರೋಷ ಮತ್ತು ಹಾಮಾನನ ಕ್ರಮ (ಕ್ರಿಯೆ)ಗಳಲ್ಲಿ ಈ ರೀತಿಯಲ್ಲಿ ವ್ಯಂಗವನ್ನು ಕಾಣಬಹುದು (ವ. 1–6 ಮತ್ತು 5:14):

   ಎಸ್ತೇರ್ ಪುಸ್ತಕದ ನಿರ್ಮಾಣವು ಅದ್ಭುತಕರವಾಗಿದೆ. ಇದರಲ್ಲಿ ಗ್ರಂಥಕರ್ತನು ಪುನಾರಾವರ್ತನೆ, ವ್ಯಂಗ್ಯ, ತದ್ವಿರುದ್ಧತೆ ಮತ್ತು ಹಾಸ್ಯವನ್ನೆಲ್ಲಾ ಉಪಯೋಗಿಸುತ್ತಾನೆ. ಹಾಗಾಗಿ ರಾಜ ಮತ್ತು ಹಾಮಾನ ಹಾಗೂ ಅವರ ಕ್ರಿಯೆಗಳು ತದ್ವಿರುದ್ಧವಾಗಿರುವಾಗ ಇಲ್ಲಿ ನಾವು ವ್ಯಂಗ್ಯವನ್ನು ಕಾಣಬಹುದು:

   - ಒಳ್ಳೆಯ ಕಾರ್ಯವನ್ನು ಮಾಡಿ, ಅನೇಕ ವರ್ಷಗಳಿಂದ ಯಾವುದೇ ಸ್ಥಾನಮಾನವಿಲ್ಲದೆ ಇರುವವನನ್ನು ಹೇಗೆ ಸನ್ಮಾನಿಸಬೇಕೆಂಬ ಯೋಚನೆಯಲ್ಲಿಯೇ ರಾಜನು ಮುಳುಗಿರುತ್ತಾನೆ. ಆತನ ಉದ್ದೇಶ ಗೌರವಿಸುವುದು.
   - ಹಾಮಾನನ ಉದ್ದೇಶಗಳೆಲ್ಲವೂ ಹಾಳುಮಾಡುವಂಥವುಗಳಾಗಿವೆ. ಆತನು ಮೊರ್ದೆಕೈಯನ್ನು ಗಲ್ಲಿಗೇರಿಸುವುದಕ್ಕಾಗಿ ರಾತ್ರಿಯೆಲ್ಲಾ ಎಚ್ಚರವಿದ್ದು ಗಲ್ಲು ಮರವನ್ನು ಸಿದ್ಧಪಡಿಸುತ್ತಾನೆ. ಆತನ ಉದ್ದೇಶಗಳು ಹಾಳುಮಾಡುವುದು.
   - ಇಲ್ಲಿ ಇಬ್ಬರು ವ್ಯಕ್ತಿಗಳು ಮೊರ್ದೆಕೈ ಬಗ್ಗೆ ಯೋಚಿಸುತ್ತಿರುವುದು ವ್ಯಂಗ್ಯವಾಗಿದೆ.
   - ಇನ್ನೂ ವ್ಯಂಗ್ಯವೆಂದರೆ ಮೊರ್ದೆಕೈಯನ್ನು ಗಲ್ಲಿಗೇರಿಸುವಾಗ ವಿಚಾರವನ್ನು ರಾಜನ ಬಳಿ ಪ್ರಸ್ತಾಪಿಸುವುದಕ್ಕಾಗಿ ಹಾಮಾನನು ಪ್ರಾಕಾರವನ್ನು ದಾಟುತ್ತಾನೆ. ಆದರೆ ತಾನು ಮುಂದೆ ತನ್ನ ಎದುರಾಳಿಯನ್ನೇ ಇಡೀ ಪಟ್ಟಣದೆದುರು ಸನ್ಮಾನಿಸಬೇಕೆಂಬ ಯೋಚನೆ ಆತನಿಗಿರುವುದಿಲ್ಲ.

4. ವಚನ 6 ರಲ್ಲಿ ಅರಸನಾದ ಅಹಷ್ವೇರೋಷನಿಂದ ಮತ್ತು 3:8 ರಲ್ಲಿ ಹಾಮಾನನಿಂದ ಕೊಡಲ್ಪಟ್ಟ ಮಾಹಿತಿಯ ಸಂದಿಗ್ಧತೆಯಲ್ಲಿ ವ್ಯಂಗ್ಯವನ್ನು ಕಾಣಬಹುದಾಗಿದೆ.

   ತನ್ನ ಮನಸ್ಸಿನಲ್ಲಿರುವುದು ಯೆಹೂದ್ಯರೆಂಬ ಒಂದು ಪ್ರತ್ಯೇಕ ಜನಾಂಗ ಎಂಬುದನ್ನು ರಾಜನ ಬಳಿ ಬಹಿರಂಗಪಡಿಸದೆ ಇರುವಾಗ 3:8 ರಲ್ಲಿ ಹಾಮಾನನು ಸಂದಿಗ್ಧ (ಖಚಿತತೆ ಇಲ್ಲದ) ಸ್ಥಿತಿಯಲ್ಲಿರುತ್ತಾನೆ. ಖಚಿತತೆಯಿಲ್ಲದಿರುವುದರಿಂದ ಆತನು ದುರುದ್ದೇಶವನ್ನು ಸಾಧಿಸಿದಂತಾಗುತ್ತದೆ. 6:6 ರಲ್ಲಿ ರಾಜನು "ತಾನು ಯಾರನ್ನು ಸನ್ಮಾನಿಸಲು ಇಷ್ಟವುಳ್ಳವನಾಗಿರುತ್ತಾನೋ" ಎಂಬ ಹೇಳಿಕೆಯಿಂದ

ಯಾರನ್ನು ಸೂಚಿಸುತ್ತಿರುವುನೆಂಬುದರ ಬಗ್ಗೆ ಖಚಿತತೆಯಿಲ್ಲದವನಾಗಿರುತ್ತಾನೆ. ಆ ಮನುಷ್ಯನು ತಾನೇ ಎಂದು ಹಾಮಾನನು ತಪ್ಪಾಗಿ ತೀರ್ಮಾನಿಸುತ್ತಾನೆ. ಆದರೆ ರಾಜನು ಹಾಮಾನನ ವೈರಿಯಾದ ಮೊರ್ದೆಕೈಯನ್ನು ಸೂಚಿಸಿ ಹೇಳುತ್ತಾನೆ.

5. ವಚನ 7–9 ರಲ್ಲಿ ಅರಸನ ಪ್ರಶ್ನೆಗೆ ಹಾಮಾನನು ತೋರುವ ಪ್ರತಿಕ್ರಿಯೆಯ ಮೂಲಕ ಅಗತ ಗುಣಸ್ವಭಾವದ ಬಗ್ಗೆ ಎರಡು ಸಂಗತಿಗಳನ್ನು ಕಲಿಯಬಹುದು:

- ಆತನೊಬ್ಬ ದುರಹಂಕಾರಿಯಾಗಿದ್ದಾನೆ, ಹಾಗಾಗಿ ಆತನು ಕೂಡಲೇ "ಅರಸನು ನನ್ನನಲ್ಲದೆ ಇನ್ನಾರನ್ನು ಸನ್ಮಾನಿಸಲು ಇಷ್ಟವುಳ್ಳವನಾಗಿರುವನು" ಎಂಬುದಾಗಿ ತನ್ನ ಬಗ್ಗೆಯೇ ಯೋಚಿಸಿತ್ತಾನೆ.
- ಈತನು ಘನತೆ ಮತ್ತು ಗುರುತಿಸಿಕೊಳ್ಳುವುದಕ್ಕಾಗಿ ಹಾತೊರೆಯುವವನಾಗಿದ್ದಾನೆ.

6. ಐತಿಹಾಸಿಕ ದಿನದ ಘಟನೆಗಳ ಸಂದರ್ಭದಲ್ಲಿ ರಾಜನಾದ ಅಹಷ್ವೇರೋಷ, ಮೊರ್ದೆಕೈ ಮತ್ತು ಹಾಮಾನರು ಈ ರೀತಿಯಾಗಿ ಭಾವಿಸುತ್ತಾರೆ:

- **ರಾಜನಾದ ಅಹಷ್ವೇರೋಷ:** ಏನಾಗುತ್ತಿದೆ, ಯಾರನ್ನು ನಂಬಬೇಕು ಎಂಬುದಾಗಿದೆ ಈತನು ದಿನವೆಲ್ಲಾ ಯೋಚಿಸುತ್ತಿದ್ದಿರಬೇಕು.
- **ಯೆಹೂದ್ಯನಾದ ಮೊರ್ದೆಕೈ:** ಈತನು ಯೆಹೂದ್ಯರ ಪರಿಸ್ಥಿತಿ ಮತ್ತು ಎಸ್ತೇರಳಿಗಾಗಿ ಪ್ರಾರ್ಥಿಸುವುದರೊಂದಿಗೆ ದಿನವನ್ನು ಪ್ರಾರಂಭಿಸಿರಬೇಕು. ಎಸ್ತೇರಳ ಪ್ರಕ್ರಿಯೆಯ ಪ್ರಗತಿಯ ಬಗ್ಗೆ ಚಿಂತಿತನಾಗಿರುತ್ತಾನೆ. ಮತ್ತು ದಿನದ ಕೊನೆಯಲ್ಲಿ ಈತನು ಅದ್ಭುತವಾದ ರೀತಿಯಲ್ಲಿ ತನ್ನ ಜೀವವು ರಕ್ಷಿಸಲ್ಪಡುವುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ಅಲ್ಲದೆ ಎಣಿಸದ ರೀತಿಯಲ್ಲಿ ರಾಜನಿಂದ ಸನ್ಮಾನಿಸಲ್ಪಟ್ಟಿದ್ದಕ್ಕಾಗಿ ಆತನು ಸಂತೋಷವುಳ್ಳವನಾಗಿರುತ್ತಾನೆ.
- **ಅಗಾಗ್ಯನಾದ ಹಾಮಾನ:** ಮೊರ್ದೆಕೈ ಮೇಲಿನ ತನ್ನ ಸೇಡಿನ ಕಾರ್ಯವು ನೆರವೇರುತ್ತೆಂಬುದಾಗಿ ಮುಂಜಾನೆಯಲ್ಲಿ ಈತನು ಸಂತೋಷವುಳ್ಳವನಾಗಿರಬಹುದು. ಅನಂತರ ಸನ್ಮಾನಿಸುವುದರ ಕುರಿತಾಗಿ ಅರಸನು ಈತನ ಬಳಿ ಪ್ರಶ್ನಿಸಿದಾಗ ಈತನು ಹೆಮ್ಮೆಪಟ್ಟು ರಾಜನಿಂದ ವಿಶೇಷವಾದ ರೀತಿಯಲ್ಲಿ ಸನ್ಮಾನಿಸಲ್ಪಡುತ್ತೇನೆಂಬುದಾಗಿ ಮಹತ್ವಕಾಂಕ್ಷೆಯಿಂದ ತುಂಬಿದವನಾಗಿರಬಹುದು. ಆ ಮೇಲೆ ಈತನಿಗೆ ಮೊರ್ದೆಕೈಯನ್ನು ಸನ್ಮಾನಿಸಬೇಕೆಂಬುದಾಗಿ ಒತ್ತಾಯಿಸಿದಾಗ ತೀರಾ ನಾಚಿಕೆ, ಸೋಲು, ಕೋಪ ಮತ್ತು ಕಹಿತನ ಭಾವನೆಯಿಂದ ತುಂಬಿದವನಾಗಿರುತ್ತಾನೆ.

7. ಮೊರ್ದೆಕೈಯೊಂದಿಗೆ ಪಟ್ಟಣವನ್ನೆಲ್ಲಾ ಸವಾರಿ ಮಾಡಿದ ನಂತರ ಹಾಮಾನನು ತನ್ನ ಪತ್ನಿ ಮತ್ತು ಸ್ನೇಹಿತರಿಂದ ಆದರಣೆಯನ್ನು ಬಯಸುತ್ತಾನೆ. ಆದರೆ ಈಬಾರಿ ಆತನಿಗೆ ವಿಭಿನ್ನವಾದ ಪ್ರತಿಕ್ರಿಯೆ ಅವರಿಂದ ಬರುತ್ತದೆ (ಹೋಲಿಸಿ 5:14). ಹಾಮಾನನ ಪ್ರಶ್ನೆ ಮತ್ತು ಸ್ನೇಹಿತರ ಪ್ರತಿಕ್ರಿಯೆಯು ಅವರು ಈ ಪರಿಸ್ಥಿತಿಯನ್ನು ಹೇಗೆ ವ್ಯಾಖ್ಯಾನಿಸಿದರು ಮತ್ತು ಈ ಸಮಯದಲ್ಲಿ ಅವರು ಆತನಿಗೆ ಹೇಗೆ ಪ್ರತಿಕ್ರಯಿಸಿದರೆಂಬುದಕ್ಕೆ ಕೆಲವು ಕುತೂಹಲಕಾರಿ ಒಳನೋಟಗಳನ್ನು ಮುಂದಿಡುತ್ತದೆ:

   ಅವರು ಹಾಮಾನನ ಪತನವನ್ನು ಒಪ್ಪಿಕೊಳ್ಳುತ್ತಾರೆ. ಬಹುಶಃ ಯೆಹೂದ್ಯರ ದೇವರ ಶಕ್ತಿಯೇನೆಂಬುದಾಗಿ ಮನಗಂಡಿರಬಹುದು ಆಥವಾ ಅವರು ಯೆಹೂದಿ ಜನರ ಸಹನೆಯನ್ನು ಗುರುತಿಸಿರಬಹುದು ಅಥವಾ ಅಮಾಲೇಕ್ಯರ ಮೇಲೆ ಯೆಹೂದ್ಯರು ಸಂಪೂರ್ಣ ವಿಜಯ ಸಾಧಿಸುವುದನ್ನು ಅರಿತಿರಬೇಕು. ಕಾರಣವೇನೇ ಇರಬಹುದು ಹಾಮಾನನ ಪರಿಸ್ಥಿತಿಯ ಬಗ್ಗೆ ಅವರು ಒಂದು ಶೋಚನಿಯವಾದ ಚಿತ್ರಣವನ್ನು ಕೊಡುತ್ತಾರೆ.

8. ಈಗ ಹಾಮಾನನ ಪತ್ನಿ ಮತ್ತು ಸ್ನೇಹಿತರು ಹಾಮಾನನಿಂದ ದೂರವಿರುವವರಂತೆ ಕಾಣುತ್ತಾರೆ. ಆತನನ್ನು ಅವರು ಬಹಿಷ್ಕರಿಸುತ್ತಾರೆ. ಮೊದಲು ಅವರು ಆತನಿಗೆ ಗಲ್ಲು ಮರವನ್ನು ಸಿದ್ಧಪಡಿಸಲು ಸಲಹೆ ಕೊಡುತ್ತಾರೆ. ಆದರೆ ಈಗ ಆಗುತ್ತಿರುವ ಪರಿಸ್ಥಿತಿಗೆ ಹಾಮಾನನ್ನೆ ಜವಬ್ದಾರನನ್ನಾಗಿಸುತ್ತಾರೆ. ಈಗ ಆತನೊಬ್ಬನೆ ಬಾಧೆ ಪಡಬೇಕಿದೆ. ಅವರು ಆತನೊಂದಿಗೆ ಮಾತನಾಡುವ ರೀತಿಯೇ ಆತನನ್ನವರು ಬಹಿಷ್ಕರಿಸಿ ಏಕಾಂಗಿಯಾಗಿಸಿದಂತೆ ತೋರುತ್ತದೆ. ಅವರು "ನಿನ್ನ" ಅಥವಾ "ನೀನು" ಎಂಬುದಾಗಿ ಹೇಳುತ್ತಾರೆ. ಆತನ ದುಸ್ಥಿತಿ ಮತ್ತು ಪತನದಲ್ಲಿ ಅವರು ಭಾಗಿಯಾಗುವುದೇ ಇಲ್ಲ.

9. ಹಾಮಾನನ ಜೀವಿತವು ಲೂಕ 14:11 ರಲ್ಲಿ ಯೇಸು ಕ್ರಿಸ್ತನು ಕೊಟ್ಟ ಉದಾಹರಣೆಯಂತೆ ಇದೆ:

   ಹಾಮಾನನ ಗರ್ವ ಮತ್ತು ಗುರುತಿಸುವಿಕೆಗಾಗಿನ ಆಶೆಯು ಆತನಿಗೇ ವಿರುದ್ಧವಾಗಿ ನಿಂತು ಆತನನ್ನು ಅವಮಾನಕರ ಸ್ಥಿತಿಯಲ್ಲಿಡುತ್ತದೆ. ಅರಮನೆಯ ಹೆಬ್ಬಾಗಿಲಲ್ಲಿ ಮೊರ್ದೆಕೈ ಹಾಮಾನನಿಗೆ ಸಾಷ್ಟಾಂಗನಮಸ್ಕಾರ ಮಾಡಲು ನಿರಾಕರಿಸಿದ ನಿಮಿತ್ತ ಮೊರ್ದೆಕೈ ಮತ್ತು ಹಾಮಾನರ ನಡುವಿನ ಪೈಪೋಟಿಯನ್ನು ಶೂಷನ್ ಕೋಟೆಯಲ್ಲಿದ್ದ ಜನರೆಲ್ಲರೂ ತಿಳಿದಿರಬಹುದು. ಈ ರೀತಿಯಲ್ಲಿ ಹಾಮಾನನು ತನ್ನ ಜೀವಿತದಲ್ಲಿನ ಅನೀತಿಯ ಪರಿಣಾಮದಿಂದ ಬಾಧೆಯನ್ನನನುಭವಿಸಿದನು. ಆತನು ತನ್ನನ್ನು ಹೆಚ್ಚಿಸಿಕೊಂಡನು, ಆದರೆ ದೇವರು ತೆರೆಯ ಹಿಂದೆಯೇ ಕಾರ್ಯಮಾಡಿ ಹಾಮಾನನ ಗರ್ವ ಮತ್ತು ಅನೀತಿಯು ಆತನನ್ನು ಅವನತಿ ಮತ್ತು ಅವಮಾನಕ್ಕೆ ನಡೆಸುವಂತೆ ಮಾಡಿದನು. ನಾವೂ ಸಹ ನಮ್ಮ ಅನೀತಿಗೆ ಬಲಿಪಶುಗಳಾಗಿರಬೇಕಾಗುತ್ತದೆ. ನಾವೂ ಸಹ ಗರ್ವಿಷ್ಠರಾಗಬಹುದು, ತಾಳ್ಮೆಯಿಲ್ಲದವರಾಗಿರಬಹುದು, ಪ್ರೀತಿಯಿಲ್ಲದವರಾಗಿರಬಹುದು ಮತ್ತು ಅನೀತಿವಂತರಾಗಬಹುದು.

ಅನೇಕಬಾರಿ ನಾವು ನಮ್ಮ ಪಾಪಮಯ ಸ್ವಭಾವಕ್ಕನುಗುಣವಾಗಿ ಜೀವಿಸುತ್ತೇವೆ. ಆಗ ಮಾಡಿದ ಕಾರ್ಯಗಳ ಪರಿಣಾಮವಾಗಿ ಬಾಧೆಪಡುತ್ತೇವೆ.

10. –

11. –

12. –

13. –

# ಉತ್ತರಗಳು 7: ಹಾಮಾನನು ಗಲ್ಲಿಗೇರಿಸಲ್ಪಟ್ಟದ್ದು, ಅಧ್ಯಾಯ 7

## ಉತ್ತರಗಳು

1. ಈ ಹಿಂದೆ ಮರೆಯಾಗಿದ್ದು ಆದರೆ ಈಗ ಪ್ರಕಟಗೊಂಡಿರುವ ಈ ಅಧ್ಯಾಯದಲ್ಲಿನ ಸತ್ಯಗಳು ಇಂತಿವೆ:

   - ರಾಜ ಮತ್ತು ಹಾಮಾನನಿಗೆ ಎಸ್ತೇರಳ ಯೆಹೂದಿ ಜನಾಂಗೀಯತೆಯು ತಿಳಿಸಲ್ಪಡುತ್ತದೆ.

   - ಹಾಮಾನನು ಸಂಹರಿಸಬೇಕೆಂದು ಉಪಾಯ ಕಲ್ಪಿಸಿದ ಜನರ ಗುಂಪು ಯೆಹೂದ್ಯರೆ ಎಂಬುದಾಗಿ ರಾಜನು ತಿಳಿದುಕೊಳ್ಳುತ್ತಾನೆ.

   - ಮೊರ್ದೆಕೈಗೆ ಮರಣದಂಡನೆ ವಿಧಿಸಲು ಹಾಮಾನನು ಗಲ್ಲುಮರವನ್ನು ಸಿದ್ಧಮಾಡಿಸಿದ್ದಾನೆಂಬುದನ್ನು ರಾಜನು ತಿಳಿದುಕೊಳ್ಳುತ್ತಾನೆ.

   - ಈಗ ಹಾಮಾನನ ನಿಜಗುಣವೇನೆಂಬುದು ರಾಜನಿಗೆ ಪ್ರಕಟವಾಗುತ್ತದೆ. ಹಾಮಾನನು ಅನೇಕ ಸಂಗತಿಗಳನ್ನು ರಹಸ್ಯವಾಗಿಡುತ್ತಾನೆ. ಆದರೆ ಅವುಗಳು ಬೆಳಕಿಗೆ ಬಂದಾಗ, ಅವು ಆತನ ಅವನತಿಗೆ ಕಾರಣವಾಗುತ್ತವೆ. ಹಾಗೆಯೇ ಈ ಒಂದು ಚಿತ್ರಣವು ಯೋಹಾನ 3:20 ರಲ್ಲಿನ ಯೇಸು ಕ್ರಿಸ್ತನ ನುಡಿಗಳುನ್ನು ಉದಾಹರಿಸುತ್ತದೆ (ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ, ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿ ಬಂದಾವೆಂದು ಬೆಳಕಿಗೆ ಬರುವುದಿಲ್ಲ). ಹಾಗಾಗಿ ಈ ಕಥೆಯಲ್ಲಿ ಎಲ್ಲವೂ ಬಹಿರಂಗಗೊಳ್ಳುವ ಒಂದು ಹಂತಕ್ಕೆ ನಾವು ಬಂದಿದ್ದೇವೆ. ಸತ್ಯವನ್ನು ಹೆಚ್ಚುಕಾಲ ಮುಚ್ಚಿಡಲಾಗಲ್ಲ. ಎಲ್ಲರೂ ನೋಡಿ, ಅನುಭವಸಲೆಂದು ಇದು ಹೊರಬರುತ್ತದೆ (ಬಹಿರಂಗಗೊಳ್ಳುತ್ತದೆ).

2. ಎಸ್ತೇರಳು ತನ್ನ ಮನವಿಯನ್ನು ಈ ರೀತಿಯಾಗಿ ಅರಸನ ಮುಂದಿಡುತ್ತಾಳೆ (ವ. 3–4):

   - ಎಸ್ತೇರಳು ತನ್ನ ಮನವಿಯನ್ನು ಸಭ್ಯ ಮತ್ತು ವಿನಯತೆಯಿಂದ ಪ್ರಾರಂಭಿಸುತ್ತಾಳೆ. ಆಕೆಯು ರಾಜನ ದಯೆ ದೊರಕಿತೆಂಬುದಾಗಿ ಕಂಡುಬಂದಾಗ ಆತನ ಬಳಿ ಕೇಳುತ್ತಾಳೆ.

   - ಆಕೆ ತನ್ನ ಬಿನ್ನಹವನ್ನು ಸರಳವಾಗಿ ಪ್ರಾರಂಭಿಸುತ್ತಾಳೆ. ಇದು ಆಕೆಯ ಹತಾಶೆಯನ್ನು ತೋರಿಸುತ್ತದೆ. ಆಕೆಯ ಮೊದಲ ಮನವಿಯು ಅವಳ ಗುರುತನ್ನು ತಿಳಿಸುತ್ತದೆ. ಇದು ರಾಜನನ್ನು ಆಶ್ಚರ್ಯಗೊಳಿಸಿರಬಹುದು. ಅನಂತ ಆಕೆ ಬೇಗನೆ ತನ್ನ ಜನರಿಗಾಗಿ ಬೇಡಿಕೊಳ್ಳುತ್ತಾಳೆ. ಆಕೆ ಬರೀ ತನಗಷ್ಟೇ ಬೇಡಿಕೊಳ್ಳುವುದಿಲ್ಲ. ರಾಜಶಾಸನದಲ್ಲಿನ ಪದಗಳನ್ನು ಬಳಸುವುದರೊಂದಿಗೆ ತನ್ನ ಜನರಿಗೆ ವಿರುದ್ಧವಾಗಿರುವ ಬೆದರಿಕೆಯನ್ನು ಆಕೆ ವಿವರಿಸುತ್ತಾಳೆ.

3. ನನಗನಿಸುತ್ತದೆ ಎಸ್ತೇರಳು ಅರಸನ ಮುಂದೆ ತನ್ನ ಮನವಿಯನ್ನಿಟ್ಟಾಗ ಅರಸನ ಮತ್ತು ಹಾಮಾನನ ಮನಸ್ಸಿನಲ್ಲಿ ಈ ರೀತಿಯ ಆಲೋಚನೆ ಮತ್ತು ಭಾವನೆಗಳು ಬಂದಿರಬಹುದು (ವ. 6–7):

   - ರಾಜನಾದ ಅಹಷ್ವೇರೋಷನು ತನ್ನ ಪತ್ನಿಯ ಜನಾಂಗೀಯತೆಯ ಬಗ್ಗೆ ಆಶ್ಚರ್ಯಪಡುತ್ತಾನೆ. ಅಲ್ಲದೆ ಆತನು ಆಕೆಯ ಜನರ ವಿರುದ್ಧವಾಗಿನ ಹಾಮಾನನ ಪಿತೂರಿಯಲ್ಲಿ ತಾನೂ ಪಾತ್ರವಹಿಸಿದ್ದೆನೆಂಬುದಾಗಿ ದಿಗಿಲುಗೊಂಡಿರಬಹುದು (ಯೆಹೂದ್ಯರ ನಾಶನದ ಆಜ್ಞೆಯನ್ನು ಅಂತಿಮಗೊಳಿಸಿದ್ದೇ ಆತನ ಮುದ್ರೆ). ಆತನನ್ನು ಕುಯುಕ್ತಿ ಮತ್ತು ಪೇಚಿಗೆ ಸಿಲುಕಿಸಿದ ಹಾಮಾನನ ಮೇಲೆ ಆತನು ಉಗ್ರಕೋಪವುಳ್ಳವನಾಗುತ್ತಾನೆ. ಆತನು ಕೋಪದಿಂದ ತೋಟಕ್ಕೆ ಹೋಗಿಬಿಡುತ್ತಾನೆ. ಆತನ ಕೋಪವು ಸ್ವಲ್ಪ ಶಾಂತವಾಗುವುದಕ್ಕಾಗಿ ಮತ್ತು ಹಾಮಾನನ್ನು ಹೇಗೆ ಶಿಕ್ಷಿಸಬೇಕೆಂದು ನಿರ್ಧರಿಸಲು ಸಮಯ ತೆಗೆದುಕೊಳ್ಳಬೇಕೆಂದು ಬಯಸುತ್ತಾನೆ.

   - ಹಾಮಾನನು ದಿಗ್ಭ್ರಾಂತನಾಗುತ್ತಾನೆ. ತಾನು ಯೋಜಿಸಿದ್ದೆಲ್ಲವೂ ಕೆಲವೇ ನಿಮಿಷಗಳಲ್ಲಿ ವ್ಯರ್ಥವಾಗಿಬಿಡುತ್ತದೆ. ಈಗ ಸ್ವತಃ ಆತನ ಜೀವಿತವೇ ಅಯೋಮಯವಾಗಿಬಿಡುತ್ತದೆ.

4. ಈ ಅಧ್ಯಾಯದಲ್ಲಿ ವ್ಯಂಗ್ಯಕ್ಕೆ ಐದು ಉದಾಹಾರಣೆಗಳಿವೆ:

   - ಹಾಮಾನನ ಬಣ್ಣ, ತನ್ನ ವೈರಿಗಳಲೊಬ್ಬರಾದ ಯೆಹೂದ್ಯಗಳಿಂದ ಬಯಲಾದದ್ದು ವ್ಯಂಗ್ಯವಾದುದ್ದಾಗಿದೆ.

   - ತನ್ನ ಜೀವ ಉಳಿಸಿಕೊಳ್ಳಲು ಹಾಮಾನನು ಒಬ್ಬ ಯೆಹೂದ್ಯಳಾದ ಎಸ್ತೇರಳ ಬಳಿ ಬೇಡಿಕೊಳ್ಳುವುದು ವ್ಯಂಗ್ಯವಾದುದ್ದಾಗಿದೆ.

   - ಯೆಹೂದ್ಯನಾದ ಮೊರ್ದೆಕೈ ತನಗೆ ಸಾಷ್ಟಾಂಗನಮಸ್ಕಾರಮಾಡದೆ ಇದ್ದಾಗ ಕೋಪಮಾಡಿಕೊಳ್ಳುತ್ತಿದ್ದ ಅದೇ ಹಾಮಾನನು ಈಗ ಯೆಹೂದ್ಯಳ ಮುಂದೆಯೇ ಸಾಷ್ಟಾಂಗವೆರಗಬೇಕಾದದ್ದು ವ್ಯಂಗ್ಯವಾಗಿದೆ.

- ತನ್ನ ಜೀವ ಉಳಿಸಿಕೊಳ್ಳಲು ಬೇಡುತ್ತಿರುವ ಹಾಮಾನ ಕ್ರಿಯೆಯು ಆತನನ್ನು ಮರಣದಂಡನೆಗೆ ನಡೆಸುವ ಕ್ರಿಯೆಯಾಗಿ ಮಾರ್ಪಡುತ್ತದೆ (ರಾಜನು ಕೋಣೆಗೆ ಮರುಪ್ರವೇಶಿಸಿದಾಗ ಹಾಮಾನನ್ನು ನೋಡಿ ರಾಣಿಯನ್ನು ಮಾನಭಂಗಪಡಿಸುತ್ತಿದ್ದಾನೆಂದು ತಪ್ಪಾಗಿ ಅರ್ಥೈಸಿಕೊಂಡಿದ್ದು).

- ತನ್ನ ವೈರಿಯನ್ನು ನಾಶಮಾಡಲು ತಾನು ಸಿದ್ಧಪಡಿಸಿದ ಗಲ್ಲುಮರಕ್ಕೆ ಹಾಮಾನನು ನೇತುಹಾಕಲ್ಪಟ್ಟದ್ದು ವ್ಯಂಗ್ಯವಾಗಿದೆ.

5. ಹಾಮಾನನ ಗುಣಸ್ವಭಾವದ ಬಗ್ಗೆ ವಚನ 6–8 ಈ ರೀತಿಯಾಗಿ ತಿಳಿಸುತ್ತವೆ:

ಯೆಹೂದ್ಯರನ್ನು ಬಾಧಿಸಬೇಕೆಂಬುದಾಗಿ ಪಿತೂರಿ ಮಾಡಿದವರು ದುಷ್ಟನಾದ ಹಾಮಾನನೇ ಎಂಬುದಾಗಿ ಎಸ್ತೇರಳು ಬಹಿರಂಗವಾಗಿ ಹೇಳುತ್ತಾಳೆ. ರಾಜನು ಆ ಸ್ಥಳದಿಂದೆದ್ದು ಹೋದಾಗ ಹಾಮಾನನು ಎಸ್ತೇರಳ ಹತ್ತಿರವೇ ಇದ್ದು ತನ್ನ ಪ್ರಾಣರಕ್ಷಣೆಗಾಗಿ ಅವಳ ಬಳಿಯಲ್ಲಿ ಬಿನ್ನಹ ಮಾಡಿಕೊಳ್ಳುತ್ತಾನೆ. ಇದರಿಂದ ಆತನು ಆಸ್ಥಾನದ ಕಟ್ಟುನಿಟ್ಟಾದ ಒಂದು ನಿಯಮವನ್ನು ಮುರಿಯುತ್ತಾನೆ. ರಾಜನಿಲ್ಲದೆ ಇರುವಾಗ ರಾಣಿಯ ಬಳಿಗೆ ಹೋಗಿ ಮಾತನಾಡುವುದು ಮಹಾ ಅಪರಾಧವಾಗಿತ್ತು. ಹಾಮಾನನು ಮೂರ್ಖನು ಅಥವಾ ಸಂಪೂರ್ಣವಾಗಿ ಹತಾಶೆಯುಳ್ಳವನೂ ಆಗಿರುತ್ತಾನೆ.

6. ಈ ಅಧ್ಯಾಯದಲ್ಲಿ ಎಸ್ತೇರಳ, ಮೊರ್ದೆಕೈ ಮತ್ತು ಹಾಮಾನರ ಜೀವಿತಗಳಲ್ಲಿ ನ್ಯಾಯವು ಹೇಗೆ ಹೊರಬರುತ್ತದೆಂಬುದನ್ನು ನಾವು ಕಾಣಬಹುದು:

- ಹಾಮಾನನ ನಿಜವಾದ ಗುಣವು ಹೊರಬರುತ್ತದೆ. ಆತನ ಪಿತೂರಿ ಬೈಲಿಗೆ ಬರುತ್ತದೆ. ಈತನು ತನ್ನ ದುಷ್ಟತನಕ್ಕಾಗಿ ಶಿಕ್ಷಿಸಲ್ಪಟ್ಟು ಮರಣದಂಡೆಗೆ ಗುರಿಯಾಗುತ್ತಾನೆ. ಹಾಗಾಗಿ ಹಾಮಾನನಿಗೆ ನ್ಯಾಯ ಸಿಗುತ್ತದೆ.

- ಎಸ್ತೇರಳ ಜೀವವು ರಕ್ಷಿಸಲ್ಪಡುತ್ತದೆ. ಅಲ್ಲದೆ ಆಕೆ ಇಡೀ ಯೆಹೂದಿ ಜನಾಂಗವನ್ನು ರಕ್ಷಿಸಲು ಶಕ್ತಳಾಗುತ್ತಾಳೆ. ಹಾಮಾನನು ಈ ಹಿಂದೆ ಮೊರ್ದೆಕೈಗಾಗಿ ಯೋಚಿಸಿದ್ದ ಮರಣಭಾದೆಯನ್ನು ತಾನೇ ಹೊಂದಿದಾಗ ಮೊರ್ದೆಕೈಗೆ ನ್ಯಾಯ ಸಿಗುತ್ತದೆ. ಈ ರೀತಿಯಲ್ಲಿ ಎಸ್ತೇರಳು ಮತ್ತು ಮೊರ್ದೆಕೈಗೆ ನ್ಯಾಯವು ಒದಗುತ್ತದೆ.

7. ಈ ಅಧ್ಯಾಯದಲ್ಲಿ ನ್ಯಾಯ ಮತ್ತು ಸರಿಯಾದುದ್ದನ್ನು ಮಾಡುವುದೆರಡೂ ಸಹ ಒಟ್ಟಾಗಿ ಕಾರ್ಯಮಾಡುತ್ತವೆ: ದುಷ್ಟ ವ್ಯಕ್ತಿಯು ಶಿಕ್ಷಿಸಲ್ಪಡುತ್ತಾನೆ. ಹಾಮಾನನು ತನಗೆ ಯೋಗ್ಯವಾದುದ್ದನ್ನೆ ಹೊಂದುತ್ತಾನೆ, ಮತ್ತು ಆತನ ಶಿಕ್ಷೆಯು ನ್ಯಾಯವಾದುದ್ದಾಗಿದೆ. ನೀತಿವಂತರಿಗೆ ಪ್ರತಿಫಲ ಸಿಗುತ್ತದೆ. ಎಸ್ತೇರಳು ಮತ್ತು ಮೊರ್ದೆಕೈ (ನ್ಯಾಯ) ಸರಿಯಾದುದ್ದನ್ನು ಮಾಡುತ್ತಾರೆ ಮತ್ತು ಅವರ ಪ್ರತಿಫಲವೂ ನ್ಯಾಯವೆ. ಹಾಗಾಗಿ ಯಥಾರ್ಥತೆ ಮತ್ತು ದೇವರಲ್ಲಿ ಭಯಭಕ್ತಿಯ ಗುಣ ಯಾರಲ್ಲಿರುತ್ತದೆಯೋ (ಎಸ್ತೇರಳು ಮತ್ತು ಮೊರ್ದೆಕೈ) ಅವರು ದುಷ್ಟರ ಮೇಲೆ (ಹಾಮಾನ) ಜಯವನ್ನು ಸಾಧಿಸುತ್ತಾರೆ. ಈ ಕಥೆಯು ತುಂಬಾ ಸಂತೋಷಮಯ ಮತ್ತು ನ್ಯಾಯಯುತವಾದ ಅಂತ್ಯವನ್ನು ಹೊಂದಿದೆ. ಆದರೆ ನಮ್ಮ ಜೀವಿತದಲ್ಲಿ (ಅನುಭವದಲ್ಲಿ) ಈ ರೀತಿಯಾಗಿ ಯಾವಗಲೂ ಆಗಲ್ಲ (ಪ್ರಶ್ನೆ 10ನ್ನು ನೋಡಿ).

8. –

9. ನ್ಯಾಯವು ಸಿಗದಿದ್ದರೆ ನೀವು ಹೇಗೆ ಪ್ರತಿಕ್ರಯಿಸುವಿರಿ?

**ಟಿಪ್ಪಣಿ:** ಇಲ್ಲಿ ನಾಲ್ಕು ಸಾಧ್ಯವಿರಬಹುದಾದ ಪ್ರತಿಕ್ರಿಯೆಗಳಿವೆ. ಆದರೆ ಕೊನೆಯದು ಮಾತ್ರ ನೀವು ಭಯಭಕ್ತಿಯುಳ್ಳವರೆಂಬುದನ್ನು ತೋರಿಸುತ್ತದೆ.

- ನೀವು ನ್ಯಾಯವನ್ನು ನಿಮ್ಮ ಕೈಗೆತ್ತಿಕೊಳ್ಳುವಿರಿ. ನಿಮಗೆ ಅನ್ಯಾಯ ಮಾಡಿದ ವ್ಯಕ್ತಿಯು ಯಾವ ರೀತಿಯಲ್ಲಾದರೂ ಶಿಕ್ಷಿಸಲ್ಪಡುವಂತೆ ನೀವು ನೋಡಿಕೊಳ್ಳುವಿರಿ.

- ನೀವು ಕಹಿ ಅಥವಾ ದ್ವೇಷ ಮನೋಭಾವವುಳ್ಳವರಾಗುವಿರಿ. ನಿಮ್ಮ ಇಡೀ ಜೀವನ ಕಹಿತನದಲ್ಲಿ ಸಿಲುಕಿಕೊಳ್ಳುತ್ತದೆ. ನಿಮಗಾದ ಅನ್ಯಾಯವನ್ನು ನೀವು ಕಳೆದುಕೊಳ್ಳುವಿರಿ.

- ನೀವು ದೇವರಲ್ಲಿನ ನಂಬಿಕೆ ಮತ್ತು ಆತನ ನ್ಯಾಯವನ್ನು ಕಳೆದುಕೊಳ್ಳುವಿರಿ. ನೀವು ದೇವರಿಗೆ ಬೆನ್ನು ತಿರುಗಿಸಿ ಆತನೊಂದಿಗೆ ಅನ್ಯೋನ್ಯತೆಯಿಂದ ದೂರವಿರುವಿಕೆ.

- ನೀವು ನಿಮ್ಮ ಪರಿಸ್ಥಿತಿಯನ್ನು ದೇವರ ಮುಂದೆ ತನ್ನಿರಿ (ಕೀರ್ತನೆ 73ರಲ್ಲಿ ಕೀರ್ತನೆಗಾರನು ಮಾಡಿದಂತೆ).

  ನೀವು ನಿಮ್ಮ ಭರವಸೆಯನ್ನು ದೇವರ ಮೇಲೆ ಮತ್ತು ಆತನ ನ್ಯಾಯದ ಮೇಲೆ ಇಡುವಿರಿ. ಒಂದು ದಿನ ಆತನ ನ್ಯಾಯವು ತೋರಿಬರುತ್ತದೆಂಬುದಾಗಿ ನೀವು ಅರ್ಥೈಸಿಕೊಳ್ಳಿವಿರಿ. ದೇವರು ನಿಜವಾಗಲೂ ಅನೀತಿವಂತರನ್ನು ಶಿಕ್ಷಿಸುತ್ತಾನೆ.

10. –

11. –

12. –

# ಉತ್ತರಗಳು 8: ಅರಸನ ಆಜ್ಞೆ, ಅಧ್ಯಾಯ 8

## ಉತ್ತರಗಳು

1. ಅರಸನ ಕ್ರಮ (ಕ್ರಿಯೆ)ಗಳ ಮೂಲಕ ಮೊರ್ದೆಕೈ ಮತ್ತು ಎಸ್ತೇರಳು ನಾಲ್ಕು ರೀತಿಯಲ್ಲಿ ದೇವರಿಂದ ಸನ್ಮಾನಿಸಲ್ಪಡುತ್ತಾರೆ:

   - ಅರಸನಾದ ಅಹಷ್ವೇರೋಷನು ಹಾಮಾನನ ಮನೆಯನ್ನೆಲ್ಲಾ (ಆಸ್ತಿ) ಎಸ್ತೇರಳಿಗೆ ಕೊಡುತ್ತಾನೆ. ಪ್ರಾಚೀನ ಶಾಸ್ತ್ರದ/ ಕಾನೂನಿನ ಪ್ರಕಾರ ಖಂಡನೆಗೊಳಗಾದ ಅಪರಾಧಿಯ ಆಸ್ತಿಯೆಲ್ಲಾ ರಾಜನಿಗೆ ಸೇರುತ್ತದೆ. ಹಾಗಾಗಿ ಹಾಮಾನನಿಂದ ವಶಪಡಿಸಿಕೊಂಡ ಆಸ್ತಿಯಿಂದ ರಾಜನು ತನ್ನ ಮನ ಬಂದಂತೆ ಮಾಡಬಹುದು. ಆಕೆಯ ಜನರ ವಿರುದ್ಧವಾಗಿ ಕಲ್ಪಿಸಲಾದ ಪಿತೂರಿಗಾಗಿ ಪರಿಹಾರವೋ ಎಂಬಂತೆ ಆತನದನ್ನು ಕೊಡುತ್ತಾನೆ.

   - ಮೊರ್ದೆಕೈಯನ್ನು ಒಡ್ಡೋಲಗ (ಆಸ್ಥಾನ)ದಲ್ಲಿ ಸೇರಿಸಿ ಅಲ್ಲಿ ಆತನನ್ನು ಈಗ ಎಸ್ತೇರಳಿಗೆ ಸೇರಿದ ಹಾಮಾನನ ಮನೆಯ ಆಡಳಿತವನ್ನು ನಿರ್ವಹಿಸುವ ಜವಬ್ದಾರಿಯನ್ನು ಆತನಿಗೆ ಕೊಡಲಾಗುತ್ತದೆ.

   - ಮೊರ್ದೆಕೈಗೆ ರಾಜನ ಮುದ್ರೆಯುಂಗುರವನ್ನು ಕೊಡಲಾಗುತ್ತದೆ. ಇದು ರಾಜನ ಪರವಾಗಿ ಕಾರ್ಯನಿರ್ವಹಿಸಲು ಆತನ ಕಾನೂನಾತ್ಮಕ ಅಧಿಕಾರವನ್ನು ಸೂಚಿಸುತ್ತದೆ.

   - ತದನಂತರ ಮೊರ್ದೆಕೈ ರಾಜವಸ್ತ್ರಗಳನ್ನು ಧರಿಸಿಕೊಂಡನು. ಇದು ಆತನು ರಾಜನ ನಂತರದ ಸ್ಥಾನದವನೆಂಬುದನ್ನು ಸೂಚಿಸುತ್ತದೆ.

2. ಈ ಅಧ್ಯಾಯದಲ್ಲಿ (ವ. 3–6) ಎಸ್ತೇರಳ ಗುಣ ಮತ್ತು ಹೃದಯದ (ಮನಸ್ಸಿನ) ಬಗ್ಗೆ ಇನ್ನೂ ಹೆಚ್ಚಾಗಿ ಕಲಿಯುತ್ತೇವೆ. ಈ ವಚನಗಳು ಆಕೆಯ ಬಗ್ಗೆ ಕೆಳಕಂಡ ಸಂಗತಿಗಳನ್ನು ಕಲಿಸುತ್ತವೆ:

   ತನ್ನ ಜೀವ ಉಳಿಸಲ್ಪಟ್ಟು ಹಾಮಾನನ ಆಸ್ತಿಯೆಲ್ಲಾ ತನಗೆ ಬಹುಮಾನವಾಗಿ ಬಂದರೂ ಸಹ ಎಸ್ತೇರಳು ಇನ್ನೂ ಅಳುತ್ತಿದ್ದಾಳೆ. ತನ್ನ ಜನರ ದುರವಸ್ಥೆಯನ್ನು ಆಕೆ ಮರೆತಿಲ್ಲ. ಯೆಹೂದ್ಯರಿಗೆ ವಿರುದ್ಧವಾಗಿ ಕಲ್ಪಿಸಲಾದ ಭಯಂಕರ ಪಿತೂರಿಯು ಇನ್ನೂ ಚಾಲನೆಯಲ್ಲಿತ್ತು. ಹಾಗಾಗಿ ಆಕೆ ಇನ್ನೊಂದು ಬಾರಿ ರಾಜನ ಬಳಿಗೆ ಹೋಗಬೇಕಿತ್ತು. ರಾಜನ ಮುಂದೆ ಅತ್ತು, ವಿಜ್ಞಾಪಿಸುವುದರ ಮೂಲಕ ಆಕೆ ತನ್ನ ಜನರಿಗಾಗಿನ ಆಳವಾದ ಪ್ರೀತಿ, ಕರುಣೆ ಮತ್ತು ಕಾಳಜಿಯನ್ನು ವ್ಯಕ್ತಪಡಿಸುತ್ತಾಳೆ. ಆಕೆಯು ಯೆಹೂದ್ಯರ ಸಂಪರ್ಕದಲ್ಲಿದ್ದಳು. ಅವಳು ಪರ್ಷಿಯಾದ ರಾಣಿಯಾಗಿದ್ದರೂ ಸಹ ಅವರು ಆಕೆಯ ಸ್ವಂತ ಜನರಾಗಿದ್ದಾರೆ. ಅವರೆಲ್ಲರ ಪ್ರಾಣ ರಕ್ಷಿಸಲ್ಪಡುವವರೆಗೆ ಅವಳ ಮನಸ್ಸು (ಹೃದಯ) ಶಾಂತಿ ಹೊಂದುವುದಿಲ್ಲ.

3. ಎಸ್ತೇರಳ ಮನವಿಗೆ ರಾಜನಾದ ಅಹಷ್ವೇರೋಷನು ಈ ರೀತಿಯಾಗಿ ಪ್ರತಿಕ್ರಯಿಸುತ್ತಾನೆ(ವ. 7–10):

   - ಮೊದಲು ರಾಜನಾದ ಅಹಷ್ವೇರೋಷನು ಅವರಿಗಾಗಿ ಈಗಾಗಲೇ ತಾನು ಏನು ಮಾಡಿದ್ದೆನೆಂಬುದನ್ನ ಎಸ್ತೇರಳು ಮತ್ತು ಮೊರ್ದೆಕೈಗೆ ನೆನಪಿಸುತ್ತಾನೆ

   - ಅನಂತರ ಆತನು ಎಸ್ತೇರಳ ಬೇಡಿಕೆಯನ್ನು ನೆರವೇರಿಸಲು ಒಪ್ಪುತ್ತಾನೆ. ಒಂದು ಬಾರಿ ಬರೆಯಲ್ಪಟ್ಟ ರಾಜ ಮುದ್ರೆಯಿರುವ ಲೇಖನವನ್ನು ರದ್ದುಮಾಡಲಾಗುವುದಿಲ್ಲ. ಇದನ್ನು ಬಗೆಹರಿಲು ಇರುವ ಒಂದೇ ಮಾರ್ಗವೆಂದರೆ ಈ ಹಿಂದಿನ ಆಜ್ಞೆಯನ್ನು ಪ್ರತಿರೋಧಿಸುವ ಇನ್ನೊಂದು ಹೊಸ ಆಜ್ಞೆಯನ್ನು ಒರಡಿಸುವುದು. ಹೊಸ ಲೇಖನವನ್ನು ಸಿದ್ಧಪಡಿಸುವುದಕ್ಕಾಗಿ ಆತನು ಮೊರ್ದೆಕೈಗೆ ಸ್ವಾತಂತ್ರ್ಯವನ್ನು ಕೊಡುತ್ತಾನೆ. ಅಲ್ಲದೆ ಆತನು ಈ ಕಾರ್ಯಕ್ಕಾಗಿ ತನ್ನ ರಾಜಲೇಖಕರನ್ನು ಸಹ ಕರೆಯಿಸಿದನು.

4. ಈ ರೀತಿಯಲ್ಲಿ ಮೊರ್ದೆಕೈ ಹೊರಡಿಸಿದ ಅಜ್ಞೆಯು (ವ. 11–13), ಮೊದಲ ಆಜ್ಞೆಯನ್ನು ಮೀರದೇ (ನೋಡಿ 3:12–14) ಎಸ್ತೇರಳ ಬೇಡಿಕೆಯನ್ನು ನೆರವೇರಿಸುತ್ತದೆ (5–6):

   ಈ ಹಿಂದಿನ ಆಜ್ಞೆಯ ಪರಿಣಾಮಗಳಿಗೆ ಪ್ರತಿರೋಧಿಸುವಂತಹ ಆಜ್ಞೆಯನ್ನು ಸಿದ್ಧಪಡಿಸಲು ಮೊರ್ದೆಕೈ ಪ್ರಯತ್ನಿಸುತ್ತಾನೆ. ಮೊದಲ ಆಜ್ಞೆಯಲ್ಲಿ ಆ ನಿರ್ದಿಷ್ಟವಾದ ದಿನದಲ್ಲಿ ಯೆಹೂದ್ಯರನ್ನು ಕೊಂದು ಸಂಹರಿಸಬೇಕೆಂದು ಅವರ ವಿರೋಧಿಗಳಿಗೆ ಅನುಮತಿಯನ್ನು ಕೊಡಲಾಗಿತ್ತು. ಹಾಗಾಗಿ ಮೊರ್ದೆಕೈಯ ಆಜ್ಞೆಯು ಯೆಹೂದ್ಯರನ್ನು ಒಟ್ಟಾಗಿ ಸೇರಿಸಿ ಈ ಆಳಿಗೆ ವಿರುದ್ಧವಾಗಿ ತಮ್ಮನ್ನು ರಕ್ಷಿಸಿಕೊಳ್ಳಲು ಅನುಮತಿಯನ್ನು ನೀಡಿತು. ತಮ್ಮನ್ನು ನಾಶಗೊಳಿಸಲು ಬಂದವರನ್ನು ಅವರು ಕೊಂದು ಸಂಹರಿಸಿ ಅವರ ಸೊತ್ತನ್ನು ಸೂರೆಮಾಡಬಹುದಾಗಿತ್ತು. ಈ ಆಜ್ಞೆಯ ಅರ್ಥವಿವರಣೆಯು ಯೆಹೂದ್ಯರು ತಮ್ಮ ವಿರೋಧಿಗಳ ಮೇಲೆ ದಾಳಿಮಾಡಿ ಯಾವ ನಿರ್ಭಂದವಿಲ್ಲದೆ ಅವರ ಮೇಲೆ ಸೇಡನ್ನು ತೀರಿಸಿಕೊಳ್ಳಲು ಅನುಮತಿಸಿತು.

5. ತನ್ನ ಜನರಿಗಾಗಿ ದೇವರ ಒದಗಿಸುವಿಕೆ (ಅವಕಾಶ) ಮತ್ತು ರಕ್ಷಣೆ ಇಂತಿದೆ:

ಎರಡನೇ ಆಜ್ಞೆಯು ಮೊದಲನೆಯ ಆಜ್ಞೆಯ ಪರಿಣಾಮಗಳನ್ನು ಸರಿಯಾಗುವಂತದ್ದಾಗಿದೆ. ಹಾಗಾಗಿ ದೇವರು ಯೆಹೂದ್ಯರು ಎದುರಿಸಿದ ತೀವ್ರ ಪ್ರತಿರೋಧದ ಹೊರತಾಗಿಯೂ ಅವರಿಗಾಗಿ ಒಂದು ಮಾರ್ಗವನ್ನು ತೆರೆದನು. ದೇವರ ನಂಬಿಗಸ್ತಿಕೆಯು ಪರಮೋಚ್ಚವಾದದ್ದಾಗಿದೆ. ಆತನು ತನ್ನ ನಂಬಿಗಸ್ತ ಸೇವಕರಾದ ಎಸ್ತೇರಳು ಮತ್ತು ಮೊರ್ದೆಕೈಗಷ್ಟೆ ನಂಬಿಗಸ್ತನಾಗಿಲ್ಲ. ಇತಿಹಾಸದುದ್ದಕ್ಕೂ ತನ್ನ ಜನರೆಲ್ಲರಿಗೂ ಆತನು ನಂಬಿಗಸ್ತನಾಗಿದ್ದಾನೆ.

6. ದೇವರ ಒದಗಿಸುವಿಕೆ ಮತ್ತು ರಕ್ಷಣೆಗೆ ಯೆಹೂದ್ಯರು ಸಂತೋಷದಿಂದ ಉಲ್ಲಾಸದಿಂದ ಭಕ್ಷ್ಯಭೋಜನ ಮಾಡುತ್ತಾ ದೇವರ ಒಳ್ಳೆತನ ನಂಬಿಗಸ್ತಿಕೆಯನ್ನು ಕೊಂಡಾಡುತ್ತಾ, ಸಂಭ್ರಮಿಸುತ್ತಾ ಪ್ರತಿಕ್ರಯಿಸಿದರು. ಶೂಷನ್ ಕೋಟೆ ಮತ್ತು ಪರ್ಷಿಯನ್ ಸಂಸ್ಥಾನದ ಎಲ್ಲಾ ಪಟ್ಟಣಗಳಲ್ಲಿಯೂ ಇದೇ ರೀತಿ ಮಾಡುತ್ತಾರೆ. ತನ್ನ ಜನರ ಮೇಲೆ ದೇವರ ರಕ್ಷಣೆಯ ಹಸ್ತವಿರುವುದನ್ನು ನೋಡಿದಾಗ ಅನೇಕ ಜನರು ಯೆಹೂದಿ ಮತಕ್ಕೆ ಸೇರುತ್ತಾರೆ (ವ. 15–17).

7. ಅಧ್ಯಾಯ 4ರಲ್ಲಿನ ಮೊದಲ ಆಜ್ಞೆಗೆ ತೋರಿದ ಯೆಹೂದ್ಯರ ಪ್ರತಿಕ್ರಿಯೆಯು (4:1–3, 15–16) ಈ ಅಧ್ಯಾಯದಲ್ಲಿನ ಘಟನೆಗಳಿಗೆ ಈ ರೀತಿಯಲ್ಲಿ ಮಾರ್ಗವನ್ನು ಸುಗಮಗೊಳಿಸುತ್ತದೆ:

   ನಾಲ್ಕನೇ ಅಧ್ಯಾಯವು ಹೇಗೆ ಯೆಹೂದ್ಯರ ಮೊದಲ ಆಜ್ಞೆಗೆ ವಿವರಿಸುತ್ತದೆ ಹಾಗೇ ದೇವರ ಕರುಣೆ ಮತ್ತು ಸಂರಕ್ಷಣೆಗಾಗಿ ಹೇಗೆ ಯೆಹೂದ್ಯರು ತಕ್ಷಣವೆ ಆತನ ಕಡೆಗೆ ತಿರುಗಿಕೊಂಡಿರುವುದನ್ನು ಅವರು ತಿಳಿದಿದ್ದರು. ಹಾಗಾಗಿ ಆತನನ್ನು ಪ್ರಾರ್ಥಿಸಿದರು. ಈ ಅಧ್ಯಾಯದಲ್ಲಿ ನಾವು ಯೆಹೂದ್ಯರಿಗಾಗಿ ದೇವರ ರಕ್ಷಣಾಕಾರ್ಯದ ಪಲಿತಾಂಶಗಳನ್ನು ಕಾಣಬಹುದು. ಈಗ ಅವರು ಹರ್ಷಭರಿತರಾಗಿದ್ದಾರೆ. ಪ್ರತಿಕ್ರಿಯೆಗಳಲ್ಲಿ ಬಹು ದೊಡ್ಡ ತದ್ವಿರುದ್ದತೆಯಿತ್ತು. ಆದರೆ ತೀವ್ರ ಪರಸ್ಪರ ಹೊಂದಿಕೊಂಡಿವೆ ಯೆಹೂದ್ಯರು ಮೊದಲು ದೇವರ ಕಡೆಗೆ ತಿರುಗಿಕೊಳ್ಳುತ್ತಾರೆ. ಆತನವರ ಪ್ರಾರ್ಥನೆಗೆ ಉತ್ತರಿಸುತ್ತಾರೆ ಮತ್ತು ಅವರು ಆತನ ನಂಬಿಗಸ್ತಿಕೆಗೆ ಭಕ್ಷ್ಯಭೋಜನ ಮತ್ತು ಸಂಭ್ರಮದೊಂದಿಗೆ ಪ್ರತಿಕ್ರಯಿಸುತ್ತಾರೆ.

8. ಎಸ್ತೇರಳ ಪುಸ್ತಕದಲ್ಲಿ ಮೊರ್ದೆಕೈ ಮತ್ತು ಎಸ್ತೇರಳು ನಂಬಿಗಸ್ತರಾಗಿ ದೇವರನ್ನು ಸೇವಿಸಿ ಸರಿ (ನ್ಯಾಯ)ಯಾದುದ್ದನ್ನೆ ಮಾಡುತ್ತಾರೆ. ಇದಕ್ಕಾಗಿ ಅವರು ಈ ಲೋಕದ ಬಹುಮಾನ (ಪ್ರತಿಫಲ)ವನ್ನು ಹೊಂದಿಕೊಳ್ಳುತ್ತಾರೆ (1ನೇ ಪ್ರಶ್ನೆಯ ಉತ್ತರ ನೋಡಿ). ಏನೇ ಆಗಲಿ ಸರಿಯಾದುದ್ದನ್ನು ಅಥವಾ ನ್ಯಾಯವಾದುದ್ದನ್ನು ಮಾಡುವಲ್ಲಿ ಲೋಕದ ಬಹುಮಾನ ಅಥವಾ ಪ್ರತಿಫಲವೆ ನಮಗೆ ಪ್ರೇರಣೆಯಾಗಬಾರದೆಂಬುದಾಗಿ ನಾವು ಎಚ್ಚರಿಕೆವಹಿಸಬೇಕು:

   ಈ ಲೋಕದಲ್ಲಿನ ನಮ್ಮ ಒಳ್ಳೆಯ ಕಾರ್ಯಗಳಿಗಾಗಿ ಲೋಕದ ಪ್ರತಿಫಲ (ಬಹುಮಾನ) ಸಿಗುತ್ತದೆಂಬ ಭರವಸೆ ನಮಗಿಲ್ಲ. ಲೋಕದ ಪ್ರತಿಫಲ ಅಥವಾ ಬಹುಮಾನಗಳು ಬರಬಹುದು ಅಥವಾ ಬರದೇ ಇರಬಹುದು. ಈ ಲೋಕದಲ್ಲಿನ ಆತನ ಸೇವೆಗಾಗಿ ನಮಗೆ ಪ್ರತಿಫಲ ಸಿಗುತ್ತದೆಂಬುದಾಗಿ ದೇವರು ವಾಗ್ದಾನ ಮಾಡಿಲ್ಲ. ಬದಲಾಗಿ ನಮ್ಮ ಪ್ರೇರಣೆಯೇನಿದ್ದರೂ ದೇವರನ್ನು ಮತ್ತು ಇತರರನ್ನು ಪ್ರೀತಿಸುವುದು ಮತ್ತು ನಮ್ಮ ಆಸೆಯು ಯೇಸು ಕ್ರಿಸ್ತನಂತೆ ಆಗುವುದಾಗಿದೆ.

9. -

10. -

11. -

12. -

13. -

# ಉತ್ತರಗಳು 9: ಯೆಹೂದ್ಯರ ವಿಜಯೋತ್ಸವ, ಅಧ್ಯಾಯ 9–10

## ಉತ್ತರಗಳು

1. ಪಾಲ್ಗುನಮಾಸದ 13, 14 ಮತ್ತು 15ನೇ ದಿನಗಳ ಘಟನೆಗಳ ಸಾರಾಂಶ ಇಂತಿದೆ (ಅಧ್ಯಾಯ 9):

    - **ಪಾಲ್ಗುನಮಾಸದ 13ನೇ ದಿನ:** ಈ ದಿನದಲ್ಲಿ ಯೆಹೂದ್ಯರು ತಮ್ಮನ್ನು ಸ್ವಾಧೀನಪಡಿಸಿಕೊಳ್ಳಲು ಕಾದಿರುವ ವೈರಿಗಳ ಮೇಲೆ ಆಕ್ರಮಣ ಮಾಡಲು ತಮ್ಮ ಪಟ್ಟಣಗಳಲ್ಲಿ ಸೇರಿದ್ದರು. ಇವರ ಮೇಲೆ ಕೈಯೆತ್ತಲು ಜನರು ಹೆದರಿದರು. ಯೆಹೂದ್ಯರಿಗೆ ಸಂಸ್ಥಾನದ ನಾಯಕರುಗಳ ಬೆಂಬಲವಿತ್ತು. ಯೆಹೂದ್ಯರು ತಮ್ಮೆಲ್ಲ ವೈರಿಗಳನ್ನು ಸೋಲಿಸಿ, ಕತ್ತಿಯಿಂದ ಕೊಂದು ನಿರ್ನಾಮಗೊಳಿಸಿದರು. ಶೂಷನ್ ಕೋಟೆಯಲ್ಲಿಯೇ ಐನೂರು ಮಂದಿಯನ್ನು ಕೊಂದರು. ಹಾಮನನ ಹತ್ತು ಮಂದಿ ಮಕ್ಕಳನ್ನು ಕೊಂದು ಅವರ ಶವಗಳನ್ನು ಗಲ್ಲಿಗೇರಿಸಿದರು. ರಾಜಸಂಸ್ಥಾನಗಳಲ್ಲಿ ಎಪ್ಪತ್ತೈದು ಸಾವಿರ ಮಂದಿಯನ್ನು ಕೊಂದರು. ಆದರೆ ಎಲ್ಲಿಯೂ ಅವರು ಸುಲಿಗೆಗೆ ಕೈಹಾಕಲಿಲ್ಲ.

    - **ಪಾಲ್ಗುನಮಾಸದ 14ನೇ ದಿನ:** ತಮ್ಮ ವೈರಿಗಳನ್ನು ಕೊಲ್ಲುವ ಯೆಹೂದ್ಯರ ಕಾರ್ಯವನ್ನು ಇನ್ನೊಂದು ದಿನ ಮುಂದುವರಿಸಲು ಅರಸನು ಅನುಮತಿ ಕೊಡುತ್ತಾನೆ. ಮುನ್ನೂರು ಮಂದಿಯನ್ನು ಕೊಲ್ಲಲಾಯಿತು. ಆದರೆ ಕೊಳ್ಳೆಗೆ ಕೈಹಾಕಲಿಲ್ಲ. ಸಂಸ್ಥಾನದಲ್ಲಿನ ಯೆಹೂದ್ಯರು ಈ ದಿನವನ್ನು ಉತ್ಸವಭೋಜನ ದಿನವನ್ನಾಗಿ ಆಚರಿಸುತ್ತಾರೆ.

    - **ಪಾಲ್ಗುನಮಾಸದ 15ನೇ ದಿನ:** ಶೂಷನ್ ಕೋಟೆಯಲ್ಲಿನ ಯೆಹೂದ್ಯರು ಹಿಂದಿನ ದಿನದಲ್ಲಿ ವೈರಿಗಳನ್ನು ವಧಿಸುವ ಕಾರ್ಯದಲ್ಲಿ ನಿರತರಾಗಿರುವುದರಿಂದ, ಈ ದಿನವನ್ನು ಉತ್ಸವಭೋಜನ ದಿನವನ್ನಾಗಿ ಆಚರಿಸಿದರು.

2. ಎರಡು ದಿನಗಳ ಸಂಹಾರ ಕಾರ್ಯದ ಅವಧಿಯಲ್ಲಿ ನಿಜವಾಗಲೂ ಏನಾಯಿತೆಂಬುದನ್ನು ತಿಳಿದುಕೊಳ್ಳುವುದು ಪ್ರಾಮುಖ್ಯವಾದುದ್ದಾಗಿದೆ (9:5–27). ಯೆಹೂದ್ಯರಿಂದಾಗುವ ನರಮೇಧದಿಂದ 9ನೇ ಅಧ್ಯಾಯದ ತೋರಿಕೆಯ ಓದುಗನು ಕಂಗಾಲಗುವನು.

    ಯೆಹೂದ್ಯರು ತಮ್ಮ ವೈರಿಗಳ ಮೇಲೆ ಸ್ವಲ್ಪ ಕರುಣೆ ತೋರಿದವರಂತೆ ಕಾಣುತ್ತಾರೆ. ಆದರೆ ಅವರು ತಮ್ಮನ್ನು ಸಂಹರಿಸಲು ಬಂದವರನ್ನು ನಿರ್ನಾಮಗೊಳಿಸುತ್ತಾರೆ. ಅವರೇನು ಮಾಡಿದರೋ ಅದಕ್ಕೂ ಒಂದು ಮಿತಿಯಿತ್ತು. ವಚನ 9:5ರ ಸರಿಯಾದ ಒಂದು ತಿಳುವಳಿಕೆಯು ನಮಗೆ ಈ ರೀತಿ ಸಲಹೆ ಕೊಡುತ್ತದೆ, ಅದೇನೆಂದರೆ – ಯೆಹೂದ್ಯರು ತಮ್ಮ ವೈರಿಗಳನ್ನು ಕೊಲ್ಲುವಾಗ ರಾಜೋದ್ಯೋಗಸ್ಥರ ಮಧ್ಯಪ್ರವೇಶದಿಂದ ಸ್ವತಂತ್ರರಾಗಿದ್ದರು. ತಮ್ಮ ವೈರಿಗಳೇ ಮನಬಂದಂತೆ ಅವರು ಮಾಡಲಿಲ್ಲ.

3. ಯೆಹೂದ್ಯರು ಸುಲಿಗೆಗೆ ಅಥವಾ ಕೊಳ್ಳೆಗೆ ಕೈ ಹಾಕಲಿಲ್ಲವೆಂದು ಗ್ರಂಥಕರ್ತನು ಮೂರು ಬಾರಿ ಹೇಳುತ್ತಾನೆ. ಈ ಕಾರಣಕ್ಕಾಗಿ ಯೆಹೂದ್ಯರು ಅರಸನ ಅನುಮತಿಯ ಹೊರತಾಗಿಯೂ ಸುಲಿಗೆಗೆ ಕೈ ಹಾಕದೆ ಇದ್ದಿರಬಹುದು (9:10, 15–16, ಹೋಲಿಸಿ 8:11):

    ಗ್ರಂಥಕರ್ತನು ಈ ವಿಷಯವನ್ನು ಮೂರು ಬಾರಿ ಹೇಳುತ್ತಿರುವುದರಿಂದ ಖಂಡಿತವಾಗಿ ಆತನೊಂದು ಪ್ರಾಮುಖ್ಯ ಅಂಶವನ್ನು ತಿಳಿಸುವವನಾಗಿದ್ದಾನೆ. ಯೆಹೂದ್ಯರ ಇತಿಹಾಸದಲ್ಲಿ ಅನೇಕ ಬಾರಿ ತಮ್ಮ ವೈರಿಗಳನ್ನು ಕೊಳ್ಳೆ ಹೊಡೆಯುವ ಸಂದರ್ಭವಿರುತ್ತದೆ. ಆದಿಕಾಂಡ 14:21–24ರಲ್ಲಿ ಅಬ್ರಾಹಾಮನು ಸೊದೋಮಿನಿಂದ ಕೊಳ್ಳೆ ತೆಗೆದುಕೊಳ್ಳಲು ನಿರಾಕರಿಸುತ್ತಾನೆ. ಆನಂತರ ದೇವರಿಗೆ ಅವಿಧೇಯನಾಗುವುದರ ಮೂಲಕ ಸೌಲನು ದೇವರ ದಯೆಯನ್ನು ಕಳೆದುಕೊಳ್ಳುವುದನ್ನು ಕಾಣುತ್ತೇವೆ: ಇಲ್ಲಿ ಸೌಲನು ಅಮಾಲೇಕ್ಯರೊಂದಿಗಿನ ತನ್ನ ಯುದ್ಧದಲ್ಲಿ ಸುಲಿಗೆಯನ್ನು ತರುತ್ತಾನೆ. ಎಲ್ಲಾ ಜನರನ್ನು ಆತನು ಕೊಲ್ಲುವುದಿಲ್ಲ (1 ಸಮುವೇಲ 15ನ್ನು ನೋಡಿರಿ). ಇಲ್ಲಿ ಎಸ್ತೇರಳು ಪುಸ್ತಕದ 9ನೇ ಅಧ್ಯಾಯದಲ್ಲಿ ಈ ಹಿಂದೆ ಸೌಲನು ನೆರವೇರಿಸದೇ ಇರುವುದನ್ನು ಈಗ ಯೆಹೂದ್ಯರು ನೆರವೇರಿಸುತ್ತಾರೆ: ಅವರು ತಮ್ಮೆಲ್ಲಾ ಅಮಾಲೇಕ್ಯ ವೈರಿಗಳನ್ನು ಕೊಂದುಹಾಕುತ್ತಾರೆ (ಹಾಮಾನನ ಹತ್ತು ಮಂದಿ ಮಕ್ಕಳನ್ನು ಸೇರಿ), ಆದರೆ ಸುಲಿಗೆ ಮಾಡುವುದಿಲ್ಲ. ಹಾಗೆಯೇ ಅವರು ಅರಸನಾದ ಅಹಷ್ವೇರೋಷನ ಅನುಮತಿಯಿದ್ದರೂ ಸಹ ಸೌಲನಿಗೆ ದೇವರು ಕೊಟ್ಟ ಸಲಹೆಯನ್ನು ನೆನಪುಮಾಡಿಕೊಂಡು ಸುಲಿಗೆಗೆ ಕೈಹಾಕುವುದಿಲ್ಲ.

    ಅಲ್ಲದೆ ಇದು ತಮ್ಮ ವೈರಿಗಳನ್ನು ಸಂಹರಿಸಲು ಯೆಹೂದ್ಯರು ಹೊಂದಿದ್ದ ಉದ್ದೇಶವನ್ನು ತೋರಿಸುತ್ತದೆ: ಅವರು ಸ್ವಾರ್ಥದಿಂದ ಗಳಿಸುವ ಅಥವಾ ತಮ್ಮ ವೈರಿಗಳ ಸೊತ್ತಿನಿಂದ ವೈಯಕ್ತಿಕವಾಗಿ ಸಮೃದ್ಧಿಗೊಳ್ಳುವ ಉದ್ದೇಶ ಅವರಲ್ಲಿರಲಿಲ್ಲ, ರಕ್ತಮಯವಾದ ಪ್ರತಿಕಾರದಲ್ಲಿ ಅವರು ತಲೆಬಾಗಲಿಲ್ಲ. ಇಲ್ಲಿ ಅವರ ಗುರಿಯು ತಮ್ಮ ವೈರಿಗಳಿಂದ ಸಂಪೂರ್ಣವಾಗಿ ಸರ್ವನಾಶವಾಗುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಾಗಿತ್ತು.

4. –

5. ಮೊರ್ದೆಕೈ ಮತ್ತು ಯೆಹೂದ್ಯರು ಪುರೀಮ್ ಹಬ್ಬದ ಆಚರಣೆಯನ್ನು ಎಲ್ಲಾ ಯೆಹೂದ್ಯರಿಗೂ ಒಂದು ರಜಾದಿವನ್ನಾಗಿ ಘೋಷಿಸುತ್ತಾರೆ. ಈ ಆಚರಣೆಯ ಉದ್ದೇಶವು (9:30–27) ದೇವರು ಯೆಹೂದ್ಯರ ಸಂತಾಪವನ್ನು ಸಂತೋಷವಾಗಿ ಮತ್ತು ಅವರ ದುಃಖವನ್ನು ಸುಖವಾಗಿ ಪರಿವರ್ತಿಸಿದ ಕಾರ್ಯವನ್ನು ನೆನಪುಮಾಡಿಕೊಳ್ಳುವುದಾಗಿತ್ತು.

6. 9:21 ರಲ್ಲಿನ ಮಾತು ಎಲ್ಲಾ ಯೆಹೂದ್ಯರಿಗೆ ಪೂರೀಮ್ ಆಚರಣೆಯ ಮಹತ್ವಕ್ಕೆ ಒತ್ತುಕೊಡುತ್ತದೆ. ಈ ಕೆಳಕಂಡ ಕಾರಣದಿಂದ ಪೂರೀಮನ್ನು ಪಾಲಿಸುವುದು (ಲಕ್ಷಿಸುವುದು) ಅಷ್ಟು ನಿರ್ಣಾಯಕವಾದುದ್ದಾಗಿದೆ:

   **"ಎಲ್ಲಾ"** ಎಂಬ ಪದದ ಪುನರಾವರ್ತನೆಯು ಯೆಹೂದ್ಯರಿಗೆ ಪೂರೀಮ್ ಹಬ್ಬವನ್ನು ಆಚರಿಸುವ ಪ್ರಾಮುಖ್ಯತೆಗೆ ಒತ್ತುಕೊಡುತ್ತದೆ. ಇದನ್ನು ಎಲ್ಲಾ ಸಂತಾನದವರು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಇದು ದೇವರ ಒಂದು ಬಹುದೊಡ್ಡ ರಕ್ಷಣಕಾರ್ಯವಾಗಿರುವುದರಿಂದ ಇದನ್ನು ನೆನಪುಮಾಡಿಕೊಳ್ಳಬೇಕಾದ ಒಂದು ಸಮಯವು ಒಂದು ನಿರ್ಣಾಯಕವಾದುದ್ದೆಂಬುದಾಗಿ ಪರಿಗಣಿಸಲಾಯಿತು. ಇಲ್ಲಿ ಯೆಹೂದ್ಯರು ಪೂರ್ಣನಾಶನದಿಂದ ಸಂರಕ್ಷಿಸಲ್ಪಟ್ಟ ಜನರಾಗಿದ್ದಾರೆ. ಆತನ ಜನರಾಗಿ ತಮ್ಮ ಜೀವಿತದಲ್ಲಿನ ದೇವರ ಕಾರ್ಯವನ್ನು ನೆನಪುಮಾಡಿಕೊಳ್ಳುವುದು ಅವರ ದೃಷ್ಟಿಕೋನವನ್ನು ಕಾಯ್ದುಕೊಳ್ಳಲು ಸಹಾಯಕವಾಗುತ್ತಿತ್ತು. ಅಲ್ಲದೆ ಇದು ಅವರು ಹೊಸ ಶೋಧನೆಗಳನ್ನು ಎದುರಿಸುವಾಗ ಅವರನ್ನು ಬಲಪಡಿಸುವುದಾಗಿತ್ತು.

7. ಈ ರೀತಿಯಲ್ಲಿ ಪೂರೀಮ್ ಹಬ್ಬವನ್ನು ಆಚರಿಸಬೇಕೆಂದು ಯೆಹೂದ್ಯರಿಗೆ ತಿಳಿಸಲಾಯಿತು (9:22):

   ಪೂರೀಮ್ ಹಬ್ಬವನ್ನು ಉತ್ಸವಭೋಜನಮಾಡಿ, ಒಬ್ಬರಿಗೊಬ್ಬರು ಭೋಜನ ಭಾಗಗಳನ್ನು ಕಳುಹಿಸುವುದರ ಮೂಲಕ ಆಚರಿಸಬೇಕೆಂದು ಯೆಹೂದ್ಯರಿಗೆ ತಿಳಿಸಲಾಯಿತು. ದಾನಧರ್ಮಮಾಡುವುದರಿಂದ ಹಾಮಾನನ ಪಿತ್ತೂರಿಯಿಂದ ದೇವರ ವಿಮೋಚನೆಯನ್ನು ಅನುಭವಿಸಿದ ಯೆಹೂದಿ ಸಮುದಾಯದ ಸಂಪರ್ಕದಲ್ಲಿರುವಿಕೆಗೆ ಅವರು ಒತ್ತು ನೀಡಿದರು. ಬಡವರಿಗೆ ಮಾಡಿದ ದಾನಧರ್ಮವು ಬಹುಶಃ ಆಹಾರರೂಪದ್ದಾಗಿರಬಹುದು. ಇದರಿಂದ ಪೂರೀಮ್ ಹಬ್ಬದ ಸಮಯದಲ್ಲಿ ಭೋಜನ ಮಾಡಲಾಗದವರು ಈ ಮೂಲಕ ಆಚರಣೆಯಲ್ಲಿ ಭಾಗಿಯಾದಂತಾಗುತ್ತದೆ. ಪೂರೀಮ್ ಹಬ್ಬದ ಆಚರಣೆಯು ಜನರನ್ನು ಐಕ್ಯತೆಗೆ ನಡೆಸುವಲ್ಲಿ ಸಹಾಯಕವಾಗಿ ಇಡೀ ಸಮುದಾಯವನ್ನು ಉತ್ತೇಜಿಸಿತು.

8. ಪೂರೀಮ್ ಆಚರೆಣೆಯು ನಮ್ಮೆಲ್ಲಾ ಆಚರಣೆಗಳಿಗಿಂತ ವಿಭಿನ್ನವಾಗಿದೆ:

   **ಟಿಪ್ಪಣಿ:** ಪೂರೀಮ್ ಆಚರಣೆಯ ಮೂರು ಅಂಕಗಳು ಕೆಳಕಂಡಂತಿದ್ದು ನಮ್ಮದೇ ಆದ ಆಚರಣೆಗಳನ್ನು ನಾವು ಆಚರಿಸುವಾಗ ನಾವು ಇವುಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು:

   - **ಒಂದು ಬಲವಾದ ಸಂಪರ್ಕಶೀಲತೆ:** ನಾವು ನಮ್ಮ ಹಬ್ಬವನ್ನು ಆಚರಿಸವಾಗ ಸಮುದಾಯವನ್ನು ಒಟ್ಟಾಗಿ ಸೇರಿಸುತ್ತೇವಾ? ಅಥವಾ ನಮ್ಮ ನಡುವೆ ನಮಗಿಂತಾ ಕೆಳ ಮಟ್ಟದಲ್ಲಿರುವವರ ಬಗ್ಗೆ ಯೋಚಿಸುವುದಕ್ಕಿಂತ ನಮ್ಮ ಮೇಲೆಯೇ ನಾವು ಹೆಚ್ಚು ಗಮನಹರಿಸುವವರಾಗಿದ್ದೇವಾ?

   - **ದೇವರ ನಂಬಿಗಸ್ತಿಕೆಯ ಕಾರ್ಯವನ್ನು ನೆನಪುಮಾಡಿಕೊಳ್ಳುವುದು:** ನಮ್ಮ ಆಚರಣೆಗಳು ತನ್ನ ಮಹಾತ್ಕಾರ್ಯಗಳ ಮೂಲಕ ದೇವರು ನಮಗಾಗಿ ಮಾಡಿದ್ದೆಲ್ಲವನ್ನು ನೆನಪುಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವಾ? ಅಥವಾ ನಮ್ಮ ಹಬ್ಬಗಳ ಆಚರಣೆಗಳ ಮಧ್ಯೆ ದೇವರನ್ನೆ ನಾವು ಮರೆತುಬಿಡುತ್ತೇವಾ?

   - **ದೇವರನ್ನು ಮಹಿಮೆಪಡಿಸುವುದು:** ನಮ್ಮ ಆಚರಣೆಗಳು ದೇವರಿಗೆ ಮಹಿಮೆಯನ್ನು ತರುತ್ತವಾ?

9. ದೇವರು ತನ್ನ ಜನರನ್ನು ರಕ್ಷಿಸಿ, ಆತನೆಡೆಗಿನ ತಮ್ಮ ವಿಧೇಯತೆಗಾಗಿ ಎಸ್ತೇರಳು ಮತ್ತು ಮೊರ್ದೆಕೈಯನ್ನು ಆಶೀರ್ವದಿಸುತ್ತಾನೆ. ಕಥೆಯ ಕೊನೇ ಭಾಗದಲ್ಲಿ ಎಸ್ತೇರಳು ಮತ್ತು ಮೊರ್ದೆಕೈಗೆ ಏನಾಗುತ್ತದೆಂಬುದರ ಬಗೆಗಿನ ಪಟ್ಟಿ ಇಂತಿದೆ (9:29–10:3):

   - ಎಸ್ತೇರಳು ಮತ್ತು ಮೊರ್ದೆಕೈ ಸೇರಿ ಪೂರೀಮ್ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಪರ್ಷಿಯನ್ ಸಂಸ್ಥಾನದ ಎಲ್ಲಾ ಯೆಹೂದ್ಯರಿಗೂ ಪತ್ರವನ್ನು ಬರೆಯುತ್ತಾರೆ.

   - ವಿಶೇಷವಾಗಿ ಪೂರೀಮ್ ಹಬ್ಬದ ಆಚರಣೆಯ ಮೂಲಕ ದೇವರೊಂದಿಗಿನ ಸಂಬಂಧದ ವಿಷಯವಾಗಿ ಹೇಗೆ ಎಸ್ತೇರಳು ಇನ್ನೂ ಸಹ ತನ್ನ ಜನರ ಬಗ್ಗೆ ಕಾಳಜಿವಹಿಸುದನ್ನು ನಾವು ಕಾಣಬಹುದು. ಆಕೆಯು ಆಚರಣೆಯ ಮಹತ್ವ ಮತ್ತು ಅದರಿಂದ ಯೆಹೂದ್ಯರಿಗಾಗುವ ಪ್ರಯೋಜನವನ್ನು ಕಾಣುತ್ತಾಳೆ.

   - ಮೊರ್ದೆಕೈ ಉನ್ನತ ಸ್ಥಾನಕ್ಕೇರುತ್ತಾನೆ. ಆತನು ಅರಸನಾದ ಅಹಷ್ವೇರೋಷನಿಗೆ ದ್ವಿತೀಯ ಸ್ಥಾನದವನಾಗುತ್ತಾನೆ.

   - ಅಲ್ಲದೆ ಮೊರ್ದೆಕೈ ಯೆಹೂದ್ಯರಲ್ಲಿ ಸನ್ಮಾನಿತನೂ, ಬಂಧುಜನ ಸಮೂಹಕ್ಕೆ ಪ್ರೀತಿಪಾತ್ರನೂ ಆಗುತ್ತಾನೆ. ಆತನು ಸ್ವಜನರ ಹಿತಚಿಂತಕನೂ ಆಗಿದ್ದು, ಸ್ವಕುಲದವರಿಗೋಸ್ಕರ ಸುಖಪ್ರಾರ್ಥನಾಪರನೂ ಆಗಿರುತ್ತಾನೆ.

   - ಮೊರ್ದೆಕೈ ದೊಡ್ಡಸ್ತಿಕೆಯ ವಿವರವು ಮೇದ್ಯ ಮತ್ತು ಪಾರಾಸಿಯ ರಾಜವೃತ್ತಾಂದಲ್ಲಿ ಬರೆದಿರುತ್ತದೆ.

10. ಈ ಗುಣಗಳು ಮೊರ್ದೆಕೈಯನ್ನು ಒಬ್ಬ ಗೌರವಾನ್ವಿತ ನಾಯಕನನ್ನಾಗಿ ಮಾಡುತ್ತವೆ:

ಆತನು ತನ್ನ ಅಧಿಕಾರ ಸ್ಥಾನ ಮತ್ತು ಘನತೆಯಿವಂದ ಪ್ರಭಾವಿತನಾಗಿರಲಿಲ್ಲ. ಆತನು ವೈಯಕ್ತಿಕ ಲಾಭಕ್ಕಾಗಿ ಹಾತೊರೆಯಲಿಲ್ಲ, ಬದಲಾಗಿ ಯೆಹೂದ್ಯರ ಹಿತವನ್ನು ಬಯಸುವವನಾಗಿದ್ದಾನು. ಆತನು ಅವರ ಪರವಾಗಿ ಮತ್ತು ಅವರ ಹಿತಕ್ಕಾಗಿ ಧ್ವನಿಯೆತ್ತುವವನಾಗಿದ್ದನು. ಬಹುಶಃ ತನ್ನ ನಿಷ್ಪಕ್ಷಪಾತತೆ, ಪ್ರಾಮಾಣಿಕತೆ ಮತ್ತು ಯಥಾರ್ಥತೆಯ ನಿಮಿತ್ತ ಸ್ವಕುಲದವರ ಪ್ರೀತಿಗೆ ಪಾತ್ರನಾಗಿದ್ದನು. ಇದೆಲ್ಲವೂ ಆತನ ಗುಣಸ್ವಭಾವದ ಬಲ ಮತ್ತು ದೇವರಲ್ಲಿ ಭಯಭಕ್ತಿಯುಳ್ಳ ಗುಣ ಹೊಂದಿದ ಮನುಷ್ಯನನ್ನಾಗಿಸುವ ಆತನ ಸಮರ್ಪಣೆಯನ್ನು ತೋರಿಸುತ್ತದೆ.

11. ಸತ್ಯವೇದದುದ್ದಕ್ಕೂ ದೇವರು ತನ್ನ ಜನರನ್ನು ರಕ್ಷಿಸಿ ಅವರ ಅವಶ್ಯಕತೆಯನ್ನು ಪೂರೈಸಿದ ಸಮಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ತನ್ನ ಜನರಿಗೆ ಆದೇಶಿಸುತ್ತಾನೆ. ಕ್ರೈಸ್ತರಾದ ನಮಗೆ ದೇವರ ನಂಬಿಗಸ್ತಿಕೆಯ ಕಾರ್ಯವನ್ನು ನೆನಪುಮಾಡಿಕೊಳ್ಳುವುದು ಅಷ್ಟು ಪ್ರಾಮುಖ್ಯವಾದುದ್ದಾಗಿದೆ?.

**ಟಿಪ್ಪಣಿ:** ದೈವಿಕ ಗುಣಸ್ವಭಾವದ ವ್ಯಕ್ತಿಗಳು ನಾವಾಗಬೇಕಾದರೆ, ದೇವರ ಮಹತ್ಕಾರ್ಯಗಳನ್ನು ನೆನಪುಮಾಡಿಕೊಳ್ಳುವ ಮತ್ತು ಆಚರಿಸುವ ಅಗತ್ಯತೆಯನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದು ದೇವರನ್ನು ಮಹಿಮೆಪಡಿಸುತ್ತದೆ. ಅಲ್ಲದೆ ಇದು ನಮ್ಮ ಸುತ್ತಣವರಿಗೆ ಒಂದು ಸಾಕ್ಷಿಯಾಗಿ ಸಹ ಇರುತ್ತದೆ. ಅಪೊಸ್ತಲನಾದ ಪೌಲನು ಅನೇಕಬಾರಿ ನಮಗೆ ಕೃತಜ್ಞತೆಯುಳ್ಳವರಾಗಿರಬೇಕೆಂದು ಪ್ರಭೋಧಿಸುತ್ತಾನೆ. ದೇವರು ಯಾರಾಗಿದ್ದಾನೆ ಮತ್ತು ನಮಗಾಗಿ ಆತನು ಮಾಡಿರುವ ಕಾರ್ಯಗಳಿಗಾಗಿ ಆತನಿಗೆ ಕೃತಜ್ಞತೆ ಸಲ್ಲಿಸುವ ಗುಣ ನಮ್ಮಲ್ಲಿರುವಾಗ, ನಾವು ದೇವರನ್ನು ಆರಾಧಿಸುವವರಾಗಿರುತ್ತೇವೆ.

12. –

13. –